ಮಂಗಳೂರು
ಸೋಮವಾರ, 27 ಏಪ್ರಿಲ್ 2026
ಸಂಪುಟ 48, ಸಂಚಿಕೆ 39, ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ


ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಟ್ರಂಪ್ ಹತ್ಯೆ ಯತ್ನ
ಶ್ವೇತಭವನದಲ್ಲಿ ಗುಂಡಿನ ಸದ್ದು
• ಪುಟ 2

ಕಿರುಸುದ್ದಿ

ಡಾ.ಕೆ.ಎಂ.ರಾಘವ ನಂಬಿಯಾರ್‌ಗೆ ಪಾರ್ತಿಸುಬ್ಬ ಪ್ರಶಸ್ತಿ



ಉಡುಪಿ: ಕರ್ನಾಟಕ ಯಕ್ಷಗಾನ ಅಕಾಡೆಮಿಯ 2025ನೇ ಸಾಲಿನ ಪಾರ್ತಿಸುಬ್ಬ ಪ್ರಶಸ್ತಿಗೆ ಯಕ್ಷಗಾನ ಸಂಶೋಧಕ, ಪ್ರಸಂಗಕರ್ತ ಹಾಗೂ ಭಾಗವತ ಉಡುಪಿ ಇಂದ್ರಾಳಿಯ ಡಾ.ಕೆ. ಎಂ. ರಾಘವ ನಂಬಿಯಾರ್ ಆಯ್ಕೆಯಾಗಿದ್ದಾರೆ. ಪ್ರಶಸ್ತಿ 1 ಲಕ್ಷ ರೂ., ಪ್ರಶಸ್ತಿ ಫಲಕ ಹಾಗೂ ಪ್ರಮಾಣಪತ್ರ ಒಳಗೊಂಡಿದೆ.

ಮೇ 3ರಂದು ಅಂಬಲಪಾಡಿ ಶ್ರೀ ಜನಾರ್ದನ ಮಹಾಕಾಳಿ ದೇವಸ್ಥಾನದಲ್ಲಿ ನಡೆಯಲಿರುವ 2025ನೇ ಸಾಲಿನ ಗೌರವ ಪ್ರಶಸ್ತಿ, ಯಕ್ಷಸಿರಿ ವಾರ್ಷಿಕ ಪ್ರಶಸ್ತಿ, ದತ್ತಿನಿಧಿ ಪ್ರಶಸ್ತಿ ಹಾಗೂ ಪುಸ್ತಕ ಬಹುಮಾನ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಡಾ.ನಂಬಿಯಾರ್ ಅವರನ್ನು ಸನ್ಮಾನಿಸಲಾಗುವುದು ಎಂದು ಎಂದು ಅಕಾಡೆಮಿ ಅಧ್ಯಕ್ಷ ಡಾ.ತಲ್ಲೂರು ಶಿವರಾಮ ಶೆಟ್ಟಿ ಹಾಗೂ ಅಕಾಡೆಮಿ ರಿಜಿಸ್ಟ್ರಾರ್ ನಮ್ರತಾ ಎನ್. ತಿಳಿಸಿದ್ದಾರೆ.

ಭರತನಾಟ್ಯ ವಿದ್ಯಾರ್ಥಿ ವೇತನಕ್ಕೆ ವೈಷ್ಣವಿ ಆಯ್ಕೆ



ಪುತ್ತೂರು: ಇಲ್ಲಿನ ನಾಟ್ಯರಂಗದ ನೃತ್ಯಗುರು ವಿದುಷಿ ಮಂಜುಳಾ ಸುಬ್ರಹ್ಮಣ್ಯ ಅವರ ಶಿಷ್ಯೆಯಾದ ವೈಷ್ಣವಿ ಕೆ. ಪ್ರಸಕ್ತ ಸಾಲಿನ ಸಾಂಸ್ಕೃತಿಕ ಸಂಪನ್ಮೂಲಗಳು ಮತ್ತು ತರಬೇತಿ ಕೇಂದ್ರ ನೀಡುವ ಭರತನಾಟ್ಯ ವಿಭಾಗದ ವಿದ್ಯಾರ್ಥಿವೇತನಕ್ಕೆ ಆಯ್ಕೆಯಾಗಿರುತ್ತಾರೆ. ಕೇಂದ್ರ ಸರಕಾರದ ಸಂಸ್ಕೃತಿ ಸಚಿವಾಲಯವು ನೀಡುವ ಸ್ಕಾಲರ್ ಶಿಪ್ ಇದಾಗಿದೆ. ವೈಷ್ಣವಿ ವಿವೇಕಾನಂದ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿನಿ. ನೃತ್ಯದೊಂದಿಗೆ ಸಂಗೀತ ಹಾಗೂ ವೀಣೆಯನ್ನು ಅಭ್ಯಾಸ ಮಾಡುತ್ತಿರುವ ಈಕೆ ಪುತ್ತೂರು ಕೃಷ್ಣ ಕುಮಾರ್ ಕೆ. ಹಾಗೂ ಮಧುರ ದಂಪತಿಯ ಪುತ್ರಿ.

ಎಸ್.ಎಸ್.ಎಲ್.ಸಿ: ಪುದು ಶಾಲೆಗೆ ಶೇಕಡಾ 100 ಫಲಿತಾಂಶ

ಮಂಗಳೂರು: ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧೀನದ ಮೌಲಾನಾ ಆಝಾದ್ ಪಬ್ಲಿಕ್ ಸ್ಕೂಲ್ ಪುದು, ಮಾರಿಪಳ್ಳ ಶಾಲೆಯ ಎಸ್.ಎಸ್.ಎಲ್.ಸಿ ಫಲಿತಾಂಶದಲ್ಲಿ ಶೇಕಡಾ 100 ಫಲಿತಾಂಶ ಪಡೆದುಕೊಂಡಿದೆ. ಒಟ್ಟು 23 ವಿದ್ಯಾರ್ಥಿಗಳಲ್ಲಿ ಪ್ರಥಮ ಶ್ರೇಣಿಯಲ್ಲಿ 5, ದ್ವಿತೀಯ ಶ್ರೇಣಿಯಲ್ಲಿ 15, ತೃತೀಯ ಶ್ರೇಣಿಯಲ್ಲಿ 3 ವಿದ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆ. ಪ್ರಥಮ ಸ್ಥಾನ ಆಯಿಷಾ ಆಸಿಫಾ ಶೇ. 84 , ದ್ವಿತೀಯ ಸ್ಥಾನ ಆಯಿಷಾ ಜಝೀಲಾ ಶೇ.83.4, ಖತೀಜ ಮಾಹಿನ್ ಶೇ.79.2 ಅಂಕ ಪಡೆದು ತೃತೀಯ ಸ್ಥಾನ ಪಡೆದಿದ್ದಾರೆ ಎಂದು ಪ್ರಾಂಶುಪಾಲ ಮುಹಮ್ಮದ್ ಫಾರೂಕ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಂಗಳೂರು ಕ್ರೈಸ್ತ ಧರ್ಮಕ್ಷೇತ್ರದ ಸಾರ್ವಜನಿಕ ಸಂಪರ್ಕಾಧಿಕಾರಿ ನೇಮಕ



ಮಂಗಳೂರು: ಮಂಗಳೂರು ಕ್ರೈಸ್ತ ಧರ್ಮಕ್ಷೇತ್ರದ ಸಾರ್ವಜನಿಕ ಸಂಪರ್ಕ ವಿಭಾಗಕ್ಕೆ ನೂತನ ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿ ಫಾ.ರೂಪೇಶ್ ಅಶೋಕ್ ಮಾಡ್ತ ಅವರನ್ನು ನೇಮಕ ಮಾಡಲಾಗಿದೆ. ಮಂಗಳೂರು ಕ್ರೈಸ್ತ ಧರ್ಮಕ್ಷೇತ್ರದ ಧರ್ಮಾಧ್ಯಕ್ಷ ಡಾ.ಪೀಟರ್ ಪಾಲ್ ಸಲ್ದಾನ್ಹಾ ಅವರು ಈ ನೂತನ ನೇಮಕಾತಿಯನ್ನು ಅಧಿಕೃತ ವಾಗಿ ಪ್ರಕಟಿಸಿದ್ದಾರೆ. ರೂಪೇಶ್ ಅಶೋಕ್ ಮಾಡ್ತ ಅವರು ಧರ್ಮಕ್ಷೇತ್ರದ ಕ್ರಿಯಾಶೀಲ ಧರ್ಮಗುರುಗಳಾಗಿದ್ದು, ಪ್ರಸ್ತುತ ಹಲವಾರು ಪ್ರಮುಖ ಜವಾಬ್ದಾರಿಗಳನ್ನು ನಿರ್ವಹಿಸುತ್ತಿದ್ದಾರೆ. 'ರಾಕ್ಣೊ' ಕೊಂಕಣಿ ವಾರ ಪತ್ರಿಕೆಯ ವ್ಯವಸ್ಥಾಪಕರು ಮತ್ತು ಸಂಪಾದಕರಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ.

ಮಂಡೆಕೋಲು ಜಾತ್ರೋತ್ಸವ ವೇಳೆ ವಿಶೇಷ ಅಡ್ಡಣಪೆಟ್ಟು ಆಚರಣೆ

ಇಲ್ಲಿ ದೈವದ ಸೌಹಾರ್ದ ಪಾಠ

ಮಿಥುನ್ ಕರ್ಲಪ್ಪಾಡಿ

ಸುಳ್ಯ: ತುಳುನಾಡಿನಲ್ಲಿ ಆಯಾ ಪ್ರದೇಶದಲ್ಲಿ ನಡೆಯುವ ವಿವಿಧ ಆಚಾರ-ವಿಚಾರಗಳು ತನ್ನದೇ ಆಗಿರುವ ಮಹತ್ವವನ್ನು ಪಡೆದುಕೊಂಡಿದೆ. ತುಳುನಾಡಿನಲ್ಲಿ ದೈವಾರಾಧನೆಯಲ್ಲೂ ಈ ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಆಚಾರಗಳನ್ನು ತುಳುನಾಡಿದ ಹಲವೆಡೆ ಕಾಣಬಹುದು. ಅದರಂತೆ ದೈವದ ನೇಮ ಸಂದರ್ಭದಲ್ಲಿ ಅಡ್ಡಣಪೆಟ್ಟು ಎಂಬ ವಿಶಿಷ್ಟ ಆಚರಣೆಯನ್ನು ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಂಡೆಕೋಲು ಗ್ರಾಮದಲ್ಲಿ ಕಾಣಬಹುದಾಗಿದೆ.



ಮಂಡೆಕೋಲು ಗ್ರಾಮದ ಶ್ರೀ ಮಹಾವಿಷ್ಣುಮೂರ್ತಿ ದೇವಸ್ಥಾನದ ಜಾತ್ರೋತ್ಸವದ ಅಂಗವಾಗಿ ನಡೆಯುವ ಉಳ್ಳಾಕುಲು ಹಾಗೂ ಪರಿವಾರ ದೈವದ ನೇಮದ ಸಂದರ್ಭದ ಈ ವಿಶಿಷ್ಟವಾದ ಅಡ್ಡಣಪೆಟ್ಟು ಆಚರಣೆ ನಡೆದುಬಂದಿದೆ. ದೈವವೇ ಬಂದು ಜಗಳ ಬಿಡಿಸಿ ಸೌಹಾರ್ದತೆಯಿಂದ ಬಾಳಿ ಎಂಬ ಗತ ಕಾಲದ ದೈವ ಸಂದೇಶವನ್ನು ಇಂದಿಗೂ ಜನ ಮಾನಸಕ್ಕೆ ಮುಟ್ಟಿಸುವ ವಿಶಿಷ್ಟ ಆಚರಣೆ ಇದರಲ್ಲಿದೆ.

ಇಲ್ಲಿನ ಶ್ರೀ ಮಹಾವಿಷ್ಣುಮೂರ್ತಿ ದೇವರ ಜಾತ್ರೆಯ ಸಂದರ್ಭದಲ್ಲಿ ಶ್ರೀ ದೇವರ ದರ್ಶನ ಬಲಿ, ಬಟ್ಟಲು ಕಾಣಿಕೆ ನಡೆದ ಮರುದಿನ ಉಳ್ಳಾಕುಲು ಹಾಗೂ ಪರಿವಾರ ದೈವದ ನೇಮ ನಡೆಯುವುದು ಸಂಪ್ರದಾಯ. ಅದರಂತೆ ಭಾನುವಾರ ನೇಮ ನಡೆದು ನೇಮದಲ್ಲಿ ನಾಲ್ಕೂರಿನ ಪ್ರತಿನಿಧಿಗಳ ನಡುವೆ ತುಳುನಾಡಿನ ಅತ್ಯಂತ ಅಪರೂಪದ ಅಡ್ಡಣ ಪೆಟ್ಟು ಆಚರಣೆ ನಡೆಯಿತು. ದೇವಸ್ಥಾನಕ್ಕೆ ಸಂಬಂಧಪಟ್ಟ ಕೇನಾಜೆ-ಮುರೂರು ಒಂದು ಪಕ್ಷವಾಗಿ, ಮಾವಜಿ-ಬೊಳುಗಲ್ಲು ಇನ್ನೊಂದು ಪಕ್ಷವಾಗಿ ನಿಂತು ದೇವಸ್ಥಾನದ ಬಲಭಾಗದ ಗದ್ದೆಯಲ್ಲಿ ಪ್ರತಿಷ್ಠಾಪಿಸಲಾದ ಇರುವೆರ್ ಉಳ್ಳಾಕುಲು ದೈವದ ಕಟ್ಟೆಯ ಮುಂದೆ ಉಳ್ಳಾಕುಲು ನೇಮದ ಸಂದರ್ಭ ಇದೇ ನಾಲ್ಕು ಮನೆತನದ ಪ್ರತಿನಿಧಿಗಳು ಬೆತ್ತದಿಂದ ತಯಾರಿಸಿದ ಗುರಾಣಿಯ ಮಾದರಿಯ ಅಡ್ಡಣವನ್ನು ಹಿಡಿದು ದಂಡದಿಂದ ಪರಸ್ಪರ ಹೊಡೆದಾಡಿಕೊಳ್ಳುತ್ತಾರೆ. ಈ ವೇಳೆ ಉಳ್ಳಾಕುಲು ದೈವ ಬಂದು ಹೊಡೆದಾಟವನ್ನು ಬಿಡಿಸುತ್ತದೆ.



ನೇಮೋತ್ಸವ ದಿನದಂದು ಉಳ್ಳಾಕುಲು ದೈವದ ಭಂಡಾರ ತೆಗೆದ ಬಳಿಕ ದೈವ ಸಹಿತ ನಾಲ್ಕೂರಿನ ಪ್ರತಿನಿಧಿಗಳು, ದೈವರ ಪರಿಚಾರಕರು ದೇವಸ್ಥಾನದ ಸಮೀಪದ ಗದ್ದೆಯಲ್ಲಿರುವ ಕಟ್ಟೆಗೆ ತೆರಳುತ್ತಾರೆ. ಕೇನಾಜೆ-ಮುರೂರು, ಮಾವಜಿ- ಬೊಳುಗಲ್ಲು ಮನೆತನಕ್ಕೆ ಸೇರಿದ ನಾಲ್ವರು ಪ್ರತಿನಿಧಿಗಳು ಸಮವಸ್ತ್ರ ಧರಿಸಿ ದಂಡ ಮತ್ತು ಗುರಾಣಿ (ಅಡ್ಡಣ) ಹಿಡಿದು ದೈವದ ಜತೆಯಲ್ಲಿ ತೆರಳುತ್ತಾರೆ. ಕಟ್ಟೆಯ ಬಳಿ ತೆರಳಿದ ಬಳಿಕ ಕೆಲವೊಂದು ಸಂಪ್ರದಾಯ ಆಚರಣೆಗಳು ನಡೆದು ಅಡ್ಡಣ ಹಿಡಿದ ಯುವಕರು ಅಡ್ಡಣವನ್ನು ನೆಲದಲ್ಲಿ ಎದುರು ಬದುರಾಗಿ ಇಡುತ್ತಾರೆ. ಲಾಠಿ ಮಾದರಿಯ ಹೊಡೆಯುವ ದಂಡವನ್ನು ಕೈಯಲ್ಲಿ ಹಿಡಿದಿರುತ್ತಾರೆ. ಇತ್ತ ಅಡ್ಡಣ ಹೊಡೆತದಲ್ಲಿ ಭಾಗವಹಿಸುವ ನಾಲ್ವರು ಯುವಕರಿಗೆ ಬೆನ್ನು ಹಾಕಿ ನಿಂತಿರುವ ಉಳ್ಳಾಕುಲು ದೈವಕ್ಕೆ ಅಣಿಯನ್ನು ಕೂರಿಸಲಾಗುತ್ತದೆ.

ಅಣಿ ಇಟ್ಟ ಬಳಿಕ ತುಳು ನುಡಿಗಲ್ಲೊಂದನ್ನು ಹೇಳಲಾಗುತ್ತದೆ. ಈ ನುಡಿಗಟ್ಟು ಮುಗಿಯುತ್ತಿದ್ದಂತೆ ದೈವದ ಪರಿಚಾರಕರೊಬ್ಬರು ಅಡ್ಡಣ ಹೊಡೆತಕ್ಕೆ ಅಣಿಯಾಗಿ ನಿಂತಿರುವ ಯುವಕರತ್ತ ಕಲಶದ ನೀರಿನಿಂದ ಪ್ರೋಕ್ಷಣೆ ಮಾಡುತ್ತಾರೆ. ಕಲಶ ಪ್ರೋಕ್ಷಣೆ ಆಗುತ್ತಿದ್ದಂತೆ ಎದುರು ಬದುರಾಗಿ ಯುವಕರು ನೆಲದಲ್ಲಿಟ್ಟ ಅಡ್ಡಣವನ್ನು ಕೈಗೆ ಎತ್ತಿಕೊಂಡು ಅದನ್ನು ಗುರಾಣಿಯಂತೆ ಹಿಡಿದು ಎದುರುಬದುರಾಗಿ ಹೊಡೆದಾಟ ಆರಂಭಿಸುತ್ತಾರೆ. ಪ್ರತಿಯೊಬ್ಬರೂ ಎದುರು ಪ್ರತಿನಿಧಿಯ ಕೈಯಲ್ಲಿ ಹಿಡಿದಿರುವ ಅಡ್ಡಣಕ್ಕೆ ಹೊಡೆಯಬೇಕೆಂಬ ನಿಯಮವೂ ಇದೆ. ಹೊಡೆದಾಟ ಜೋರಾಗುತ್ತಿದ್ದಂತೆ ಬೆನ್ನು ಹಾಕಿ ನಿಂತಿರುವ ಉಳ್ಳಾಕುಲು ದೈವ ಬಂದು ಹೊಡೆದಾಟವನ್ನು ಬಿಡಿಸುತ್ತದೆ. ಈ ಬಾರಿ ಸಾವಿರಾರು ಭಕ್ತರು ಅಡ್ಡಣಪೆಟ್ಟು ವೀಕ್ಷಿಸಿದರು.

ಅಡ್ಡಣಪೆಟ್ಟಿನ ಇತಿಹಾಸ

ಮಂಡೆಕೋಲು ನೇಮೋತ್ಸವದಲ್ಲಿ ಅಡ್ಡಣ ಪೆಟ್ಟು ಸಂಪ್ರದಾಯಕ್ಕೆ ಬೇರೆಬೇರೆ ಐತಿಹ್ಯವಿದೆ. ಅಡ್ಡಣಪೆಟ್ಟು ನಡೆದರೆ ಊರಲ್ಲಿ ಮುಂದೆ ಗಲಾಟೆ, ಹೊಡೆದಾಟಗಳು ಸಂಭವಿಸುವುದಿಲ್ಲ ಎಂಬ ನಂಬಿಕೆಯೂ ಊರಿನ ಭಕ್ತ ಜನರಲ್ಲಿದೆ. ನಾಲ್ಕೂರಿನ ಜಗಳವನ್ನು ದೈವ ಬಿಡಿಸುವುದು, ಗಲಾಟೆ ಮಾಡದೆ ಸೌಹಾರ್ದದಿಂದ ಬಾಳಿ ಎನ್ನುವ ಸಂದೇಶವೂ ಈ ಆಚರಣೆಯಲ್ಲಿದೆ. ಪುರಾತನ ಕಾಲದಲ್ಲಿ ಯಾವುದೋ ಗಲಾಟೆ ನಡೆದ ಸಂದರ್ಭ ಉಳ್ಳಾಕುಲು ದೈವ ಬಂದು ಗಲಾಟೆ ಬಿಡಿಸಿ ಪರಸ್ಪರ ಸಂಧಾನ ನಡೆಸಿತ್ತು ಎಂಬ ಪ್ರತೀತಿಯೂ ಇದೆ. ಇದೇ ಕಾರಣದಿಂದ ಪ್ರತೀ ವರ್ಷ ಉಳ್ಳಾಕುಲು ನೇಮದ ಸಂದರ್ಭ ಅಡ್ಡಣ ಪೆಟ್ಟು ಒಂದು ಸಂಪ್ರದಾಯವಾಗಿ ನಡೆದು ಬರುತ್ತಿದೆ.

ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪ

17 ಮಂದಿಯ ವಿರುದ್ಧದ ಪ್ರಕರಣ ರದ್ದುಗೊಳಿಸಿದ ಹೈಕೋರ್ಟ್

ಪುತ್ತೂರು: ಪುತ್ತೂರಿನ ಸರಕಾರಿ ಸಾರ್ವಜನಿಕ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿಯಾಗಿದ್ದ ಡಾ. ಆಶಾಜ್ಯೋತಿ ಕೆ. ಪುತ್ತೂರಾಯ ಅವರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪಿಯನ್ನು ಬಂಧಿಸಬೇಕು ಎಂದು ಒತ್ತಾಯಿಸಿ ನಡೆದ ಪ್ರತಿಭಟನೆಯ ವೇಳೆ ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪ ಎದುರಿಸುತ್ತಿದ್ದ 27 ಮಂದಿಯ ಪೈಕಿ 17 ಮಂದಿಯ ವಿರುದ್ಧದ ಪ್ರಕರಣವನ್ನು ರದ್ದುಗೊಳಿಸಿ ಹೈಕೋರ್ಟ್ ಆದೇಶಿಸಿದೆ.



2025ರ ಏ. 25 ರಂದು ಪುತ್ತೂರು ಸರಕಾರಿ ಸಾರ್ವಜನಿಕ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ.ಆಶಾಜ್ಯೋತಿ ಕೆ. ಪುತ್ತೂರಾಯ ಅವರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪಕ್ಕೆ ಸಂಬಂಧಪಟ್ಟಂತೆ ಪುತ್ತೂರು ಮಹಿಳಾ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಆ ಪ್ರಕರಣದ ಆರೋಪಿಯನ್ನು ದಸ್ತಗಿರಿ ಮಾಡಿಲ್ಲ ಎಂದು ಆರೋಪಿಸಿ ಏ. 26ರಂದು ಬೆಳಗ್ಗೆ 11 ಗಂಟೆಗೆ ವಿವಿಧ ಸಂಘಟನೆಗಳ ಸದಸ್ಯರು ಮಹಿಳಾ ಪೊಲೀಸ್ ಠಾಣೆಯ ಮುಂಭಾಗ ಪ್ರತಿಭಟನೆ ನಡೆಸಿದ್ದರು. ಈ ವೇಳೆ ಪ್ರತಿಭಟನಾಕಾರರು ರಸ್ತೆಯ ಮಧ್ಯದಲ್ಲಿ 1 ಗಂಟೆ ಕುಳಿತು ಸಾರ್ವಜನಿಕರ ಸುಗಮ ಸಂಚಾರಕ್ಕೆ ಅಡ್ಡಿಪಡಿಸಿ ಪೊಲೀಸರಿಗೆ ಧಿಕ್ಕಾರ ಘೋಷಣೆ ಕೂಗಿದ್ದಾರೆ. ಅಲ್ಲದೆ ಕರ್ತವ್ಯದಲ್ಲಿದ್ದ ಪೊಲೀಸರನ್ನು ಪ್ರತಿಭಟನಾಕಾರರಲ್ಲಿ ಕೆಲವರು ತಳ್ಳಿಕೊಂಡು ಸಮವಸ್ತ್ರಕ್ಕೆ ಕೈ ಹಾಕಿ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾರೆ ಎಂದು ಆಗಿನ ಪೊಲೀಸ್ ಉಪನಿರೀಕ್ಷಕ ಆಂಜನೇಯ ರೆಡ್ಡಿ ನೀಡಿದ ದೂರಿನಂತೆ ಪುತ್ತೂರು ನಗರ ಪೊಲೀಸ್ ಠಾಣೆಯಲ್ಲಿ ಅರುಣ್ ಕುಮಾರ್ ಪುತ್ತಿಲ, ಮನೀಶ್ ಹೆಚ್, ಅಜಿತ್ ರೈ ಹೊಸಮನೆ, ದಿನೇಶ್ ಪಂಜಿಗ, ಗೀತೇಶ್ ರೈ, ಉದಯಕುಮಾರ್, ನರಸಿಂಹ ಶೆಟ್ಟಿ, ಪುನೀತ್ ಮಾಡತ್ತಾರು, ದಯಾನಂದ ಶೆಟ್ಟಿ, ಸುಮೇಶ್ ಕುಮಾರ್, ಸಂತೋಷ್ ಕುಮಾರ್ ರೈ, ಸಚಿನ್, ಕೆ.ಅನಿಲ್‌ಕುಮಾರ್, ಎಂ.ರವಿ ರೈ, ಗಣೇಶ, ನಿತೀಶ್ ಪಿ., ನಾಗೇಶ್, ಭಾಮಿ ಜಗದೀಶ ಶೆಣೈ, ಬಿ.ಶೀನಪ್ಪ ಕುಲಾಲ್, ರಾಜೇಶ್ ಬನ್ನೂರು, ನಿತೀನ್ ಬಿ., ಸಂಜಯ್, ಗೌರಿ ಬನ್ನೂರು, ವಿದ್ಯಾ ಆರ್. ಗೌರಿ, ಸತೀಶ್ ನಾಯ್ಕ್ ಮತ್ತು ಲೀಲಾವತಿ ಅವರ ವಿರುದ್ಧ ಕೇಸು ದಾಖಲಾಗಿತ್ತು.

ಬಳಿಕ ಪೊಲೀಸರು ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷರೋಪಣಾ ಪಟ್ಟಿ ಸಲ್ಲಿಸಿದ್ದರು. ಈ ಪೈಕಿ ತಮ್ಮ ವಿರುದ್ಧದ ಪ್ರಕರಣ ರದ್ದು ಪಡಿಸಬೇಕು ಎಂದು ಅಜಿತ್ ರೈ ಹೊಸಮನೆ, ದಿನೇಶ್ ಪಿ., ನರಸಿಂಹ ಶೆಟ್ಟಿ, ಪುನೀತ್ ಮಾಡತ್ತಾರು, ದಯಾನಂದ ಶೆಟ್ಟಿ, ಸಂತೋಷ ಕುಮಾರ್ ರೈ, ನಿತೇಶ್ ಪಿ., ನಾಗೇಶ್ ಟಿ.ಎಸ್., ಭಾಮಿ ಜಗದೀಶ್ ಶೆಣೈ, ಶೀನಪ್ಪ ಕುಲಾಲ್, ರಾಜೇಶ್ ಬನ್ನೂರು, ಬಿ.ಸಂಜೀವ ಗೌಡ, ಗೌರಿ ಹೆಚ್., ವಿದ್ಯಾ ಆರ್. ಗೌರಿ, ದೀಕ್ಷಾ ಪೈ, ಸತೀಶ್ ನಾಯ್ಕ ಮತ್ತು ಲೀಲಾವತಿ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು.

ಅರ್ಜಿದಾರರ ಪರ ವಕೀಲರ ವಾದ ಆಲಿಸಿದ ಹೈಕೋರ್ಟ್ ಪ್ರಕರಣ ರದ್ದು ಗೊಳಿಸಿ ಆದೇಶಿಸಿದೆ. ಅರ್ಜಿದಾರರ ಪರ ಹಿರಿಯ ನ್ಯಾಯವಾದಿ ಅರುಣ್ ಶ್ಯಾಂ ವಾದಿಸಿದ್ದರು. ಯುವ ನ್ಯಾಯವಾದಿ ಸುಯೋಗ್ ಹೇರಳೆ ಮತ್ತೂರು ವಕಾಲತ್ತು ವಹಿಸಿದ್ದರು.

ಪಡುಬಿದ್ರಿ ದೇವಸ್ಥಾನಕ್ಕೆ ಚಿನ್ನದ ಪಲ್ಲಕಿ ರಜತ ದ್ವಾರಗಳ ಸಮರ್ಪಣೆ ಸಂಪನ್ನ



ಪಡುಬಿದ್ರಿ: ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನವು ಪ್ರಕಾಶ್ ಶೆಟ್ಟಿ ಅವರ ನೇತೃತ್ವದಲ್ಲಿ ಸುಂದರವಾಗಿ ನಿರ್ಮಾಣವಾಗಿದೆ. ದೇವರಿಗೆ ಸ್ವರ್ಣ ಪಲ್ಲಕಿ, ರಜತ ದ್ವಾರಗಳು ವನದುರ್ಗಾ ಟ್ರಸ್ಟ್‌ನಿಂದ ಸಮರ್ಪಣೆಯಾಗಿರುವುದು ಈಶ್ವರನ ಐಶ್ವರ್ಯವನ್ನೇ ಪ್ರಕಟಿಸಿದೆ ಎಂದು ಪಲಿಮಾರು ಶ್ರೀ ವಿದ್ಯಾಧೀಶತೀರ್ಥ ಹೇಳಿದರು.

ಶ್ರೀಪಾದರು ಪಡುಬಿದ್ರಿಯ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವ ಸ್ಥಾನದ ಬ್ರಹ್ಮಕಲಶೋತ್ಸವ ಪ್ರಯುಕ್ತ ಶನಿವಾರ ಬೇಂಗ್ರೆ ಶಿವಳ್ಳಿ ಬ್ರಾಹ್ಮಣ ಹತ್ತು ಸಮಸ್ತರ ಶ್ರೀ ವನದುರ್ಗಾ ಟ್ರಸ್ಟ್ ಮೂಲಕ ದೇವರ ಸನ್ನಿಧಿಗೆ ಸಮರ್ಪಿಸಲ್ಪಟ್ಟ ಚಿನ್ನದ ಪಲ್ಲಕಿ ಹಾಗೂ ರಜತ ದ್ವಾರಗಳ ಸಮರ್ಪಣೆ ಸಮಾರಂಭದಲ್ಲಿ ಸ್ವಾಮೀಜಿಯವರು ಆಶೀರ್ವಚನ ನೀಡಿದರು.

ಕಾಪು ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಮಾತನಾಡಿ, ಪಡುಬಿದ್ರಿ ವಿಪ್ರ ಸಮುದಾಯ ಸಮಸ್ತ ಜನತೆಗೆ ಮಾರ್ಗದರ್ಶನ ಮಾಡುತ್ತಿದೆ ಎಂದರು.

ಜೀರ್ಣೋದ್ಧಾರ ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ಡಾ. ಕೆ. ಪ್ರಕಾಶ್ ಶೆಟ್ಟಿ ಜಾನಪದ ವಿದ್ವಾಂಸ ಕೆ. ಎಲ್. ಕುಂಡಂತಾಯ, ಆನುವಂಶಿಕ ಮೊಕ್ತೇಸರರಾದ ಪಡುಬಿದ್ರಿ ಬೀಡು ರತ್ನಾಕರ ರಾಜ್ ಕಿನ್ಯಕ್ಕೆ ಬಲ್ಲಾಳರು, ಪಡುಬಿದ್ರಿ ಪೇಟೆಮನೆ ಭವಾನಿಶಂಕರ ಹೆಗ್ಡೆ ಕೊರ್ನಾಯ ಶ್ರೀಪತಿ ರಾವ್, ಜಿಲ್ಲಾ ಧಾರ್ಮಿಕ ಪರಿಷತ್ ಸದಸ್ಯ ವೆಂಕಟೇಶ ಅಡಿಗ, ಕಾರ್ಯನಿರ್ವಹಣಾಧಿಕಾರಿ ಕೆ. ರಾಜಗೋಪಾಲ ಉಪಾಧ್ಯಾಯ, ಶ್ರೀ ಕ್ಷೇತ್ರದ ತಂತ್ರಿ ವೇದಮೂರ್ತಿ ಕಂಬ್ಳಕಟ್ಟ ರಾಧಾಕೃಷ್ಣ ಉಪಾಧ್ಯಾಯ, ಅರ್ಚಕರಾದ ಎಚ್. ಪದ್ಮನಾಭ ಭಟ್, ವೈ. ಗುರುರಾಜ ಆಚಾರ್ಯ, ಮಠತ್ರಾಮ ಗಂಗಾಧರ ರಾವ್, ಅರ್ಚಕರಾದ ನಂದ ಆಚಾರ್ಯ, ರಘುಪತಿ ಸನ್ನಿಧಾನದ ಕುಮಾರ್ ಆಚಾರ್ಯ, ಗುರುರಾಜ ಆಚಾರ್ಯ, ಪಾತ್ರಿಗಳಾದ ಹರಿನಾರಾಯಣ ರಾವ್, ಸುಬ್ರಹ್ಮಣ್ಯ ರಾವ್, ಗುರಿಕಾರರಾದ ಕೊರ್ನಾಯ ಪದ್ಮನಾಭ ರಾವ್, ನಟರಾಜ ರಾವ್ ಪಿ. ಎಸ್., ಮುರುಡಿ ಜಗದೀಶ ರಾವ್, ಟ್ರಸ್ಟಿಗಳಾದ ಶ್ರೀನಿವಾಸರಾವ್, ರಾಘವೇಂದ್ರ ರಾವ್, ಗುರುಪ್ರಸಾದ್ ರಾವ್, ರವೀಂದ್ರ ರಾವ್ ಪಿ. ಎಚ್. ಉಪಸ್ಥಿತರಿದ್ದರು. ಶ್ರೀ ವನದುರ್ಗಾ ಟ್ರಸ್ಟ್ ಕಾರ್ಯದರ್ಶಿ ವೈ. ಎನ್. ರಾಮಚಂದ್ರ ರಾವ್ ಸ್ವಾಗತಿಸಿದರು. ಗುರುಪ್ರಸಾದ್ ಕನ್ನಂಗಾರ್ ನಿರೂಪಿಸಿದರು.

ಕೆನರಾದಲ್ಲಿ ಮಾದಕ ವ್ಯಸನ ವಿರೋಧಿ ಅಭಿಯಾನ ಕಾರ್ಯಕ್ರಮ ಆಯೋಜನೆ



ಮಂಗಳೂರು: ಕೆನರಾ ಕಾಲೇಜು (ಸ್ವಾಯತ್ತ) ಮಂಗಳೂರು, ಸೇವಾ ಭಾರತಿ ಕರ್ನಾಟಕ, ಮಂಗಳೂರು ವಿಶ್ವವಿದ್ಯಾಲಯ ರಾಷ್ಟ್ರೀಯ ಸೇವಾ ಯೋಜನೆ, ಕೇಶವ ಸ್ಮೃತಿ ಸಂವರ್ಧನ ಸಮಿತಿ ಮಂಗಳೂರು ಹಾಗೂ ಮೂಲತ್ವ ಫೌಂಡೇಶನ್ ಚಾರಿಟೇಬಲ್ ಟ್ರಸ್ಟ್ ಮಂಗಳೂರು ಸಹಯೋಗದಲ್ಲಿ ಕೆನರಾ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕದ ವತಿಯಿಂದ ಆಯೋಜಿಸಲಾದ 'ಮಾದಕ ವ್ಯಸನ ವಿರೋಧಿ ಅಭಿಯಾನ ಕಾರ್ಯಕ್ರಮ' ಕಾಲೇಜಿನ ಸೆಮಿನಾರ್ ಹಾಲ್‌ನಲ್ಲಿ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಸೇವಾ ಭಾರತಿ ಟ್ರಸ್ಟ್‌ನ ಮುಖ್ಯಸ್ಥ ನಾಗರಾಜ್ ಭಟ್, ಯುವ ಸಮುದಾಯದ ಮೇಲೆ ಹೆಚ್ಚುತ್ತಿರುವ ಮಾದಕ ವ್ಯಸನಗಳ ಪರಿಣಾಮದ ಬಗ್ಗೆ ಕಳವಳ ವ್ಯಕ್ತಪಡಿಸಿ, ತಾತ್ಕಾಲಿಕ ಆನಂದಕ್ಕಾಗಿ ಭವಿಷ್ಯವನ್ನು ಹಾಳು ಮಾಡಿಕೊಳ್ಳಬಾರದು. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳನ್ನು ಸಂಘಟಿಸುವ ರಾಷ್ಟ್ರೀಯ ಸೇವಾ ಯೋಜನೆ ಮಹತ್ವದ ಕಾರ್ಯವನ್ನು ಮಾಡುತ್ತಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕೆನರಾ ಕಾಲೇಜಿನ ಪ್ರಭಾರ ಪ್ರಾಂಶುಪಾಲೆ ಪ್ರೊ. ದೇಜಮ್ಮ ಮಾತನಾಡಿ, ಪ್ರತಿಯೊಂದು ತಪ್ಪನ್ನು ಮಾಡುವ ಮೊದಲು ಅದರ ಪರಿಣಾಮಗಳ ಬಗ್ಗೆ ಯೋಚಿಸುವ ಜಾಗೃತ ಮನೋಭಾವ ಬೆಳೆಸಿಕೊಳ್ಳಬೇಕು. ಮಾದಕ ವ್ಯಸನಗಳ ವಿಚಾರದಲ್ಲಿ ಒಮ್ಮೆ ತಪ್ಪು ದಾರಿಗೆ ಕಾಲಿಟ್ಟರೆ ಹೊರಬರುವುದು ಕಷ್ಟ. ಆದ್ದರಿಂದ ಪ್ರಾರಂಭದಲ್ಲೇ 'ಇಲ್ಲ' ಎಂದು ಹೇಳುವ ಧೈರ್ಯ ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಸಂಪನ್ಮೂಲ ವ್ಯಕ್ತಿ ಆಧ್ಯಾತ್ಮಿಕ ಚಿಕಿತ್ಸಕಿ ಡಾ.ಕುಸುಮ್, ಮೂಲತ್ವ ಫೌಂಡೇಶನ್ ಚಾರಿಟೇಬಲ್ ಟ್ರಸ್ಟ್‌ನ ಸ್ಥಾಪಕ ಪ್ರಕಾಶ್ ಕೋಟ್ಯಾನ್, ಕಾಲೇಜಿನ ಎನ್‌ಎಸ್‌ಎಸ್ ಯೋಜನಾಧಿಕಾರಿಗಳಾದ ಸುಷಾಮ ಸಿ. ಹಾಗೂ ಸ್ಮಿತಾ ಎಂ., ವಿದ್ಯಾರ್ಥಿ ನಾಯಕರಾದ ಯುವರಾಜ್, ಶ್ರಾವ್ಯ, ಪ್ರೇಕ್ಷಾ ಉಪಸ್ಥಿತರಿದ್ದರು.

ಶ್ರಾವ್ಯ ಅಂಚನ್ ಸ್ವಾಗತಿಸಿ, ಪ್ರೇಕ್ಷಾ ವಂದಿಸಿದರು. ಅಭಿಜ್ಞಾ ನಿರೂಪಿಸಿದರು. ಬಳಿಕ ಡಾ.ಕುಸುಮ್ ಅವರು ಎನ್‌ಎಸ್‌ಎಸ್ ಸ್ವಯಂಸೇವಕರಿಗಾಗಿ ಮಾದಕ ವ್ಯಸನದ ದುಷ್ಪರಿಣಾಮಗಳು, ಅವು ಸಮಾಜದ ಮೇಲೆ ಉಂಟು ಮಾಡುತ್ತಿರುವ ತೊಂದರೆಗಳ ಬಗ್ಗೆ ಅರಿವನ್ನು ಮೂಡಿಸಿದರು.

ಮಂಗಳೂರಿನ ತ್ರಿಶಾ ಸಮೂಹ ಸಂಸ್ಥೆಯಲ್ಲಿ ಪ್ರವೇಶಾತಿ ಆರಂಭ



ಮಂಗಳೂರು: ಕರಾವಳಿ ಭಾಗದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾದ ತ್ರಿಶಾ ಸಮೂಹ ಸಂಸ್ಥೆಯು ಮಂಗಳೂರಿನ ಕೊಟ್ಟಾರ ಸಮೀಪದ ಬಂಗ್ರಕೂಳೂರಿನ 'ವಿದ್ಯಾರ್ಥಿ ಗ್ರಾಮ' ಕ್ಯಾಂಪಸ್‌ನಲ್ಲಿ 2026-27ನೇ ಸಾಲಿನ ಪದವಿ ಪೂರ್ವ ಮತ್ತು ಪದವಿ ಶಿಕ್ಷಣಕ್ಕೆ ಪ್ರವೇಶಾತಿಯನ್ನು ಆರಂಭಿಸಿದೆ. ಕಳೆದ 28 ವರ್ಷಗಳಿಂದ ಶೈಕ್ಷಣಿಕ ಕ್ಷೇತ್ರದಲ್ಲಿ ಮೈಲಿಗಲ್ಲು ಸ್ಥಾಪಿಸಿರುವ ಈ ಸಂಸ್ಥೆಯು ಗುಣಮಟ್ಟದ ಶಿಕ್ಷಣ ಮತ್ತು ವೃತ್ತಿಪರ ತರಬೇತಿಗೆ ಹೆಸರಾಗಿದೆ.

ಪಿಯುಸಿ ವಾಣಿಜ್ಯ ವಿಭಾಗದಲ್ಲಿ ಅದ್ಭುತ ಸಾಧನೆ

ಮಂಗಳೂರಿನ ತ್ರಿಶಾ ಪದವಿ ಪೂರ್ವ ಕಾಲೇಜಿನಲ್ಲಿ ವಾಣಿಜ್ಯ ವಿಭಾಗಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದ್ದು, ಬಿಎಸ್‌ಬಿಎ, ಸಿಎಸ್‌ಇಬಿಎ ಮತ್ತು ಎಸ್‌ಇಬಿಎ ಕಾಂಬಿನೇಷನ್‌ಗಳು ಲಭ್ಯವಿವೆ. ತ್ರಿಶಾ ಸಂಸ್ಥೆಯ ನಿರ್ವಹಣೆಯಲ್ಲಿದ್ದ ಯೆಯ್ಯಾಡಿಯ ರಾಮಾಶ್ರಮ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಸುಹಾನಿ ಇತ್ತೀಚಿನ ಫಲಿತಾಂಶದಲ್ಲಿ 595 ಅಂಕಗಳೊಂದಿಗೆ ರಾಜ್ಯಕ್ಕೆ 6ನೇ ರ್‍ಯಾಂಕ್ ಪಡೆದರೆ, ಸಿಂಚನ ಎಚ್. ಕುಂದರ್ 590 ಅಂಕಗಳೊಂದಿಗೆ 11ನೇ ರ್‍ಯಾಂಕ್ ಗಳಿಸಿ ಸಂಸ್ಥೆಗೆ ಕೀರ್ತಿ ತಂದಿದ್ದಾರೆ.

ವೃತ್ತಿಪರ ಪದವಿ ಶಿಕ್ಷಣದ ವೈವಿಧ್ಯತೆ

'ತ್ರಿಶಾ ಕಾಲೇಜ್ ಆಫ್ ಫಾರ್ಮಸ್ ಅಂಡ್ ಮ್ಯಾನೇಜ್ಮೆಂಟ್' ವತಿಯಿಂದ ವಿದ್ಯಾರ್ಥಿಗಳ ವೃತ್ತಿಜೀವನಕ್ಕೆ ಪೂರಕವಾದ ವಿವಿಧ ಆಯ್ಕೆಗಳನ್ನು ನೀಡಲಾಗುತ್ತಿದೆ:

ಬಿಕಾಂ: ವಿದ್ಯಾರ್ಥಿಗಳು ಸಾಮಾನ್ಯ ಬಿ.ಕಾಂ (ರೆಗ್ಯುಲರ್ ಬಿಕಾಂ) ಜೊತೆಗೆ, ಬಿ.ಕಾಂವಿತ್‌ಸಿಎ/ಸಿಎಸ್ ಅಥವಾ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಪಡೆಯುವ ವಿಶೇಷ ಅವಕಾಶವಿದೆ. ಕಳೆದ ವರ್ಷ ಮಂಗಳೂರು ವಿಶ್ವವಿದ್ಯಾನಿಲಯದ ಪದವಿ ಪರೀಕ್ಷೆಯಲ್ಲಿ ಸಂಸ್ಥೆಯ ವಿದ್ಯಾರ್ಥಿನಿ ಮೇಘನಾ 8ನೇ ರ್‍ಯಾಂಕ್ ಪಡೆಯುವ ಮೂಲಕ ಸಾಧನೆ ಮಾಡಿದ್ದಾರೆ.

ಬಿಸಿಎ: ಎಐ ಹಾಗೂ ಡಾಟಾ ಅನಾಲಿಟಿಕ್ಸ್‌ನಲ್ಲಿ ಸ್ಪೆಷಲಿಸೇಷನ್ ಕೊಡುವುದರ ಜೊತೆಗೆ 'ಕ್ವಾಡ್‌ಎಐ' ಸಹಯೋಗದೊಂದಿಗೆ ಬಿಸಿಎ ಕೋರ್ಸ್ ನಡೆಸಲಾಗುತ್ತಿದ್ದು, ಇದು ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣದೊಂದಿಗೆ ಇಂಟರ್ನ್‌ಶಿಪ್ ಮತ್ತು ಉತ್ತಮ ಉದ್ಯೋಗಾವಕಾಶಗಳನ್ನು ಪಡೆಯಲು ಸಹಕಾರಿಯಾಗಿದೆ.

ಸೌಲಭ್ಯಗಳು ಮತ್ತು ತರಬೇತಿ

ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗಾಗಿ ಸಂಸ್ಥೆಯು ಈ ಕೆಳಗಿನ ಸೌಲಭ್ಯಗಳನ್ನು ಒದಗಿಸುತ್ತಿದೆ:

ವೃತ್ತಿಪರ ಕೋಚಿಂಗ್: ಸಿಎ, ಸಿಎಸ್, ಎಂಬಿಎ ಪ್ರವೇಶ ಪರೀಕ್ಷೆ ಮತ್ತು ಡೇಟಾ ಅನಾಲಿಟಿಕ್ಸ್ ತರಬೇತಿ, ಅನುಭವದ ಕಲಿಕೆ: ಪ್ರಾಯೋಗಿಕ ತರಬೇತಿ ಮತ್ತು ಇಂದಿನ ತಾಂತ್ರಿಕ ಪ್ರಗತಿಗೆ ಪೂರಕವಾದ ಕೌಶಲ್ಯವೃದ್ಧಿ. ವಿದ್ಯಾರ್ಥಿನಿಲಯ: ದೂರದ ಊರಿನ ವಿದ್ಯಾರ್ಥಿಗಳಿಗಾಗಿ ಸುಸಜ್ಜಿತ ಹಾಸ್ಟೆಲ್ ವ್ಯವಸ್ಥೆ, ಶುಚಿ-ರುಚಿಯಾದ ಊಟ ಮತ್ತು 24 ಗಂಟೆ ಬಿಸಿನೀರಿನ ಸೌಲಭ್ಯವಿದೆ. ವಿದ್ಯಾರ್ಥಿ ವೇತನ: ಸೈನಿಕರ ಮತ್ತು ರೈತರ ಮಕ್ಕಳಿಗೆ ವಿಶೇಷ ವಿದ್ಯಾರ್ಥಿ ವೇತನ ಲಭ್ಯವಿದೆ.

ಗುಣಮಟ್ಟದ ಶಿಕ್ಷಣದ ಮೂಲಕ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವುದು ನಮ್ಮ ಮುಖ್ಯ ಧ್ಯೇಯ. ಪಠ್ಯದ ಜೊತೆಗೆ ಜೀವನ ಮೌಲ್ಯಗಳು ಮತ್ತು ವೃತ್ತಿಪರ ಕೌಶಲ್ಯಗಳನ್ನು ಬೆಳೆಸುವತ್ತ ನಾವು ಸದಾ ಬದ್ಧ ಎಂದು ಸಂಸ್ಥೆಯ ಸಂಸ್ಥಾಪಕ ಸಿಎ ಗೋಪಾಲಕೃಷ್ಣ ಭಟ್ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಸಂಸ್ಥೆಯ ವೆಬ್‌ಸೈಟ್ ಹಾಗೂ ಸಂಸ್ಥೆಯನ್ನು ಸಂಪರ್ಕಿಸಿ. www.trishaedu.com

ಪೈಪ್‌ಲೈನ್‌ನಲ್ಲಿ ನಿಧಾನವಾಗಿ ಬರುತ್ತಿದೆ ನೀರು | ಟ್ಯಾಂಕರ್ ನೀರು ಇಲ್ಲಿಗೆ ಬರುತ್ತಿಲ್ಲ

ಸಮುದ್ರ ತೀರದ ಬಂದರ್‌ನಲ್ಲಿ ನೀರಿಗೆ ಬರ

ಹರೀಶ ಕುಲ್ಕುಂದ

ದಿಗಂತ ವಾಟರ್ ಚೆಕ್

ಮಂಗಳೂರು: ಸಮುದ್ರಕ್ಕೆ ಹತ್ತಿರವಿರುವ ಬಂದರ್ ವಾರ್ಡ್‌ನಲ್ಲೂ ಜನರು ನೀರಿಗಾಗಿ ಪರದಾಡುತ್ತಿದ್ದಾರೆ. ಮಂಗಳೂರು ಮಹಾನಗರ ಪಾಲಿಕೆ ಪೈಪ್‌ಲೈನ್‌ನಲ್ಲಿ ಪೂರೈಕೆಯಾಗುವ ನೀರು ನಿತ್ಯದ ಅಗತ್ಯಗಳಿಗೆ ಸಾಕಾಗುತ್ತಿಲ್ಲ ಎಂದು ಗೋಳು ಹೇಳಿಕೊಂಡಿದ್ದಾರೆ ಬಂದರ್‌ನ ಜನತೆ.

ಬಂದರು ಪೊಲೀಸ್ ಠಾಣೆ, ಆರೋಗ್ಯ ಕೇಂದ್ರ, ಮಂಡಿ ಕಸಾಯಿಖಾನೆ, ನ್ಯೂಚಿತ್ರ ಟಾಕೀಸು, ನಾಗನಕಟ್ಟೆ, ಮಹಮ್ಮಾಯಿ ಕೆರೆಯ ಒಂದುಭಾಗ, ರಥಬೀದಿಯಿಂದ ಕಂಡತ್ ಪಳ್ಳಿವರೆಗೆ ವ್ಯಾಪಿಸಿರುವ ವ್ಯಾಪಾರ ಕೇಂದ್ರವಾಗಿ ಗುರುತಿಸಿಕೊಂಡಿರುವ ಬಂದರು ವಾರ್ಡ್‌ನ ಬಹುತೇಕ ಕಡೆ ನೀರಿನ ಸಮಸ್ಯೆಯಿದೆ.

ಈ ವಾರ್ಡ್‌ನ ಮುಖ್ಯಪ್ರಾಣ ರಸ್ತೆ, ಜೆಎಂ ರೋಡ್, ಎಂಪಿಟಿ, ಪೋರ್ಟ್ ರೋಡ್ ಸಹಿತ ವಿವಿಧ ಕಡೆಗಳಲ್ಲಿ ನೀರಿನ ಕೊರತೆಯಿಂದ ಜನತೆ ಬಳಲುತ್ತಿದ್ದಾರೆ. ಬಂದರುವಿಗೆ ಬೆಂದೂರುವೆಲ್ ಟ್ಯಾಂಕ್‌ನಿಂದ ಎರಡು ಪೈಪ್‌ಲೈನ್‌ಗಳಲ್ಲಿ ನೀರು ಸರಬರಾಜು ಆಗುತ್ತಿದೆ. ಪ್ರತಿದಿನ ಬೆಳಗ್ಗೆ 5ರಿಂದ 10.30-11ರವರೆಗೆ ನೀರು ಬರುತ್ತಿದೆ. ಆದರೆ, ಅಜಾಜುದ್ದೀನ್ ರೋಡ್, ಪೋರ್ಟ್ ರೋಡ್ ಪ್ರದೇಶಗಳಿಗೆ ಪ್ರತಿದಿನ ನೀರು ಬರುವುದಿಲ್ಲ. ಇಲ್ಲಿಗೆ ಎರಡು ದಿನಕ್ಕೊಮ್ಮೆ ನೀರು ಪೂರೈಕೆಯಾಗುತ್ತಿದೆ. ಸಂಜೆ ವೇಳೆಗೆ ಈ ವಾರ್ಡ್‌ಗೆ ನೀರು ಸರಬರಾಜು ಆಗುವುದೇ ಇಲ್ಲ ಎನ್ನುತ್ತಾರೆ ಸ್ಥಳೀಯರು.

ದಿನಕ್ಕೆ ಐದು ಗಂಟೆಗಳ ಕಾಲ ನೀರು ಬಂದರೂ ಪ್ರೆಶರ್ ಇಲ್ಲ. ನೀರಿನ ತೊಟ್ಟಿಗಳು ತುಂಬುವುದೇ ಇಲ್ಲ. ಸಪೂರವಾಗಿ ನೀರು ಬರುವ ಕಾರಣ ನೀರು ಸಂಗ್ರಹ ಎಂಬುದು ನಮ್ಮ ವಾರ್ಡ್‌ನಲ್ಲಿ ಕಷ್ಟದ ಕೆಲಸವಾಗಿದೆ. ಪೈಪ್‌ಲೈನ್‌ನ ಕೊನೆಯ ಸ್ಥಳವಾಗಿರುವ ಕಾರಣ ಉಳಿದ ವಾರ್ಡ್‌ಗಳಿಗೆ ಹಂಚಿಕೆಯಾಗಿ ಉಳಿಕೆ ನೀರು ನಮಗೆ ಸಿಗುತ್ತಿದೆ. ದಿನಕ್ಕೆ ಎರಡು ಗಂಟೆಗಳ ಕಾಲವಾದರೂ ಉತ್ತಮ ಪ್ರೆಶರ್‌ನೊಂದಿಗೆ ಸಮರ್ಪಕವಾಗಿ ನೀರು ಪೂರೈಕೆಗೆ ಮನಪಾ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂಬುದು ಬಂದರು ನಿವಾಸಿಗಳ ಒತ್ತಾಯ.

ನೀರಿನ ಸಮಸ್ಯೆ ಬಗ್ಗೆ ಮನಪಾ ಅಧಿಕಾರಿಗಳ ಗಮನಕ್ಕೆ ತಂದು ಟ್ಯಾಂಕರ್ ನೀರು ಕಳುಹಿಸಿಕೊಡಿ ಎಂದು ಒತ್ತಾಯಿಸಿದರೂ ನಮಗೆ ಟ್ಯಾಂಕರ್ ನೀರು ಬರುತ್ತಿಲ್ಲ. ಬಂದರು ಪೊಲೀಸ್ ಠಾಣೆಯವರು ಒತ್ತಡ ಹಾಕಿದರೆ ಆ ಪ್ರದೇಶಕ್ಕೆ ಟ್ಯಾಂಕರ್ ಕಳುಹಿಸುತ್ತಾರೆ. ಇಲ್ಲಿನ ಬಹುತೇಕ ಮನೆಗಳಿಗೆ ಓಣಿಯಂತಹ ದಾರಿಯಿರುವ ಕಾರಣ ಟ್ಯಾಂಕರ್ ಬರುವುದು ಸಾಧ್ಯವಿಲ್ಲ ಎನ್ನುತ್ತಾರೆ ಸ್ಥಳೀಯರು.



ಕಂಡತ್‌ಪಳ್ಳಿಯಲ್ಲಿ ವೆಟ್‌ವೆಲ್ ಕಾಮಗಾರಿ ನಡೆಯುತ್ತಿದೆ.

ಡ್ರೈನೇಜ್ ಸಮಸ್ಯೆ

ರಥಬೀದಿ ಉಪಾಕಿರಣ ಬಲಿಯಿಂದ ನ್ಯೂಚಿತ್ರಾವರೆಗೆ ಯುಜಿಡಿ ಹಳೆಯ ಲೈನ್ ಇದ್ದು, ಮಳೆಗಾಲದಲ್ಲಿ ಓವರ್ ಫ್ಲೋ ಆಗುತ್ತಿದೆ. ಅಜಾಜುದ್ದೀನ್ ರಸ್ತೆ, ಜೆಎಂ ರೋಡ್‌ನಲ್ಲೂ ಡ್ರೈನೇಜ್ ಸಮಸ್ಯೆಯಿದೆ. ಎಂಪಿಟಿ, ಅಜಾಜುದ್ದೀನ್ ರೋಡ್, ಜೆಎಂ ರೋಡ್, ಅನ್ಸಾರಿ ರೋಡ್ ಮುಂತಾದ ಕಡೆಗಳಲ್ಲಿ ರಾಜ ಕಾಲುವೆಗಳಲ್ಲಿ ಡ್ರೈನೇಜ್ ನೀರು ಹರಿಯುತ್ತಿದ್ದು, ಈ ಸಮಸ್ಯೆಗೆ ಮಂಗಳೂರು ಮಹಾನಗರ ಪಾಲಿಕೆ ಮುಕ್ತಿ ನೀಡಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ನಮ್ಮ ವಾರ್ಡ್‌ಗೆ ಮನಪಾ ಪೈಪ್‌ಲೈನ್‌ನಲ್ಲಿ ಬರುವ ನೀರು ನಿತ್ಯ ಬಳಕೆಗೆ ಸಾಕಾಗುತ್ತಿಲ್ಲ. ನಿಧಾನವಾಗಿ ನೀರು ಬರುತ್ತಿದೆ. ಈ ಬಗ್ಗೆ ಸಂಬಂಧಪಟ್ಟವರಲ್ಲಿ ಪ್ರಶ್ನಿಸಿದರೆ ಲಭ್ಯ ಇರುವ ನೀರನ್ನು ಹಂಚಿಕೆ ಮಾಡಿ ನೀಡುತ್ತಿದ್ದೇವೆ ಎನ್ನುತ್ತಿದ್ದಾರೆ. ನಮ್ಮ ಪ್ರದೇಶದ 30ಕ್ಕೂ ಅಧಿಕ ಮನೆಗಳು ನೀರಿಲ್ಲದೆ ತೊಂದರೆ ಅನುಭವಿಸುತ್ತಿದ್ದೇವೆ. ಅನ್ಯಮಾರ್ಗವಿಲ್ಲದೆ ಸಪೂರವಾಗಿ ಬರುವ ನೀರನ್ನು ತುಂಬಿಸಿಕೊಟ್ಟುಕೊಂಡು ಸುಧಾರಿಸುತ್ತಿದ್ದೇವೆ. ಅಗತ್ಯ ಇರುವಷ್ಟು ಪ್ರಮಾಣದಲ್ಲಿ ನೀರು ಪೂರೈಕೆಗೆ ಮನಪಾ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು.

■ ಅಬ್ದುಲ್ ರೆಹಮಾನ್, ಬಂದರು ಕಸಾಯಿಗಲ್ಲಿ ನಿವಾಸಿ



ಬಂದರ್ ವಾರ್ಡ್‌ಗೆ ಬೆಂದೂರ್‌ವೆಲ್ ಟ್ಯಾಂಕ್‌ನಿಂದ ನೀರು ಬರುತ್ತಿದ್ದು, ಪೈಪ್‌ಲೈನ್‌ನ ಎಂಡ್ ಪಾಯಿಂಟ್ ಆದ ಕಾರಣ ಸಮರ್ಪಕವಾಗಿ ನೀರು ಪೂರೈಕೆ ಆಗುತ್ತಿಲ್ಲ. ಪ್ರೆಶರ್ ಕೊರತೆಯಿಂದ ಜನರಿಗೆ ಅಗತ್ಯ ಇರುವಷ್ಟು ನೀರು ಲಭ್ಯವಾಗುತ್ತಿಲ್ಲ. ವಾರ್ಡ್‌ನಲ್ಲಿ ವಿವಿಧ ಅಭಿವೃದ್ಧಿ ಕೆಲಸಗಳನ್ನು ನಡೆಸಲಾಗಿದೆ. ಅಜಾಜುದ್ದೀನ್ ರಸ್ತೆ, ಜೆಎಂ ರೋಡ್‌ನಲ್ಲೂ ಡ್ರೈನೇಜ್ ಸಮಸ್ಯೆ ಬಗೆಸಹರಿಲು ಎನ್‌ಜಿಟಿ ಪರಿಹಾರ ನಿಧಿಯಲ್ಲಿ 1.5 ಕೋಟಿ ರೂ. ಮಂಜೂರಾಗಿದೆ. ಸ್ಮಾರ್ಟ್ ಸಿಟಿ ಯೋಜನೆಯಡಿ ವಿವಿಧ ಅಡ್ಡರಸ್ತೆಗಳ ಕಾಂಕ್ರೀಟೀಕರಣ, ಒಳಚರಂಡಿ ಆಗಿದೆ. ಅಜಾಜುದ್ದೀನ್- ಜೆಎಂ ರೋಡ್‌ನ ಐದು ಕ್ರಾಸ್, ಎಂಪಿಟಿ- ಅಜಾಜುದ್ದೀನ್ ರಸ್ತೆಯ ಐದು ಕ್ರಾಸ್‌ಗೆ ಕಾಂಕ್ರೀಟ್ ಅಳವಡಿಸಲಾಗಿದೆ. ಪೋರ್ಟ್ ರೋಡ್-ಕಂಡತ್‌ಪಳ್ಳಿ ನಡುವೆ ಒಂದು ಕಿ.ಮೀ. ರಸ್ತೆಗೆ ಮಳೆ ನೀರು ಚರಂಡಿ, ಒಳಚರಂಡಿ ಸಹಿತ ಕಾಂಕ್ರೀಟ್ ಮಾಡಲಾಗಿದೆ. ಕಂಡತ್‌ಪಳ್ಳಿಯಲ್ಲಿ ವೆಟ್‌ವೆಲ್ ಕಾಮಗಾರಿ ನಡೆಯುತ್ತಿದೆ.

■ ಝೀನತ್ ಸಂಶುದ್ದೀನ್, ಬಂದರು ವಾರ್ಡ್ ನಿಕಟಪೂರ್ವ ಕಾರ್ಪೋರೇಟರ್

ಈ ವಾರ್ಡ್‌ನಲ್ಲಿ ಸಾರ್ವಜನಿಕ ಬೋರ್‌ವೆಲ್, ಸರಕಾರಿ ಬಾವಿಗಳು ಇಲ್ಲ. ಜನರು ನೀರಿಗಾಗಿ ಖಾಸಗಿ ಬಾವಿಗಳನ್ನು ಅವಲಂಬಿಸಿದ್ದಾರೆ. ಜಲಸಿರಿ ಯೋಜನೆ ಕಾಮಗಾರಿ ಶೇ.45ರಷ್ಟು ಮಾತ್ರ ಪೂರ್ಣಗೊಂಡಿದೆ. ಜಲಸಿರಿಯಲ್ಲಿ ಅರೆಬರೆ ಕೆಲಸ ನಡೆದಿದೆ. ಇಂಟರ್‌ಲಾಕ್, ರಸ್ತೆ ಅಗೆದು ಸಮರ್ಪಕವಾಗಿ ಮುಚ್ಚುವ ಕೆಲಸ ಮಾಡಿಲ್ಲ.

ಮುಂದಿನ ವಾರ್ಡ್ -45
ಪೋರ್ಟ್ ಪರಿಸರದ ಸ್ಥಿತಿಗತಿ

ಸೋಮವಾರ, 27 ಏಪ್ರಿಲ್ 2026
ಸಂಪುಟ 48, ಸಂಚಿಕೆ 39 ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಖ್ಯಾತ ಛಾಯಾಗ್ರಾಹಕ ರಘು ರಾಯ್ ನಿಧನ | 0೭
ಪಾಕ್‌ನಲ್ಲಿ ತೀವ್ರ ಹಸಿವಿನ ಸಂಕಷ್ಟ | 0೭
ದೋವಲ್, ಯುಎಇ ಅಧ್ಯಕ್ಷರ ಭೇಟಿ | 0೭

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಪೂರ್ವೆ

ದಿನದ ಮಾತು

ನಮ್ಮ ದೇಹಕ್ಕೆ ರೋಗವಿಲ್ಲದಿರುವುದೇ ನಾವು ಗಳಿಸಿತಕ್ಕಂತಹ ಪ್ರಥಮ ಐಶ್ವರ್ಯವಾಗುತ್ತದೆ.

▲ ಮು. ವರಜರಾಜನ್

ಕೈಕಾಲುಗಳೆರಡೂ ಇಲ್ಲದ ಹುಡುಗಿ ವಿಶ್ವ ಚಾಂಪಿಯನ್!

ನೇರ ನೋಟ

• ದು.ಗು.ಲಕ್ಷ್ಮಣ

• ಪುಟ ೬

ಕಿರುಸುದ್ದಿ

ಶಾಲೆಗಳಲ್ಲಿ ಮಕ್ಕಳಿಗೆ ನಿತ್ಯ ಪತ್ರಿಕೆ ಓದಿಸಲು ಸೂಚನೆ

• **ಬೆಂಗಳೂರು:** ರಾಜ್ಯದ ಎಲ್ಲ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳಲ್ಲಿ ಮತ್ತು ಸರ್ಕಾರದ ವಿವಿಧ ಇಲಾಖೆಗಳಿಂದ ನಡೆಯುತ್ತಿರುವ ವಸತಿ ಶಾಲೆ, ನಿಲಯಗಳು/ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಪ್ರತಿನಿತ್ಯ ಬೆಳಗ್ಗಿನ ಪ್ರಾರ್ಥನೆ ಸಮಯದ ನಂತರ ವಿದ್ಯಾರ್ಥಿಗಳಿಂದ 10 ನಿಮಿಷಗಳ ಕಾಲ ಕಡ್ಡಾಯವಾಗಿ ಕನ್ನಡ ದಿನಪತ್ರಿಕೆಗಳನ್ನು ಓದುವ ಅಭ್ಯಾಸ ಅನುಷ್ಠಾನ ಗೊಳಿಸುವಂತೆ ಶಿಕ್ಷಣ ಇಲಾಖೆ ಆದೇಶಿಸಿದೆ. ➡ಪುಟ ೪

ಬೆಳಗಾವಿ ವಕೀಲೆ ಮನೆ ಮೇಲೆ ಗುಂಡಿನ ದಾಳಿ

• **ಬೆಳಗಾವಿ:** ನಗರದಲ್ಲಿ ವಕೀಲೆಯೊಬ್ಬರ ಮನೆ ಮೇಲೆ ದುಷ್ಕರ್ಮಿಗಳು ಗುಂಡಿನ ದಾಳಿ ನಡೆಸಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದೆ. ಬೆಳಗಾವಿ ನಗರದ ಮಂಡೋಳಿ ರಸ್ತೆಯಲ್ಲಿರುವ ವಕೀಲೆ ಪೂಜಾ ಕಾಕತಕರ್ ಮನೆಯ ಮೊದಲ ಮಹಡಿ ಮೇಲೆ ದುಷ್ಕರ್ಮಿಗಳು ಶನಿವಾರ ತಡರಾತ್ರಿ ಏಕಾಏಕಿ ಗುಂಡಿನ ದಾಳಿ ನಡೆಸಿದ್ದು, ಕಿಟಕಿ ಗಾಜಿಗೆ ಹಾನಿಯಾಗಿದೆ.

• ಪುಟ ೫

736 ಸ್ಥಾನಗಳಲ್ಲಿ ಬಿಜೆಪಿ ಅವಿರೋಧ ಆಯ್ಕೆ

• ಪುಟ ೭

ಮಾತೆಯರಿಗೆ, ನಿರುದ್ಯೋಗಿ ಯುವಕರಿಗೆ ಮಾಸಿಕ ನೆರವು

• ಪುಟ ೭

ಭಾರತ-ನ್ಯೂಜಿಲೆಂಡ್ ಎಫ್‌ಟಿಎಗೆ ಸಹಿ ಇಂದು

• ಪುಟ ೭

ದೇಶಕ್ಕಿಲ್ಲ ಇಂಧನ ಸಮಸ್ಯೆ: ಪ್ರಲ್ಹಾದ ಜೋಶಿ

• ಪುಟ ೫



ಎಲ್ ನಿನೋ ಭಾರತಕ್ಕೆ ಮಳೆ ಕಡಿಮೆ?

• ಪುಟ ೭

ಸುದ್ದಿ ಸಮಗ್ರ

ಶ್ವೇತಭವನದಲ್ಲಿ ಗುಂಡಿನ ಸದ್ದು | ಶೂಟರ್ ಬಂಧನ


ಟ್ರಂಪ್ ಹತ್ಯೆ ಯತ್ನ

• **ವಾಷಿಂಗ್ಟನ್:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿರುದ್ಧ ಹತ್ಯೆಗೆ ಯತ್ನ ನಡೆದ ಘಟನೆ ಶ್ವೇತಭವನ ವರದಿಗಾರರ ಔತಣಕೂಟದಲ್ಲಿ ಭಾರೀ ಆತಂಕ ಸೃಷ್ಟಿಸಿದೆ. ಶನಿವಾರ ರಾತ್ರಿ ಈ ಘಟನೆ ನಡೆದಿದ್ದು, ಗುಂಡಿನ ಸದ್ದು ಕೇಳಿಬಂದ ತಕ್ಷಣ ಸೀಕ್ರೆಟ್ ಸರ್ವೀಸ್ ಅಧಿಕಾರಿಗಳು ಟ್ರಂಪ್ ಅವರನ್ನು ತಕ್ಷಣವೇ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಿದರು.



ವಾಷಿಂಗ್ಟನ್ ಹಿಲ್ಟನ್ ಹೋಟೆಲ್‌ನಲ್ಲಿ ನಡೆದ ವಾರ್ಷಿಕ ಕಾರ್ಯಕ್ರಮದಲ್ಲಿ ನೂರಾರು ಪತ್ರಕರ್ತರು, ರಾಜಕೀಯ ಮುಖಂಡರು ಹಾಗೂ ಅತಿಥಿಗಳು ಭಾಗವಹಿಸಿದ್ದರು. ಗುಂಡಿನ ಸದ್ದು ಕೇಳುತ್ತಿದ್ದಂತೆ ಸಭಾಂಗಣದಲ್ಲಿ ಗೊಂದಲ ಉಂಟಾಗಿ ಅತಿಥಿಗಳು ಮೇಜುಗಳ ಕೆಳಗೆ ಅಡಗಿ ಕುಳಿತರು. ಭದ್ರತಾ ಸಿಬ್ಬಂದಿ ತಕ್ಷಣವೇ ಸ್ಥಳಕ್ಕೆ ಧಾವಿಸಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತಂದರು.

ಸಾಕ್ಷಿಗಳ ಪ್ರಕಾರ ಐದರಿಂದ ಎಂಟು ಸುತ್ತು ಗುಂಡಿನ ಶಬ್ದ ಕೇಳಿಬಂದಿದೆ. ದಾಳಿಕೋರನು ಬಾಲ್ ರೂಮ್ ಒಳಗೆ ಪ್ರವೇಶಿಸಲು ವಿಫಲವಾದ ಬಳಿಕ ಮ್ಯಾಗ್ನೆಟೋಮೀಟರ್ ತಪಾಸಣೆ ಕೇಂದ್ರದ ಬಳಿ ಗುಂಡು ಹಾರಿಸಿದ್ದಾನೆ ಎಂದು ವರದಿಯಾಗಿದೆ. ಕೆಲವೇ ಕ್ಷಣಗಳಲ್ಲಿ ಸೀಕ್ರೆಟ್ ಸರ್ವೀಸ್ ದಾಳಿಕೋರನನ್ನು ಬಂಧಿಸಿದೆ. ➡ಪುಟ ೪



ವ್ಯಾಪಕ ತನಿಖೆ

ಫೆಡರಲ್ ಸಂಸ್ಥೆಗಳು ಘಟನೆ ಕುರಿತು ವ್ಯಾಪಕ ತನಿಖೆ ಆರಂಭಿಸಿವೆ. ದಾಳಿಯ ಉದ್ದೇಶ ಹಾಗೂ ಹಿನ್ನೆಲೆಯನ್ನು ಪತ್ತೆಹಚ್ಚಲು ಎಫ್‌ಬಿಐ ಸೇರಿದಂತೆ ಹಲವು ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಭದ್ರತಾ ಲೋಪದ ಕುರಿತು ಕೂಡ ಪರಿಶೀಲನೆ ನಡೆಯುತ್ತಿದೆ.

ಹತ್ಯೆಗೆ ಯತ್ನಿಸಿದ ವ್ಯಕ್ತಿ ಯಾರು?



ಶ್ವೇತಭವನ ವರದಿಗಾರರ ಔತಣಕೂಟಕ್ಕೆ ಅತಿಥಿಯಾಗಿ ಆಗಮಿಸಿದ್ದ ನಾಸಾ ಉದ್ಯೋಗಿ ಕ್ಯಾಲಿಫೋರ್ನಿಯಾದ ಟೊರಾನ್ಸ್ ಮೂಲದ 31 ವರ್ಷದ ಕೋಲ್ ಥಾಮಸ್ ಆಲೆನ್ ಶಂಕಿತ ದಾಳಿಕೋರ ಎಂದು ತನಿಖಾಧಿಕಾರಿಗಳು ಗುರುತಿಸಿದ್ದಾರೆ. ಈತ ಏಕಾಂಗಿಯಾಗಿ ಕಾರ್ಯನಿರ್ವಹಿಸಿದ್ದಾನೆ ಎಂಬ ಶಂಕೆ ವ್ಯಕ್ತವಾಗಿದ್ದು, ಭದ್ರತಾ ತಪಾಸಣೆ ಕೇಂದ್ರವನ್ನು ಉಲ್ಲಂಘಿಸಲು ಯತ್ನಿಸಿದ ಬಳಿಕ ಗುಂಡು ಹಾರಿಸಿದ್ದಾನೆ. ದಾಳಿಕೋರ ಹಲವು ಶಸ್ತ್ರಾಸ್ತ್ರ ಹೊಂದಿದ್ದ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬಾಲ್ ರೂಮ್‌ನಿಂದ ಕೆಲವೇ ಮೀಟರ್ ದೂರದಲ್ಲಿ ಅವನನ್ನು ಬಂಧಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಹಲವು ಫೆಡರಲ್ ಆರೋಪಗಳನ್ನು ದಾಖಲಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ತನಿಖಾಧಿಕಾರಿಗಳು ಆತನ ಡಿಜಿಟಲ್ ಹಿನ್ನೆಲೆ, ಉದ್ದೇಶ ಹಾಗೂ ಇನ್ನಿತರ ಸಂಪರ್ಕಗಳನ್ನು ಪರಿಶೀಲಿಸುತ್ತಿದ್ದಾರೆ. ಇರಾನ್ ಯುದ್ಧಕ್ಕೂ, ಈತನಿಗೂ ಸಂಬಂಧವಿಲ್ಲ ಎಂದು ಸ್ವತಃ ಟ್ರಂಪ್ ಹೇಳಿದ್ದಾರೆ.

ನಮ್ಮ ಸೀಕ್ರೆಟ್ ಸರ್ವಿಸ್ ಅದ್ಭುತ ಕೆಲಸ ಮಾಡಿದೆ

ಸೀಕ್ರೆಟ್ ಸರ್ವಿಸ್ ಮತ್ತು ಕಾನೂನು ಜಾರಿ ಸಂಸ್ಥೆಗಳು ಅದ್ಭುತವಾಗಿ ಕೆಲಸ ಮಾಡಿವೆ. ಸಂಸ್ಥೆಗಳು ಶಂಕಿತ ದಾಳಿಕೋರನನ್ನು ಬಂಧಿಸಿವೆ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಅದ್ದೂರಿ ಕಾರ್ಯಕ್ರಮವನ್ನು ಮುಂದಿನ 30 ದಿನಗಳೊಳಗೆ ಮತ್ತೆ ಆಯೋಜಿಸಲಾಗುವುದು ಎಂದು ಘೋಷಿಸಿದ್ದಾರೆ. ಇದು ನನ್ನನ್ನು ಇರಾನ್ ಯುದ್ಧದಲ್ಲಿ ಗೆಲ್ಲುವುದರಿಂದ ತಡೆಯುವುದಿಲ್ಲ. ಈ ಶೂಟೌಟ್‌ಗೂ ಇರಾನ್ ಮೇಲಿನ ಯುದ್ಧಕ್ಕೂ ಯಾವುದೇ ಸಂಬಂಧವಿಲ್ಲವೆಂದು ನಾನು ಭಾವಿಸುತ್ತೇನೆ ಎಂದು ವೈಟ್ ಹೌಸ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಟ್ರಂಪ್ ಪತ್ರಕರ್ತರಿಗೆ ತಿಳಿಸಿದ್ದಾರೆ.

ದಾಳಿ ಖಂಡಿಸಿದ ಮೋದಿ

ಪ್ರಧಾನಿ ನರೇಂದ್ರ ಮೋದಿ ಘಟನೆ ಬಗ್ಗೆ ತೀವ್ರ ಖಂಡನೆ ವ್ಯಕ್ತಪಡಿಸಿದ್ದಾರೆ. 'ಪ್ರಜಾಪ್ರಭುತ್ವದಲ್ಲಿ ಹಿಂಸಾಚಾರಕ್ಕೆ ಯಾವುದೇ ಸ್ಥಾನವಿಲ್ಲ' ಎಂದು ಅವರು ಹೇಳಿದ್ದಾರೆ. ಟ್ರಂಪ್ ಹಾಗೂ ಇತರ ನಾಯಕರು ಸುರಕ್ಷಿತರಾಗಿರುವುದಕ್ಕೆ ಸಂತೋಷ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಪ್ರತಿಕ್ರಿಯಿಸಿದ ಇಸ್ರೇಲ್ ವಿದೇಶಾಂಗ ಸಚಿವ ಗಿಡಿಯಾನ್ ಸರ್ ಇಸ್ರೇಲ್ ಅಮೆರಿಕ ಮತ್ತು ಟ್ರಂಪ್‌ನೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ನಿಲ್ಲುತ್ತದೆ. ಶೂಟಿಂಗ್ ಘಟನೆಯನ್ನು ಖಂಡಿಸುತ್ತೇನೆ ಎಂದು ಸರ್ ಹೇಳಿದ್ದಾರೆ.

ಅಮೆರಿಕದ ಸೇನಾ ನೆಲೆಗಳಿಗೆ ಇರಾನ್ ದಾಳಿಯಿಂದ ಹಾನಿ • ಪುಟ ೭

ಪರಿಸರ, ಸಂಸ್ಕೃತಿ ಕ್ಷೇತ್ರಗಳಲ್ಲಿ ಭಾರತ ದೌಡು
ಮನ್ ಕಿ ಬಾತ್‌ನಲ್ಲಿ ಪ್ರಧಾನಿ ಮೋದಿ ಶ್ಲಾಘನೆ

ಕಲ್ಪಕ್ಕಂ ಅಣು ಸಾಧನೆ ಶಕ್ತಿಯ ಸ್ವಾವಲಂಬನೆ

• **ಹೊಸದಿಲ್ಲಿ:** ಭಾರತದ ಅಣುಶಕ್ತಿ ಪಯಣದಲ್ಲಿ ಐತಿಹಾಸಿಕ ಮೈಲಿಗಲ್ಲಾಗಿರುವ ತಮಿಳುನಾಡಿನ ಕಲ್ಪಕ್ಕಂ ಫಾಸ್ಟ್ ಬ್ರೀಡರ್ ರಿಯಾಕ್ಟರ್‌ನ 'ಕ್ರಿಟಿಕಲಿಟಿ' ಸಾಧನೆಗೆ ಪ್ರಧಾನಿ ನರೇಂದ್ರ ಮೋದಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

133ನೇ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಈ ಸಾಧನೆ ಭಾರತವನ್ನು ಶಕ್ತಿ ಸ್ವಾವಲಂಬನೆಯತ್ತ ಮತ್ತಷ್ಟು ಮುಂದೆ ಕೊಂಡೊಯ್ಯುವ ಮಹತ್ವದ ಹೆಜ್ಜೆಯಾಗಿದೆ ಎಂದು ಹೇಳಿದರು.

ಈ ರಿಯಾಕ್ಟರ್ ಸಂಪೂರ್ಣವಾಗಿ ಸ್ವದೇಶಿ ತಂತ್ರಜ್ಞಾನದಿಂದ ನಿರ್ಮಾಣವಾಗಿದ್ದು, 'ಕ್ರಿಟಿಕಲಿಟಿ' ಹಂತ ತಲುಪುವುದರಿಂದ ಇದು ಸ್ವಯಂ-ಸತತ ನ್ಯೂಕ್ಲಿಯರ್ ಚೈನ್ ರಿಯಾಕ್ಷನ್ ಆರಂಭಿಸಿರುವುದನ್ನು ಸೂಚಿಸುತ್ತದೆ. ಇದು ಕಾರ್ಯಾಚರಣೆಯ ಹಂತಕ್ಕೆ ಪ್ರವೇಶಿಸಿರುವುದನ್ನು ಸೂಚಿಸುವ ಮಹತ್ವದ ಬೆಳವಣಿಗೆ ಎಂದು ಪ್ರಧಾನಿ ವಿವರಿಸಿದರು.ಬ್ರೀಡರ್ ರಿಯಾಕ್ಟರ್‌ನ ವಿಶೇಷತೆಯಾಗಿ, ಇದು ವಿದ್ಯುತ್ ಉತ್ಪಾದನೆಯ ಜತೆ ಭವಿಷ್ಯಕ್ಕಾಗಿ ಹೊಸ ಇಂಧನವನ್ನೂ ಉತ್ಪಾದಿಸುವ ಸಾಮರ್ಥ್ಯ ಹೊಂದಿದೆ ಎಂದು ಹೇಳಿದರು. 2024ರ ಮಾರ್ಚ್‌ನಲ್ಲಿ ರಿಯಾಕ್ಟರ್ ಕೋರ್ ಲೋಡಿಂಗ್ ಸಂದರ್ಭದಲ್ಲಿ ತಾವು ಸಾಕ್ಷಿಯಾಗಿದ್ದನ್ನು ಸ್ಮರಿಸಿದ ಪ್ರಧಾನಿ, ಭಾರತದ ಅಣುಶಕ್ತಿ ವಿಜ್ಞಾನಿಗಳ ಕೊಡುಗೆಯನ್ನು ಶ್ಲಾಘಿಸಿದರು. ➡ಪುಟ ೪

ಬೈಲುಕುಪ್ಪೆಯ ಕರ್ಮಾ ಮೊನಾಸ್ಟರಿಗೆ ಪ್ರಶಂಸೆ

ಕರ್ನಾಟಕದಲ್ಲಿ ಪರಿಸರ ಸಂರಕ್ಷಣೆಯ ಮಾದರಿಯಾಗಿ ಬೈಲುಕುಪ್ಪೆಯಲ್ಲಿನ ಬೌದ್ಧ ನಿರಾಶ್ರಿತರ ಕೇಂದ್ರದಲ್ಲಿರುವ ಕರ್ಮಾ ಮೊನಾಸ್ಟರಿ ಕಾರ್ಯವನ್ನು ಪ್ರಧಾನಿ ಉಲ್ಲೇಖಿಸಿದರು. ಕರ್ನಾಟಕದಲ್ಲಿರುವ ಈ ಪ್ರದೇಶವು ಸುಮಾರು 100 ಎಕರೆ ವ್ಯಾಪ್ತಿಯಲ್ಲಿ 700ಕ್ಕೂ ಹೆಚ್ಚು ದೇಸೀಯ ಮರಗಳನ್ನು ಸಂರಕ್ಷಿಸಿರುವ ಬೋಧಿ ಸತ್ವ ಟ್ರಸ್ಟ್ ಜೀವಂತ ಅರಣ್ಯವಾಗಿ ಬೆಳೆಯುತ್ತಿದ್ದು, ಪ್ರಕೃತಿ-ಅಧ್ಯಾತ್ಮದ ಸಮನ್ವಯದ ಮೂಲಕ ದೇಶಕ್ಕೆ ಪ್ರೇರಣೆಯಾಗುತ್ತಿದೆ ಎಂದು ಹೇಳಿದರು. ➡ಪುಟ ೪



ಅಧಿಕಾರ ಚುಕ್ಕಾಣಿ ನಮ್ಮದೇ: ಮೋದಿ

• **ಕೋಲ್ಕತ್ತಾ :** ಪಶ್ಚಿಮ ಬಂಗಾಳದಲ್ಲಿ ಮುಂದಿನ ಕೊನೇ ಹಂತದ ಮತದಾನದಲ್ಲಿ ಬಿಜೆಪಿ ಜಯಭೇರಿ ಬಾರಿಸಿ ಅಧಿಕಾರ ಸೂತ್ರ ಹಿಡಿಯಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ತುಂಬು ಭರವಸೆ ವ್ಯಕ್ತಪಡಿಸಿದ್ದಾರೆ. ಮೊದಲ ಹಂತದ ಮತದಾನದಲ್ಲಿ ಪ.ಬಂಗಾಳ ಗಮನಾರ್ಹ ಪ್ರಮಾಣದ ಮತದಾನ ದಾಖಲಿಸಿದೆ. ಈ ಮೂಲಕ ಟಿಎಂಸಿ ದುರಹಂಕಾರ ಮಣ್ಣುಗೂಡಿದೆ ಎಂದು ಹೇಳಿದ್ದಾರೆ. ಉತ್ತರ 24ಪರಗಣ ಜಿಲ್ಲೆಯ ಬಾಂಗಾಂವ್‌ನಲ್ಲಿ ವಿಜಯ ಸಂಕಲ್ಪ ಸಭಾ ಉದ್ದೇಶಿಸಿ ಪ್ರಧಾನಿ ಮೋದಿ ಮಾತನಾಡಿದರು. ಆಳುವ ಟಿಎಂಸಿ ಉತ್ತಮ ಆಡಳಿತ ನೀಡಲು ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ವಿಫಲವಾಗಿದೆ. ➡ಪುಟ ೪

ಮೇ 9ಕ್ಕೆ ಚಿತ್ರದುರ್ಗದಲ್ಲಿ ಬಿಎಸ್‌ವೈಗೆ ಅಭಿನಂದನಾ ಕಾರ್ಯಕ್ರಮ

ಅಭಿಮಾನೋತ್ಸವಕ್ಕೆ ಭೂಮಿಪೂಜೆ

• **ಚಿತ್ರದುರ್ಗ:** ಅಪ್ರತಿಮ ಹೋರಾಟಗಾರ, ಛಲದಂಕ ಮಲ್ಲ, ರೈತ ನಾಯಕ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರು ಇಂದಿನ ಯುವ ರಾಜಕಾರಣಿಗಳಿಗೆ ಪ್ರೇರಣೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ 50 ವರ್ಷದ ರಾಜಕೀಯ ಜೀವನ ಕುರಿತು ಮೇ 9ರಂದು ನಗರದ ಹೊರವಲಯದ ಶ್ರೀ ಮಾದಾರ ಚೆನ್ನಯ್ಯ ಗುರುಪೀಠದ ಪಕ್ಕದಲ್ಲಿರುವ ಮೈದಾನದಲ್ಲಿ ನಡೆಸಲುದ್ದೇಶಿಸಿರುವ ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಭಾನುವಾರ ಭೂಮಿಪೂಜೆ, ಧ್ವಜಾರೋಹಣ ಹಾಗೂ ಗೋಪೂಜೆ ನೆರವೇರಿಸಿದ ಬಳಿಕ ವೇದಿಕೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಬಿ.ಎಸ್. ಯಡಿಯೂರಪ್ಪನವರು ಬಡವರು, ದೀನದಲಿತರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಜನಾಂಗದವರ ಅಭಿವೃದ್ಧಿಗಾಗಿ ಶ್ರಮಿಸಿದರು. ➡ಪುಟ ೪



ಸಮಯ ಬಂದಾಗ ತಾನಾಗಿಯೇ ಗೊತ್ತಾಗುತ್ತದೆ: ಡಿಸಿಎಂ ಡಿಕೆಶಿ

ಇನ್ಮುಂದೆ ರಾಜಕೀಯ ಮಾತಾಡಲ್ಲ

• **ಬೆಂಗಳೂರು:** ಇನ್ನು ಮುಂದೆ ರಾಜಕೀಯ ವಿಚಾರವಾಗಿ ನಾನು ಮಾಧ್ಯಮಗಳ ಮುಂದೆ ಮಾತನಾಡುವುದಿಲ್ಲ. ಸಮಯ ಬಂದಾಗ ತಾನಾಗಿಯೇ ಗೊತ್ತಾಗುತ್ತದೆ. ಯಾವಾಗ ಏನು ಆಗಬೇಕೋ ಅದು ಆಗುತ್ತದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಸೂಕ್ಷ್ಮವಾಗಿ ಹೇಳಿದ್ದಾರೆ.



ಸದಾಶಿವನಗರ ನಿವಾಸದಲ್ಲಿ ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ನಮ್ಮಲ್ಲಿ ಯಾವುದೇ ಸಮಸ್ಯೆ ಇಲ್ಲ. ಯಾವ ರಾಜಕೀಯವೂ ಇಲ್ಲ. ಏನೇನು ತೀರ್ಮಾನ ಆಗಿವೆಯೋ ಅವು ಚಾಲ್ತಿಗೆ ಬರಲಿವೆ ಎಂದು ಸ್ಪಷ್ಟಪಡಿಸಿದರು.

ನಮ್ಮ ಪಕ್ಷದಲ್ಲಿ ಯಾವ ಸಮಯದಲ್ಲಿ ಏನು ಮಾಡಬೇಕೋ ಅದನ್ನು ಪಕ್ಷ ಮಾಡುತ್ತದೆ. ನಮಗೆ ನಮ್ಮ ಪಕ್ಷದ ಮೇಲೆ ವಿಶ್ವಾಸ ಇದೆ. ಏನು ಮಾಡಬೇಕು ಎಂಬುದು ಅವರಿಗೆ ಗೊತ್ತಿದೆ. ನಾಯಕತ್ವ ಬದಲಾವಣೆ ಬಗ್ಗೆ ನಾನು ಯಾವತ್ತು ಚರ್ಚೆ ಮಾಡಲ್ಲ. ಹೈಕಮಾಂಡ್ ಯಾವಾಗ ಯಾವ ಸೂಚನೆ ನೀಡುತ್ತದೆಯೋ ಆವಾಗ ಅದನ್ನು ಪಾಲಿಸುತ್ತೇವೆ ಎಂದು ನಾನು ಹಾಗೂ ಸಿಎಂ ಅವರು ಹೇಳಿದ್ದು, ಅದರಂತೆ ನಡೆಯುತ್ತೇವೆ ಎಂದು ತಿಳಿಸಿದರು. ➡ಪುಟ ೪

ಕೊಟ್ಟ ಮಾತಿನಂತೆ ಒಳಮೀಸಲಾತಿ

ಬಲ ಹಾಗೂ ಎಡ ಪಂಗಡಗಳಲ್ಲಿ ಮೊದಲು ಯಾರಿಗೆ, ನಂತರ ಯಾರಿಗೆ ಎಂಬ ಪ್ರಶ್ನೆ ಇತ್ತು. ಅದಕ್ಕೆ ಬೇಕಾದ ಪರಿಹಾರ ದಾರಿ ಕಂಡು ಹಿಡಿಯಲಾಗಿದೆ. ಬಲವಿರಲಿ, ಎಡವಿರಲಿ, ಲಂಬಾಣಿ, ಭೋವಿ ಎಲ್ಲರಿಗೂ ನ್ಯಾಯ ಒದಗಿಸುವ ಕೆಲಸವನ್ನು ನಮ್ಮ ಸರ್ಕಾರ ಮಾಡಿದೆ. 40 ವರ್ಷಗಳಿಂದ ಇದ್ದ ಸಮಸ್ಯೆಯನ್ನು ನಾವು ಪರಿಹರಿಸಿದ್ದೇವೆ. ಎಲ್ಲರಿಗೂ ನ್ಯಾಯ ಕೊಡುತ್ತಿದ್ದೇವೆ ಎಲ್ಲರೂ ಒಟ್ಟಾಗಿ ಹೋಗಬೇಕು ಅಷ್ಟೇ ಎಂದರು.

ಶಿವಮೊಗ್ಗದಲ್ಲಿ ಅಣು ಸ್ಥಾವರ ಆತಂಕ ಬೇಡ: ರಾಘವೇಂದ್ರ

• **ಶಿವಮೊಗ್ಗ:** ಜಿಲ್ಲೆಯಲ್ಲಿ ಅಣು ವಿದ್ಯುತ್ ಸ್ಥಾವರ ಸ್ಥಾಪನೆ ಕುರಿತು ಸಾರ್ವಜನಿಕರು ಅನಾವಶ್ಯಕವಾಗಿ ಆತಂಕಕ್ಕೊಳಗಾಗುವ ಅಗತ್ಯವಿಲ್ಲ. ಪರಿಸರ ಹಾನಿಯಾಗುವ ಯಾವುದೇ ಯೋಜನೆಗೂ ತಮ್ಮ ಸ್ಪಷ್ಟ ವಿರೋಧವಿದ್ದು, ಜನರ ಹಿತಾಸಕ್ತಿ ಕಾಪಾಡಲು ಬದ್ಧರಾಗಿರುವುದಾಗಿ ಸಂಸದ ಬಿ.ವೈ. ರಾಘವೇಂದ್ರ ಸ್ಪಷ್ಟಪಡಿಸಿದ್ದಾರೆ. ಸಾಗರ ತಾಲೂಕಿನ ಬೇಸೂರು ಗ್ರಾಮದಲ್ಲಿ ಅಣು ವಿದ್ಯುತ್ ಸ್ಥಾವರ ಸ್ಥಾಪನೆ ಸಂಬಂಧ ಗ್ರಾಮೀಣ ಭಾಗದ ಜನರು ಆತಂಕದಲ್ಲಿರುವುದು ಗಮನಕ್ಕೆ ಬಂದಿದೆ. ಆದರೆ ಯೋಜನೆ ಕಾರ್ಯಗತಕ್ಕೂ ಮುನ್ನ ಸಾಧಕಬಾಧಕಗಳ ಬಗ್ಗೆ ಚರ್ಚಿಸಬೇಕಿದೆ ಎಂದು ಹೇಳಿದ್ದಾರೆ. ➡ಪುಟ ೪

ಯಾವುದೇ ಪ್ರಸ್ತಾವನೆ ಸಲ್ಲಿಕೆಯಾಗಿಲ್ಲ: ಸಂಸದ

ಬಿಸಿಲಿಗೆ ತತ್ತರಿಸಿದ ಕಲ್ಯಾಣ ಕರ್ನಾಟಕ

• **ಕಲಬುರಗಿ:** ಪ್ರಸಕ್ತ ಬೇಸಿಗೆಯ ಬಿಸಿಲಿಗೆ ಕೇಂದ್ರ ಸ್ಥಾನ ಕಲಬುರಗಿ ಸೇರಿದಂತೆ ಕಲ್ಯಾಣ ಕರ್ನಾಟಕ ಭಾಗದ 7 ಜಿಲ್ಲೆಗಳ ಜನ ಬಿಸಿಲಿನ ಶಾಖಕ್ಕೆ ಅಕ್ಷರಶಃ ಹೈರಾಣಾಗಿದ್ದು, ರಾಜ್ಯದಲ್ಲೇ ಅತಿ ಹೆಚ್ಚು ಗರಿಷ್ಠ ತಾಪಮಾನ ಕಲಬುರಗಿಯಲ್ಲಿ ದಾಖಲಾಗಿದೆ. ಕಲಬುರಗಿ, ಬೀದರ್, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ, ವಿಜಯ ನಗರ ಜಿಲ್ಲೆಗಳಲ್ಲಿ ಕಳೆದ ವಾರ ತಾಪಮಾನ ಸರಾಸರಿ 40ಕ್ಕೂ ಹೆಚ್ಚು ಡಿಗ್ರಿ ಸೆ. ದಾಖಲಾಗಿದೆ.

• ವಿವರ ಪುಟ ೪

ಬಿಸಿಲಿಗೆ ತತ್ತರಿಸಿದ ಕಲ್ಯಾಣ ಕರ್ನಾಟಕ

▸ ರಾಚಪ್ಪಾ ಜಂಬಗಿ

ಕಲಬುರಗಿ: ಪ್ರಸಕ್ತ ಬೇಸಿಗೆಯ ಬಿಸಿಲಿಗೆ ಕೇಂದ್ರ ಸ್ಥಾನ ಕಲಬುರಗಿ ಸೇರಿದಂತೆ ಕಲ್ಯಾಣ ಕರ್ನಾಟಕ ಭಾಗದ ಏಳು ಜಿಲ್ಲೆಗಳ ಜನ ಬಿಸಿಲಿನ ಶಾಖಕ್ಕೆ ಅಕ್ಷರಶಃ ಹೈರಾಣಾಗಿದ್ದು, ಈವರೆಗೆ ರಾಜ್ಯದಲ್ಲೇ ಅತಿ ಹೆಚ್ಚು ಗರಿಷ್ಠ ತಾಪಮಾನ ಕಲಬುರಗಿಯೊಂದರಲ್ಲೇ ದಾಖಲಾಗಿದೆ.

ಕಲ್ಯಾಣ ಕರ್ನಾಟಕ ಭಾಗದ ಕಲಬುರಗಿ, ಬೀದರ್, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳಲ್ಲಿ ಕಳೆದ ಒಂದು ವಾರದ ಬಿಸಿಲಿನ ತಾಪಮಾನ ಸರಾಸರಿ 40ಕ್ಕೂ ಮೇಲ್ಪಟ್ಟು ದಾಖಲಾಗಿದ್ದು, ಬಿಸಿಲಿನ ಶಾಖಕ್ಕೆ ಇಡೀ ಕಲ್ಯಾಣ ಕರ್ನಾಟಕ ಸೇರಿದಂತೆ ಉತ್ತರ ಕರ್ನಾಟಕದ ಒಳನಾಡಿನ ಜಿಲ್ಲೆಗಳು ಸಹ ಅಕ್ಷರಶಃ ಬಸವಳಿದಿವೆ.

ಕ.ಕ.ಭಾಗದ ಬಿಸಿಲಿನ ಅಂಕಿ ಅಂಶ: ಕಳೆದ ಒಂದು ವಾರದಿಂದ ಕಲ್ಯಾಣ ಕರ್ನಾಟಕ ಭಾಗದಲ್ಲಿ ಅತ್ಯಧಿಕ ತಾಪಮಾನ ದಾಖಲಾಗಿದ್ದು, ಕಳೆದ ಏ.25ರಂದು ಕಲಬುರಗಿ 41.2, ಬೀದರ್ 40.7, ಯಾದಗಿರಿ 41.6, ಬಳ್ಳಾರಿ 41.2, ಕೊಪ್ಪಳ, 41.1, ರಾಯಚೂರು 42.5 ಹಾಗೂ ವಿಜಯನಗರ 40 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ. ಕಳೆದ ಒಂದು ವಾರದಲ್ಲಿ ಕಲಬುರಗಿ (ಏ.17,ಏ.23) ಹಾಗೂ ರಾಯಚೂರು(ಏ.24)ರಂದು ರಾಜ್ಯದಲ್ಲೇ ಅತ್ಯಧಿಕ ತಾಪಮಾನ ದಾಖಲಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.





» ಕಲಬುರಗಿಯಲ್ಲಿ ಅತ್ಯಧಿಕ 45.3 ಡಿಗ್ರಿ ತಾಪಮಾನ ದಾಖಲು


ರಣ ಬಿಸಿಲಿನಿಂದ ಜನ ತತ್ತರಿಸಿ ಹೋಗಿದ್ದು,ಟ್ರಾಫಿಕ್ ಸಿಗ್ನಲ್‌ನಲ್ಲಿ ನೆರಳಿನ ಹೊದಿಕೆ ನಿರ್ಮಿಸಬೇಕು. ಬೆಂಗಳೂರಿಗೆ ಹವಾನಿಯಂತ್ರಿತ ಸಾರಿಗೆ ಸಂಪರ್ಕ ಕಲ್ಪಿಸುವ ಸರ್ಕಾರ ರಣಬಿಸಿಲಿರುವ ಕಲಬುರಗಿ ಜಿಲ್ಲೆಗೆ ಏಕೆ ಹವಾನಿಯಂತ್ರಿತ ಬಸ್ ನೀಡುತ್ತಿಲ್ಲ. ಜಿಲ್ಲೆಯ ಪ್ರತಿ ತಾಲೂಕಿಗೆ ಬೀದರ, ಭಾಲ್ಕಿ, ಬಸವಕಲ್ಯಾಣ, ಯಾದಗಿರಿ, ಸುರಪುರ, ರಾಯಚೂರು, ವಿಜಯಪುಪುರ, ಹೈದರಾಬಾದ ನಗರಗಳಿಗೆ ಹವಾನಿಯಂತ್ರಿತ ಸಾರಿಗೆ ಸೌಲಭ್ಯ ಕಲ್ಪಿಸಬೇಕು.

■ ಮುತ್ತಣ್ಣ ನಡಗೇರಿ, ಹೋರಾಟಗಾರ, ಕಲಬುರಗಿ

ಸಂಚಾರಿ ಪೊಲೀಸರಿಗೆ ಎಸಿ ಹೆಲ್ಮೆಟ್!

ಜಿಲ್ಲೆಯಾದ್ಯಂತ ಪ್ರಸಕ್ತ ಬಿಸಿಲಿನ ತಾಪಮಾನ 45 ಡಿಗ್ರಿ ಸೆಲ್ಸಿಯಸ್ ದಾಟುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರಿ ಕಚೇರಿಗಳ ವೇಳಾಪಟ್ಟಿ ಬದಲಾವಣೆ ಮಾಡಲಾಗಿದೆ. ಜತೆಗೆ ಇಷ್ಟೊಂದು ಬಿಸಿಲಿನ ತಾಪದ ಮಧ್ಯೆಯೂ ಕರ್ತವ್ಯ ನಿರ್ವಹಿಸುವ ಸಂಚಾರಿ ಪೊಲೀಸರಿಗೆ ಕಲಬುರಗಿ ಪೊಲೀಸ್ ಆಯುಕ್ತಾಲಯದಿಂದ ವಿಶೇಷ ಎಸಿ ಹೆಲ್ಮೆಟ್ ನೀಡಲಾಗಿದ್ದು, ಈ ಹೆಲ್ಮೆಟ್ ಟ್ರಾಫಿಕ್ ಪೊಲೀಸರು ಹಾಕಿಕೊಂಡರೆ ಬಿಸಿಲಿನಿಂದ ಕೊಂಚ ರಿಲೀಫ್ ಸಿಕ್ಕಂತಾಗಿದೆ. ಎಸಿ ಹೆಲ್ಮೆಟ್ ಧರಿಸುವುದರಿಂದ ತಲೆ ಹಾಗೂ ಮುಖದ ಮೇಲೆ ತಣ್ಣನೆ ಗಾಳಿ ಬೀಸಲಿದೆ. ಇದರಿಂದಾಗಿ ಬಿಸಿಲಿನಲ್ಲಿ ಕರ್ತವ್ಯ ನಿರ್ವಹಿಸುವ ಸಮಯದಲ್ಲಿ ಬಿಸಿಲಿನ ಶಾಖ ಅಷ್ಟೊಂದು ಪ್ರಮಾಣದಲ್ಲಿ ತಾಕುವುದಿಲ್ಲ. ಜತೆಗೆ ಸೊಂಟಕ್ಕೊಂದು ಸಣ್ಣ ಬ್ಯಾಟರಿ ನೀಡಿರುವ ಪರಿಣಾಮ ಇಡೀ ದಿನ ತಂಪಿನ ಗಾಳಿ ಸಿಗಲಿದೆ.

ರಾಮ ಬಾಣ



ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಭಾರತ ನರಕದ ಕೂಪ –ಟ್ರಂಪ್ ಹೇಳಿಕೆ
– ಕೆಸರು ನೀರಿನಲ್ಲಿ ಹೊರಳಾಡಿ ಸ್ವರ್ಗವನ್ನು ಕಾಣುವ ಎಮ್ಮೆಗೆ ಶುದ್ಧ ನೀರಿನ ಕೆರೆ ನರಕವಾಗಿ ಕಾಣಿಸುವುದು ಸಹಜ!

ದಿನ ಭವಿಷ್ಯ

ಮೇಷ
ಸಾಧನೆಯ ದಿನ. ವ್ಯವಹಾರದಲ್ಲಿ ಸಫಲತೆ. ಕೆಲಕಾಲದಿಂದ ಕಾಡುತ್ತಿದ್ದ ಚಿಂತೆ ಪರಿಹಾರ. ನೆರೆಮನೆಯವರ ಜತೆ ವಾಗ್ವಾದ ಸಂಭವ.

ವೃಷಭ
ಹೊಸ ವ್ಯವಹಾರಕ್ಕೆ ಅಡ್ಡಿಗಳು. ನಂಬಿಗಸ್ಥರ ಜತೆ ವ್ಯವಹಾರ ನಡೆಸಿ. ಆಪ್ತರ ಜತೆಗಿನ ಸಂಬಂಧದಲ್ಲಿ ಉದ್ವಿಗ್ನತೆ. ಹೊಂದಾಣಿಕೆ ಮುಖ್ಯ. ಖರ್ಚು ಹೆಚ್ಚಳ.

ಮಿಥುನ
ನಿಮ್ಮ ಭಾವನೆ, ಮನಸ್ಥಿತಿ ಆಪ್ತರ ಜತೆ ಹಂಚಿಕೊಳ್ಳಿ. ಇದರಿಂದ ಮನಸ್ಸು ಹಗುರ. ಸುಮ್ಮನೇ ಕೊರಗುತ್ತಾ ಕೂರಬೇಡಿ.

ಕಟಕ
ಸಂಗಾತಿ ಜತೆ ಸಂಘರ್ಷ ನಡೆದೀತು. ಅವರ ದೃಷ್ಟಿಕೋನ ಕೂಡಾ ಪರಾಮರ್ಶಿಸಿ. ಸ್ನೇಹಿತರ ಜತೆ ಆತ್ಮೀಯ ಕಾಲಕ್ಷೇಪ. ಆರ್ಥಿಕ ಒತ್ತಡ.

ಸಿಂಹ
ಸಣ್ಣಪುಟ್ಟ ಜಗಳದಲ್ಲಿ ತೊಡಗಿಕೊಳ್ಳಬೇಡಿ. ಅದರಿಂದ ಮನಸ್ಸಿನ ನೆಮ್ಮದಿ ಹಾಳು. ವೃತ್ತಿಯಲ್ಲಿ ಹೊಸ ಅವಕಾಶ. ಸ್ನೇಹದಲ್ಲಿ ಬಿರುಕು.

ಕನ್ಯಾ
ಹೆಚ್ಚುವರಿ ಹೊಣೆಗಾರಿಕೆ ಒತ್ತಡ ಸೃಷ್ಟಿಸಲಿದೆ. ದುಡುಕಿನ ನಿರ್ಧಾರ ತಾಳದಿರಿ. ಖರೀದಿಯ ಉತ್ಸಾಹಕ್ಕೆ ಕಡಿವಾಣ ಹಾಕಿ.

ತುಲಾ
ನಿಶ್ಚಿತ ಸಮಯದಲ್ಲಿ ಕೆಲಸ ಪೂರೈಸಲು ವಿಫಲ. ಇದರಿಂದ ಒತ್ತಡ ಹೆಚ್ಚಳ. ಬೇರೆಯವರಿಂದ ಸಿಗಬೇಕಾದುದನ್ನು ಕೇಳಿ ಪಡೆಯಿರಿ.

ವೃಶ್ಚಿಕ
ಅಡ್ಡಿಗಳನ್ನು ನಿವಾರಿಸಿಕೊಂಡು ವಿಳಂಬವಿಲ್ಲದೆ ಕಾರ್ಯ ಎಸಗುವಿರಿ. ಆರ್ಥಿಕ ಸ್ಥಿರತೆ. ವೃತ್ತಿ ಒತ್ತಡ ನಿವಾರಣೆಯಾಗಲಿದೆ.

ಧನು
ಕುಟುಂಬ ಸದಸ್ಯರ ಜತೆ ಹೆಚ್ಚು ಕಾಲ ಕಳೆಯಿರಿ. ಆರೋಗ್ಯದ ಕುರಿತು ಕಾಳಜಿ ವಹಿಸಿರಿ. ಕಲಾವಿದರಿಗೆ ಯಶ. ಸಾಧನೆಯ ತೃಪ್ತಿ.

ಮಕರ
ಮನೆಯವರ ಜತೆ ಉತ್ತಮ ಹೊಂದಾಣಿಕೆ. ಭಿನ್ನಮತ ನಿವಾರಣೆ. ವದಂತಿಗಳಿಗೆ ಹೆಚ್ಚು ಕಿವಿಗೊಡಬೇಡಿ. ನಿಮ್ಮ ಕೆಲಸ ಮಾಡುತ್ತಿರಿ.

ಕುಂಭ
ಆಸ್ತಿ ಖರೀದಿಗೆ ಉದ್ದೇಶಿಸಿದ್ದರೆ ಇಚ್ಛಿಸಿದ ಬೆಲೆಗೆ ದೊರಕದು. ಕೌಟುಂಬಿಕ ಪರಿಸರ ಶಾಂತ. ಮಕ್ಕಳ ಸಾಧನೆಯಿಂದ ತೃಪ್ತಿ.

ಮೀನ
ಕಾಲಮಿತಿಯಲ್ಲಿ ನಿಮ್ಮ ಗುರಿ ಸಾಧಿಸುವಿರಿ. ಯಾವುದೇ ವಿಘ್ನ ಬಾಧಿಸದು. ಕೌಟುಂಬಿಕ ಸಂತೃಪ್ತಿ. ವಿದ್ಯಾರ್ಥಿಗಳ ಆಶಯ ಪೂರೈಸಲಿದೆ.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00

ಅದೃಷ್ಟ ಸಂಖ್ಯೆ: 2,7,4,1

ರಾಜಸ್ಥಾನ ಮುಖ್ಯಮಂತ್ರಿ ಭಜನ್‌ಲಾಲ್ ಶರ್ಮಾ ಭರವಸೆ
ರಾಜಸ್ಥಾನ ಹೂಡಿಕೆ ಸ್ನೇಹಿ

ಬೆಂಗಳೂರು: ರಾಜಸ್ಥಾನ ಸರ್ಕಾರವು ಹೂಡಿಕೆದಾರ ಸ್ನೇಹಿ ವಾತಾವರಣವನ್ನು ಸೃಷ್ಟಿಸುತ್ತಿದೆ. ಕೃಷಿ ಕ್ಷೇತ್ರದಲ್ಲಿ ಹೂಡಿಕೆಗೆ ವಿಪುಲ ಅವಕಾಶವಿದ್ದು, ಗ್ಲೋಬಲ್ ರಾಜಸ್ಥಾನ ಅಗ್ರಿಟೆಕ್ ಮೀಟ್ (ಜಿ.ಆರ್.ಎ.ಎಂ)–2026 ಕ್ಕೆ ಎಲ್ಲಾ ಹೂಡಿಕೆದಾರರನ್ನು ನಾವು ಸ್ವಾಗತಿಸುತ್ತೇವೆ ಎಂದು ರಾಜಸ್ಥಾನ ಮುಖ್ಯಮಂತ್ರಿ ಭಜನ್‌ಲಾಲ್ ಶರ್ಮಾ ಹೇಳಿದರು.

ಮೇ 23 ರಿಂದ 25ರವರೆಗೆ ಜೈಪುರದಲ್ಲಿ ನಡೆಯುವ ಗ್ಲೋಬಲ್ ರಾಜಸ್ಥಾನ ಅಗ್ರಿಟೆಕ್ ಮೀಟ್–2026ಕ್ಕೆ ಪೂರಕವಾಗಿ ರಾಜಸ್ಥಾನ ಸರ್ಕಾರದ ಕೃಷಿ ಇಲಾಖೆ, ಭಾರತೀಯ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಘಟನೆ (ಎಫ್‌ಐಸಿಸಿಐ) ಮತ್ತು ರಾಜಸ್ಥಾನ ಪ್ರತಿಷ್ಠಾನದ ಸಹಯೋಗದೊಂದಿಗೆ ಬೆಂಗಳೂರಿನಲ್ಲಿ ಭಾನುವಾರ ಆಯೋಜಿಸಿದ್ದ ರೋಡ್ ಶೋನಲ್ಲಿ ಅವರು ಮಾತನಾಡಿದರು.

ರಾಜಸ್ಥಾನವು ತನ್ನ ಸಾಂಪ್ರದಾಯಿಕ ಕೃಷಿ ಸಾಮರ್ಥ್ಯಗಳನ್ನು ಆಧುನಿಕ ತಂತ್ರಜ್ಞಾನದೊಂದಿಗೆ ಸಂಯೋಜಿಸುವ ಮೂಲಕ ಕೃಷಿ ತಂತ್ರಜ್ಞಾನ ಆಧಾರಿತ ಆರ್ಥಿಕತೆಯನ್ನು ಸದೃಢಗೊಳಿಸಲು ಶ್ರಮಿಸುತ್ತಿದೆ. ಈ ನಿಟ್ಟಿನಲ್ಲಿ ಗ್ಲೋಬಲ್ ರಾಜಸ್ಥಾನ ಅಗ್ರಿಟೆಕ್ ಮೀಟ್ (ಜಿ.ಆರ್.ಎ.ಎಂ)–2026 ಹಮ್ಮಿಕೊಳ್ಳಲಾಗುತ್ತಿದೆ. 2024ರ ರೈಸಿಂಗ್ ರಾಜಸ್ಥಾನ ಜಾಗತಿಕ ಹೂಡಿಕೆ ಶೃಂಗಸಭೆಯ ಸಂದರ್ಭದಲ್ಲಿ ಸಹಿ ಹಾಕಲಾದ 35 ಲಕ್ಷ ಕೋಟಿ ರೂ. ಒಪ್ಪಂದಗಳಲ್ಲಿ ಈಗಾಗಲೇ 9 ಲಕ್ಷ ಕೋಟಿ ರೂ. ಹೂಡಿಕೆ ಪ್ರಸ್ತಾವನೆಗಳನ್ನು ಜಾರಿಗೊಳಿಸಲಾಗುತ್ತಿದೆ. ಕೃಷಿ ಕ್ಷೇತ್ರದಲ್ಲೂ ಇದೇ ರೀತಿಯ ಹೂಡಿಕೆಗೆ ವಿಪುಲ ಅವಕಾಶವಿದೆ ಎಂದರು. ರಾಜಸ್ಥಾನವು ಅಭಿವೃದ್ಧಿಯ ಜತೆಗೆ ವಿಕಸನಗೊಳ್ಳುತ್ತಿದೆ. ಇದಕ್ಕೆ ಪೂರಕವಾಗಿ ಪ್ರಗತಿಪರ ಬದಲಾವಣೆಯನ್ನು ಅಳವಡಿಸಿಕೊಳ್ಳುತ್ತಿದೆ. ಕೃಷಿ ಕ್ಷೇತ್ರದಲ್ಲೂ ಇದೇ ರೀತಿಯ ಬದಲಾವಣೆಗಳಾಗುತ್ತಿದ್ದು, ಕರ್ನಾಟಕದೊಂದಿಗೆ ಸೇರಿ ರೈತರನ್ನು ಇತ್ತೀಚಿನ ತಂತ್ರಜ್ಞಾನಗಳೊಂದಿಗೆ ಸಜ್ಜುಗೊಳಿಸುವ ನಿಟ್ಟಿನಲ್ಲಿ ಮುಂದುವರಿಯಲು ಆಸಕ್ತಿ ಹೊಂದಿದ್ದೇವೆ. ಎರಡೂ ರಾಜ್ಯಗಳ ಮಧ್ಯೆ ಸೌಹಾರ್ದಯುತ ವಾತಾವರಣವಿದ್ದು, ರಾಜಸ್ಥಾನದ ಪ್ರಗತಿ ಮತ್ತು ಕೃಷಿ ಕ್ರಾಂತಿಯಲ್ಲಿ ಕರ್ನಾಟಕವನ್ನು ನಮ್ಮೊಂದಿಗೆ ಪಾಲುದಾರರಾಗಿ ಹೊಂದಲು ಮುಕ್ತ ಆಹ್ವಾನ ನೀಡುತ್ತಿದ್ದೇವೆ ಎಂದು ಹೇಳಿದರು.



ಸಾಕ್ಷ್ಯಚಿತ್ರ ಪ್ರದರ್ಶನ

ಜಿಆರ್‌ಎಎಂ ಸಮಾವೇಶದಲ್ಲಿ ರಾಜಸ್ಥಾನದ ಕೃಷಿ ಮತ್ತು ಕೃಷಿ ತಂತ್ರಜ್ಞಾನ ವಲಯಗಳಲ್ಲಿನ ವಿಪುಲ ಅವಕಾಶಗಳನ್ನು ಪರಿಣಾಮಕಾರಿಯಾಗಿ ಪ್ರಸ್ತುತಪಡಿಸುವ ಜಿ.ಆರ್.ಎ.ಎಂ–2026 ಕುರಿತ ಸಾಕ್ಷ್ಯಚಿತ್ರವನ್ನು ಪ್ರದರ್ಶಿಸಲಾಯಿತು. ಕೃಷಿ, ಕೃಷಿ ತಂತ್ರಜ್ಞಾನ, ಹೂಡಿಕೆ ಮತ್ತು ಪಾಲುದಾರಿಕೆ ಅವಕಾಶಗಳ ಕುರಿತು ವ್ಯಾಪಕ ಚರ್ಚೆಗಳು ನಡೆದವು.

ಕೃಷಿ ಮತ್ತು ತೋಟಗಾರಿಕೆ ಸಚಿವ ಡಾ. ಕಿರೋಡಿ ಲಾಲ್ ಮೀನಾ ಮಾತನಾಡಿ, ರಾಜಸ್ಥಾನ ಸರ್ಕಾರವು ಹೂಡಿಕೆದಾರರಿಗೆ ಅನುಕೂಲವಾಗುವಂತೆ ನೀತಿ ರೂಪಿಸುತ್ತಿದೆ. ಅದಕ್ಕೆ ಪೂರಕವಾಗಿ ಮೂಲ ಸೌಕರ್ಯ ಅಭಿವೃದ್ಧಿ ಜೊತೆಗೆ ಹೊಸ ಆವಿಷ್ಕಾರಗಳ ಮೂಲಕ ಕೃಷಿ ತಂತ್ರಜ್ಞಾನ ಪರಿಸರ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುತ್ತಿದೆ. ಹೂಡಿಕೆದಾರರು ಮತ್ತು ಉದ್ಯಮಿಗಳಿಗೆ ಅನುಕೂಲಕರ ವಾತಾವರಣವನ್ನು ಸೃಷ್ಟಿಸುತ್ತಿದೆ ಎಂದು ತಿಳಿಸಿದರು.

ಬಾರ್ಮರ್‌ನ ಪ್ರಗತಿಪರ ರೈತ ವಿಕ್ರಮ್ ಸಿಂಗ್ ರಾಥೋಡ್ ತಮ್ಮ ಅನುಭವಗಳನ್ನು ಹಂಚಿಕೊಂಡರು. ಕೃಷಿ ಇಲಾಖೆ ಪ್ರಧಾನ ಕಾರ್ಯದರ್ಶಿ ಮಂಜು ವಾಲ್, ಎಫ್‌ಐಸಿಸಿಐ ಕರ್ನಾಟಕ ರಾಜ್ಯ ಕೃಷಿ ಮಂಡಳಿಯ ಉಪಸಮಿತಿ ಅಧ್ಯಕ್ಷ ರವೀಂದ್ರ ಅಗರ್‌ವಾಲ್, ರಾಜಸ್ಥಾನ್ ಫೌಂಡೇಶನ್‌ನ ಬೆಂಗಳೂರು ವಿಭಾಗದ ನಾಯಕರು ಸೇರಿದಂತೆ ರಾಜಸ್ಥಾನದ ಪ್ರತಿನಿಧಿಗಳು ರಾಜ್ಯದಲ್ಲಿ ಹೂಡಿಕೆ ಮತ್ತು ಪಾಲುದಾರಿಕೆಗಳಿಗೆ ಇರುವ ಅವಕಾಶಗಳ ಬಗ್ಗೆ ಮಾತನಾಡಿದರು.

ಜನಿವಾರ ಮುಟ್ಟಲು ಬಿಡಬೇಡಿ: ಡಿಕೆಶಿ

ಬೆಂಗಳೂರು: ಪರೀಕ್ಷೆ ಬರೆಯಲು ಹೋದಾಗ ಜನಿವಾರ ತೆಗೆಸಿದ್ದಾರೆ ಎಂಬುದನ್ನು ಕಳೆದ ಕೆಲವು ದಿನಗಳಿಂದ ಮಾಧ್ಯಮಗಳಲ್ಲಿ ಗಮನಿಸುತ್ತಿದ್ದೇನೆ. ಜನಿವಾರ ಯಾರಿಗೂ ಮುಟ್ಟಲು ಬಿಡಬಾರದು. ಅದು ಶ್ರೇಷ್ಠ ಭಾವನೆ. ನಾನು ಉಡುದಾರ ಹಾಕಿರುವೆ. ಬೇರೆ ದೇಶಕ್ಕೆ ಹೋಗುವಾಗ ತಾಂತ್ರಿಕ ಕಾರಣಗಳಿಗೆ ತೆಗೆಸುತ್ತಾರೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ಬೆಂಗಳೂರಿನಲ್ಲಿ ಭಾನುವಾರ ಏರ್ಪಡಿಸಿದ್ದ ರಾಜ್ಯಮಟ್ಟದ ವಧು–ವರರ ಸಮಾವೇಶದಲ್ಲಿ ಮಾತನಾಡಿದ ಅವರು, ವಿಶ್ವಕರ್ಮ ಶ್ರೀಗಳ ಮಾರ್ಗದರ್ಶನದಲ್ಲಿ ಮುಂದಿನ ಪೀಳಿಗೆಗೆ ಅಡಿಪಾಯ ಹಾಕಲು, ಸಮುದಾಯವನ್ನು ಒಗ್ಗೂಡಿಸಲು ಸಂಘಟನೆ ಮಾಡುತ್ತಿದ್ದಾರೆ. ಎಲ್ಲಾ ಮನುಷ್ಯರ ರಕ್ತದ ಬಣ್ಣ ಕೆಂಪು, ಕಣ್ಣೀರಿನ ರುಚಿ ಉಪ್ಪಿರುತ್ತದೆ. ಎಲ್ಲಾ ಮಾನವರು ಒಂದೇ ಎಂದರು.

ಸಮುದಾಯ ಹಿಂದುಳಿದಿದೆ ಎಂದು ನಂಜುಂಡಿ ಹೇಳಿದ್ದಾರೆ. ಅವರ ಮಾತನ್ನು ನಾನು ಒಪ್ಪುವುದಿಲ್ಲ. ಏಕೆಂದರೆ ದೇವರು ಯಾರಿಗೂ ನೀಡದ ಪ್ರತಿಭೆ ನಿಮಗೆ ನೀಡಿದ್ದಾನೆ. ನೀವು ಪ್ರತಿಭೆಯಲ್ಲಿ ಮುಂದಿರುವವರು ಎಂದರು. ಕಲ್ಲು ಪ್ರಕೃತಿ, ಕಡೆದರೆ ಆಕೃತಿ, ಪೂಜಿಸಿದರೆ ಸಂಸ್ಕೃತಿ. ಆ ಕಲ್ಲನ್ನು ಕಡೆದು ಸರ್ವರೂ ಪೂಜೆ ಮಾಡುವಂತೆ ಮಾಡುವವರು ನೀವು. ಊರಲ್ಲಿ ಇರುವ ನೂರಾರು ಹೋರಿಗಳು ಬಸವ ಆಗಲು ಸಾಧ್ಯವೇ? ನೀವು ಮಾಡುವ ಪವಿತ್ರ ಕೆಲಸ ನಿಮ್ಮಿಂದ ಮಾತ್ರ ಮಾಡಲು ಸಾಧ್ಯ ಎಂದರು.

ಹಿಂದುಳಿದವರು ಎನ್ನುವ ಭಾವನೆ ಬಿಟ್ಟುಬಿಡಿ: ಕಳೆದ ಬಾರಿಯ ಸದನದಲ್ಲಿ ನನ್ನ ಬಗ್ಗೆ ವಿರೋಧ ಪಕ್ಷಗಳು ಮಾತನಾಡುವಾಗ ನಾನು ಒಂದು ಮಾತು ಹೇಳಿದೆ. ಸಿದ್ದರಾಮಯ್ಯ ಅವರು ಸೇರಿ ನನ್ನ ಜೊತೆ 138 ಜನ ಶಾಸಕರು ಇದ್ದಾರೆ. ಒಬ್ಬ ಸರಿಯಾದ ಧೈರ್ಯವಂತ ಇದ್ದರೆ ಅವನೇ ಮುಂದಾಳು. ಅವನೇ ಎಲ್ಲರನ್ನು ಕರೆದುಕೊಂಡು ಹೋಗುವವನು. ಅದಕ್ಕೆ ನೀವು ಹಿಂದುಳಿದವರು ಎನ್ನುವ ಭಾವನೆ ಬಿಟ್ಟುಬಿಡಿ ಎಂದರು.

ಇತ್ತೀಚಿನ ದಿನಗಳಲ್ಲಿ ಅಂತರ್ಜಾತಿ ವಿವಾಹಗಳು ಹೆಚ್ಚಾಗುತ್ತಿವೆ. ಸಾಮಾಜಿಕ ಜಾಲತಾಣಗಳ ಪ್ರಭಾವದಿಂದಲೂ ಅನೇಕ ಬದಲಾವಣೆ ಆಗುತ್ತಿವೆ. ಜನರು ಜಾತಿ, ಧರ್ಮಗಳನ್ನು ಮೀರಿ ಮದುವೆಯಾಗುತ್ತಿದ್ದಾರೆ. ಗಂಡು ಒಂದು ಜಾತಿ ಹೆಣ್ಣು ಒಂದು ಜಾತಿ ಆನಂತರ ಅವರಿಗೆ ಜನಿಸಿದ ಮಗುವಿಗೆ ಯಾವ ರೀತಿ ಹೆಸರು ಇಡುತ್ತಾರೆ. ಅದಕ್ಕೆ ಹೆಸರು ಇಡುವುದೇ ಧರ್ಮ. ಇದೆಲ್ಲವೂ ಧಾರ್ಮಿಕ ಕಾರ್ಯ. ಸತ್ತ ಮೇಲೆ ಹೂಳಬೇಕೋ, ಸುಡಬೇಕೋ ಎಂದು ತೀರ್ಮಾನಿಸುವುದು ಧರ್ಮ. ಅಂದರೆ ಹಿರಿಯರು ಹಳೆಯ ತೀರ್ಮಾನದಂತೆ ಮಾಡುತ್ತಾರೆ. ಯಾರೂ ಧರ್ಮ ಬಿಟ್ಟು ಹೋಗಲು ಸಾಧ್ಯವಿಲ್ಲ ಎಂದರು.

ಶಿವಮೊಗ್ಗದಲ್ಲಿ ಅಣು ಸ್ಥಾವರ ಆತಂಕ ಬೇಡ: ರಾಘವೇಂದ್ರ

ಪುಟ ೩ ➡ಕೇಂದ್ರ ಸರ್ಕಾರ ಅಧೀನದ ಎನ್.ಟಿ.ಪಿ.ಸಿ (National Thermal Power Corporation) ಸಂಸ್ಥೆಯಿಂದ ರಾಜ್ಯದಲ್ಲಿ ಅಣು ವಿದ್ಯುತ್ ಸ್ಥಾವರ ಸ್ಥಾಪನೆಗಾಗಿ ವಿಜಯಪುರ, ಕೊಪ್ಪಳ, ಶಿವಮೊಗ್ಗ, ಉತ್ತರ ಕನ್ನಡ ಹಾಗೂ ರಾಯಚೂರು ಜಿಲ್ಲೆಗಳನ್ನು ಗುರುತಿಸಲಾಗಿದೆ. ಈ ಜಿಲ್ಲೆಗಳಲ್ಲಿ ಸೂಕ್ತ ಸ್ಥಳಗಳ ಆಯ್ಕೆಗಾಗಿ ಪ್ರಾಥಮಿಕ ಅಧ್ಯಯನಗಳು ಹಾಗೂ ಭೂ–ವೈಜ್ಞಾನಿಕ ಪರಿಶೀಲನೆಗಳನ್ನು ಕೈಗೊಳ್ಳಲು ರಾಜ್ಯ ಸರ್ಕಾರದ ಕಂದಾಯ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ಹೇಳಿದ್ದಾರೆ

ಜಿಲ್ಲಾಧಿಕಾರಿಗಳೊಂದಿಗೆ ಈ ಕುರಿತು ಚರ್ಚೆ ನಡೆಸಿದ್ದು, ಜಿಲ್ಲೆಯಲ್ಲಿ ಅಣು ವಿದ್ಯುತ್ ಸ್ಥಾವರ ಸ್ಥಾಪನೆ ಕುರಿತು ರಾಜ್ಯ ಸರ್ಕಾರಕ್ಕೆ ಯಾವುದೇ ಪ್ರಸ್ತಾವನೆ ಸಲ್ಲಿಸಿಲ್ಲವೆಂದು ಜಿಲ್ಲಾಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ ಎಂದು ತಿಳಿಸಿದ್ದಾರೆ. ಶರಾವತಿ ಸಂತ್ರಸ್ತರಿಗೆ ಇಂದಿಗೂ ಸಮರ್ಪಕ ಭೂ ಪರಿಹಾರ ಒದಗಿಸಲಾಗಿಲ್ಲ. ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಗೆ ಸಂಬಂಧಿಸಿದಂತೆ ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಪರಿಸರ ಆಸಕ್ತರು ಮತ್ತು ಬುದ್ಧಿಜೀವಿಗಳು ವ್ಯಾಪಕ ವಿರೋಧ ವ್ಯಕ್ತಪಡಿಸಿರುತ್ತಾರೆ. ಅಣು ವಿದ್ಯುತ್ ಸ್ಥಾವರ ಯೋಜನೆಯನ್ನು ಕೈಬಿಡಲು ಕೇಂದ್ರ ಸಚಿವರಿಗೆ ಮನವರಿಕೆ ಮಾಡುವುದಾಗಿ ತಿಳಿಸಿದ್ದಾರೆ.

ಶಾಲೆಗಳಲ್ಲಿ ಮಕ್ಕಳಿಗೆ ನಿತ್ಯ ಪತ್ರಿಕೆ ಓದಿಸಲು ಸೂಚನೆ

ಪುಟ ೩ ➡ಇಂದಿನ ಡಿಜಿಟಲ್ ಯುಗದಲ್ಲಿ ಮಕ್ಕಳು ಇಂಟರ್‌ನೆಟ್ ಶಿಕ್ಷಣ, ಮನರಂಜನೆ ಮತ್ತು ಸಾಮಾಜಿಕ ಜಾಲತಾಣಗಳಿಗೆ ಹೆಚ್ಚಿನ ಸಮಯಾವಕಾಶ ನೀಡುತ್ತಿದ್ದಾರೆ. ಈ ಅತಿಯಾದ ಮೊಬೈಲ್ ಬಳಕೆಯಿಂದ ಮಕ್ಕಳಲ್ಲಿ ಜ್ಞಾಪಕ ಶಕ್ತಿಯ ಕೊರತೆ, ಶ್ರವಣದೋಷ ಹಾಗೂ ದೈಹಿಕ ಚಟುವಟಿಕೆಗಳಲ್ಲಿ ಆಸಕ್ತಿ ಇಲ್ಲದಿರುವ ಲಕ್ಷಣಗಳು ಕಂಡುಬರುತ್ತಿವೆ. ಆದ್ದರಿಂದ ಮಕ್ಕಳು ಶಾಲೆಗಳಲ್ಲಿ ನಿತ್ಯವೂ ಕನಿಷ್ಠ 10 ರಿಂದ 15 ನಿಮಿಷ ದಿನಪತ್ರಿಕೆಗಳನ್ನು ಓದುವ ಅಭ್ಯಾಸ ಬೆಳೆಸಿಕೊಂಡಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗೆ ಬೇಕಾದ ಸಿದ್ಧತೆ, ಪ್ರಚಲಿತ ವಿದ್ಯಮಾನಗಳ ಸಾಮಾನ್ಯ ಜ್ಞಾನ ವೃದ್ಧಿಸಿಕೊಳ್ಳಲು ಸಹಾಯವಾಗಲಿದೆ. ಅಲ್ಲದೆ, ಶಬ್ದಕೋಶ, ಭಾಷಾ ಶೈಲಿ ಹಾಗೂ ಬರವಣಿಗೆಯ ಕೌಶಲಗಳನ್ನು ಸುಧಾರಿಸಲು ಇದು ಸಹಕಾರಿಯಾಗುತ್ತದೆ ಎಂದು ಶಾಲಾ ಶಿಕ್ಷಣ ಇಲಾಖೆಯ ನಿರ್ದೇಶಕರು ತಿಳಿಸಿದ್ದಾರೆ.

ಅಭಿಮಾನೋತ್ಸವಕ್ಕೆ ಭೂಮಿಪೂಜೆ

ಪುಟ ೩ ➡ಸಮಾಜ ಸೇವೆಗೆ ತಮ್ಮ ಜೀವನ ಮುಡಿಪಾಗಿಟ್ಟ ಅವರು, ಬಡವರ ಕಣ್ಣೀರು ಒರೆಸುವ ಕೆಲಸ ಮಾಡಿದರು. ಅಧಿಕಾರಕ್ಕಾಗಿ ಹೋರಾಟ ಮಾಡದ ಅವರು, ಹಣ, ಪ್ರಭಾವದಿಂದ ಅಧಿಕಾರ ಹಿಡಿಯಲು ಸಾಧ್ಯವಿಲ್ಲ. ಜನರ ಪ್ರೀತಿ, ಆಶೀರ್ವಾದದಿಂದ ಏನನ್ನಾದರೂ ಸಾಧಿಸಬಹುದೆಂದು ತೋರಿಸಿಕೊಟ್ಟವರು ಬಿ.ಎಸ್. ಯಡಿಯೂರಪ್ಪನವರು ಎಂದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಮಾತನಾಡಿ, ಯಡಿಯೂರಪ್ಪನವರ 50 ವರ್ಷಗಳ ರಾಜಕೀಯ ಪಯಣವನ್ನು ಸಂಭ್ರಮದಿಂದ ಆಚರಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ನಾಡಿಗೆ ಯಡಿಯೂರಪ್ಪ ನೀಡಿದ ಕೊಡುಗೆಗೆ ಎಲ್ಲ ವರ್ಗದವರೂ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಇದಕ್ಕಾಗಿ ಅರ್ಥಪೂರ್ಣ ಕಾರ್ಯಕ್ರಮ ನಡೆಸುತ್ತಿದ್ದೇವೆ. ರಾಜ್ಯದ ಮೂಲೆಮೂಲೆಗಳಿಂದ ಅಭಿಮಾನಿಗಳು ಲಕ್ಷಾಂತರ ಅಭಿಮಾನಿಗಳು ಕಾರ್ಯಕ್ರಮಕ್ಕೆ ಆಗಮಿಸಲಿದ್ದಾರೆ. ಇದೊಂದು ಐತಿಹಾಸಿಕ ಕಾರ್ಯಕ್ರಮವಾಗಲಿದೆ ಎಂದು ಹೇಳಿದರು. ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ದಾವಣಗೆರೆಯಲ್ಲಿ ನಡೆದ ಸಿದ್ದರಾಮೋತ್ಸವ ಕಾಂಗ್ರೆಸ್‌ಗೆ ಶಕ್ತಿ ನೀಡಿದಂತೆ, ಚಿತ್ರದುರ್ಗದ ಈ ಅಭಿಮಾನೋತ್ಸವ ಬಿಜೆಪಿಯನ್ನು ಮತ್ತೆ ಅಧಿಕಾರದ ಗದ್ದುಗೆಗೆ ಏರಿಸಲಿದೆ. ಹಾಗಾಗಿ ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಸಲಹೆ ನೀಡಿದರು.



ಸಂಸದ ಗೋವಿಂದ ಕಾರಜೋಳ, ಮಾಜಿ ಸಚಿವರಾದ ಬಿ. ಶ್ರೀರಾಮುಲು, ಎ. ನಾರಾಯಣಸ್ವಾಮಿ, ಜಿ.ಎಂ. ಸಿದ್ದೇಶ್ವರ್, ಕಟ್ಟಾ ಸುಬ್ರಹ್ಮಣ್ಯನಾಯ್ಡು, ಬಿ.ಸಿ. ಪಾಟೀಲ್, ರೇಣುಕಾಚಾರ್ಯ, ಹರತಾಳು ಹಾಲಪ್ಪ, ವಿಧಾನ ಪರಿಷತ್ ಮುಖ್ಯ ಸಚೇತಕ ಎನ್. ರವಿಕುಮಾರ್, ಶಾಸಕ ಮುನಿರತ್ನ, ಮಾಜಿ ಶಾಸಕ ಜಿ.ಎಚ್. ತಿಪ್ಪಾರೆಡ್ಡಿ ಮತ್ತಿತರರು ಮಾತನಾಡಿದರು. ಬಿಜೆಪಿ ಜಿಲ್ಲಾಧ್ಯಕ್ಷ ಕೆ.ಟಿ. ಕುಮಾರಸ್ವಾಮಿ ಸ್ವಾಗತಿಸಿದರು.

ಟ್ರಂಪ್ ಹತ್ಯೆ ಯತ್ನ

ಪುಟ ೩ ➡ಘಟನೆಯಲ್ಲಿ ಒಬ್ಬ ಸೀಕ್ರೆಟ್ ಸರ್ವೀಸ್ ಅಧಿಕಾರಿಗೆ ಗಾಯವಾಗಿದೆ. ಹೆಡ್ ಟೇಬಲ್‌ನಲ್ಲಿ ಟ್ರಂಪ್, ಪ್ರಥಮ ಮಹಿಳೆ ಮಲೇನಿಯಾ ಟ್ರಂಪ್, ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಸೇರಿದಂತೆ ಹಲವು ಕ್ಯಾಬಿನೆಟ್ ಸದಸ್ಯರು ಉಪಸ್ಥಿತರಿದ್ದರು. ಸದ್ಯ ಎಲ್ಲರೂ ಸುರಕ್ಷಿತರಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಘಟನೆಯ ನಂತರ ಟ್ರಂಪ್ ತಮ್ಮ ಸಾಮಾಜಿಕ ಜಾಲತಾಣದಲ್ಲಿ 'ಸೀಕ್ರೆಟ್ ಸರ್ವೀಸ್ ಮತ್ತು ಪೊಲೀಸ್ ಸಿಬ್ಬಂದಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದೆ. ಶೂಟರ್ ಬಂಧಿಸಲಾಗಿದೆ' ಎಂದು ತಿಳಿಸಿದ್ದಾರೆ. ಆರಂಭದಲ್ಲಿ ಕಾರ್ಯಕ್ರಮವನ್ನು ಮುಂದುವರಿಸಲು ಸೂಚಿಸಿದರೂ, ನಂತರ ಭದ್ರತಾ ಕಾರಣಕ್ಕೆ ಭೋಜನವನ್ನು ಮುಂದೂಡಲಾಗಿದೆ.

ತನಿಖೆಗೆ ಸಹಕರಿಸದ ಶಂಕಿತ

ಅಮೆರಿಕದ ಹಂಗಾಮಿ ಅಟಾರ್ನಿ ಜನರಲ್ ಟಾಡ್ ಬ್ಲಾಂಚೆ ಈ ಬಗ್ಗೆ ಪ್ರತಿಕ್ರಿಯಿಸಿದ್ದು, ಶಂಕಿತ ಶೂಟರ್ ಟ್ರಂಪ್ ಆಡಳಿತಾಧಿಕಾರಿಗಳನ್ನು ಗುರಿಯಾಗಿಸಿಕೊಂಡಿದ್ದಾನೆ ಎಂದು ಶಂಕಿಸಿದ್ದಾರೆ. ಶಂಕಿತನು ತನಿಖಾಧಿಕಾರಿಗಳೊಂದಿಗೆ ಸಹಕರಿಸುತ್ತಿಲ್ಲ ಎಂದು ಬ್ಲಾಂಚೆ ಹೇಳಿದ್ದಾರೆ.

ಇನ್ಮುಂದೆ ರಾಜಕೀಯ ಮಾತಾಡಲ್ಲ



ಪುಟ ೩ ➡**ಹುಟ್ಟುಹಬ್ಬಕ್ಕೆ ಫ್ಲೆಕ್ಸ್, ಬ್ಯಾನರ್ ಹಾಕಬೇಡಿ:** ನನ್ನ ಜನ್ಮದಿನದಂದು ಯಾರೂ ಫ್ಲೆಕ್ಸ್ ಹಾಗೂ ಬ್ಯಾನರ್ ಹಾಕುವಂತಿಲ್ಲ, ಹಾಕಿದರೆ ಅವರ ವಿರುದ್ಧ ಪಾಲಿಕೆ ವತಿಯಿಂದ ಕ್ರಮ ಜರುಗಿಸಲು ಸೂಚಿಸಿದ್ದೇನೆ. ಅವಶ್ಯಕತೆ ಇದ್ದಲ್ಲಿ ಹಣ ಪಾವತಿಸಿ ಜಾಹೀರಾತು ಕೊಡಬಹುದು. ರಸ್ತೆಯಲ್ಲಿ ಫ್ಲೆಕ್ಸ್ ಹಾಕಿ ರಸ್ತೆಯ ಸೌಂದರ್ಯ ಹಾಳು ಮಾಡಬಾರದು. ಇದು ನಾನು ಎಲ್ಲರಿಗೂ ಕೊಡುತ್ತಿರುವ ಸೂಚನೆ. ಅನಧಿಕೃತವಾಗಿ ರಸ್ತೆಯಲ್ಲಿ ಫ್ಲೆಕ್ಸ್ ಹಾಕಿದರೆ ದುಬಾರಿ ದಂಡ ವಿಧಿಸಿ ಎಂದು ಆಯುಕ್ತರಿಗೆ ಸೂಚಿಸಿದ್ದೇನೆ ಎಂದು ತಿಳಿಸಿದರು.

ಶ್ರೀಕೃಷ್ಣ ಭಾವಚಿತ್ರಕ್ಕೆ ಅಪಮಾನ

ಬೆಂಗಳೂರು: ಹಿಂದುಗಳ ಆರಾಧ್ಯ ದೈವ ಶ್ರೀಕೃಷ್ಣನ ಭಾವಚಿತ್ರವನ್ನು ಅವಹೇಳನಕಾರಿಯಾಗಿ ಬಳಸಿ ಧಾರ್ಮಿಕ ಭಾವನೆಗೆ ಧಕ್ಕೆ ತಂದಿರುವ ಆರೋಪದ ಮೇಲೆ ಎಲೆಕ್ಟ್ರಾನಿಕ್ ಸಿಟಿಯ ನಾದವಿ ಮಂಡಿ ರೆಸ್ಟೋರೆಂಟ್ ವಿರುದ್ಧ ವಿಶ್ವ ಹಿಂದೂ ಪರಿಷತ್(ವಿಎಚ್‌ಪಿ) ಮತ್ತು ಬಜರಂಗದಳ ಆಕ್ರೋಶ ವ್ಯಕ್ತಪಡಿಸಿದ್ದು, ಪೊಲೀಸರಿಗೆ ದೂರು ನೀಡಿದೆ.



ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಪೋಸ್ಟ್ ಒಂದರಲ್ಲಿ ಬಾಲಕೃಷ್ಣನ ಕೈಯಲ್ಲಿ ಮಾಂಸದ ತುಂಡನ್ನು ಹಿಡಿದಿರುವಂತೆ ಚಿತ್ರಿಸಲಾಗಿದೆ. ವಿಶು ಹಬ್ಬದ ಸಂದರ್ಭದಲ್ಲಿ ಶುಭಾಶಯ ಕೋರಲು ಈ ಪೋಸ್ಟರ್ ಬಳಸಲಾಗಿದ್ದು, ಇದು ಉದ್ದೇಶಪೂರ್ವಕವಾಗಿ ಹಿಂದು ಧರ್ಮದ ಶ್ರದ್ಧಾಕೇಂದ್ರಗಳನ್ನು ಅವಮಾನಿಸುವ ಕೃತ್ಯವಾಗಿದೆ ಎಂದು ವಿಎಚ್‌ಪಿ ಮತ್ತು ಬಜರಂಗದಳ ಕಿಡಿಕಾರಿದೆ.

ಪೊಲೀಸ್ ದೂರು ದಾಖಲು: ಈ ಸಂಬಂಧ ಬಜರಂಗದಳದ ಸಂಯೋಜಕ ಮೋಹನ್ ಕುಮಾರ್.ಎಂ. ಬೆಂಗಳೂರಿನ ಪೊಲೀಸ್ ಆಯುಕ್ತರಿಗೆ ಮತ್ತು ಸಂಬಂಧಪಟ್ಟ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ನಾದವಿ ಮಂಡಿ ರೆಸ್ಟೋರೆಂಟ್ ತನ್ನ ಪ್ರಚಾರಕ್ಕಾಗಿ ಹಿಂದು ಭಾವನೆಗಳನ್ನು ಕೆರಳಿಸುವಂತಹ ಚಿತ್ರವನ್ನು ಬಳಸಿದೆ. ಇದು ಸಮಾಜದಲ್ಲಿ ಅಶಾಂತಿ ಮೂಡಿಸುವ ಸಂಚಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಪೊಲೀಸರು ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಕಲ್ಪಕ್ಕಂ ಅಣು ಸಾಧನೆ ಶಕ್ತಿಯ ಸ್ವಾವಲಂಬನೆ

ಪುಟ ೩ ➡**ಪವನಶಕ್ತಿಯಲ್ಲಿ ಸಾಧನೆ:** ಇದೇ ವೇಳೆ ಪವನಶಕ್ತಿ ಕ್ಷೇತ್ರದಲ್ಲಿ ಭಾರತದ ಸಾಧನೆಯನ್ನು ಉಲ್ಲೇಖಿಸಿದ ಅವರು, ದೇಶದ ವಿಂಡ್ ಎನರ್ಜಿ ಸಾಮರ್ಥ್ಯ 56 ಗಿಗಾವಾಟ್ ಮೀರಿ, ಭಾರತ ಜಗತ್ತಿನಲ್ಲಿ ನಾಲ್ಕನೇ ಸ್ಥಾನಕ್ಕೇರಿರುವುದಾಗಿ ಹೇಳಿದರು. ಕಳೆದ ಒಂದು ವರ್ಷದಲ್ಲಿ 6 ಗಿಗಾವಾಟ್ ಹೊಸ ಸಾಮರ್ಥ್ಯ ಸೇರ್ಪಡೆಯಾಗಿದೆ. ಗುಜರಾತ್, ತಮಿಳುನಾಡು, ಮಹಾರಾಷ್ಟ್ರ ಮತ್ತು ರಾಜಸ್ಥಾನದಲ್ಲಿ ಹೊಸ ಅವಕಾಶಗಳು, ಉದ್ಯೋಗ ಮತ್ತು ಕೌಶಲ್ಯಾಭಿವೃದ್ಧಿ ಹೆಚ್ಚುತ್ತಿರುವುದಾಗಿ ಹೇಳಿದರು.

ಇದೇ ವೇಳೆ, ಬುದ್ಧ ಪೂರ್ಣಿಮೆಯ ಹಿನ್ನೆಲೆ ಉಲ್ಲೇಖಿಸಿದ ಪ್ರಧಾನಿ, ಭಗವಾನ್ ಗೌತಮ ಬುದ್ಧನ ಶಾಂತಿ, ಕರುಣೆ ಮತ್ತು ಆತ್ಮಜಯದ ಸಂದೇಶಗಳು ಇಂದಿನ ಜಗತ್ತಿಗೆ ಅತ್ಯಂತ ಪ್ರಸ್ತುತ ಎಂದು ಹೇಳಿದರು. ಚಿಲಿಯಲ್ಲಿ ಬೌದ್ಧ ವಿಚಾರಗಳನ್ನು ಹರಡುವ ಕಾರ್ಯಗಳನ್ನೂ ಅವರು ಪ್ರಶಂಸಿಸಿದರು. ಬೀಟಿಂಗ್ ರಿಟ್ರೀಟ್ ಕಾರ್ಯಕ್ರಮದಲ್ಲಿ ಭಾರತೀಯ ಸಂಗೀತದ ಸಮ್ಮಿಲನ ಹೆಚ್ಚುತ್ತಿರುವುದನ್ನು ಗಮನಿಸಿದ ಪ್ರಧಾನಿ, ಈ ಕಾರ್ಯಕ್ರಮದ ಸಂಗೀತವನ್ನು 'ವೇವ್ಸ್' ಒಟಿಟಿ ವೇದಿಕೆಯಲ್ಲಿ ಲಭ್ಯವಾಗುವಂತೆ ಮಾಡಿರುವುದಾಗಿ ತಿಳಿಸಿದರು.

ಪ್ರಕೃತಿ ಸಂರಕ್ಷಣೆಯ ಉದಾಹರಣೆಗಳಾಗಿ ಕಚ್‌ನ ಫ್ಲೆಮಿಂಗೊ ಸಿಟಿ, ಉತ್ತರ ಪ್ರದೇಶದ 'ಗಜ ಮಿತ್ರ' ಅಭಿಯಾನ, ಛತ್ತೀಸ್ಗಢದಲ್ಲಿ ಕೃಷ್ಣಮೃಗಗಳ ಪುನಃ ವಾಪಸ್ಸು ಮತ್ತು ಗ್ರೇಟ್ ಇಂಡಿಯನ್ ಬಸ್ಟರ್ಡ್ ಸಂರಕ್ಷಣಾ ಕಾರ್ಯಗಳನ್ನು ಉಲ್ಲೇಖಿಸಿದರು. ಈಶಾನ್ಯ ಭಾರತದ ಬಿದಿರು ಕ್ಷೇತ್ರದಲ್ಲಿ 2017ರ ಕಾನೂನು ಬದಲಾವಣೆಯ ನಂತರ ಮಹತ್ತರ ಬೆಳವಣಿಗೆ ಕಂಡುಬಂದಿದೆ ಎಂದು ಹೇಳಿದರು. ತ್ರಿಪುರಾ, ನಾಗಾಲ್ಯಾಂಡ್, ಮಿಜೋರಾಂ ಮತ್ತು ಸಿಕ್ಕಿಂ ಪ್ರದೇಶಗಳಲ್ಲಿ ಉದ್ಯೋಗ, ನಾವೀನ್ಯತೆ ಮತ್ತು ಮಹಿಳಾ ಸಬಲೀಕರಣ ಹೆಚ್ಚುತ್ತಿದೆ ಎಂದರು. ನ್ಯಾಷನಲ್ ಆರ್ಕೈವ್ಸ್ ಆಫ್ ಇಂಡಿಯಾ 20 ಕೋಟಿಗೂ ಹೆಚ್ಚು ದಾಖಲೆಗಳನ್ನು ಡಿಜಿಟೈಸ್ ಮಾಡಿ ಸಾರ್ವಜನಿಕರಿಗೆ ಮುಕ್ತಗೊಳಿಸಿರುವುದನ್ನು ಉಲ್ಲೇಖಿಸಿ, ಇತಿಹಾಸ ಅಧ್ಯಯನಕ್ಕೆ ಇದು ದೊಡ್ಡ ಅವಕಾಶ ಎಂದು ಹೇಳಿದರು.

ಫ್ರಾನ್ಸ್‌ನ ಬೋರ್ಡೋದಲ್ಲಿ ನಡೆದ ಯುರೋಪಿಯನ್ ಗರ್ಲ್ಸ್ ಮ್ಯಾಥಮೆಟಿಕಲ್ ಒಲಿಂಪಿಯಾಡ್ನಲ್ಲಿ ಭಾರತೀಯ ವಿದ್ಯಾರ್ಥಿನಿಯರು ವಿಶ್ವದಲ್ಲಿ ಆರನೇ ಸ್ಥಾನ ಪಡೆದು ಗಮನ ಸೆಳೆದಿರುವುದನ್ನು ಪ್ರಧಾನಿ ಅಭಿನಂದಿಸಿದರು. ಈ ಬಾರಿಯ ಜನಗಣತಿ ಸಂಪೂರ್ಣ ಡಿಜಿಟಲ್ ಆಗಿದ್ದು, ಜನರಿಗೆ ಸ್ವಯಂ ಮಾಹಿತಿ ದಾಖಲಿಸುವ ಅವಕಾಶ ಕಲ್ಪಿಸಲಾಗಿದೆ ಎಂದು ವಿವರಿಸಿದ ಅವರು, ಪ್ರತಿಯೊಬ್ಬರೂ ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬೇಕು ಎಂದು ಮನವಿ ಮಾಡಿದರು.

ಹಾಗೆಯೇ, ಭಾರತೀಯ ಚೆಸ್ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿರುವುದನ್ನು ಉಲ್ಲೇಖಿಸಿದ ಪ್ರಧಾನಿ, ಸ್ಥಳೀಯ ಉತ್ಪನ್ನಗಳನ್ನು ಪ್ರೋತ್ಸಾಹಿಸುವಂತೆ ಕರೆ ನೀಡಿದರು. ಮೇಲ್ಲಿ ಗುರುದೇವ ರವೀಂದ್ರನಾಥ ಟ್ಯಾಗೋರ್ ಜಯಂತಿ ಹಾಗೂ 1857ರ ಸ್ವಾತಂತ್ರ್ಯ ಸಮರದ ನೆನಪನ್ನು ಸ್ಮರಿಸಿದ ಅವರು, ವಿದ್ಯಾರ್ಥಿಗಳು ರಜೆಯಲ್ಲಿ ಹೊಸ ಕೌಶಲ್ಯಗಳನ್ನು ಕಲಿಯುವಂತೆ ಹಾಗೂ ಆರೋಗ್ಯದ ಕಡೆ ಗಮನ ಹರಿಸುವಂತೆ ಸಲಹೆ ನೀಡಿದರು.

ಅಂತಾರಾಷ್ಟ್ರೀಯ ಸಾಧನೆ: ಯುರೋಪಿಯನ್ ಗರ್ಲ್ಸ್ ಮ್ಯಾಥಮೆಟಿಕಲ್ ಒಲಿಂಪಿಯಾಡ್ನಲ್ಲಿ ಶ್ರೇಯಾ ಮುಂದಡಾ ಗೋಲ್ಡ್ ಪದಕ ಗೆದ್ದು ಇತಿಹಾಸ ನಿರ್ಮಿಸಿದರೆ, ಸಂಜನಾ ಚಾಕೋ ಸಿಲ್ವರ್ ಮತ್ತು ಶಿವಾನಿ ಭರತ್ ಕುಮಾರ್ ಕಂಚಿನ ಪದಕ ಪಡೆದು ದೇಶದ ಗೌರವ ಹೆಚ್ಚಿಸಿದ್ದಾರೆ ಎಂಬುದನ್ನು ಉಲ್ಲೇಖಿಸಿ ಶ್ಲಾಘಿಸಿದರು.

ಬೈಲುಕುಪ್ಪೆಯ ಕರ್ಮಾ ಮೊನಾಸ್ಟರಿಗೆ ಪ್ರಶಂಸೆ

ಪುಟ ೩ ➡ಇಲ್ಲಿ ಪ್ರಕೃತಿ ಸಂರಕ್ಷಣೆ ನಿಟ್ಟಿನಲ್ಲಿ ನಡೆದಿರುವ ಪ್ರಯತ್ನಗಳು ಗಮನಾರ್ಹವಾಗಿವೆ ಎಂದು ಶ್ಲಾಘಿಸಿದರು. ಬೌದ್ಧ ಸಂಪ್ರದಾಯವು ಪ್ರಕೃತಿಯೊಂದಿಗೆ ಹೊಂದಿರುವ ಸಂಬಂಧವನ್ನು ಬೌದ್ಧವಿಹಾರ ತೋರಿಸುತ್ತಿದೆ. ಬರಡಾಗಿದ್ದ 100 ಎಕರೆ ಭೂಮಿಯನ್ನು ಧರ್ಮಗುರು ಸಮ್ಮಿನ್ಲಿಂಗ್ಪಾ ರಿನ್‌ಪೋಚೆ ಅವರ ಮಾರ್ಗದರ್ಶನದಲ್ಲಿ, ಅರಣ್ಯ ಸಂರಕ್ಷಣಾ ವಲಯವಾಗಿ ರೂಪಿಸಲಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಅಧಿಕಾರ ಚುಕ್ಕಾಣಿ ನಮ್ಮದೇ: ಮೋದಿ

ಪುಟ ೩ ➡ ಟಿಎಂಸಿಯ ಗೂಂಡಾಗಳು ತಾವೇ ಸ್ವಯಂ ಸರಕಾರವೆಂಬಂತೆ ವರ್ತಿಸುತ್ತಿದ್ದಾರೆ. ಮಾ, ಮಾಟಿ ಮತ್ತು ಮನುಷ್ ಘೋಷಣೆ ಬಳಸಿ ಅಧಿಕಾರಕ್ಕೆ ಬಂದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ನಂತರ ಇವನ್ನು ಮರೆತೇಬಿಟ್ಟರು ಮತ್ತು ಅಕ್ರಮ ನುಸುಳುಕೋರರು ಮತ್ತು ಸಿಂಡಿಕೇಟ್‌ಗಳನ್ನು ಬೆಂಬಲಿಸತೊಡಗಿದ್ದಾರೆ ಎಂದು ಟಿಎಂಸಿ ಮತ್ತು ಪಕ್ಷ ನಾಯಕಿಯನ್ನು ಪ್ರಧಾನಿ ಮೋದಿ ಕಟುವಾಗಿ ತರಾಟೆಗೆತ್ತಿಕೊಂಡರು.

ಜಂಗಲ್‌ರಾಜ್‌ಗೆ ನಮ್ಮ ಸೋದರಿಯರು ಬಲಿ: ಟಿಎಂಸಿ ಆಳ್ವಿಕೆಯಲ್ಲಿ ಪ.ಬಂಗಾಳದಲ್ಲಿ ಹಿಂಸಾಚಾರಗಳು ಮಾಮೂಲಾಗಿದ್ದು, ಮಹಿಳೆಯರಿಗೆ ಸುರಕ್ಷೆಯೇ ಇಲ್ಲವಾಗಿದೆ. ಟಿಎಂಸಿಯ ರಾಜಾರೋಷ ಜಂಗಲ್‌ರಾಜ್‌ಗೆ ಬಲುದೊಡ್ಡ ಬಲಿಪಶುಗಳಾಗಿರುವುದು ನಮ್ಮ ಸೋದರಿಯರು ಮತ್ತು ಕುವರಿಯರು ಎಂದು ಪ್ರಧಾನಿ ಮೋದಿ ಆತಂಕ ವ್ಯಕ್ತಪಡಿಸಿದರು. ಸಂದೇಶ್‌ಖಲಿಯಲ್ಲಿ ಗೂಂಡಾಗಳು ಮೇರೆ ಮೀರಿ ನಮ್ಮ ಸೋದರಿಯರ ಮೇಲೆ ದೌರ್ಜನ್ಯ–ಅನ್ಯಾಯವೆಸಗಿದರೂ ಟಿಎಂಸಿ ಸರಕಾರ ಈ ಕ್ರಿಮಿನಲ್‌ಗಳನ್ನೇ ಬೆಂಬಲಿಸಿದ್ದು ತೀರಾ ದುರದೃಷ್ಟಕರವೆಂದು ಪ್ರಧಾನಿ ವಿಷಾದಿಸಿದರು. ರಾಜ್ಯದ ಸೆಣಬು ಕೃಷಿಕರು ಮತ್ತು ಕಾರ್ಮಿಕರ ಸಮಸ್ಯೆಗಳು ನಮಗೆ ಅರ್ಥವಾಗಿದೆ. ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಕಳೆದ 11 ವರ್ಷಗಳಲ್ಲಿ ಸೆಣಬಿನ ಕನಿಷ್ಠ ಬೆಂಬಲ ಬೆಲೆ ಹೆಚ್ಚಿಸಿರುವುದು ಇದೇ ಹಿನ್ನೆಲೆಯಲ್ಲಿ ಎಂದು ಗಮನ ಸೆಳೆದರು. ರಾಷ್ಟ್ರಭಕ್ತ ಸುಭಾಸ್‌ಚಂದ್ರ ಬೋಸ್ ಅವರ ರಾಷ್ಟ್ರಪ್ರೇಮವನ್ನು ಪ್ರಧಾನಿ ಮೋದಿ ಜನರಿಗೆ ನೆನಪಿಸಿದರು.

ಗೃಹಲಕ್ಷ್ಮೀ ಸಂಸಾರಕ್ಕಷ್ಟೇ ಅಲ್ಲ, ಮಕ್ಕಳ ಭವಿಷ್ಯ ರೂಪಿಸುವ ಶಕ್ತಿ

ಬೆಂಗಳೂರು: ಗೃಹಲಕ್ಷ್ಮೀ ಯೋಜನೆಯ ಹಣ ಕೇವಲ ಸಂಸಾರಕ್ಕಷ್ಟೇ ಅಲ್ಲ, ಮಕ್ಕಳ ಭವಿಷ್ಯ ರೂಪಿಸುವ ಶಕ್ತಿಯಾಗಿಯೂ ಪರಿಣಮಿಸಿದೆ. ಇದಕ್ಕೆ ಮೈಸೂರಿನ ಮಾಧುರಿ ಆರ್. ಎಂಬ ವಿದ್ಯಾರ್ಥಿನಿ ಎಸ್ಸೆಸ್ಸೆಲ್ಸಿಯಲ್ಲಿ ರಾಜ್ಯಕ್ಕೆ 2ನೇ ರ್‍ಯಾಂಕ್ ಗಳಿಸಿರುವುದೇ ಉದಾಹರಣೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.



ತಮ್ಮ ನಿವಾಸದಲ್ಲಿ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ನಮ್ಮ ಗ್ಯಾರಂಟಿ ಯೋಜನೆಗಳು ಇಂತಹ ಹತ್ತು ಹಲವು ಸಾಧನೆಗಳಿಗೆ ಮುನ್ನುಡಿ ಬರೆದಿವೆ. ಬಡವರ ಮನೆಯ ಮಗು ರ್‍ಯಾಂಕ್ ಪಡೆಯಲು ಗ್ಯಾರಂಟಿ ಹಣವೇ ಆಧಾರವಾಗಿದೆ ಎಂಬುದು ನಮಗೆ ಹೆಮ್ಮೆಯ ವಿಷಯ. ನಮ್ಮ ಸರ್ಕಾರ ನಮ್ಮ ಹೆಮ್ಮೆ, ನಮ್ಮ ಗ್ಯಾರಂಟಿ ನಮ್ಮ ಹೆಮ್ಮೆ ಎಂಬುದು ಈ ಮೂಲಕ ಸಾಬೀತಾಗಿದೆ ಎಂದರು.

ಮೈಸೂರು ತಾಲೂಕಿನ ಇಲವಾಲದ ಕರ್ನಾಟಕ ಪಬ್ಲಿಕ್ ಶಾಲೆಯ ವಿದ್ಯಾರ್ಥಿನಿ ಮಾಧುರಿ, 625ಕ್ಕೆ 624 ಅಂಕ ಗಳಿಸಿ ರಾಜ್ಯಕ್ಕೆ ದ್ವಿತೀಯ ಹಾಗೂ ಜಿಲ್ಲೆಗೆ ಟಾಪರ್ ಆಗಿದ್ದಾರೆ. ಮಾಧುರಿ ತಾಯಿ ಸರಿತಾ ಅವರು ಈ ಹಿಂದೆ ಖಾಸಗಿ ಸಂಸ್ಥೆಯಲ್ಲಿದ್ದರು, ಆದರೆ ಅನಾರೋಗ್ಯದ ಕಾರಣ ಕೆಲಸ ಬಿಡಬೇಕಾಯಿತು. ಆ ಸಂಕಷ್ಟದ ಸಮಯದಲ್ಲಿ ಆಸರೆಯಾಗಿದ್ದು ಗೃಹಲಕ್ಷ್ಮೀ ಯೋಜನೆ ಎಂದು ಶಿವಕುಮಾರ್ ತಿಳಿಸಿದರು.

ಗ್ಯಾರಂಟಿ ಯೋಜನೆಗಳು ರಾಜ್ಯದ ಆರ್ಥಿಕ ವ್ಯವಸ್ಥೆಗೆ ಹೊರೆ ಎನ್ನುವ ವಿರೋಧ ಪಕ್ಷದವರು ಇನ್ನಾದರೂ ಅಸತ್ಯ ನುಡಿಯುವುದನ್ನು ಮತ್ತು ದಾರಿ ತಪ್ಪಿಸುವುದನ್ನು ನಿಲ್ಲಿಸಲಿ. ಆರ್ಥಿಕ ಅಡೆತಡೆಗಳ ಕಾರಣದಿಂದ ಶಿಕ್ಷಣದಲ್ಲಿ ಹಿಂದೆ ಬೀಳುತ್ತಿದ್ದ ಅನೇಕ ವಿದ್ಯಾರ್ಥಿಗಳಿಗೆ ಗ್ಯಾರಂಟಿ ಯೋಜನೆಗಳು ಹೊಸ ಅವಕಾಶಗಳನ್ನು ಸೃಷ್ಟಿಸಿವೆ. ಗ್ಯಾರಂಟಿ ಯೋಜನೆಗಳು ಓದಿಗೆ ನೆರವು, ಭವಿಷ್ಯಕ್ಕೆ ಭರವಸೆ ಮೂಡಿಸುತ್ತಿವೆ ಎಂದರು.

ಚಾಲನೆ



ಬೆಂಗಳೂರಿನ ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಪೆರೇಡ್ ಮೈದಾನದಲ್ಲಿ ಭಾನುವಾರ ಏರ್ಪಡಿಸಿದ್ದ ಟಿಸಿಎಸ್ ವರ್ಲ್ಡ್ 10ಕೆ ಓಟಕ್ಕೆ ರಾಜ್ಯಪಾಲ ಥಾವರಚಂದ್ ಗೆಹಲೋತ್, ಡಿಸಿಎಂ ಡಿ.ಕೆ. ಶಿವಕುಮಾರ್ ಚಾಲನೆ ನೀಡಿದರು. ಸಂಸದರಾದ ಪಿ.ಸಿ. ಮೋಹನ್, ತೇಜಸ್ವಿ ಸೂರ್ಯ ಇದ್ದರು.

ಸಾಮಾಜಿಕ ನ್ಯಾಯ ಸಿಕ್ಕಿಲ್ಲ: ಸಿಟಿ ರವಿ

ಚಿಕ್ಕಮಗಳೂರು: ಒಳ ಮೀಸಲಾತಿ ಜಾರಿಯಲ್ಲಿ ರಾಜ್ಯ ಸರ್ಕಾರ ಸಾಮಾಜಿಕ ನ್ಯಾಯವನ್ನು ಪಾಲಿಸಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ಡಾ. ಸಿ.ಟಿ. ರವಿ ಆರೋಪಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ನಿರ್ಧಾರವು ಸಾಮಾಜಿಕ ಅನ್ಯಾಯವನ್ನುಂಟುಮಾಡಿದೆ ಎಂದು ಅವರು ಟೀಕಿಸಿದ್ದಾರೆ. ಒಳ ಮೀಸಲಾತಿ ಯನ್ನು ಜಾರಿಗೆ ತರಲು ಸರ್ಕಾರ ಎರಡು ವರ್ಷಕ್ಕೂ ಹೆಚ್ಚು ಕಾಲ ವಿಳಂಬ ಮಾಡಿದ್ದು, ಅಂತಿಮವಾಗಿ ಜಾರಿಗೊಳಿಸಿದ ಮಾದರಿಯೂ ನ್ಯಾಯಸಮ್ಮತವಾಗಿಲ್ಲ. ಹೈಕೋರ್ಟ್ ಶೇ.50 ಮಿತಿಯೊಳಗೆ ಮೀಸಲಾತಿ ನೀಡುವಂತೆ ಸೂಚಿಸಿದ್ದೇ ಹೊರತು, ಪರಿಶಿಷ್ಟ ಜಾತಿ ಮತ್ತು ವರ್ಗಗಳ ಮೀಸಲಾತಿಯನ್ನು ಕಡಿತಗೊಳಿಸಲು ಹೇಳಿಲ್ಲ ಎಂದು ಅವರು ಅಭಿಪ್ರಾಯಪಟ್ಟರು.



ಒಳ ಮೀಸಲಾತಿ ರೂಪಿಸುವಲ್ಲಿ ವಿವಿಧ ಸಮಿತಿಗಳ ಶಿಫಾರಸುಗಳನ್ನು ಪರಿಗಣಿಸಿಲ್ಲ. ಸದಾಶಿವ ಆಯೋಗ, ಮಾಜಿ ಸಚಿವ ಮಾಧುಸ್ವಾಮಿ ವರದಿ ಹಾಗೂ ಸ್ವತಃ ಈ ಸರ್ಕಾರವೇ ನೇಮಿಸಿದ ನ್ಯಾಯ ಮೂರ್ತಿ ನಾಗಮೋಹನ್ ದಾಸ್ ಸಮಿತಿ ವರದಿಗಳನ್ನೂ ಕಡೆಗಣಿಸ ಲಾಗಿದೆ ಎಂದು ಹೇಳಿದರು. ಸಚಿವ ಸಂಪುಟದಲ್ಲಿ ಪರಿಶಿಷ್ಟ ಜಾತಿ ಮೀಸಲಾತಿಯನ್ನು ಎ, ಬಿ ಮತ್ತು ಸಿ ವರ್ಗಗಳಾಗಿ ವಿಭಜಿಸಿರುವ ಕ್ರಮದ ಮೇಲೂ ಅವರು ಅಸಮಾಧಾನ ವ್ಯಕ್ತಪಡಿಸಿದರು.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಮೀಸಲಾತಿಯನ್ನು ಶೇ.15ರಿಂದ ಶೇ.17ಕ್ಕೆ ಹೆಚ್ಚಿಸಲಾಗಿತ್ತು ಎಂದು ನೆನಪಿಸಿದ್ದಾರೆ. ಎ ವರ್ಗಕ್ಕೆ ಶೇ.6 ಮತ್ತು ಬಿ ವರ್ಗಕ್ಕೆ ಶೇ.5.5 ಇದ್ದ ಮೀಸಲಾತಿಯನ್ನು ತಲಾ ಶೇ.5.25ಕ್ಕೆ ಇಳಿಸಿ, ಎರಡೂ ಸಮುದಾಯಗಳಿಗೆ ಅನ್ಯಾಯ ಮಾಡಲಾಗಿದೆ. ಭೋವಿ, ಬಂಜಾರ, ಕೊರಚ, ಕೊರಮ ಸೇರಿದಂತೆ ಹಲವು ಸಮುದಾಯಗಳಿಗೆ ಶೇ.4.5 ಮೀಸಲಾತಿ ಇತ್ತು. ಅವುಗಳನ್ನು ಸಿ ವರ್ಗದಲ್ಲಿ ಒಗ್ಗೂಡಿಸಲಾಗಿದೆ. ಇದರೊಡನೆ, ಅಲೆಮಾರಿ ಸಮುದಾಯಕ್ಕೆ ಶೇ.1 ಮೀಸಲಾತಿ ಇತ್ತು. ಅವರನ್ನೂ ಸಿ ವರ್ಗಕ್ಕೆ ಸೇರಿಸಲಾಗಿದೆ. ನ್ಯಾಯಯುತವಾಗಿ ಸಿ ವರ್ಗಕ್ಕೆ ಸಿಗಬೇಕಿದ್ದ ಶೇ.5.5 ಮೀಸಲಾತಿಯ ಬದಲು ಕೇವಲ ಶೇ.4.5 ಮಾತ್ರ ನೀಡಲಾಗಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಿರುಸುದ್ದಿ

ಗೋ ಸಮ್ಮಾನ ಅಭಿಯಾನ

ಬೆಂಗಳೂರು: ಸೋಮವಾರ (ಏ.27)ರ ಭಾರತದಾದ್ಯಂತ ಗೋ ಗೌರವ ದಿನವಾಗಿ ಆಚರಿಸಲಾಗುವುದು. ಅಂದು ದೇಶದ ಎಲ್ಲಾ 5400 ತಹಸೀಲ್ದಾರರ ಮೂಲಕ ರಾಷ್ಟ್ರಪತಿಗಳಿಗೆ, ಪ್ರಧಾನಿಗಳು ಹಾಗೂ ದೇಶದ ಎಲ್ಲ ಮುಖ್ಯಮಂತ್ರಿ, ರಾಜ್ಯಪಾಲರಿಗೆ ಏಕಕಾಲದಲ್ಲಿ ಮನವಿ ಸಲ್ಲಿಸಲಾಗುವುದು ಎಂದು ಎಂದು ರಾಮೋಹಳ್ಳಿಯ ಶ್ರೀ ಸಿದ್ಧಾರೂಢ ಮಿಷನ್ ಅಧ್ಯಕ್ಷ ಡಾ.ಆರೂಢಭಾರತೀ ಸ್ವಾಮೀಜಿ ತಿಳಿಸಿದ್ದಾರೆ. ಈ ಕುರಿತು ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗೋಮಾತೆಯನ್ನು ರಾಷ್ಟ್ರಮಾತೆಯನ್ನಾಗಿ ಘೋಷಿಸಿ ಸಂರಕ್ಷಿಸಬೇಕು. ರಾಷ್ಟ್ರದಾದ್ಯಂತ ಏಕಕಾನೂನಿನಡಿ ಗೋಹತ್ಯೆ ನಿಷೇಧವನ್ನು ಜಾರಿಗೆ ತರಬೇಕು. ಗೋಮಾಳವನ್ನು ಗೋವುಗಳಿಗಾಗಿಯೇ ಮುಡಿಪಾಗಿಡಬೇಕು. ಗೋಶಾಲೆ ಗೋ ಉದ್ಯಮಗಳಿಗೆ ಅನುದಾನ-ಬೆಂಬಲ ನೀಡಬೇಕು ಇತ್ಯಾದಿ ಅಂಶಗಳು ಮನವಿಯಲ್ಲಿರಲಿವೆ ಎಂದು ತಿಳಿಸಿದರು. ಗೋ ಸಮ್ಮಾನ ಆಹ್ವಾನ ಅಭಿಯಾನ ಹೆಸರಿನಲ್ಲಿ ನಾಲ್ಕು ಹಂತಗಳಲ್ಲಿ ಒಂದೂವರೆ ವರ್ಷ ನಡೆಯುವ ಈ ಅಭಿಯಾನ ಯಾವುದೇ ನಿರ್ದಿಷ್ಟ ಒಂದೇ ವ್ಯಕ್ತಿ, ಒಂದೇ ಸಂಘಟನೆಗೆ ಸಂಬಂಧ ಪಡದ ದೇಶವ್ಯಾಪಿ ಶಾಂತಿಯುತ ಜನಾಂದೋಲನವಾಗಿದೆ. ಸಂತರು, ಮಠಾಧಿಪತಿಗಳು, ಗೋ ಭಕ್ತರು, ಗೋ ಸಂರಕ್ಷಕರು ಅಪಾರ ಸಂಖ್ಯೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಡಾ.ಆರೂಢ ಭಾರತೀ ಸ್ವಾಮೀಜಿ ತಿಳಿಸಿದರು.

ವಕೀಲೆ ಮನೆ ಮೇಲೆ ಗುಂಡಿನ ದಾಳಿ: ದೂರು ದಾಖಲು

ಬೆಳಗಾವಿ: ನಗರದಲ್ಲಿ ವಕೀಲೆಯೊಬ್ಬರ ಮನೆ ಮೇಲೆ ದುಷ್ಕರ್ಮಿಗಳು ಗುಂದಿನ ದಾಳಿ ನಡೆಸಿರುವ ಘಟನೆಯು ತಡವಾಗಿ ಬೆಳಕಿಗೆ ಬಂದಿದೆ. ಏ.25ರಂದು ಶನಿವಾರ ತಂಡರಾತ್ರಿ ವೇಳೆ ದುಷ್ಕರ್ಮಿಗಳು ಏಕಾಏಕಿಯಾಗಿ ಗುಂಡಿನ ದಾಳಿ ಬೆಳಗಾವಿ ನಗರದ ಮಂಡೋಳಿ ರಸ್ತೆಯಲ್ಲಿರುವ ಪೂಜಾ ಕಾಕತಕರ್ ಎಂಬ ವಕೀಲೆಯ ಮನೆಯ ಮೊದಲ ಮಹಡಿ ಮೇಲೆ ದುಷ್ಕರ್ಮಿಗಳು ಫೈರಿಂಗ್ ನಡೆಸಿದ್ದು, ಕಿಡಕಿ ಗಾಜುಗಳು ಪುಡಿಯಾದ ಘಟನೆ ನಡೆದಿದೆ. ವಕೀಲೆ ಮಗಳು ರಾತ್ರಿ ಮನೆಯ ಮೊದಲ ಮಹಡಿಯಲ್ಲಿ ಕುಳಿತಿದ್ದಳು. ತಡ ರಾತ್ರಿಯಾದ್ದರಿಂದ ಕೆಳಗೆ ಬರುವಂತೆ ಪೋಷಕರು ಕರೆದಿದ್ದಾರೆ. ಮಗಳು ಕೆಳಗೆ ಬಂದ ಕೆಲ ಸಮಯದಲ್ಲೇ ಗುಂಡಿನ ದಾಳಿ ನಡೆದಿದೆ. ದುಷ್ಕರ್ಮಿಗಳು ಗುಂಡಿನ ದಾಳಿ ನಡೆಸಿ ಅಲ್ಲಿಂದ ಪರಾರಿ ಆಗಿದ್ದಾರೆ. ವಕೀಲೆ ಪೂಜಾ ಕಾಕತಕರ್ ಘಟನೆಯ ಕುರಿತು ಪೊಲೀಸ ರಿಗೆ ದೂರು ನೀಡಿದ್ದು, ಘಟನಾ ಸ್ಥಳಕ್ಕೆ ಪೊಲೀಸರು ಹಾಗೂ ಎಫ್ಎಸ್ಎಲ್ ತಂಡ, ಆಗಮಿಸಿ ಗುಂಡನ್ನು ವಶಕ್ಕೆ ಪಡೆದು, ತನಿಖೆ ಮುಂದುವರಿಸಿದ್ದಾರೆ. ಬೆಳಗಾವಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಖಾಸಗಿ ಬಸ್ ಪಲ್ಟಿ: ಗಾಯ

ಚಿಕ್ಕಮಗಳೂರು: ಚಾರ್ಮಾಡಿ ಘಾಟ್‌ನ ನಾಲ್ಕನೇ ತಿರುವಿನಲ್ಲಿ ಖಾಸಗಿ ಬಸ್‌ವೊಂದು ಉರುಳಿಬಿದ್ದಿದ್ದು, 20ಕ್ಕೂ ಹೆಚ್ಚು ಪ್ರಯಾಣಿಕರು ಗಾಯಗೊಂಡಿದ್ದಾರೆ. ಧರ್ಮಸ್ಥಳದಲ್ಲಿ ಮದುವೆ ಮುಗಿಸಿಕೊಂಡು ತುಮಕೂರು ಜಿಲ್ಲೆಯ ಪಾವಗಡಕ್ಕೆ ಪ್ರಯಾಣಿಕರು ವಾಪಸ್ಸಾಗುತ್ತಿದ್ದರು. ಈ ಸಂದರ್ಭದಲ್ಲಿ ಚಾಲಕನ ನಿಯಂತ್ರಣ ತಪ್ಪಿ ಈ ದುರ್ಘಟನೆ ನಡೆದಿದೆ. ಅಪಘಾತ ನಡೆದ ಕೂಡಲೇ ಸ್ಥಳೀಯರು ರಕ್ಷಣಾ ಕಾರ್ಯಕ್ಕೆ ಧಾವಿಸಿದ್ದು, ಗಾಯಾಳುಗಳನ್ನು ಆಂಬುಲೆನ್ಸ್‌ಗಳ ಮೂಲಕ ಕಕ್ಕಿಂಜೆಯ ಕೃಷ್ಣ ಆಸ್ಪತ್ರೆ ಹಾಗೂ ಬೆಳ್ತಂಗಡಿಯ ವಿವಿಧ ಆಸ್ಪತ್ರೆಗಳಿಗೆ ದಾಖಲಿಸಿದ್ದಾರೆ. ಬೆಳ್ತಂಗಡಿ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

133ನೇ ಮನ್ ಕೀ ಬಾತ್ ವೀಕ್ಷಿಸಿದ ಸಚಿವ ಪ್ರಹ್ಲಾದ ಜೋಶಿ

ದೇಶಕ್ಕಿಲ್ಲ ಇಂಧನ ಸಮಸ್ಯೆ

ಹುಬ್ಬಳ್ಳಿ: ದೂರದೃಷ್ಟಿ ನಾಯಕತ್ವದಿಂದ ದೇಶದ ಇಂಧನ ವ್ಯವಸ್ಥೆಗೆ ಭದ್ರ ಬುನಾದಿ ಹಾಕಿಕೊಟ್ಟ ಪ್ರಧಾನಿ ನರೇಂದ್ರ ಮೋದಿ ಅವರು ಮನ್ ಕೀ ಬಾತ್ ಮೂಲಕ ಭಾರತದ ಸೌರಶಕ್ತಿ, ಪವನ ಶಕ್ತಿ ಮೇಲೆ ಪ್ರಖರ ಬೆಳಕು ಚೆಲ್ಲಿದ್ದಾರೆ ಎಂದು ಕೇಂದ್ರ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಹ್ಲಾದ ಜೋಶಿ ಬಣ್ಣಿಸಿದರು. ಹುಬ್ಬಳ್ಳಿಯ 52ನೇ ವಾರ್ಡ್ ಬೂತ್ ನಂ.202ರಲ್ಲಿ ಜನಸಾಮಾನ್ಯರೊಡಗೂಡಿ ಪ್ರಧಾನಿ ಮೋದಿ ಅವರ 133ನೇ ಮನ್ ಕೀ ಬಾತ್ ವೀಕ್ಷಿಸಿ ಮಾತನಾಡಿ, ಭಾರತದ ಹೊಸ ಮತ್ತು ನವೀಕರಿಸಬಹುದಾದ ಇಂಧನ ವ್ಯವಸ್ಥೆ ಬಗ್ಗೆ ಪ್ರಧಾನಿ ಅತ್ಯಂತ ವಿಶ್ವಾಸಾರ್ಹ ಮಾತುಗಳನ್ನಾಡಿದ್ದು, ಇದು ಶುದ್ಧ ಇಂಧನ ಪರಿವರ್ತನೆ ಪಥದಲ್ಲಿ ಸಾಗಿದ ನಮ್ಮ ಪ್ರಯತ್ನಕ್ಕೆ ಮತ್ತಷ್ಟು ಸ್ಫೂರ್ತಿ ತುಂಬಿದೆ ಎಂದು ಹೇಳಿದರು.

ಪ್ರಧಾನಿಯವರ ಮನ್ ಕೀ ಬಾತ್ ಸಮಾಜ ಸೇವೆ ಮತ್ತು ರಾಷ್ಟ್ರ ನಿರ್ಮಾಣದ ಹಾದಿಯಲ್ಲಿ ನಮಗೆ ಹೊಸ ಚೈತನ್ಯ ತುಂಬಿದೆ. ದೇಶದ ಪ್ರಗತಿ, ಸಾಧಕರ ಯಶೋಗಾಥೆ ಮತ್ತು ನವ ಭಾರತದ ಸಂಕಲ್ಪಗಳನ್ನು ಹಂಚಿಕೊಳ್ಳುವ ಈ ವಿಶಿಷ್ಟ ಕಾರ್ಯಕ್ರಮ ಮಾದರಿ ಎಂದರು.

ಸಣ್ಣ ಸಣ್ಣ ಬದಲಾವಣೆಗಳ ಮೂಲಕವೇ ದೊಡ್ಡ ಕ್ರಾಂತಿಗೆ ನಾಂದಿ ಹಾಡಿದ್ದಾರೆ ಪ್ರಧಾನಿ ಮೋದಿ. ಸೌರ ವಿದ್ಯುತ್ ಮತ್ತು ಗಾಳಿ ವಿದ್ಯುತ್ ಉತ್ಪಾದನೆಗೆ ಉತ್ತೇಜನ ನೀಡುತ್ತ ಶುದ್ಧ ಇಂಧನ ವಲಯಕ್ಕೆ ಶಕ್ತಿ ತುಂಬಿದ್ದಾರೆ. ನವೀಕರಿಸಬಹುದಾದ ಇಂಧನ ಸಾಮರ್ಥ್ಯದಲ್ಲಿ ಭಾರತ ಹೊಸ ಮೈಲುಗಲ್ಲು ಸ್ಥಾಪಿಸುವುದನ್ನು ಮನ್ ಕೀ ಬಾತ್ ಮೂಲಕ ತೆರೆದಿಟ್ಟಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದರು.



ಭಾರತದತ್ತ ಜಗತ್ತಿನ ದೃಷ್ಟಿ

ಹೊಸ ಮತ್ತು ನವೀಕರಿಸಬಹುದಾದ ಇಂಧನ ಉತ್ಪಾದನೆ ಯುವಕರಿಗೆ ಹೊಸ ಅವಕಾಶಗಳು ಮತ್ತು ಉದ್ಯೋಗಗಳನ್ನು ಸೃಷ್ಟಿಸುತ್ತಿವೆ. ಭಾರತದ ವಿಕಾಸದಲ್ಲಿ ಪವನ ಶಕ್ತಿ ಹೊಸ ಭಾಷ್ಯ ಬರೆದಿದೆ. ವಿಂಡ್ ಎನರ್ಜಿಯಲ್ಲಿ ಜಗತ್ತಿನಲ್ಲಿ 4ನೇ ಸ್ಥಾನದಲ್ಲಿರುವ ಭಾರತವನ್ನು ಇಂದು ಜಗತ್ತೇ ಅನುಸರಣೆ ಮಾಡುತ್ತಿರುವ ಬಗ್ಗೆ ಉಲ್ಲೇಖಿಸಿ ಪ್ರಧಾನಿ ಮೋದಿ ಸಂತಸ ಹಂಚಿಕೊಂಡಿದ್ದಾರೆ.

56ಗಿಗಾ ವ್ಯಾಟ್ ದಾಟಿದ ಪವನ ಶಕ್ತಿ: ಭಾರತದ ಪವನ ಶಕ್ತಿ ಸಾಮರ್ಥ್ಯ ಇದೀಗ 56ಜಿಡಿ ದಾಟಿದೆ, ಕಳೆದ ವರ್ಷ 6 ಜಿಡಿ ಸೇರಿಸಿದ್ದು, ಇದು ಇದುವರೆಗಿನ ಅತ್ಯಧಿಕ ಸಾಮರ್ಥ್ಯ ಸೇರ್ಪಡೆಯಾಗಿದೆ. ಭಾರತ ಪವನ ಶಕ್ತಿ ಪ್ರಯಾಣವನ್ನು ವೇಗಗೊಳಿಸುತ್ತಿದೆ ಎಂದು ಹೇಳಿದರು.

ದೇಶದಲ್ಲಿ ಇಂಧನ ಸುಸ್ಥಿರತೆ, ಶುದ್ಧ ಇಂಧನ, ಪರಿಸರ ಸಂರಕ್ಷಣೆ ಮತ್ತು ರಾಷ್ಟ್ರದ ಉತ್ತಮ ಭವಿಷ್ಯಕ್ಕಾಗಿ ಸೌರ ಮತ್ತು ಪವನ ಶಕ್ತಿ ಅಳವಡಿಕೆ ಅತ್ಯಗತ್ಯವಾಗಿದೆ ಎನ್ನುವ ಮೂಲಕ ಪ್ರಧಾನಿ ಮೋದಿ ಅವರು, ವಿಕಸಿತ ಭಾರತಕ್ಕಾಗಿ ಶುದ್ಧ ಇಂಧನ ಸಾಮರ್ಥ್ಯದ ಸಾಮೂಹಿಕ ಪ್ರಯತ್ನಕ್ಕೆ ಕರೆ ನೀಡಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಸಂಸದರು ಹಾಗೂ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ, ಶಾಸಕರಾದ ಮಹೇಶ್ ಟೆಂಗಿನಕಾಯಿ, ವಿಭಾಗ ಸಂಘಟನಾ ಕಾರ್ಯದರ್ಶಿಗಳಾದ ಜಯತೀರ್ಥ ಕಟ್ಟಿ, ಬಂಗಾರು ಹನುಮಂತು, ಭರತ ಬೊಮ್ಮಾಯಿ, ಮಹೇಂದ್ರ ಕೌತಾಳ, ಕೃಷ್ಣಾ ಗಂಡಗಾಳೇಕರ್, ಪ್ರಭು ನವಲಗುಂದಮಠ ಸೇರಿದಂತೆ ಗಣ್ಯರು ಹಾಗೂ ಬಿಜೆಪಿ ಕಾರ್ಯಕರ್ತರು ಭಾಗಿಯಾಗಿದ್ದರು.

ಕೃಷಿ ಉತ್ಪನ್ನಗಳಿಗೆ ಸಂಘ ಸಂಸ್ಥೆಗಳ ಸಹಕಾರ ಅಗತ್ಯ

ಬೆಂಗಳೂರು: ರೈತರು ಉತ್ಪಾದನೆ ಮಾಡಿದರಷ್ಟೇ ಸಾಲದು. ಉತ್ಪನ್ನಗಳಿಗೆ ಮೌಲ್ಯವರ್ಧನೆ ನೀಡಬೇಕು. ಆಗ ಅಧಿಕ ಲಾಭ ಗಳಿಸಬಹುದು. ಈ ನಿಟ್ಟಿನಲ್ಲಿ ಕೃಷಿ ವಿವಿಗಳು, ತೋಟಗಾರಿಕಾ, ಪಶು ಸಂಗೋಪನೆ, ಕೃಷಿ ಸೇರಿದಂತೆ ಸರ್ಕಾರದ ಇಲಾಖೆಗಳು, ಸಂಘ, ಸಂಸ್ಥೆಗಳು, ರೈತ ಉತ್ಪಾದಕ ಸಂಸ್ಥೆಗಳು ಸಹಕಾರ ನೀಡಬೇಕು ಎಂದು ವಾಣಿಜ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಡಾ.ಎಸ್.ಸೆಲ್ವಕುಮಾರ್ ತಿಳಿಸಿದರು.

ಎಫ್‌ಕೆಸಿಸಿಐ, ಕೇಂದ್ರ ಆಹಾರ ಸಂಸ್ಕರಣೆ ಸಚಿವಾಲಯ, ರಾಜ್ಯ ಕೃಷಿ ಇಲಾಖೆ, ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ(ಕೆಪೆಕ್) ಮತ್ತು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಅರಮನೆ ಮೈದಾನದ ತ್ರಿಪುರ ವಾಸಿನಿಯಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಕೃಷಿ ತಂತ್ರಜ್ಞಾನ ಶೃಂಗಸಭೆಯ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ದೇಶದ ಶೇ.55 ರಷ್ಟು ಜನರು ಕೃಷಿಯಲ್ಲಿ ತೊಡಗಿದ್ದರೂ ಸಹ ಜಿಡಿಪಿಯಲ್ಲಿ ಕೃಷಿಯ ಪಾಲು ಶೇ.15 ರಿಂದ 18 ಮಾತ್ರ ಇದೆ. ಇದು ಹೆಚ್ಚಳವಾದರೆ ರೈತರು, ಉದ್ಯಮಿಗಳು, ಗ್ರಾಹಕರಿಗೂ ಅನುಕೂಲವಾಗುತ್ತದೆ ಎಂದು ಮಾಹಿತಿ ನೀಡಿದರು.

ದೇಶವು ಕೃಷಿಯಲ್ಲಿ ಸ್ವಾವಲಂಬನೆ ಸಾಧಿಸಿದ್ದರೂ, ಇನ್ನೂ ಕೆಲವು ರಂಗದಲ್ಲಿ ಹೆಚ್ಚಿನ ಪ್ರಗತಿ ಸಾಧಿಸಬೇಕಿದೆ. ನಾವು ಉತ್ಪಾದನೆ ಹೆಚ್ಚು ಮಾಡಿದರೂ ಉತ್ಪಾದಕತೆ ಹೆಚ್ಚಿಸಲು ಅವಕಾಶವಿದೆ. ಇದಕ್ಕೆ ತಾಂತ್ರಿಕತೆ ಒಂದೇ ಮಂತ್ರವಾಗಿದೆ. ಕಡಿಮೆ ವೆಚ್ಚದಲ್ಲಿ ತಾಂತ್ರಿಕತೆಯನ್ನು ರೈತರಿಗೆ ನೀಡಿದರೆ ಅವರು ಲಾಭಾಂಶವನ್ನು ಹೆಚ್ಚಿಸಿಕೊಳ್ಳುತ್ತಾರೆ. ಇನ್ನೂ ಹೆಚ್ಚು ಉತ್ಪಾದಿಸಿ ದೇಶಕ್ಕೆ ಕೊಡುಗೆ ನೀಡುತ್ತಾರೆ. ಆ ನಿಟ್ಟಿನಲ್ಲಿ ಎಲ್ಲರೂ ಸಹಕಾರ ನೀಡಬೇಕು ಎಂದರು.

ಕೆಪೆಕ್ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಶಿವಪ್ರಕಾಶ್, ಎಫ್‌ಕೆಸಿಸಿಐ ಅಧ್ಯಕ್ಷೆ ಉಮಾ ರೆಡ್ಡಿ, ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದ ಅಧ್ಯಕ್ಷ ಡಾ.ಬಿ.ಸಿ.ಮುದ್ದುಗಂಗಾಧರ್ ಇದ್ದರು.



ಮೇ 2ರಂದು ಅಂಚೆ ಮತ ಮರು ಎಣಿಕೆ

ಚಿಕ್ಕಮಗಳೂರು: 2023ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲಿ ಚಲಾವಣೆಗೊಂಡ ಅಂಚೆ ಮತಗಳ ಮರು ಎಣಿಕೆ ನಡೆಸಲು ನ್ಯಾಯಾಲಯ ಆದೇಶಿಸಿರುವ ಹಿನ್ನೆಲೆಯಲ್ಲಿ ಈಗ ಎಲ್ಲರ ಚಿತ್ತ ಮೇ 2ರತ್ತ ನೆಟ್ಟಿದೆ.



ನಗರದ ಐಡಿಎಸ್‌ಜಿ ಕಾಲೇಜಿನಲ್ಲಿ ಮರು ಮತ ಎಣಿಕೆಗೆ ಜಿಲ್ಲಾಡಳಿತ ಸಿದ್ಧತೆ ಮಾಡಿಕೊಂಡಿದ್ದು, ಮೇ 2 ರಂದು ಬೆಳಗ್ಗೆ 8 ಗಂಟೆಯಿಂದ ಎಣಿಕೆ ಪ್ರಕ್ರಿಯೆ ಆರಂಭವಾಗಲಿದೆ. ಚುನಾವಣಾಧಿಕಾರಿ ಗೌರವ ಶೆಟ್ಟಿ ಅವರ ನೇತೃತ್ವದಲ್ಲಿ ನಾಲ್ವರು ಸಹಾಯಕ ಚುನಾವಣಾಧಿಕಾರಿಗಳು ಈ ಕಾರ್ಯವನ್ನು ನಿರ್ವಹಿಸಲಿದ್ದಾರೆ. ಪಾರದರ್ಶಕತೆ ಕಾಪಾಡಲು ಎಣಿಕೆ ಕೊಠಡಿಯಲ್ಲಿ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಲಾಗುತ್ತಿದ್ದು, ಸಂಪೂರ್ಣ ಪ್ರಕ್ರಿಯೆಯನ್ನು ವಿಡಿಯೋಗ್ರಫಿ ಮಾಡಲಾಗುತ್ತದೆ. ಕೇವಲ ಒಂದೇ ಟೇಬಲ್‌ನಲ್ಲಿ ಎಣಿಕೆ ನಡೆಯಲಿದ್ದು, ಅಭ್ಯರ್ಥಿಗಳ ಪರ ಏಜೆಂಟರು ಹಾಜರಿರುತ್ತಾರೆ. ಚುನಾವಣಾ ಆಯೋಗದ ನಿಯಮಾವಳಿಗಳಂತೆ ಪ್ರತಿಯೊಂದು ಮತದ ಮಾನ್ಯತೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಗುತ್ತದೆ. 2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಟಿ.ಡಿ. ರಾಜೇಗೌಡ ಅವರು ಬಿಜೆಪಿಯ ಡಿ.ಎನ್. ಜೀವರಾಜ್ ವಿರುದ್ಧ ಕೇವಲ 201 ಮತಗಳ ಅಲ್ಪ ಅಂತರದಿಂದ ಗೆಲುವು ಸಾಧಿಸಿದ್ದರು. ಆದರೆ ಆ ವೇಳೆ ಚಲಾವಣೆಯಾಗಿದ್ದ ಅಂಚೆ ಮತಗಳಲ್ಲಿ 279 ಮತಗಳನ್ನು ತಾಂತ್ರಿಕ ಕಾರಣಗಳಿಂದ ತಿರಸ್ಕರಿಸಲಾಗಿತ್ತು. ಇದರಲ್ಲಿ ಲೋಪವಾಗಿದೆ ಎಂದು ಆರೋಪಿಸಿ ಡಿ.ಎನ್. ಜೀವರಾಜ್ ಅವರು ಹೈಕೋರ್ಟ್‌ಗೆ ಮೊರೆ ಹೋಗಿದ್ದರು.

ಹದಗೆಟ್ಟ ಆರ್ಥಿಕತೆ: ಎಚ್‌ಡಿಕೆ

ತುಮಕೂರು: ರಾಜ್ಯ ಕಾಂಗ್ರೆಸ್ ಸರ್ಕಾರ ರಾಜ್ಯದ ಆರ್ಥಿಕ ವ್ಯವಸ್ಥೆಯನ್ನು ಹದಗೆಡಿಸಿದೆ ಎಂದು ಪುನರುಚ್ಚರಿಸಿದ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು, ಗ್ರೇಟರ್ ಬೆಂಗಳೂರು ಎಲೆಕ್ಷನ್ ಮಾಡುವುದಕ್ಕೂ ಈ ಸರ್ಕಾರಕ್ಕೆ ಹಣವಿಲ್ಲ ಎಂದು ನೇರ ಆರೋಪ ಮಾಡಿದ್ದಾರೆ.



ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿನ ಸೊರವನಹಳ್ಳಿ ಮತ್ತು ಕುಣಿಗಲ್ ತಾಲೂಕಿನ ಮಾದಪ್ಪನಹಳ್ಳಿ ಗ್ರಾಮಗಳಲ್ಲಿ ನೂತನ ದೇವಾಲಯಗಳ ಲೋಕಾರ್ಪಣೆ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಮಾತನಾಡಿದರು. ಮಾತನಾಡಿದರು. ಕರ್ನಾಟಕ ರಾಜ್ಯ ಚುನಾವಣಾ ಆಯೋಗವು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಚುನಾವಣೆಯನ್ನು ಜೂನ್ 30ರ ಬದಲು ಸೆಪ್ಟೆಂಬರ್ 30ರವರೆಗೆ ವಿಸ್ತರಿಸಲು ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದೆ. ಜಾತಿಗಣತಿ ಮತ್ತು ಮತದಾರರ ಪಟ್ಟಿಯ ತಿದ್ದುಪಡಿ ಕಾರ್ಯಗಳಲ್ಲಿ ಸಿಬ್ಬಂದಿ ನಿರತರಾಗಿರುವುದು ಹಾಗೂ ಹಣಕಾಸಿನ ಕೊರತೆ ಇದಕ್ಕೆ ಕಾರಣವಾಗಿದ್ದು, ಆಯೋಗವು ರಾಜ್ಯ ಸರ್ಕಾರದಿಂದ ಹಣ ಬಿಡುಗಡೆ ಮಾಡಿಲ್ಲ ಎಂದು ನ್ಯಾಯಾಲಯಕ್ಕೆ ತಿಳಿಸಿದೆ. ಅಲ್ಲಿಗೆ ರಾಜ್ಯ ಸರ್ಕಾರ ಆರ್ಥಿಕವಾಗಿ ದುರ್ಭರ ಸ್ಥಿತಿಯಲ್ಲಿದೆ ಎಂದು ಸಚಿವರು ಕಳವಳ ವ್ಯಕ್ತಪಡಿಸಿದರು.

ಬೆಂಕಿ ರೀತಿಯ ಬೇಸಿಗೆಯನ್ನು ನೋಡುತ್ತಿದ್ದೇವೆ. ಉಷ್ಣಗಾಳಿಗೆ ಜನರು ತತ್ತರಿಸುತ್ತಿದ್ದಾರೆ. ಅಕಾಲಿಕ ಆಲಿಕಲ್ಲು ಮಳೆಯಿಂದಾಗಿ ರೈತರು ಅಪಾರ ಪ್ರಮಾಣದಲ್ಲಿ ಬೆಳೆ ನಷ್ಟ ಅನುಭವಿಸುತ್ತಿದ್ದಾರೆ. ಸರ್ಕಾರ ಜನರ ನೆರವಿಗೆ ಧಾವಿಸುವುದು ಇರಲಿ, ಅವರ ಬಗ್ಗೆ ಕನಿಕರದ ಮಾತನ್ನು ಕೂಡ ಆಡುತ್ತಿಲ್ಲ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಕುರ್ಚಿ ಕಾಳಗದಲ್ಲಿ ಕಾಂಗ್ರೆಸ್ ನಾಯಕರು

ರಾಜ್ಯದ ಜನರು ಒಂದು ಕಡೆ ಕುಡಿಯುವ ನೀರಿನ ಸಮಸ್ಯೆಗೆ ತತ್ತರಿಸುತ್ತಿದ್ದರೆ, ಇನ್ನೊಂದು ಕಡೆ ಅಕಾಲಿಕ ಮಳೆಯಿಂದ ಭಾರೀ ಬೆಳೆ ನಷ್ಟಕ್ಕೆ ತುತ್ತಾಗಿದ್ದರೆ ರಾಜ್ಯ ಕಾಂಗ್ರೆಸ್ ಸರ್ಕಾರ ಸಿಎಂ ಕುರ್ಚಿ ಕಾಳಗದಲ್ಲಿ ಮೈಮರೆತಿದೆ ಎಂದು ಕೇಂದ್ರ ಸಚಿವ ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.

ನಿಶ್ಚಿತಾರ್ಥ: ಯುವತಿ ಪರಾರಿ!

ಹಾವೇರಿ: ವಿವಾಹ ನಿಶ್ಚಿತಾರ್ಥದ ರಾತ್ರಿಯೇ ಯುವತಿ ನಾಪತ್ತೆಯಾಗಿರುವ ಘಟನೆ ಜಿಲ್ಲೆಯ ಹಾನಗಲ್ಲ ತಾಲೂಕಿನ ಶಂಕ್ರಿಕೊಪ್ಪ ಗ್ರಾಮದಲ್ಲಿ ನಡೆದಿದ್ದು, ಯುವತಿಯ ಕುಟುಂಬಸ್ಥರು ಲವ್ ಜಿಹಾದ್ ಶಂಕೆ ವ್ಯಕ್ತಪಡಿಸಿ ಆಡೂರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ವಿವಾಹ ನಿಶ್ಚಿತಾರ್ಥ ನಡೆದ ಬೆನ್ನಲ್ಲೇ ಯುವತಿಯನ್ನು ಅನ್ಯ ಕೋಮಿನ ಯುವಕನೊಬ್ಬ ಪುಸಲಾಯಿಸಿ ಲವ್ ಜಿಹಾದ್‌ಗೆ ಯತ್ನಿಸಲಾಗಿದೆ ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ.

ಯುವತಿ ಕುಟುಂಬಸ್ಥರಿಂದ ಲವ್ ಜಿಹಾದ್ ಶಂಕೆ

ಶಂಕ್ರಿಕೊಪ್ಪ ಗ್ರಾಮದ ಬಿ.ಕಾಂ.ಪದವೀಧರೆ ಶಂಕ್ರಮ್ಮ ಕೆರಿಮತ್ತಿಹಳ್ಳಿ (24) ನಾಪತ್ತೆಯಾದ ಯುವತಿ. ಶಂಕ್ರಮ್ಮನಿಗೆ ಇತ್ತೀಚೆಗಷ್ಟೇ ನಿಶ್ಚಿತಾರ್ಥ ನೆರವೇರಿತ್ತು. ಮೇ 11ಕ್ಕೆ ಪಾಲಕರು ಮದುವೆ ಮಾಡಲು ನಿಶ್ಚಯಿಸಿದ್ದರು. ನಿಶ್ಚಿತಾರ್ಥ ನಡೆದ ರಾತ್ರಿ ಭಾವಿ ಪತಿಯೊಂದಿಗೆ ಫೋನ್‌ನಲ್ಲಿ ಮಾತನಾಡಿದ್ದ ಯುವತಿ, ತಡರಾತ್ರಿ ಮನೆಯ ಹಿಂಬದಿಯ ಬಾಗಿಲಿನಿಂದ ನಾಪತ್ತೆಯಾಗಿದ್ದಾಳೆ ಎನ್ನಲಾಗಿದೆ. ನರೇಗಲ್ ಗ್ರಾಮದ ಇಬ್ರಾಹಿಂ ನೆಗಳೂರು ಎಂಬ ಯುವಕ ಈಕೆಯನ್ನು ಪುಸಲಾಯಿಸಿ ಕರೆದೊಯ್ದಿದ್ದಾನೆ. ಇದು ಲವ್ ಜಿಹಾದ್ ಪ್ರಯತ್ನ ಎಂದು ಕುಟುಂಬಸ್ಥರು ಹಾಗೂ ಹಿಂದೂಪರ ಸಂಘಟನೆಗಳು ಆರೋಪಿಸಿವೆ.

ಅಕ್ಕಿಆಲೂರಿನಲ್ಲಿ ಕೆಲಸಕ್ಕೆ ಹೋಗುತ್ತಿದ್ದ ವೇಳೆ ಯುವತಿಯ ಪರಿಚಯ ಮಾಡಿಕೊಂಡಿದ್ದ ಆರೋಪಿ ಇಬ್ರಾಹಿಂ, ಮದುವೆಯ ಸಿದ್ಧತೆ ನಡೆಯುತ್ತಿದ್ದಾಗಲೇ ಈ ಕೃತ್ಯ ಎಸಗಿದ್ದಾನೆ ಎನ್ನಲಾಗಿದೆ. ಮಗಳ ನಾಪತ್ತೆಯಿಂದ ಕಂಗೆಟ್ಟ ತಾಯಿ, ನನ್ನ ಮಗಳನ್ನು ಹೇಗಾದರೂ ಮಾಡಿ ಮರಳಿ ಕರೆತನ್ನಿ ಎಂದು ಆಡೂರು ಪೊಲೀಸ್ ಠಾಣೆಯ ಮುಂದೆ ಕಣ್ಣೀರು ಹಾಕಿ ದೂರು ಸಲ್ಲಿಸಿದ್ದಾರೆ. ಈ ಘಟನೆ ಹಿನ್ನೆಲೆಯಲ್ಲಿ ಹಿಂದೂಪರ ಸಂಘಟನೆಗಳ ಜಿಲ್ಲೆಯಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದು, ಇದು ವ್ಯವಸ್ಥಿತ ಲವ್ ಜಿಹಾದ್ ಎಂದು ಕಿಡಿ ಕಾರಿವೆ. ಸದ್ಯ ಆಡೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ನಾಪತ್ತೆಯಾದ ಯುವತಿ ಹಾಗೂ ಆರೋಪಿಗಾಗಿ ಪೊಲೀಸರು ತೀವ್ರ ಶೋಧ ನಡೆಸುತ್ತಿದ್ದಾರೆ.

ವಿಮಲಾ ಕುಮಾವತ್ ಎಂಬ ಮಮತೆಯ ಮಡಿಲು

ರೂಪಶ್ರೀನಾಗರಾಜ್

6ನೇ ಜನವರಿ 2003, 62 ವರ್ಷಕ್ಕಿಂತಲೂ ಹೆಚ್ಚು ವಯಸ್ಸಾಗಿರುವ ವಿಮಲಾ ಕುಮಾವತ್ ಈ ದಿನವನ್ನೇ ತಮ್ಮ ಜನ್ಮದಿನವೆಂದು ಹೇಳುತ್ತಾರೆ – ಅದು ಜನ್ಮದಿನವಲ್ಲ,ಅವರಪ್ರಕಾರ ಪುನರ್ಜನ್ಮದಿನ .. ನಿಜವಾಗಿ ಹೇಳಬೇಕೆಂದರೆ, ಹಿಂದಿನ ಕಾಲದ ಅನೇಕರ ಹಾಗೆ, ವಿಮಲಾರವರಿಗೂ ತಮ್ಮ ಜನ್ಮದಿನಾಂಕ ನೆನಪಿರಲಿಲ್ಲ. ಆ ದಿನ ಸಂಘದ ವರಿಷ್ಠ ಪ್ರಚಾರಕರಾದ ಧನಪ್ರಕಾಶ ತ್ಯಾಗಿ ಅವರ ಪ್ರೇರಣೆಯಿಂದ ಅವರು ಜೈಪುರದಲ್ಲಿ ತಮ್ಮ ಮನೆಯ ಸಮೀಪದ ವಾಲ್ಮೀಕಿ ಸೇವಾಬಸತಿಯಿಂದ ಚಿಂದಿ ಆಯುವ 5 ಹುಡುಗರನ್ನು ಶಿಕ್ಷಣಕ್ಕೋಸ್ಕರ ತಮ್ಮ ಮನೆಗೆ ಕರೆತಂದ ದಿನಮಾತ್ರವಿಮಲಾ ಅವರಿಗೆ ನೆನಪಿದೆ.



ಮೂವರು ಗಂಡುಮಕ್ಕಳು, ಸೊಸೆಯರು ಮತ್ತು ಮೊಮ್ಮಕ್ಕಳೊಂದಿಗೆ ತುಂಬಿದ ಪರಿವಾರದ ಒಡತಿ, 8ನೇ ತರಗತಿಪಾಸಾಗಿದ್ದ 48 ವರ್ಷದ ವಿಮಲಾ ಅವರು ಈ ಮಕ್ಕಳ ಜೀವನವನ್ನು ಸುಧಾರಿಸುವ ಪಣತೊಟ್ಟರು. ಚಿಂದಿ ಆಯ್ದು ದುಡ್ಡು ಗಳಿಸುತ್ತಿದ್ದ, ಆದರಲ್ಲಿನ ಸ್ವಲ್ಪ ಹಣವನ್ನು ನಶೆಗಾಗಿ ಮತ್ತು ಬಾಕಿಯ ಹಣವನ್ನು ಮನೆಯ ಖರ್ಚನ್ನು ನಿಭಾಯಿಸಲು ತಾಯಿತಂದೆಗೆ ಸಹಾಯ ಮಾಡುತ್ತಿದ್ದ ಈ ಮಕ್ಕಳಿಗೋಸ್ಕರ ವಿಮಲಾ ಜೀ ದೃಢ ನಿರ್ಧಾರ ಮಾಡಿದರು.ಬೀದಿ ಗುಡಿಸುವವರ ಈ ವಸತಿಗಳ ಸ್ಥಿತಿ ಶೋಚನೀಯವಾಗಿಯೇ ಇತ್ತು, ವಸತಿಯ ಆಸುಪಾಸಿನಲ್ಲಿ ಬಹಳಷ್ಟು ಗಲೀಜೂ ಇತ್ತು. ಚಿಕ್ಕ ಚಿಕ್ಕ ಗುಡಿಸಲುಗಳಲ್ಲಿ ಹಂದಿಗಳ ಮಧ್ಯೆ ಬೆಳೆಯುತ್ತಿದ್ದ ಮಕ್ಕಳು. ಸಾಲದುಎಂಬಂತೆ, ನಶೆಯಲ್ಲಿ ಮುಳುಗಿದ್ದ ತಾಯಿತಂದೆಯರು. ಇಂಥ ಪರಿಸ್ಥಿತಿಯಲ್ಲಿ ಈ ಮಕ್ಕಳ ಓದಿನ ಬಗ್ಗೆ ಚಿಂತೆ ಮಾಡುವವರಾದರೂ ಯಾರು? ಆಗ ವಿಮಲಾ ಅವರು ಅವರ ಜೀವನದಲ್ಲಿ ಆಪದ್ಬಾಂಧವರಂತೆಬಂದರು.ಆ ಮಕ್ಕಳನ್ನು ಸ್ವಚ್ಛಗೊಳಿಸುವುದರಿಂದಹಿಡಿದು ಅವರಿಗೆ ಸಂಸ್ಕಾರ ಮತ್ತು ಶಿಕ್ಷಣ ನೀಡುವ ಕಾರ್ಯವನ್ನು ಅವರು ಆರಂಭಿಸಿದರು.

ಸೇವಾಗಾಥ
ಕಥೆ-4

ಈ ಸಾಧಾರಣ ಗೃಹಿಣಿಯ ಅದ್ಭುತ ಸಂಕಲ್ಪ, ನಿಸ್ವಾರ್ಥ ಸೇವಾಮನೋಭಾವ ಮತ್ತು ಅವಿರತ ಪರಿಶ್ರಮಗಳು ಮಕ್ಕಳ ಜೀವನದ ಸ್ಥಿತಿ ಮತ್ತು ದಿಕ್ಕು ಎರಡನ್ನೂ ಬದಲಿಸಿತು. ಸೇವಾಭಾರತಿಯ ಕಾರ್ಯಕರ್ತರ ಸಹಾಯದಿಂದ, ಮೊದಲ ಮೂರು ವರ್ಷಗಳ ಕಾಲ ವಿಮಲಾಜಿಯವರ ಮನೆಯಲ್ಲೇ ನಡೆಯುತ್ತಿದ್ದ ಈ ತರಗತಿಗಳು ಕ್ರಮೇಣ 'ಸೇವಾಭಾರತಿ ಬಾಲ ವಿದ್ಯಾಲಯ'ವಾಗಿ ಮಾರ್ಪಟ್ಟವು. ಇಂದು ಇಲ್ಲಿ 400ಕ್ಕೂ ಹೆಚ್ಚು ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ. ಬನ್ನಿ, 12 ನೇ ತರಗತಿಯಲ್ಲಿ ಓದುತ್ತಿರುವ ಶಿವಾನಿಯ ಕಥೆಯನ್ನುನೋಡೋಣ ವಿಮಲಾರವರು ಶಿವಾನಿಯನ್ನು ಮತ್ತು ಅವಳ ತಂಗಿಯನ್ನು ಮೊದಲ ಬಾರಿಗೆ ವಸತಿ ನಿಲಯಕ್ಕೆ ಕರೆತಂದ ಆ ದಿನವನ್ನು ಈ ಹುಡುಗಿ ಇಂದು ಕೂಡ ಮರೆತಿಲ್ಲ. ಪೋಷಕರ ಮರಣದ ನಂತರ, ಈ ಇಬ್ಬರು ಸಹೋದರಿಯರು ತಮ್ಮ ದೊಡ್ಡಪ್ಪ-ದೊಡ್ಡಮ್ಮ ಮತ್ತು ಅವರ ನಾಲ್ಕು ಮಕ್ಕಳೊಂದಿಗೆ ಒಂದು ಪುಟ್ಟ ಗುಡಿಸಲಿನಲ್ಲಿ ವಾಸಿಸುತ್ತಿದ್ದರು. ಅವರು ಇಲ್ಲಿಗೆ ಬಂದಾಗ ಶಿವಾನಿಯ ತಂಗಿಯಆರೋಗ್ಯವೂ ಸರಿ ಇರಲಿಲ್ಲ, ಆದರೆ 10ನೇ ತರಗತಿಯಲ್ಲಿ ಶೇಕಡಾ 62 ರಷ್ಟು ಅಂಕಗಳನ್ನು ಗಳಿಸಿದ ನಂತರ, ಅವಳು ತನ್ನ ಅಜ್ಜಿ ವಿಮಲಾರನ್ನು ಅಪ್ಪಿಕೊಂಡು ಬಿಕ್ಕಿ ಬಿಕ್ಕಿ ಅತ್ತಳು ಮತ್ತು ಅವರ ಬಗ್ಗೆ ಒಂದು ಕವಿತೆಯನ್ನೂ ಬರೆದಿದ್ದಳು. ಹಾಗೆಬಿ.ಕಾಂ. ತೃತೀಯ ವರ್ಷದಲ್ಲಿರುವ ಲೋಕೇಶ್ ಕೋಲಿ ಅವರ ಬಗ್ಗೆ ಈಗ ತಿಳಿಯೋಣ. ಲೋಕೇಶ್ ಓದುವುದರ ಜೊತೆಜೊತೆಗೆ ಇದೇ ಬಾಲವಿದ್ಯಾಲಯದಲ್ಲಿ ಶಿಕ್ಷಕರೂ ಆಗಿದ್ದಾರೆ. ಲೋಕೇಶ್ ಅತಿ ಸುಮಧುರವಾಗಿ ಕೊಳಲನ್ನೂ ನುಡಿಸಬಲ್ಲರು. ವಿಧವೆ ತಾಯಿ ಮತ್ತು ಮೂವರು ತಮ್ಮ ತಂಗಿಯರಲ್ಲಿ ಎಲ್ಲರಿಗಿಂತ ದೊಡ್ಡವನಾದ ಲೋಕೇಶನನ್ನು ಓದಿಗೋಸ್ಕರ ವಿಮಲಾ ಅವರು ಬಲವಂತವಾಗಿ ಕರೆತಂದಾಗ ಅವನಿಗಿನ್ನೂ 8 ವರ್ಷವಾಗಿತ್ತಷ್ಟೇ. ಹಾಗೇಯೇ ಬಿ. ಎ. ಪ್ರಥಮ ವರ್ಷದ ವಿದ್ಯಾರ್ಥಿನಿ ಲಕ್ಷ್ಮಿಗೆ 8ನೇ ತರಗತಿಯ ಪರೀಕ್ಷೆಯನ್ನು ಕೊಡಿಸುವ ಸಲುವಾಗಿ, ವಿಮಲಾ ಅವರು ತಮ್ಮ 52ನೇ ವಯಸ್ಸಿನಲ್ಲಿ ತಾವೇ ಖುದ್ದಾಗಿ 8ನೇ ತರಗತಿಯ ಪರೀಕ್ಷೆಯನ್ನು ಮತ್ತೊಮ್ಮೆ ಬರೆದರು. ಇಂತಹ ಎಷ್ಟೋ ಕಥೆಗಳು ನಮಗೆ ಇಲ್ಲಿ ಸಿಗುತ್ತವೆ.

ವಿಮಲಾ ಅವರು ಓದಿನೊಂದಿಗೆ ಮಕ್ಕಳಿಗೆ ಭಗವದ್ಗೀತೆಯ ಶ್ಲೋಕಗಳು, ಬಾಲರಾಮಾಯಣ, ಭಜನೆ, ಇತ್ಯಾದಿಗಳನ್ನು ಕಲಿಸುತ್ತಿದ್ದರು. ಈ ಮಕ್ಕಳು ಹಾರ್ಮೋನಿಯಂ, ಡೋಲಕ್, ಮಂಜೀರಾ ಇವುಗಳನ್ನೂ ಕಲಿತರು ಮತ್ತು ಬೇಸಿಗೆ ರಜೆಯಲ್ಲಿ ಹೊಲಿಗೆ ಕಸೂತಿಯಂಥ ಹವ್ಯಾಸಿ ವಿಷಯಗಳನ್ನೂ ಕಲಿತರು. ಜೈಪುರ ಹಿಂದೂ ಅಧ್ಯಾತ್ಮಿಕ ಮೇಳದ ವೇದಿಕೆಯಲ್ಲಿ ಈ ಮಕ್ಕಳು ತಮ್ಮ ಸುಮಧುರ ಕಂಠದಲ್ಲಿ ಬಾಲರಾಮಾಯಣದ ಶ್ಲೋಕಗಳನ್ನು ಹಾಡಿದಾಗ, ಧನಪ್ರಕಾಶ್ ಅವರಿಗೆ ಆನಂದದ ಬಾಷ್ಪ ತುಂಬಿಬಂದಿತ್ತು. ಮೇಳದಲ್ಲಿ ದೊರಕಿದ ತಮ್ಮ ಅನೇಕ ಪಾರಿತೋಷಕಗಳನ್ನು ಮಕ್ಕಳು ಹೆಮ್ಮೆಯಿಂದ ತೋರಿಸುತ್ತಾರೆ. ಇಂದು ಶಾರದಾ ಎನ್‌ಕ್ಲೇವ್‌ನ (Sharda Enclave) ಎರಡಂತಸ್ತಿನ ಭವನದಲ್ಲಿ ನಡೆಯುತ್ತಿರುವ ಈ ಶಾಲೆಯ 325 ಮಕ್ಕಳ ಸಂಪೂರ್ಣ ವೆಚ್ಚವು ಸಮಾಜದ ಸಹಕಾರದಿಂದ ನಡೆಯುತ್ತಿದೆ. 36 ಮಕ್ಕಳು ಇಲ್ಲೇ ವಸತಿ ನಿಲಯದಲ್ಲಿ (ಹಾಸ್ಟೆಲ್) ವಾಸಿಸುತ್ತಿದ್ದಾರೆ.

ಈ ಶಾಲೆಯ ಮತ್ತೊಂದು ಶಾಖೆಯು ಈಗ ಸಾಂಗಾನೇರ್‌ನ ಬಕ್ಸಾವಾಲ್‌ನಲ್ಲಿ ಟೆಂಟ್ ಅಡಿಯಲ್ಲಿ ನಡೆಯುತ್ತಿದ್ದು, ಅಲ್ಲಿ 125 ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ.

ಸಂಪಾದಕೀಯ

ಸ್ವಾಗತಾರ್ಹ ನಿರ್ಧಾರ

ಶಾಲೆಗಳಲ್ಲಿ ದಿನವೂ ಬೆಳಗ್ಗೆ ಹತ್ತು ನಿಮಿಷ ಪತ್ರಿಕೆಗಳನ್ನು ಓದಿಸುವಂತೆ ರಾಜ್ಯದ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ. ಇದರಿಂದ ವಿದ್ಯಾರ್ಥಿಗಳಿಗೆ ದೇಶ-ವಿದೇಶಗಳ ಆಗುಹೋಗುಗಳ ಬಗ್ಗೆ ಅಯಾಚಿತವಾಗಿ ಜ್ಞಾನ ಲಭ್ಯವಾಗುತ್ತದೆ. ಅದಕ್ಕಿಂತ ಹೆಚ್ಚಾಗಿ ವಿದ್ಯಾರ್ಥಿಗಳ ಮನಸಲ್ಲಿ ದಿನಪತ್ರಿಕೆಗಳ ಮಹತ್ವವೂ ಅಚ್ಚೊತ್ತುತ್ತದೆ. ಮುದ್ರಿತ ಪ್ರತಿಗಳನ್ನು ಓದುವ ಹವ್ಯಾಸ ಕಡಿಮೆಯಾಗುತ್ತಿರುವ ಇಂದಿನ ದಿನಗಳಲ್ಲಿ ರಾಜ್ಯ ಸರ್ಕಾರ ಈ ರೀತಿ ಮಕ್ಕಳಿಗೆ ದಿನಪತ್ರಿಕೆ ಓದುವುದನ್ನು ರೂಢಿಸಲು ಮುಂದಾಗಿರುವದು ನಿಜಕ್ಕೂ ಸ್ವಾಗತಾರ್ಹ ಬೆಳವಣಿಗೆ.

ತುಂಬಾ ಹಿಂದೆ ಶಾಲೆಗಳಿಗೆ ಪತ್ರಿಕೆಗಳು ಬರುತ್ತಿದ್ದವು. ದಿನವೂ ಬೆಳಗ್ಗೆಯ ಪ್ರಾರ್ಥನೆಯ ನಂತರ ದಿನಪತ್ರಿಕೆಗಳ ಹೆಡ್‌ಲೈನ್‌ಗಳನ್ನು ಒಬ್ಬೊಬ್ಬ ವಿದ್ಯಾರ್ಥಿ ಪಾಳಿ ಪ್ರಕಾರ ಓದುವ ಪರಿಪಾಠ ಇತ್ತು. ಯಾವ ಹೆಡ್‌ಲೈನ್‌ಗಳನ್ನು ಓದಬೇಕೆಂದು ಶಿಕ್ಷಕರು ಗುರುತುಹಾಕಿ ಕೊಡುತ್ತಿದ್ದರು. ಇದರಿಂದ ಮಕ್ಕಳಿಗೆ ಪ್ರಚಲಿತ ವಿದ್ಯಮಾನಗಳು ಗೊತ್ತಾಗುವುದರ ಜತೆಗೆ, ಕನ್ನಡವನ್ನು ಸ್ಪಷ್ಟವಾಗಿ ಓದುವುದು ಕೂಡ ರೂಢಿಯಾಗುತ್ತದೆ. ಜತೆಗೆ ದಿನಪತ್ರಿಕೆಗಳನ್ನು ಓದುವುದು ಒಳ್ಳೆಯ ಹವ್ಯಾಸ ಎಂಬ ಭಾವನೆ ಮಕ್ಕಳ ಮನಸಲ್ಲಿ ಮೂಡುತ್ತದೆ.

ಇಂದಿನ ಡಿಜಿಟಲ್ ಯುಗದಲ್ಲಿ ಮಾಹಿತಿ- ಸುದ್ದಿಗಳ ಮಹಾಪೂರವೇ ಜನಕ್ಕೆ ದೊರೆಯುತ್ತಿದೆ. ಅದರಲ್ಲಿ ಸತ್ಯ ಯಾವುದು, ವೈಭವೀಕೃತ ಸುದ್ದಿ ಯಾವುದು? ಕೇವಲ ಓದುಗರನ್ನು ಆಕರ್ಷಿಸಲು ಪ್ರಕಟಿಸಿದ ಸುದ್ದಿ ಯಾವುದು ಎಂಬುದನ್ನು ಓದುಗರೇ ನಿರ್ಧರಿಸಬೇಕಾಗುತ್ತದೆ. ಆದರೆ ದಿನಪತ್ರಿಕೆಗಳು ಹಾಗಲ್ಲ. ದಿನಪತ್ರಿಕೆಗಳಲ್ಲಿ ಆಯ್ದ, ಪ್ರಮುಖ ಸುದ್ದಿಗಳು ಮಾತ್ರ ಪ್ರಕಟವಾಗುತ್ತವೆ. ಇಂದಿಗೂ ದಿನಪತ್ರಿಕೆಗಳನ್ನು ಸುದ್ದಿಯನ್ನು ವೈಭವೀಕರಿಸದೆ, ನೈಜವಾದ ಸುದ್ದಿಗಳನ್ನು, ಅಷ್ಟೇ ಗಾಂಭೀರ್ಯದಿಂದ ಪ್ರಕಟಿಸುತ್ತಿವೆ. ಇಂತಹ ವೇಗದ ಸಮಯದಲ್ಲೂ ಪತ್ರಿಕೆಗಳು ವಿಶ್ವಾಸಾರ್ಹತೆಯನ್ನು ಕಾಪಾಡಿಕೊಂಡಿವೆ. ಹಾಗಾಗಿ ದಿನಪತ್ರಿಕೆಗಳನ್ನು ಓದುವ ಹವ್ಯಾಸ ಜನರಲ್ಲಿ ರೂಢಿಸುವುದು ಅತ್ಯಂತ ಅಗತ್ಯದ ಸಂಗತಿಯೂ ಹೌದು.

ಈಗಿನ ಯುವಕರು ಹಾಗೂ ಮಕ್ಕಳು ದಿನಪತ್ರಿಕೆ ಓದುವ ಹವ್ಯಾಸದಿಂದ ದೂರಾಗುತ್ತಿದ್ದಾರೆ. ಅವರು ಪ್ರತಿಯೊಂದಕ್ಕೂ ಡಿಜಿಟಲ್ ಪ್ರಪಂಚವನ್ನೆ ಅವಲಂಬಿಸಿದ್ದಾರೆ. ಅವರನ್ನು ಮುದ್ರಿತ ಪತ್ರಿಕೆ, ಪುಸ್ತಕಗಳತ್ತ ಗಮನಹರಿಸುವಂತೆ ಮಾಡಬೇಕಾದ ಅಗತ್ಯವಿದೆ. ಈಗಾಗಲೇ ಮಕ್ಕಳಲ್ಲಿ ಡಿಜಿಟಲ್ ಸಮಯ ಕಡಿಮೆ ಮಾಡುವ ಬಗ್ಗೆ ಎಲ್ಲೆಡೆ ಚರ್ಚೆ ನಡೆಯುತ್ತಿದೆ. ದಿಟಜಿಲ್ ಸಮಯ ಹೆಚ್ಚಳದಿಂದ ಮಕ್ಕಳ ಕಣ್ಣಿನ ಮೇಲೆ ಹಾಗೂ ಅವರ ಕ್ರಿಯಾಶೀಲತೆ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ. ಮತ್ತೆ ಮುದ್ರಿತ ಅಕ್ಷರಗಳತ್ತ ವಿದ್ಯಾರ್ಥಿಗಳು ಗಮನಹರಿಸುವಂತೆ ಮತ್ತು ಅವುಗಳ ಮಹತ್ವ ಅರಿಯುವಂತೆ ಮಾಡುವುದರಿಂದ ಮಾತ್ರ ಸಮಸ್ಯೆಗೆ ಪರಿಹಾರ ಕಾಣಲು ಸಾಧ್ಯವಿದೆ.

ಈ ನಿಟ್ಟಿನಲ್ಲಿ ಶಿಕ್ಷಣ ಇಲಾಖೆ ಸರ್ಕಾರಿ ಶಾಲೆ, ಅನುದಾನಿತ ಹಾಗೂ ಅನುದಾನ ರಹಿತ ಹೀಗೆ ಎಲ್ಲ ಶಾಲೆಗಳಲ್ಲಿ ಬೆಳಗ್ಗೆ ದಿನಪತ್ರಿಕೆ ಓದುವುದನ್ನು ಕಡ್ಡಾಯಗೊಳಿಸುವ ಮೂಲಕ ಒಳ್ಳೆಯ ಹೆಜ್ಜೆಯನ್ನಿಟ್ಟಿದೆ. ಚಿಕ್ಕರಿರುವಾಗಿನಿಂದಲೆ ಮಕ್ಕಳ ಮನಸಲ್ಲಿ ದಿನಪತ್ರಿಕೆ ಓದುವ ರೂಢಿ ಬೆಳೆದರೆ, ಅದು ಅವರ ಜೀವನ ಪರ್ಯಂತ ಇರಲಿದೆ. ಆದರ ಜತಗೆ ಮಕ್ಕಳಿಗೆ ಪ್ರಪಂಚದಲ್ಲಿ ಏನೆಲ್ಲ ನಡೆಯುತ್ತಿದೆ ಎಂಬುದುರ ಶಿಕ್ಷಣವೂ ಶಾಲೆಯಲ್ಲಿ ದೊರೆತಂತಾಗುತ್ತದೆ.

ಕೈಕಾಲುಗಳೆರಡೂ ಇಲ್ಲದ ಹುಡುಗಿ ವಿಶ್ವ ಚಾಂಪಿಯನ್!

ಶೀತಲ್ ದೇವಿಗೆ ಕೈಗಳಿಲ್ಲ. ಪಾಯಲ್ ನಾಗ್‌ಗೆ ಕೈಕಾಲುಗಳೆರಡೂ ಇಲ್ಲ. ಆದರೆ ಅವರ ಸಾಧನೆಗೆ ಈ ಕೊರತೆಗಳು ಅಡ್ಡಿಯಾಗಲಿಲ್ಲ.

ನೇರ ನೋಟ
• ದು.ಗು. ಲಕ್ಷ್ಮಣ
dugulakshman@yahoo.com



ಆಗದು ಎಂದು, ಕೈಲಾಗದು ಎಂದು/ ಕೈಕಟ್ಟಿ ಕುಳಿತರೆ ಸಾಗದು ಕೆಲಸವು ಮುಂದೆ/ ಮನಸ್ಸೊಂದಿದ್ದರೆ ಮಾರ್ಗವು ಉಂಟು/ ಕೆಚ್ಚೆದೆ ಇರಬೇಕೆಂದು/ ಕೆಚ್ಚದೆ ಇರಬೇಕೆಂದೆಂದು

-ಇದು 1972ರಲ್ಲಿ ತೆರೆಕಂಡ ರಾಜ್‌ಕುಮಾರ್ ನಟನೆಯ 'ಬಂಗಾರದ ಮನುಷ್ಯ' ಚಲನಚಿತ್ರದ ಒಂದು ಜನಪ್ರಿಯ ಹಾಡು. ಆರ್.ಎನ್. ಜಯ ಗೋಪಾಲ್ ಬರೆದು, ಪಿ. ಬಿ. ಶ್ರೀನಿವಾಸ್ ಹಾಡಿದ ಆ ಹಾಡು ತುಂಬಾ ಅರ್ಥಗರ್ಭಿತ. ಎಂತಹ ಹೇಡಿ, ಅಳ್ಳೆದೆಯವರಿಗೂ ಸ್ಫೂರ್ತಿ, ಪ್ರೇರಣೆ ನೀಡಬಲ್ಲ ಹಾಡು. ಆದರೆ ಈ ಹಾಡನ್ನು ಕೇಳಿದ ಅದೆಷ್ಟು ಮಂದಿ ಸ್ಫೂರ್ತಿ ಪಡೆದರೋ ಗೊತ್ತಿಲ್ಲ.

ಪ್ರತಿಯೊಬ್ಬ ವ್ಯಕ್ತಿಯ ಸ್ವಭಾವವೂ ವಿಶಿಷ್ಟ ಹಾಗೂ ವಿಚಿತ್ರ. ಶರೀರದ ಅವಯವಗಳೆಲ್ಲ ಚೆನ್ನಾಗಿ, ಗಟ್ಟಿಮುಟ್ಟಾಗಿದ್ದರೂ ಅಯ್ಯೋ ನನ್ನಿಂದೇನು ಸಾಧ್ಯ ಎಂದು ಕೊರಗಿ ಕೊರಗಿ ಬದುಕನ್ನು ವ್ಯರ್ಥಗೊಳಿಸಿಕೊಳ್ಳುವವರಿಗೇನೂ ಕೊರತೆಯಿಲ್ಲ. ಸ್ವ ಪ್ರಯತ್ನ ಮಾಡಬೇಕೆಂಬ ಹಠ ಇರದಿರುವುದೇ ಇದಕ್ಕೆ ಕಾರಣ. ಸ್ವ ಪ್ರಯತ್ನ, ಸಾಧನೆ, ಹಠ ಇದ್ದರೆ ಏನು ಬೇಕಾದರೂ ಮನುಷ್ಯ ಮಾಡಬಹುದು. ಸಂಸ್ಕೃತದ ಶ್ಲೋಕವೊಂದನ್ನು ಎಲ್ಲರೂ ಕೇಳಿಯೇ ಇರುತ್ತಾರೆ. "ಮೂಕಂ ಕರೋತಿ ವಾಚಾಲಂ ಪಂಗುಂ ಲಂಘಯತೇ ಗಿರಿಂ ಯತ್ಕೃಪಾ ತಮಹಂ ವಂದೇ ಪರಮಾನಂದ ಮಾಧವಂ।" ಪರಮಾನಂದ ಮಾಧವನ ಕೃಪೆಯೊಂದಿದ್ದರೆ ಮೂಕ ಮಾತನಾಡಬಲ್ಲ. ಕುಂಟ ಪರ್ವತವನ್ನೂ ಏರಬಲ್ಲ. ಅಸಾಧ್ಯವಾದುದನ್ನು ಸಾಧಿಸಬಹುದು ಎಂಬುದು ಈ ಶ್ಲೋಕದ ಭಾವಾರ್ಥ. ಪರಮಾತ್ಮನ ದಯೆ ಇರಲಿಲ್ಲ. ಹಾಗಾಗಿ ನಾನು ಜೀವನದಲ್ಲಿ ಏನನ್ನೂ ಸಾಧಿಸಲಾಗಲಿಲ್ಲ ಎಂಬುದು ಬಾಲಿಷದ ಮಾತಾಗುತ್ತದೆ. ಪರಮಾತ್ಮನ ದಯೆ ಕೂಡಿ ಬರಬೇಕಾದರೆ ವ್ಯಕ್ತಿಯ ಸ್ವ ಪ್ರಯತ್ನ, ಹಠಸಾಧನೆಯೂ ಬೇಕಾಗುತ್ತದೆ.

ಈ ಬಾರಿಯ ಪ್ಯಾರಾ ಒಲಿಂಪಿಕ್ಸ್‌ನಲ್ಲಿ ಪಾಯಲ್ ನಾಗ್ ಎಂಬ 18ರ ಹರೆಯದ ಯುವತಿ ಆರ್ಚರಿ ವಿಭಾಗದಲ್ಲಿ ವಿಶ್ವ ಚಾಂಪಿಯನ್ ಆದ ವಿದ್ಯಮಾನ ನೆನಪಿಸಿಕೊಂಡರೆ ಮನುಷ್ಯನಿಗೆ ಅಸಾಧ್ಯವಾದುದು ಯಾವುದು ಇಲ್ಲ ಎನಿಸುತ್ತದೆ. ಅಥವಾ ಮನಸ್ಸು ಮಾಡಿದರೆ ಯಾವುದೂ ಕೂಡ ಅಸಾಧ್ಯವಲ್ಲ ಎನಿಸುವುದು ಸಹಜ. ಪ್ಯಾರಾ ಒಲಿಂಪಿಕ್ಸ್ ಎಂದರೇನೇ ಅಂಗವಿಕಲತೆಯಿರುವ ಕ್ರೀಡಾಪಟುಗಳಿಗಾಗಿ ಏರ್ಪಡಿಸಲಾಗುವ ಜಾಗತಿಕ ಮಟ್ಟದ ಕ್ರೀಡಾಕೂಟ. ಈ ಕೂಟದ ಆರ್ಚರಿ ವಿಭಾಗದಲ್ಲಿ ಪಾಯಲ್ ನಾಗ್ ಸ್ಪರ್ಧಿಸಿದ್ದಳು. ಭಾರತದವಳೇ ಆದ ಶೀತಲ್ ದೇವಿಯನ್ನು ಸೋಲಿಸಿ ವಿಶ್ವ ಚಾಂಪಿಯನ್ ಆದಳು.

ಇದಿಷ್ಟೇ ವಿವರಣೆಯಿಂದ ನಿಮಗೆ ಈ ಪ್ರಸಂಗದಲ್ಲಿ ಯಾವ ಕುತೂಹಲವೂ ಉಂಟಾಗದು ಎಂಬುದು ನನಗೂ ಗೊತ್ತು. ಅಸಲಿ ವಿಷಯವೇನೆಂದರೆ ಸ್ಪರ್ಧೆಯಲ್ಲಿ ಚಿನ್ನದ ಪ್ರಶಸ್ತಿ ಪಡೆದ ಪಾಯಲ್ ನಾಗ್‌ಗೆ ಎರಡೂ ಕೈಗಳಿಲ್ಲ . ಎರಡೂ ಕಾಲುಗಳಿಲ್ಲ. ಕೈ ಕಾಲು ನೆಟ್ಟಗಿದ್ದವರೇ ಬಿಲ್ಲನ್ನು ಹೆದೆ ಏರಿಸಿ ಗುರಿಗೆ ಬಾಣ ಬಿಡುವುದು ಸುಲಭವಲ್ಲ, ಇನ್ನು ಕೈಕಾಲು ಎರಡೂ ಇಲ್ಲದ ಪಾಯಲ್ ನಾಗ್ ಅದು ಹೇಗೆ ಗುರಿಯಡೆಗೆ ಬಾಣ ಬಿಟ್ಟು ವಿಶ್ವ ಪ್ರಶಸ್ತಿ ಪಡೆದಳು ಎಂಬ ಕುತೂಹಲ ಸಹಜ. ಅದೇ ಎಲ್ಲರಿಗೂ ಸ್ಫೂರ್ತಿ ತುಂಬುವ, ಬೆರಗಾಗುವ ಕಥೆ . ಈಕೆಯ ಕಥೆ ನಿಮಗೆ ಸ್ಫೂರ್ತಿ ತುಂಬದಿದ್ದರೆ ಬಹುಶಃ ಬೇರಾವುದೂ ಸ್ಫೂರ್ತಿ ತುಂಬಲಿಕ್ಕಿಲ್ಲ. ಸಾಧಿಸುವ ಛಲವಿದ್ದರೆ ಸಾಧನೆಗೆ ಅಸಾಧ್ಯವಾದದ್ದು ಯಾವುದೂ ಇಲ್ಲ ಎಂಬುದನ್ನು ಭಾರತದ ಪ್ಯಾರಾ ಆರ್ಚರಿ ಪಟು, ಎರಡು ಕೈ, ಎರಡೂ ಕಾಲುಗಳಿಲ್ಲದ ಪಾಯಲ್ ನಾಗ್ ಸಾಧಿಸಿ ತೋರಿಸಿ ಜಗತ್ತನ್ನೇ ಬೆರಗಾಗಿಸಿದ್ದಾಳೆ.

ಒಡಿಶಾದ ಪಾಯಲ್ ನಾಗ್ ಹುಟ್ಟುವಾಗ ಸಾಮಾನ್ಯ ಮಕ್ಕಳಂತೆಯೇ ಹುಟ್ಟಿದಳು. ಹಾಗೆಯೇ ತಂದೆ ದಿನಗೂಲಿ ಗಾರೆ ಕೆಲಸದವರು. ಪಾಯಲ್‌ಗೆ ಎಂಟು ವರ್ಷವಿದ್ದಾಗ ಕಾಮಗಾರಿ ನಡೆಯುತ್ತಿದ್ದ ಮನೆಯೊಂದರ ಟೆರೆಸ್ ನಲ್ಲಿ ನಿಂತಿದ್ದ ನೀರಿನಲ್ಲಿ ಆಟವಾಡುತ್ತಿದ್ದಳು. ಆಗ ವಿದ್ಯುತ್ ಅವಘಡಕ್ಕೆ ತುತ್ತಾದ ಪಾಯಲ್ ಜೀವಕ್ಕೆ ಅಪಾಯ ಕಾದಿತ್ತು. ಆಕೆಯನ್ನು ಪ್ರಾಣಾಪಾಯದಿಂದ ಪಾರು ಮಾಡಲು ವೈದ್ಯರು ಪಾಯಲ್‌ಳ ಎರಡೂ ಕೈ ಹಾಗೂ ಎರಡೂ ಕಾಲುಗಳನ್ನು ಕತ್ತರಿಸಿ ತೆಗೆದಿದ್ದರು. ಇದಾದ ಬಳಿಕ ಆಕೆಯ ತಂದೆ, ತಾಯಿ ಪಾಯಲ್‌ಳನ್ನು ಅನಾಥಾಶ್ರಮಕ್ಕೆ ಸೇರಿಸಿದ್ದರು.



ತನ್ನದಲ್ಲದ ತಪ್ಪಿಗೆ ತನ್ನೆರಡು ಕೈ, ಕಾಲುಗಳನ್ನು ಕಳೆದುಕೊಂಡು ನರಕಯಾತನೆ ಅನುಭವಿಸುತ್ತಿದ್ದ ಪಾಯಲ್‌ಗೆ ಸಾಂತ್ವನ ಹೇಳಿ, ಭರವಸೆ ಕೊಟ್ಟವರೇ ಕಡಿಮೆ. ನೆರೆಹೊರೆಯವರು, ಕುಟುಂಬಸ್ಥರು ಚುಚ್ಚು ಮಾತುಗಳನ್ನಾಡಿದ್ದೇ ಹೆಚ್ಚು. 'ಅವಳಾಗಿಯೇ ನಡೆದಾಡಲು, ತಿನ್ನಲು ಸಾಧ್ಯವಿಲ್ಲ. ಇದಕ್ಕಿಂತ ಅವಳಿಗೆ ವಿಷ ಕೊಡುವುದೇ ಉತ್ತಮ' ಎಂದು ಕುಟುಂಬಸ್ಥರು ಪಾಯಲ್ ಪೋಷಕರಿಗೆ ಹೇಳಿದ್ದರಂತೆ.

ಬಾಲಂಗೀರ್‌ನ ಅನಾಥಾಲಯದಲ್ಲಿದ್ದ ಪಾಯಲ್ ನಾಗ್ ಬಾಯಿಯಲ್ಲಿ ಕುಂಚ ತುರುಕಿಕೊಂಡು ಚಿತ್ರ ಬರೆಯತೊಡಗಿದಳು. ಯಾರನ್ನಾದರೂ ಒಮ್ಮೆ ನೋಡಿದರೆ ಅವರಂತೆಯೇ ತದ್ರೂಪ ಚಿತ್ರವನ್ನು ಬಾಯಿಯಿಂದಲೇ ಬಿಡಿಸ ತೊಡಗಿದಳು. ಇಂತಹುದೊಂದು ಚಿತ್ರ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಯಿತು. ಅದನ್ನು ಗಮನಿಸಿದ ಜಮ್ಮುವಿನ ಮಾತಾ ವೈಷ್ಣೋ ದೇವಿ ಆರ್ಚರಿ ಅಕಾಡೆಮಿಯ ಕೋಚ್ ಕುಲ್ದೀಪ್ ವೆದ್ವಾನ್ ನೇರವಾಗಿ ಬಾಲಂಗೀರ್‌ಗೆ ಬಂದು ಪಾಯಲ್ ನಾಗ್‌ಳನ್ನು ಕರೆದುಕೊಂಡು ಹೋಗಿ, ತನ್ನ ಅಕಾಡೆಮಿಗೆ ಸೇರಿಸಿಕೊಂಡರು. ಆರ್ಚರಿ ವಿದ್ಯೆಯಲ್ಲಿ ಆಕೆಯನ್ನು ತರಬೇತುಗೊಳಿಸಲು ಸಿದ್ಧರಾದರು. ನಿಜ ಹೇಳಬೇಕೆಂದರೆ, ಪಾಯಲ್‌ಗೆ ಬಿಲ್ವಿದ್ಯೆ, ಬಾಣ ಬಿಡುವುದು ಎಂದರೇನೆಂಬುದೇ ಗೊತ್ತಿರಲಿಲ್ಲ. ಕೈಕಾಲುಗಳಿಲ್ಲದ ತಾನು ಈ ವಿದ್ಯೆ ಕಲಿಯಲು ಸಾಧ್ಯವೆ? ಎಂಬ ಅನುಮಾನವೂ ಕಾಡಿತ್ತು. ಆದರೆ ಕೋಚ್ ಕುಲ್ದೀಪ್ ಬಿಡಬೇಕಲ್ಲ. 'ನಿನ್ನಿಂದ ಇದು ಸಾಧ್ಯ. ಪ್ರಯತ್ನಿಸುತ್ತಾ ಹೋಗು. ಒಂದು ದಿನ ನೀನು ಚಾಂಪಿಯನ್ ಆಗ್ತೀಯಾ' ಎಂದು ಆತ್ಮವಿಶ್ವಾಸ ತುಂಬಿ ಹುರಿದುಂಬಿಸಿದರು. ಏಕೆಂದರೆ ಅದಕ್ಕೂ ಮೊದಲು ಎರಡೂ ಕೈಗಳಿಲ್ಲದ ಶೀತಲ್ ದೇವಿ ಎಂಬ 19ರ ಯುವತಿಯನ್ನು ಆರ್ಚರಿಯಲ್ಲಿ ತರಬೇತುಗೊಳಿಸಿ ಅವರು ಯಶಸ್ವಿಯಾಗಿದ್ದರು.

ಪಾಯಲ್ ನಾಗ್‌ಗೋಸ್ಕರ ಕೋಚ್ ಕುಲ್ದೀಪ್ ವಿಶೇಷ ಉಪಕರಣವೊಂದನ್ನು ಸಜ್ಜುಗೊಳಿಸಿದರು. ಆ ಉಪಕರಣ ಬಳಸಿ ಪಾಯಲ್ ಎದೆಯಿಂದ ಬಾಣಮೀಟಿ ಗುರಿಯೆಡೆಗೆ ಹೊಡೆಯುವಂತೆ ತರಬೇತಿ ನೀಡಿದರು. ಪಾಯಲ್ ನಾಗ್ ಸೋದರಿ ವರ್ಷ ನಾಗ್ ತನ್ನ ತಂಗಿಯ ಜೊತೆಗಿದ್ದು ಆಕೆಯ ದಿನನಿತ್ಯದ ಅವಶ್ಯಕತೆಗಳನ್ನು ನೋಡಿಕೊಳ್ಳುತ್ತಿದ್ದಳು. ಕುಲ್ದೀಪ್ ತುಂಬಿದ ಆತ್ಮವಿಶ್ವಾಸ, ಸ್ಫೂರ್ತಿ ಹುಸಿಯಾಗಲಿಲ್ಲ. ನೋಡ ನೋಡುತ್ತಿದ್ದಂತೆ ಪಾಯಲ್ ನಾಗ್ ಕೈಕಾಲುಗಳಿಲ್ಲದೆಯೇ ಆರ್ಚರಿಯಲ್ಲಿ ಅಚ್ಚರಿಯ ಸಾಧನೆ ಮಾಡತೊಡಗಿದಾಗ ಸಂತಸ ಪಡುವ ಸರದಿ ಕುಲ್ದೀಪ್ ರದಾಗಿತ್ತು. ನಂತರದ ಕಥೆ ಈಗ ಇತಿಹಾಸ. ಬ್ಯಾಂಕಾಕ್‌ನಲ್ಲಿ ನಡೆದ ಚೊಚ್ಚಲ ಆವೃತ್ತಿಯ ವಿಶ್ವ ಪ್ಯಾರಾ ಆರ್ಚರಿ ಸೀರೀಸ್‌ನ ಮಹಿಳೆಯರ ಕಾಂಪೌಂಡ್ ವೈಯಕ್ತಿಕ ವಿಭಾಗದಲ್ಲಿ ಪಾಯಲ್ ವಿಶ್ವ ಚಾಂಪಿಯನ್ ಪಟ್ಟಕ್ಕೇರಿದ್ದಾಳೆ. 139-136 ಅಂಕಗಳಿಂದ ಈ ಸಾಧನೆ ಮಾಡಿದ್ದಾಳೆ.

ಅರ್ಹತಾ ಸುತ್ತಿನಲ್ಲಿ ಶೀತಲ್‌ಗಿಂತ 20 ಅಂಕ ಕಡಿಮೆ (678- 698) ಅಂಕ ಗಳಿಸಿದ್ದ ಪಾಯಲ್ ಫೈನಲ್‌ನಲ್ಲಿ ಅಮೋಘ ಪ್ರದರ್ಶನ ನೀಡಿ ಗೆದ್ದಿದ್ದಾಳೆ. ಇದೇ ಟೂರ್ನಿಯಲ್ಲಿ ಶೀತಲ್- ಪಾಯಲ್ ಜೊತೆಗೂಡಿ ಮಹಿಳಾ ತಂಡ ವಿಭಾಗದಲ್ಲಿ ಚಿನ್ನ ಗೆದ್ದಿದ್ದರು. ಅಂದ ಹಾಗೆ, 18ರ ಪಾಯಲ್‌ಗೆ ಇದು ಶೀತಲ್ ವಿರುದ್ಧ ಎರಡನೇ ಗೆಲುವು. 2025ರ ರಾಷ್ಟ್ರೀಯ ಟೂರ್ನಿಯಲ್ಲಿ ಶೀತಲ್ ರನ್ನು ಪಾಯಲ್ ಸೋಲಿಸಿದ್ದರು.

ಪಾಯಲ್ ಸೋಲಿಸಿದ ಶೀತಲ್‌ದೇವಿಯ ಬದುಕಿನ ಕಥೆಯೂ ಕಡಿಮೆ ರೋಚಕತೆಯದೇನಲ್ಲ. 2007ರಲ್ಲಿ ಜಮ್ಮು ವಲಯದ ಕಿಶ್ತ್‌ವಾರ್‌ನ ಲೋಯಿಧರ್ ಎಂಬ ಊರಿನಲ್ಲಿ ಜನಿಸಿದ ಶೀತಲ್ ದೇವಿಗೆ ಹುಟ್ಟುವಾಗಲೇ ಎರಡೂ ಕೈಗಳಿರಲಿಲ್ಲ. ಭಾರತೀಯ ಸೇನೆಯ 'ರಾಷ್ಟ್ರೀಯ ರೈಫಲ್ ಘಟಕ' ಶೀತಲ್ ದೇವಿಯ ಪ್ರತಿಭೆಯನ್ನು ಗುರುತಿಸಿ ಆಕೆಯ ವಿದ್ಯಾಭ್ಯಾಸಕ್ಕೆ ನೆರವು ನೀಡಿತು. ಬೆಂಗಳೂರಿನಲ್ಲಿ ಆಕೆಗೆ ವೈದ್ಯಕೀಯ ನೆರವು ಕಲ್ಪಿಸಲಾಯಿತು. ಜಮ್ಮುವಿಗೆ ಮರಳಿದ ಬಳಿಕ ಶ್ರೀಮಾತಾ ವೈಷ್ಣೋದೇವಿ ಶ್ರೈನ್ ಬೋರ್ಡ್ ಸ್ಪೋರ್ಟ್ಸ್ ಕಾಂಪ್ಲೆಕ್ಸ್ ಆಕೆಯನ್ನು ಕೈಬೀಸಿ ಕರೆಯಿತು. ಅಭಿಲಾಷ್ ಚೌದರಿ ಮತ್ತು ಕುಲ್ದೀಪ್ ವೇದ್ವಾನ್ ಇಬ್ಬರು ಕೋಚ್‌ಗಳು ಆಕೆಗೆ ಧೈರ್ಯ ತುಂಬಿ ಆರ್ಚರಿಯಲ್ಲಿ ತರಬೇತಿ ನೀಡಿದರು. ಕೈಗಳಿಲ್ಲದ ಕ್ರೀಡಾಳುಗಳನ್ನು ಅದುವರೆಗೆ ಅವರು ತರಬೇತುಗೊಳಿಸಿರಲಿಲ್ಲ. 11 ತಿಂಗಳ ತರಬೇತಿಯ ಬಳಿಕ ಶೀತಲ್ ದೇವಿ 2022ರ ಏಷಿಯನ್ ಪ್ಯಾರಾ ಗೇಮ್ಸ್‌ನ ಮಹಿಳೆಯರ ಕಾಂಪೌಂಡ್ ಚೌ ಇವೆಂಟ್‌ನಲ್ಲಿ ಸ್ಪರ್ಧಿಸಿ ಭಾರತಕ್ಕೆ ಮೊತ್ತ ಮೊದಲು ಎರಡು ಚಿನ್ನದ ಪದಕ ಗೆದ್ದು ಕೊಟ್ಟಿದ್ದಳು. ಅನಂತರ ಮುಟ್ಟಿದ್ದೆಲ್ಲವೂ ಚಿನ್ನ. ಶೀತಲ್ ದೇವಿ ಹಿಂತಿರುಗಿ ನೋಡಿದ್ದೇ ಇಲ್ಲ. 2024ರಲ್ಲಿ ರಾಷ್ಟ್ರಪತಿಗಳಿಂದ ಅರ್ಜುನ ಅವಾರ್ಡ್ ಕೂಡ ಪಡೆದಳು. 2025ರಲ್ಲಿ ವರ್ಲ್ಡ್ ಪ್ಯಾರಾ ಆರ್ಚರಿ ಚಾಂಪಿಯನ್ ಶಿಪ್‌ಗೂ ಭಾಜನಳಾದಳು. ಇದೀಗ 2026ರಲ್ಲಿ ತನ್ನದೇ ದೇಶದ ಕೈಕಾಲುಗಳೆರಡು ಇಲ್ಲದ ಪಾಯಲ್ ನಾಗ್ ವಿರುದ್ಧ ಸೋತರೂ ಶೀತಲ್ ದೇವಿಗೆ ಅದೇನೋ ಸಂತಸ, ಹೆಮ್ಮೆ. ಕೈಕಾಲುಗಳೆರಡೂ ಇಲ್ಲದ ಪಾಯಲ್ ನಾಗ್ ಸಾಧನೆ ಬಗ್ಗೆ ಅತೀವ ಅಭಿಮಾನ. ಆಕೆ ನನ್ನ ನಿಜವಾದ ಸೋದರಿ ಎನ್ನುತ್ತಾಳೆ ಶೀತಲ್ ದೇವಿ. ಶೀತಲ್ ದೇವಿಗೆ ಕೈಗಳಿಲ್ಲ. ಪಾಯಲ್ ನಾಗ್‌ಗೆ ಕೈಕಾಲುಗಳೆರಡೂ ಇಲ್ಲ. ಆದರೆ ಸಾಧನೆಗೆ ಈ ಕೊರತೆಗಳು ಅಡ್ಡಿಯಾಗಲಿಲ್ಲ. ಆಕೆಗೆ ವಿಷ ಕೊಟ್ಟು ಬಿಡಿ ಎಂದು ಛೇಡಿಸಿದ ಕೆಲವರಿಗೆ ಈಗ ಆಕೆಯ ಸಾಧನೆ ನೋಡಿ ಹೇಗನಿಸಿರಬಹುದು?

ಹರೆಯದವರಲ್ಲಿ ಖಿನ್ನತೆ (Adolescent Depression)

ತಾರುಣ್ಯ ತಲ್ಲಣ
• ಡಾ.ಕೆ,ಆರ್, ಶ್ರೀಧರ್
drkrsridhar208@gmail.com



ದೊಡ್ಡವರು ಮಾತ್ರ ಖಿನ್ನತೆಯಿಂದ ಬಳಲುತ್ತಾರೆ. ಹರೆಯದವರಲ್ಲಿ ಖಿನ್ನತೆ ಕಾಣಿಸುವುದಿಲ್ಲ ಎಂಬ ಕಾಲವೊಂದಿತ್ತು. ಮನೋವೈದ್ಯಕೀಯದಲ್ಲಿ ಆವಿಷ್ಕಾರಗಳನ್ನು ಕೈಗೊಂಡಾಗ ಮಕ್ಕಳು ಮತ್ತು ಹರೆಯದವರೂ ಖಿನ್ನತೆಯಿಂದ ಬಳಲುತ್ತಾರೆ, ಆದರೆ ಅದರ ಸ್ವರೂಪ ಸ್ವಲ್ಪ ಬೇರೆಯಾಗಿರುತ್ತದೆ ಎಂಬುದು ತಿಳಿದುಬಂತು. ಹರೆಯದವರಲ್ಲಿ ಉಂಟಾಗುವ ಖಿನ್ನತೆಯಿಂದ ವಿದ್ಯಾರ್ಥಿಗಳು ಕಲಿಕೆಯಲ್ಲಿ ಹಿಂದುಳಿಯುತ್ತಾರೆ. ಸಾಮಾಜಿಕ ಸಂಬಂಧಗಳಲ್ಲಿ ವ್ಯತ್ಯಾಸವಾಗುತ್ತದೆ. ಅವರ ನಡವಳಿಕೆಯಲ್ಲಿ ವ್ಯತ್ಯಾಸಗಳುಂಟಾಗುತ್ತವೆ. ಇದರಿಂದ ಸಾಧನೆಯಲ್ಲಿ ಹಿಂದುಳಿದು, ಅವರ ಭವಿಷ್ಯವೇ ಕುಂಠಿತವಾಗುತ್ತದೆ. ಅದೇ ಕಾರಣದಿಂದ ಮಕ್ಕಳ ಸಹಜ ನಡವಳಿಕೆ ಗಳಲ್ಲಿ ವ್ಯತ್ಯಾಸಗಳು ಕಂಡಾಗ ಪೋಷಕರು ಅದನ್ನು ಗಮನಿಸಿ, ಸಾಮಾಜಿಕ ಪ್ರತಿಷ್ಠೆಯನ್ನು ಬದಿಗಿಟ್ಟು ಆ ಕೂಡಲೇ ಕ್ರಮ ತೆಗೆದುಕೊಂಡರೆ ಅಂಥವರ ಭವಿಷ್ಯವು ಹಸನಾಗುತ್ತದೆ.

ಅಂಕಿ ಅಂಶಗಳ ಪ್ರಕಾರ ಶೇಕಡಾ ಮೂರರಿಂದ ನಾಲ್ಕು ಮಂದಿ ಹರೆಯದವರು ಖಿನ್ನತೆಗೊಳಗಾಗುತ್ತಾರೆ. ಹರೆಯದವರಲ್ಲಿ ಕಾಣುವ ಖಿನ್ನತೆಯು ದೊಡ್ಡವರ ಖಿನ್ನತೆಗಿಂತ ಸ್ವಲ್ಪ ಭಿನ್ನವಾಗಿರುತ್ತದೆ. ಖಿನ್ನತೆಯು ಅವರ ಯೋಚನೆಗಳನ್ನು, ಭಾವನೆಗಳನ್ನು, ನಡವಳಿಕೆಗಳನ್ನು, ಕಲಿಕೆ, ಪಠ್ಯೇತರ ಚಟುವಟಿಕೆಗಳು, ದೈಹಿಕ ಲಕ್ಷಣಗಳು, ದೈನಂದಿನ ಚಟುವಟಿಕೆಗಳು ಹೀಗೆ ಜೀವನದ ಎಲ್ಲ ಆಯಾಮಗಳನ್ನು ವ್ಯತ್ಯಾಸಗೊಳಿಸುತ್ತದೆ. ಮೊದಲು ಸಮಾಧಾನದಿಂದಿರುತ್ತಿದ್ದವರು ಒಮ್ಮೆಲೆ ಕಿರಿ ಕಿರಿ, ಅಸಹನೆ ತೋರಿಸಬಹುದು. ತಮ್ಮನ್ನು ಬೇರೆಯವರು ಕೀಳಾಗಿ ಕಾಣುತ್ತಾರೆ ಎಂದು ತಪ್ಪಾಗಿ ಭಾವಿಸಬಹುದು. ಓದಿನಲ್ಲಿ ಏಕಾಗ್ರತೆಯ ಕೊರತೆ, ಪಾಠಗಳ ಕುರಿತು ಅಸಹನೆ ತೋರಿಸಬಹುದು. ಓದುವುದನ್ನು ವಿನಾಕಾರಣ ಮುಂದೆ ಹಾಕಬಹುದು. ಎಲ್ಲದರಲ್ಲೂ ನಿರಾಸಕ್ತಿ. ಮೊದಲಿಗೆ ಶಾಲೆಯ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದ ವ್ಯಕ್ತಿಯು ಆಸಕ್ತಿ ಕಳೆದುಕೊಂಡು ಅವುಗಳಿಂದ ದೂರವಿರಲು ಪ್ರಾರಂಭಿಸುತ್ತಾನೆ. ಗೆಳೆಯರೊಂದಿಗೆ ಬೆರೆಯುತ್ತಿದ್ದ ವ್ಯಕ್ತಿ ಈಗ ಅವರಿಂದ ದೂರವಿದ್ದು, ಯಾವಾಗಲೂ ಒಂಟಿಯಾಗಿರಲು ಬಯಸುತ್ತಾನೆ. ಕೆಲವೊಮ್ಮೆ ಕೋಪಗೊಳ್ಳಬಹುದು. ನಕಾರಾತ್ಮಕ ಭಾವನೆಗಳೇ ಮನಸ್ಸಿನಲ್ಲಿ ತುಂಬಿ ತುಳುಕಾಡುತ್ತಿರುತ್ತವೆ. ಹಸಿವಿಲ್ಲದಿರಬಹುದು, ನಿದ್ದೆಯಲ್ಲಿ ವ್ಯತ್ಯಾಸವಾಗುತ್ತದೆ. ಕೆಲವರು ರಾತ್ರಿ ನಿದ್ದೆ ಮಾಡುವುದಿಲ್ಲ. ಮತ್ತೆ ಕೆಲವರು ದಿನವಿಡೀ ನಿದ್ದೆ ಬರದಿದ್ದರೂ, ಜಡಭರಿತವಾಗಿ ಹಾಸಿಗೆಯ ಮೇಲೆ ಬಿದ್ದುಕೊಳ್ಳುತ್ತಾರೆ. ಹಸಿವೆ ಇಲ್ಲ ಎಂದು ಊಟ ಮಾಡದೇ ಇರಬಹುದು. ಇದರಿಂದ ದೇಹದ ತೂಕ ಇಳಿದು ದೇಹ ಸಣಕಲಾಗಬಹುದು. ಖಿನ್ನತೆಯು ತೀವ್ರವಾದರೆ, ತಾನು ನಿರುಪಯೋಗಿ, ಅಸಹಾಯಕ, ತನ್ನನ್ನು ಯಾರೂ ಗುರುತಿಸುವುದಿಲ್ಲ ಎಂಬ ನಕಾರಾತ್ಮಕ ಭಾವನೆಗಳಿಂದ ನರಳುತ್ತಾನೆ. ಖಿನ್ನತೆಯು ತೀವ್ರವಾಗಿ ನಕಾರಾತ್ಮಕ ಭಾವನೆಗಳೇ ಮನಸ್ಸನ್ನು ಆವರಿಸಿದಾಗ, ಕೊನೆಯ ಹಂತವೆಂಬಂತೆ ಆತ್ಮಹತ್ಯೆಗೆ ಪ್ರಯತ್ನಿಸಬಹುದು ಅಥವಾ ಆತ್ಮಹತ್ಯೆ ಮಾಡಿಕೊಳ್ಳಬಹುದು.



ಕೆಲವರಿಗೆ ವಿನಾಕಾರಣ ಮೈಕೈ ನೋವು, ತಲೆ ನೋವು, ಮೈ ಜುಂ ಎನ್ನುವುದು, ಕೈಕಾಲು ಸೋಲು, ಸುಸ್ತು, ಹಲವು ವಿಧದ ಶಾರೀರಿಕ ಲಕ್ಷಣಗಳು ಕಾಣಿಸಿಕೊಳ್ಳಬಹುದು. ಇದಕ್ಕೆ ಮಾಸ್ಕಡ್ ಡಿಪ್ರೆಷನ್ (Masked Depression) ಎನ್ನುತ್ತಾರೆ.

ಹರೆಯದವರ ಖಿನ್ನತೆಗೆ ಕಾರಣಗಳು ಹಲವು. ವಂಶಾವಳಿಯನ್ನು ನೋಡಿದಾಗ ಖಿನ್ನತೆಗೊಳಗಾದವರ ಕುಟುಂಬಗಳಲ್ಲಿ ತಂದೆ-ತಾಯಿ ಇಬ್ಬರೂ ಖಿನ್ನತೆಯಿಂದ ನರಳುತ್ತಿದ್ದರೆ, ಅಂತಹ ಕುಟುಂಬಗಳಲ್ಲಿ ಹರೆಯದವರು ಖಿನ್ನತೆಗೊಳಗಾಗುವುದು ಹೆಚ್ಚು. ಮಿದುಳಿನಲ್ಲಿರುವ 5 ಹೆಚ್.ಟಿ. ಮತ್ತು ನಾರ್ ಅಡ್ರಿನಾಲಿನ್ ಎಂಬ ನರವಾಹಕಗಳ ನ್ಯೂನತೆಯು ಹರೆಯದವರ ಖಿನ್ನತೆಗೆ ಒಂದು ಮುಖ್ಯ ಕಾರಣ. ಕಲುಷಿತವಾದ ಕೌಟುಂಬಿಕ ವಾತಾವರಣದಿಂದ ಹರೆಯದವರು ಖಿನ್ನತೆಗೆ ಒಳಗಾಗುವುದು ಹೆಚ್ಚು. ಕುಟುಂಬದ ಸದಸ್ಯರ ನಡುವೆ ಆತ್ಮೀಯತೆಯ ಕೊರತೆ, ತಿರಸ್ಕಾರ ಮನೋಭಾವ, ದಾಂಪತ್ಯ ಸಮಸ್ಯೆಗಳು, ವಿವಾಹ ವಿಚ್ಛೇದನ, ಕೌಟುಂಬಿಕ ಹಿಂಸೆ, ಪೋಷಕರ ಅತಿಯಾದ ಟೀಕೆ ಟಿಪ್ಪಣಿಗಳು, ಮಿತಿಇಲ್ಲದ ನಿರೀಕ್ಷೆ, ಸಹಪಾಠಿಗಳೊಂದಿಗೆ ಹೋಲಿಸಿ ಪದೇ ಪದೇ ಟೀಕೆ ಮಾಡುವುದು ಮತ್ತು ಭೇದಭಾವ ಎಣಿಸುವ ಸದಸ್ಯರು ಇವೂ ಖಿನ್ನತೆಗೆ ಕಾರಣ. ಸಾಮಾಜಿಕವಾಗಿ ಗೆಳೆಯರ ಟೀಕೆ, ಟಿಪ್ಪಣಿಗಳು, ಕೆಟ್ಟ ಬೈಗುಳಗಳು, ಮಾಡುವ ದೂಷಣೆಗಳು ಖಿನ್ನತೆಯನ್ನುಂಟು ಮಾಡಬಹುದು. ಕೆಲವು ಸಂದರ್ಭಗಳಲ್ಲಿ ಸ್ನೇಹಿತರು ತಮ್ಮ ಗುಂಪಿನಿಂದ ವ್ಯಕ್ತಿಯನ್ನು ದೂರ ಮಾಡಿದಾಗ ಖಿನ್ನತೆ ಉಂಟಾಗಬಹುದು.

ಪರೀಕ್ಷೆಯಲ್ಲಿ ವಿಫಲತೆ, ನಿರೀಕ್ಷಿತ ಫಲಿತಾಂಶ ಬಾರದೇ ಇರುವುದು, ಮತ್ತು ಇದರ ಕುರಿತು ಇತರರ ಅವಹೇಳನದ ಮಾತುಗಳು ಹರೆಯದವರು ಖಿನ್ನತೆಗೊಳಗಾಗಲು ಕಾರಣ. ಕೀಳರಿಮೆ, ಚಿಕ್ಕ ಪುಟ್ಟದಕ್ಕೂ ಭಾವನೆಗಳ ಏರಿಳಿತಕ್ಕೊಳಗಾಗುವುದು, ತಾನು ಒಂಟಿ, ತಾನು ಅಸಹಾಯಕ ತನ್ನನ್ನು ಯಾರೂ ಕೇಳುವುದಿಲ್ಲ, ಎಲ್ಲರೂ ತನ್ನನ್ನು ಅಲಕ್ಷ್ಯ ಮಾಡುತ್ತಾರೆ, ತಾನು ದಡ್ಡ, ತಾನು ಬಲಹೀನ, ಆತ್ಮವಿಶ್ವಾಸದ ಕೊರತೆ ಹೀಗೆ ನಕಾರಾತ್ಮಕ ಭಾವನೆಗಳು ಮನಸ್ಸಿನಲ್ಲಿ ತುಂಬಿಕೊಂಡಾಗ ಖಿನ್ನತೆಯುಂಟಾಗುವ ಸಂಭವ ಹೆಚ್ಚು. ಕೆಲವು ದೀರ್ಘಾವಧಿಯ ಕಾಯಿಲೆಗಳು, ಉದಾಹರಣೆಗೆ ಅಪಸ್ಮಾರ, ದಮ್ಮು ಕಾಯಿಲೆ, ಕಲಿಕಾ ತೊಂದರೆಗಳು ಇವು ಹರೆಯದವರಲ್ಲಿ ತಮ್ಮ ಕುರಿತು ಕೀಳರಿಮೆ ಉಂಟುಮಾಡಿ, ಅದು ಖಿನ್ನತೆಗೆ ಕಾರಣವಾಗುತ್ತದೆ. ಪೋಷಕರಿಂದ ಪ್ರೋತ್ಸಾಹಕ ನುಡಿಗಳು, ಆತ್ಮೀಯ ಮಾರ್ಗದರ್ಶನ ದೊರೆಯದಿದ್ದಾಗ ಮನಸ್ಸು ಖಿನ್ನತೆಗೊಳಗಾಗುತ್ತದೆ.

ಪ್ರಚಲಿತ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳಾದ ವಾಟ್ಸ್ಆ್ಯಪ್, ಫೇಸ್‌ಬುಕ್, ಯೂಟ್ಯೂಬ್, ಇನ್‌ಸ್ಟಾಗ್ರಾಂ, ಟ್ವಿಟರ್ ಇತ್ಯಾದಿ, ಇವು ಹರೆಯದವರ ಮನಸ್ಸಿನ ಮೇಲೆ ಉಂಟುಮಾಡುವ ನಕಾರಾತ್ಮಕ ಭಾವನೆಗಳಿಂದ ಖಿನ್ನತೆ ಉಂಟಾಗಬಹುದು. ಸಾಮಾಜಿಕ ಜಾಲತಾಣಗಳ ಮೂಲಕ ಗೆಳೆಯರು ಪದೇ ಪದೇ ಬೈಗುಳದ ಸಂದೇಶ ಕಳಿಸುವುದು, ಮನಸ್ಸನ್ನು ಘಾಸಿಗೊಳಿಸುವ ದೃಶ್ಯಗಳನ್ನು ಪೋಸ್ಟ್ ಮಾಡುವುದು ಇವು ಹರೆಯದವರ ಸೂಕ್ಷ್ಮ ಮನಸ್ಸನ್ನು ಅಲ್ಲೋಲ ಕಲ್ಲೋಲಗೊಳಿಸಿ ಖಿನ್ನತೆಗೆ ಕಾರಣವಾಗಬಹುದು. ಪೋಷಕರ ಅತಿಯಾದ ನಿರೀಕ್ಷೆ, ತೀವ್ರತರದ ಟೀಕೆ ಟಿಪ್ಪಣಿಗಳು, ಇತರರೊಂದಿಗೆ ಹೋಲಿಸಿ ಟೀಕೆ ಮಾಡುವುರಿಂದ ಖಿನ್ನತೆ ಉಂಟಾಗಬಹುದು. ಅತಿಯಾದ ಆತಂಕ, ಭಯದಿಂದ ಬಳಲುವ ಹರೆಯದವರಲ್ಲಿ ಖಿನ್ನತೆ ಉಂಟಾಗುವ ಸಂದರ್ಭಗಳು ಹೆಚ್ಚು.

ಚಿಕಿತ್ಸೆ:

ಹರೆಯದವರ ಮನಸ್ಥಿತಿ ತುಂಬಾ ಸೂಕ್ಷ್ಮವಾದದ್ದು. ಹರೆಯದವರ ಕುರಿತು ಪೋಷಕರಿಗಿರುವ ನಕಾರಾತ್ಮಕ ಧೋರಣೆಯೂ ಅಷ್ಟೇ ಅಪಾಯಕರ. ಒಂದು ಕಡೆ ಮಾನಸಿಕ ಕಾಯಿಲೆ ಕುರಿತು ಇರುವ ಅಜ್ಞಾನ, ತಮ್ಮ ಮಗು ಮಾನಸಿಕ ಕಾಯಿಲೆಯಿಂದ ಬಳಲುತ್ತಿದ್ದಾನೆಂದು ಹೇಳಿದರೆ ಅದರಿಂದ ಅವರ ಭವಿಷ್ಯ ಹಾಳಾಗುತ್ತದೆ ಎಂದು ಕೆಲವರು ಭಾವಿಸುತ್ತಾರೆ. ಖಿನ್ನತೆ ಇದೆ ಎಂಬುದು ಇತರರಿಗೆ ತಿಳಿದರೆ, ಅದು ಒಂದು ಸಾಮಾಜಿಕ ಅವಮಾನ ಎಂಬುದು ಚಿಕಿತ್ಸೆಗೆ ಅಡ್ಡಬರುವ ಕೆಲವು ಅಂಶಗಳು. ಹರೆಯದವರು, 'ನನಗೆ ಬೇಜಾರು', 'ಓದಲಿಕ್ಕೆ ಆಸಕ್ತಿ ಇಲ್ಲ', ನನಗೆ ಕೆಲವೊಮ್ಮೆ ಜೀವನವೇ ಬೇಡ ಅನ್ನುತ್ತೆ, ನನಗೆ ಯಾವ ಗೆಳೆಯರೂ ಬೇಡ, ಒಂಟಿಯಾಗಿ ರೂಮಲ್ಲೇ ಇರೋಣ ಅನಿಸುತ್ತೆ ಎಂದಾಗ ಪೋಷಕರು ಅದನ್ನು ಅರ್ಥ ಮಾಡಿಕೊಳ್ಳುವುದಿಲ್ಲ. ಬದಲಾಗಿ ಯಾಕೆ ಹಾಗೆಲ್ಲಾ ಹೇಳ್ತೀಯಾ, ಹಾಗೆಲ್ಲಾ ಮಾತನಾಡಬಾರದು. ಸುಮ್ಮನೇ ಓದು ಹೋಗು ಎಂದು ಹೇಳುವ ಪೋಷಕರೇ ಹೆಚ್ಚು. ತಮ್ಮ ಮಗುವಿನ ನಡವಳಿಕೆಯಲ್ಲಿ ಇತ್ತೀಚೆಗೆ ವ್ಯತ್ಯಾಸವಾಗಿದೆ, ಮಗು ಹೇಳುವುದರಲ್ಲ ನಿಜವಿರಬಹುದು ಎಂದು ಗಮನಿಸಿ, ಅದಕ್ಕೆ ಆಪ್ತ ಸಲಹೆಯನ್ನು ನೀಡಿ, ಅವಶ್ಯವಿದ್ದಲ್ಲಿ ಚಿಕಿತ್ಸೆ ಕೊಡಿಸೋಣ ಎಂದು ಭಾವಿಸುವ ಪೋಷಕರು ಬೆರಳೆಣಿಕೆಯಷ್ಟು ಎನ್ನಬಹುದು. ಅದಕ್ಕಾಗಿ ಖಿನ್ನತೆಗೆ ಚಿಕಿತ್ಸೆಯನ್ನು ತಿಳಿಸುವ ಮೊದಲು ಈ ಪೀಠಿಕೆ.

ಹರೆಯದವರನ್ನು ಚಿಕಿತ್ಸೆಗಾಗಿ ಕರೆತಂದಾಗ ಖಿನ್ನತೆಗೆ ಕಾರಣವಾದ ಎಲ್ಲ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುವುದು ಮೊದಲ ಹೆಜ್ಜೆ. ಚಿಕಿತ್ಸೆಯಲ್ಲಿ ಪೋಷಕರ ಪಾಲು ಬಹುಮುಖ್ಯ ಎಂಬುದನ್ನು ಅವರಿಗೆ ಮನದಟ್ಟು ಮಾಡಬೇಕು. ಖಿನ್ನತೆಯಿಂದ ನರಳುತ್ತಿರುವ ಹರೆಯದವರು ನಕಾರಾತ್ಮಕ ಯೋಚನೆಗಳಿಂದ ನರಳುತ್ತಿರುತ್ತಾರೆ. ಇದು ಒಂದು ದೊಡ್ಡ ಕಾಯಿಲೆ ಅಲ್ಲ, ಸರಿಯಾದ ಚಿಕಿತ್ಸೆ ಪಡೆದರೆ, ಎಲ್ಲರಂತೆ ನೀನೂ ಚೆನ್ನಾಗಿ ಓದಲು ಸಾಧ್ಯ ಎಂಬುದನ್ನು ರೋಗಿಗೆ ಮನದಟ್ಟು ಮಾಡಿ, ರೋಗಿಯ ಮನಸ್ಸನ್ನು ಗೆಲ್ಲಬೇಕು. ನಂತರದಲ್ಲಿ ಮುಖ್ಯವಾಗಿ ಆಪ್ತ ಸಮಾಲೋಚನೆ ಕೈಗೊಳ್ಳಬೇಕು. ಆಪ್ತ ಸಮಾಲೋಚನೆಯು ರೋಗಿಗೆ ಮತ್ತು ಪೋಷಕರಿಗೆ ಇಬ್ಬರಿಗೂ ಅವಶ್ಯ. ಖಿನ್ನತೆಯು ತೀವ್ರವಾಗಿದ್ದಲ್ಲಿ ಕೂಡಲೆ ಆಪ್ತಸಮಾಲೋಚನೆಯೊಂದಿಗೆ ಮನೋವೈದ್ಯರಿಂದ ಔಷಧ ಚಿಕಿತ್ಸೆಯು ಅನಿವಾರ್ಯ.

ಬೋರ್ಡ್ ಪರೀಕ್ಷೆಗಳು: ಅಂದು-ಇಂದು!

'ಒಳ್ಳೆಯ ವಿದ್ಯಾ ಸಂಸ್ಥೆಯ ಎಲ್ಲಿ ಹುಡುಕಲಿ?' ಎಂದು ಯಾರಾದರೂ ಕೇಳಿದರೆ, 'ಎಪ್ರಿಲ್-ಮೇ ತಿಂಗಳುಗಳಲ್ಲಿ ಪ್ರದರ್ಶಿಸಲಾಗುವ ಬ್ಯಾನರ್‌ಗಳಲ್ಲಿ ಹುಡುಕು' ಎನ್ನಬಹುದು.

ವಾರದ ವರಸೆ
• ಸಂದೇಶ್ ನಾಯ್ಕ್ ಹಕ್ಲಾಡಿ
naiksh2@gmail.com



ಈ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಗಳನ್ನು ಸಾಮಾನ್ಯವಾಗಿ 'ಬೋರ್ಡ್ ಪರೀಕ್ಷೆ' ಎಂದು ಕರೆಯುವುದು ರೂಡಿ. ಈ ಪರೀಕ್ಷೆಗಳನ್ನು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಸರ್ಕಾರಿ ಬೋರ್ಡ್‌ಗಳಾದ ಎಸ್‌ಎಸ್‌ಎಲ್‌ಸಿ ಬೋರ್ಡ್, ಪಿಯುಸಿ ಬೋರ್ಡ್, ಸಿಬಿಎಸ್‌ಇ ಬೋರ್ಡ್‌ಗಳ ಮೂಲಕ ಏಕರೂಪ ಹಾಗೂ ಏಕಕಾಲದಲ್ಲಿ ನಡೆಸುವುದರಿಂದ ಅವುಗಳನ್ನು 'ಬೋರ್ಡ್ ಪರೀಕ್ಷೆ' ಎಂದು ಕರೆಯಲಾಗುತ್ತದೆ ಇರಬೇಕು. ಆದರೆ ಸದ್ಯದ ಸನ್ನಿವೇಶದಲ್ಲಿ ಅದನ್ನು ಬೋರ್ಡ್ ಪರೀಕ್ಷೆ ಎಂದು ಕರೆಯುವುದು ಸ್ವಲ್ಪ ಕಡಿಮೆಯೇ ಆದರೂ, ಅದೀಗ 'ಬೋರ್ಡ್ ಪರೀಕ್ಷೆ'ಯೇ ಹೌದೇನೋ ಎಂಬ ಅಭಿಪ್ರಾಯ ಬಲವಾಗಲು ಬೇರೆ ಬೇರೆ ಕಾರಣಗಳು ಗೋಚರಿಸುತ್ತವೆ. ಅದರಲ್ಲೊಂದು ಈ ಪರೀಕ್ಷೆಗಳ ಫಲಿತಾಂಶ ಪ್ರಕಟವಾದ ತಕ್ಷಣ ಭಾರೀ ಸಂಖ್ಯೆಯಲ್ಲಿ ಕಾಣಿಸುವ ಬೋರ್ಡ್‌ಗಳು - ಅದೇ ಬ್ಯಾನರ್, ಹೋರ್ಡಿಂಗ್ ಇತ್ಯಾದಿಗಳು! ಹಾಗೆ ನೋಡಿದರೆ ಓರ್ವ ವಿದ್ಯಾರ್ಥಿಯ ಸಾಧನೆ, ವಿದ್ಯಾ ಸಂಸ್ಥೆಯ ಹೆಚ್ಚುಗಾರಿಕೆಗಳೆಲ್ಲವೂ ನಿರ್ಣಯವಾಗುವುದು ಈ ಬೋರ್ಡ್‌ಗಳಿಂದಲೇ ಇರಬೇಕು ಎಂದೆನಿಸುತ್ತದೆ. ಫಲಿತಾಂಶ, ಪರ್ಸಂಟೇಜ್, ರ್‍ಯಾಂಕ್ ಹೋಲ್ಡರ್, ಬೇರೆ ಬೇರೆ ಶ್ರೇಣಿಗಳಲ್ಲಿ ಉತ್ತೀರ್ಣರಾದವರು, ಸಂಸ್ಥೆಯ ವೈಶಿಷ್ಟ್ಯಗಳು ಇನ್ನೊಂದು ಮತ್ತೊಂದು ಎಲ್ಲವೂ ಈ ಬೋರ್ಡ್‌ಗಳಲ್ಲಿ ಅಚ್ಚಾಗಿ, ನೋಡುವವರ ಮನಸ್ಸಿನಲ್ಲಿ ಅಚ್ಚೊತ್ತುವಂತೆ ಪ್ರದರ್ಶಿಸಲಾಗುತ್ತದೆ. ಒಟ್ಟಾರೆ ಈ ಮೂಲಕವಾದರೂ, ತಮ್ಮ ಮಕ್ಕಳನ್ನು ಸೇರಿಸಲು ಒಂದೊಳ್ಳೆಯ ಶಾಲೆಯನ್ನು ಹುಡುಕುತ್ತಿರುವವರ ಮನಸ್ಸಿನಲ್ಲಿ ಇದೇ ಶಾಲೆ 'ಬಹುತ್ ಅಚ್ಚಾ' ಎಂದೆನಿಸುವಂತೆ ಮಾಡುವುದೇ ಈ ಬಹು ಬ್ಯಾನರ್‌ಗಳನ್ನು ಎಲ್ಲೆಂದರಲ್ಲಿ ಹಾಕಿಸುವುದರ ಮೂಲ ಉದ್ದೇಶ.

ಹಾಗೆ ನೋಡಿದರೆ ಮೊದಲಿನಿಂದಲೂ ಶಾಲೆ, ವಿದ್ಯಾಭ್ಯಾಸ, ವಿದ್ಯಾರ್ಥಿಗಳು, ಪರೀಕ್ಷೆ ಹಾಗೂ ಫಲಿತಾಂಶಗಳು ಎಂದರೆ ಅದು ಬೋರ್ಡ್‌ನ್ನೇ ಅವಲಂಭಿಸಿತ್ತು. ಆದರೆ ಅದು ತರಗತಿ ಕೊಠಡಿಯೊಳಗಿರುವ 'ಬ್ಲ್ಯಾಕ್ ಬೋರ್ಡ್' ಆಗಿತ್ತು. ತರಗತಿಯಲ್ಲಿ ಕೀಟಲೆ ಮಾಡಿದವರು, ಮಾತನಾಡಿದವರು, ಮನೆಗೆಲಸ ಮಾಡದವರು ಇನ್ನಿತರರ ಹೆಸರುಗಳು, ಕ್ಲಾಸ್ ಲೀಡರ್‌ನಿಂದ ಪಟ್ಟಿಯ ರೂಪದಲ್ಲಿ ಈ ಬೋರ್ಡ್‌ಗಳ ಮೇಲೆ ಮೂಡುತ್ತಿದ್ದವು.

ಅಯ್ಯೋ ಆ ಬೋರ್ಡ್ ಮೇಲೆ ಯಾರದ್ದಾದರೂ ಹೆಸರು ಹೀಗೆ ಈ ಮೇಲಿನ ಕಾರಣಗಳಿಗೆ ಬರೆಯಲ್ಪಟ್ಟರೆ ಆಗ ಹೆದರುವ ಬೆದರುವ ಸಾಧ್ಯತೆಯೂ ಇತ್ತು. ಪದೇ ಪದೇ ಯಾರ ಹೆಸರು ಅಲ್ಲಿ ಕಾಣಿಸಿಕೊಳ್ಳುತ್ತದೋ ಅಂಥವರ ಪೋಷಕರನ್ನು ಕರೆಸುತ್ತಿದ್ದರೂ ಕೂಡಾ. ಹೀಗಾಗಿ ಆ ಬೋರ್ಡ್ ಮೇಲೆ ಹೆಸರು ಬರದಂತೆ, ಶಾಲೆಗೆ ಹೋಗಿ ಬರಬೇಕು ಎಂದು ಮಕ್ಕಳೂ, ಮಕ್ಕಳ ಹೆತ್ತವರೂ, ಶಿಕ್ಷಕರೂ ನಿರೀಕ್ಷಿಸುತ್ತಿದ್ದರು. ಹಾಗೆ ಮಾಡಿದರೆ ಅವರು ಒಳ್ಳೆಯ ಮಕ್ಕಳು ಎಂದೂ ಕರೆಸಿಕೊಳ್ಳುತ್ತಿದ್ದರು. ಆದರೆ ಇಂದಿನ ಪೋಷಕರ, ಮಕ್ಕಳ, ಶಿಕ್ಷಕರ ನಿರೀಕ್ಷೆಗಳು ಬದಲಾಗಿದ್ದು ಅವರೆಲ್ಲ ಈಗ ಹೆಸರುಗಳು ಈ ಬ್ಯಾನರ್/ಬೋರ್ಡ್‌ಗಳಲ್ಲಿ ಫೋಟೋ ಸಮೇತ ಕಾಣಿಸಿಕೊಳ್ಳಬೇಕು ಎಂದು ಬಯಸುತ್ತಾರೆ. ಹಾಗಾದರೆ ಅಂಥವರು 'ದಿ ಬೆಸ್ಟ್ ಸ್ಟೂಡೆಂಟ್' ಎಂದೆನಿಸಿಕೊಳ್ಳುವ ಸಾಧ್ಯತೆ ಹೆಚ್ಚು.

ಜಾಸ್ತಿ ಜಾಸ್ತಿ ಬ್ಯಾನರ್ ಹಾಕಿರುವ, ಆ ಬ್ಯಾನರ್‌ಗಳಲ್ಲಿ ಹೆಚ್ಚೆಚ್ಚು ವಿದ್ಯಾರ್ಥಿಗಳ ಫೋಟೋ ಹೆಸರು ಸೇರಿಸಲ್ಪಟ್ಟಿದ್ದರೆ ಅಂಥ ವಿದ್ಯಾಸಂಸ್ಥೆಗಳು ಜನಪ್ರಿಯ, ಅತ್ಯುತ್ತಮ ಎಂದೆಲ್ಲ ಪರಿಗಣಿಸಲ್ಪಡುವ ಸಾಧ್ಯತೆ ನಿಚ್ಚಳವಾಗಿರುವುದರಿಂದ ಆ ಸಂಖ್ಯೆಯನ್ನು ಹೆಚ್ಚಿಸಲು ಒಂದಿಲ್ಲೊಂದು ನೆಪಗಳನ್ನು ಹುಡುಕಿ, ಅದನ್ನು ಕಾರ್ಯರೂಪಕ್ಕೆ ತರುತ್ತಿದ್ದರೆ ಅಚ್ಚರಿ ಏನಿಲ್ಲ.

'ಒಳ್ಳೆಯ ವಿದ್ಯಾ ಸಂಸ್ಥೆಯ ಎಲ್ಲಿ ಹುಡುಕಲಿ?' ಎಂದು ಯಾರಾದರೂ ಕೇಳಿದರೆ, 'ಎಪ್ರಿಲ್-ಮೇ ತಿಂಗಳುಗಳಲ್ಲಿ ಪ್ರದರ್ಶಿಸಲಾಗುವ ಬ್ಯಾನರ್‌ಗಳಲ್ಲಿ ಹುಡುಕು' ಎಂದು ಯಾರಾದರೂ ಉತ್ತರಿಸಿದರೆ, ಆ ಉತ್ತರವನ್ನು ಯಾವುದೇ ಕಾರಣಕ್ಕೂ ತಳ್ಳಿ ಹಾಕುವಂತಿಲ್ಲ ಮತ್ತೆ! ಅಷ್ಟರ ಮಟ್ಟಿಗೆ ಈ ಸಂಸ್ಥೆಗಳು ತಮ್ಮ ಕೀರ್ತಿ ಪತಾಕೆ ಬಾನೆತ್ತರಕ್ಕೆ ಹಾರುವುದೂ ಒಂದೇ, ಈ ಬಗೆ ಬಗೆಯ ಬ್ಯಾನರ್‌ಗಳೂ ಹೀಗೆ ಬಾನಿನ ಎತ್ತರೆತ್ತರಕ್ಕೆ ಹಾರುವುದೂ ಒಂದೇ ಎಂದು ಭಾವಿಸಿದಂತಿದೆ. ಆ ನೆಲೆಯಲ್ಲಿ ನೋಡಿದರೆ, 'ಮುಖ ನೋಡಿ ಮಣೆ ಹಾಕಿದರು' ಎನ್ನುವುದರ ಪರಿವರ್ತಿತ ರೂಪವೇ 'ಬ್ಯಾನರ್ ನೋಡಿ,' 'money' ಹಾಕಿದರು ಎಂಬುವುದಾಗಿದೆ. ಬ್ಯಾನರ್‌ನಲ್ಲಿನ ಆಕರ್ಷಕ ವಿವರಗಳಿಗೆ ಮಾರುಹೋಗಿ, ಅಲ್ಲಿಯೇ ಸೇರಬೇಕು ಎಂದು ನಿಶ್ಚಯ ಮಾಡಿದರೆ, ಖಂಡಿತವಾಗಿಯೂ ಆದರ ಮುಂದಿನ ಹಂತವೇ ಫೀಸ್‌ನ ಹೆಸರಲ್ಲಿ money-ಹಣವನ್ನು ಹೇರಳವಾಗಿ ಹಾಕುವುದು. ಹಾಕುವುದೋ ಅಲ್ಲ ಸುರಿಯುವುದೋ ಎನ್ನುವುದು ಸದ್ಯದ ಪರಿಸ್ಥಿತಿಯಲ್ಲಿ ಖಂಡಿತವಾಗಿಯೂ ಬಿಡಿಸಿ ಹೇಳುವ ಅಗತ್ಯವೇ ಇಲ್ಲ. ಇಂದು ಶಿಕ್ಷಣ ಎನ್ನುವುದು ಎಲ್ಲಾ ರೀತಿಯಲ್ಲೂ 'flexible' ಆಗಿರಬೇಕಿತ್ತು. ಆದರೆ ಹಾಗಾಗುವ ಬದಲಿಗೆ ಅದೀಗ ಹೆಚ್ಚೆಚ್ಚು 'flex'-able ಆಗುತ್ತಿದೆ ಎನ್ನುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ. .

ಈ ಬ್ಯಾನರ್, ಈ ಪರಿ ಪರಿಯಾದ ಪ್ರಚಾರ, ಊರೂರು ಸುತ್ತಿ ಜನರ ಮನವೊಲಿಸುವ ವೈಖರಿ ಇದೆಲ್ಲದಕ್ಕೂ ಮೂಲಾಧಾರದ ರೀತಿ ಇರುವಂಥದ್ದೇ ಪರ್ಸಂಟೇಜ್ ಲೆಕ್ಕಾಚಾರ. ಒಟ್ಟು ರಿಸಲ್ಟ್ ಎಷ್ಟು ಪರ್ಸೆಂಟ್ ಎನ್ನುವಂಥದ್ದು ಕೇವಲ ಮಕ್ಕಳ ಪ್ರೊಗ್ರೆಸ್ ಕಾರ್ಡ್ ಅಷ್ಟೇ ಅಲ್ಲ ಅದು ಆ ಇಡೀ ಸಂಸ್ಥೆಯ ಪ್ರೊಗ್ರೆಸ್ ಕಾರ್ಡ್ ಎಂದರೂ ಸರಿಯಷ್ಟೇ. ಪರರ ಚಿಂತೆಯ ಮಾಡುತ್ತಾರೋ ಇಲ್ಲವೋ ಆದರೆ ಪರ್ಸಂಟೇಜ್ ಚಿಂತೆ ಮಾಡದೇ ಯಾರಾದರೂ ನಿರುಮ್ಮಳವಾಗಿ ಇರುವುದು ಸಾಧ್ಯವೇ ಇಲ್ಲ. ಪರೀಕ್ಷೆ-ಫಲಿತಾಂಶಗಳ ಸಂದರ್ಭಗಳಲ್ಲಂತೂ ಅದು ಅಸಾಧ್ಯವಷ್ಟೇ ಅಲ್ಲ ಅಸಂಭವವೂ ಹೌದು. 'ಪಾಸ್'ನ ಪರಿಮಳವನ್ನು ಆಸುಪಾಸು ಇರುವವರಿಗೆಲ್ಲ ಪರಿಣಾಮಕಾರಿಯಾಗಿ ಪಸರಿಸುವಲ್ಲಿ ಈ ಪರ್ಸಂಟೇಜ್‌ನ ಪಾತ್ರ ಅತ್ಯಂತ ಮಹತ್ವದ್ದು. ಹಾಗಾಗಿ ಈ 'ಸೆಂಟ್'ನ ಸುವಾಸನೆ ಇನ್ನೂ ಹೆಚ್ಚೇ ಇರುತ್ತದೆ. ಇನ್ನು ಕೆಲವರಿಗಂತೂ ಈ ವಿಚಾರದಲ್ಲಿ ಪರರ ಪರ್ಸಂಟೇಜೇ ಹೆಚ್ಚು ಗಮನಸೆಳೆಯುತ್ತದೆ, ಥೇಟು ಪರರು ಪೂಸಿಕೊಂಡ ಸೆಂಟೇ ಹೆಚ್ಚು ಘಮಘಮಿಸುತ್ತಿರುವಂತೆ ಅನಿಸಿದಂತೆ. ಇನ್ನು ಈ 'ಸೆಂಟ್'ನ ನೆರವಿನಿಂದ ಅದೆಷ್ಟು ವಿದ್ಯಾರ್ಥಿಗಳನ್ನು, ಪೋಷಕರನ್ನು ಸೆಳೆಯಲಾಗುತ್ತದೆ ಎಂದರೆ, ಇದು ಸೆಂಟೋ ಮಾಯಾ ದ್ರವವೋ ಎಂಬ ಅನುಮಾನವೊಂದು ಥಟ್ಟನೇ ಮೂಡುತ್ತದೆ. ಈಗಿನ ಮಕ್ಕಳಿಗೋ, ತಮ್ಮ ಶೈಕ್ಷಣಿಕ ಸಾಧನೆಯ ಜೊತೆ ಜೊತೆಗೇ ತಾವು ಓದುತ್ತಿರುವ ಸಂಸ್ಥೆಯ ಏಳಿಗೆಗೂ ಪ್ರತ್ಯಕ್ಷವಾಗಿ ದುಡಿದಂತೆಯೇ ಸರಿ. ಹಾಗೆ ನೋಡಿದರೆ, ಆ ಸಂಸ್ಥೆಗಳೇ ಅದಕ್ಕಾಗಿ ಈ ವಿದ್ಯಾರ್ಥಿಗಳಿಗೆ ಹಣ ಪಾವತಿಸಬೇಕು!

ಈ ಪರ್ಸಂಟೇಜ್ ಕ್ರೇಜ್ ನೋಡಿ ಯಾವುದೇ ಸಂಸ್ಥೆಯನ್ನು ಹೊಕ್ಕರೂ ಅಲ್ಲಿ ಮತ್ತೆ ಪರ್ಸ್‌ನದ್ದೇ ಮೇಲುಗೈ. ಅವರು ಹೇಳುವ ವಿವಿಧ ಶುಲ್ಕ ವಿವರ, ಡೊನೇಷನ್, ಖರ್ಚು-ವೆಚ್ಚ ವಿವರಗಳನ್ನು ಪರಿಶೀಲಿಸಿ ಅದಕ್ಕೆ ತಕ್ಕಂತೆ ಎಲ್ಲವನ್ನೂ ಪಾವತಿ ಮಾಡಬೇಕು ಎಂದರೆ ಖಂಡಿತವಾಗಿಯೂ ಪರ್ಸ್-ಎಂಟೇ ಇರಬೇಕು. ಅಂದರೆ ಒಂದಲ್ಲ ಎರಡಲ್ಲ ಎಂಟೆಂಟು ಪರ್ಸ್ ಗಳಲ್ಲಿ ಹಣ ತುಂಬಿಸಿಕೊಂಡು ಹೋದರಷ್ಟೇ ಆ ಶುಲ್ಕವನ್ನೆಲ್ಲಾ ಭರಿಸಲು ಸಾಧ್ಯ ಎನಿಸುತ್ತದೆ. ಹೇಗೆ ಕೆಲವು ಸಂದರ್ಭಗಳಲ್ಲಿ ಎಂಟೆದೆಯ ಭಂಟರಂತೆ ಹೋರಾಡಬೇಕಾಗುತ್ತದೆಯೋ ಹಾಗೆಯೇ ಪರ್ಸ್-ಎಂಟನ್ನೂ ರೆಡಿ ಇಟ್ಟುಕೊಂಡು ಅಲ್ಲಿಗೆ ಹೊರಡಬೇಕು ಎನ್ನುವುದು ವಿಷಯ. ಅಷ್ಟೂ ಭರಪೂರ ಶುಲ್ಕ ಕಟ್ಟಲೇಬೇಕು. 'ಹ್ಹಾಂ.. ಹಾಗಾದರೆ ಅದೆಷ್ಟೇ ಕಟ್ಟು ಹಣವಿದ್ದರೂ ಸಾಲದೆನ್ನ' ಎಂದು ಹುಬ್ಬೇರಿಸುವುದು ಖಂಡಿತ. 'ಬ್ಯಾನರ್ ನೋಡಿ ಒಳ ಹೋದೆ, ಫೀಸ್ ವಿವರ ಕೇಳಿ ಬೆಚ್ಚಿಬಿದ್ದು ಹೊರಬಂದೆ' ಎಂದು ಯಾರಾದರೂ ಹೇಳಿದರೂ ಅದನ್ನು ಅಲ್ಲಗಳೆಯಲಾಗದು. ಏನೇ ಆಗಲಿ, ವಿದ್ಯಾಸಂಸ್ಥೆಯ ಹೆಸರಲ್ಲಿ ಹಾಕಿದ ಬಂಡವಾಳ ಸರಿಯಾಗಿ ವಸೂಲಿ ಆಗಬೇಕು ಎಂದರೆ, ಹಾಗೆಯೇ ಇತರ ಬಂಡವಾಳ ಬಟಾಬಯಲು ಆಗಬಾರದು ಎಂದರೆ ಬ್ಯಾನರ್‌ಗಳನ್ನೇ ಬಂಡವಾಳವನ್ನಾಗಿ ಬಳಸಿಕೊಳ್ಳುತ್ತಿರುವುದಂತೂ ಸತ್ಯ. ಈ ನಡುವೆ ಅದಾವುದೋ ಊರಲ್ಲಿ ವಿದ್ಯಾರ್ಥಿಯೊಬ್ಬ 35% ಅಂಕ ಗಳಿಸಿ ಪಾಸ್ ಆಗಿದ್ದಕ್ಕೂ, ಬೀದಿಯಲ್ಲಿ ಬ್ಯಾನರ್ ಹಾಕಿ ಸಂಭ್ರಮಿಸಿದ್ದಾರಂತೆ. ಅಂದರೆ ಬ್ಯಾನರ್‌ನ ವಿಷಯದಲ್ಲೂ ಒಂದು ರೀತಿಯ ಸಮಾನತೆ ಸಾಧಿಸಿದಂತಾಯ್ತು ಎನ್ನಬಹುದು.

ಓವರ್‌ಡೋಸ್: ನಮ್ಮ ಸಂಸ್ಥೆಗೇ ನಿಮ್ಮ ಮಕ್ಕಳನ್ನು ಸೇರಿಸಿ ಎಂದು ಒತ್ತಾಯಿಸಲು ಪದೇ ಪದೇ ಕಾಲ್ ಬರುವ ಕಾಲವೆಂದರೆ ಎಪ್ರಿಲ್-ಮೇ-ಜೂನ್. ಇದು 'ಕಾಲಾಯ ತಸ್ಮೈ ನಮಃ'ದ ಭಿನ್ನ ರೂಪವೆಂದರೆ ಇದೇ ಇರಬೇಕು!

ರಾಣಾಘಾಟ್‌ನಲ್ಲಿ ಚುನಾವಣಾ ರ‍್ಯಾಲಿಯಲ್ಲಿ ಶಾ

ಮಾತೆಯರಿಗೆ, ನಿರುದ್ಯೋಗಿ ಯುವಕರಿಗೆ ಮಾಸಿಕ ನೆರವು

ಕೋಲ್ಕತ್ತಾ : ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಲ್ಲಿ ಏಕರೂಪ ನಾಗರಿಕ ಸಂಹಿತೆ(ಏನಾಸಂ) ಜಾರಿಗೊಳಿಸಲಿದೆ, ತ್ರಿವಳಿ ತಲಾಖ್ ರದ್ದುಪಡಿಸಲಿದೆ ಮತ್ತು ಬಹುಪತ್ನಿತ್ವಕ್ಕೆ ಕೊನೆ ಹಾಡಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಭರವಸೆ ನೀಡಿದ್ದಾರೆ. ರಾಣಾಘಾಟ್‌ನಲ್ಲಿ ಚುನಾವಣಾ ರ‍್ಯಾಲಿಯಲ್ಲಿ ಸಚಿವರು ಪಾಲ್ಗೊಂಡರು.



ಮೇ 4ರಂದು ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಸರಕಾರ ರಚಿಸಲಿದೆ . ಮೇ ನಂತರ ಬಿಜೆಪಿ ಸರಕಾರ ಬಂಗಾಳದ ಪ್ರತಿಯೋರ್ವ ಸೋದರಿ ಮತ್ತು ಮಾತೆಯರ ಖಾತೆಗಳಿಗೆ ಮಾಸಿಕ ತಲಾ ರೂ.3000 ರೂಗಳನ್ನು ಜಮೆ ಮಾಡಲಿದೆ. ಏಕಕಾಲಕ್ಕೆ ಪ್ರತೀ ನಿರುದ್ಯೋಗಿ ಯುವಕರ ಖಾತೆಗಳಿಗೂ ತಲಾ 3ಸಾವಿರ ರೂ. ಜಮೆ ಮಾಡಲಿದೆ. ರಾಜ್ಯದ ತಾಯಂದಿರು, ಸೋದರಿಯರು ಬಸ್ಸುಗಳಲ್ಲಿ ಟಿಕೆಟ್ ನೀಡದೆ ಉಚಿತವಾಗಿ ಪ್ರಯಾಣಿಸಲು ಬಿಜೆಪಿ ಸರಕಾರ ಅನುವು ಮಾಡಲಿದೆ ಎಂದು ಭರವಸೆ ನೀಡಿದರು. ರಾಜ್ಯದ ಹಲವು ಭಾಗಗಳಲ್ಲಿ ಮುಖ್ಯವಾಗಿ ನಾಡಿಯಾ ಜಿಲ್ಲೆಯಲ್ಲಿ ಗೋ ಕಳ್ಳಸಾಗಣೆ ಅವ್ಯಾಹತವಾಗಿದ್ದು, ಅಧಿಕಾರ ವಹಿಸಿಕೊಂಡ ಬಳಿಕ ಬಿಜೆಪಿ ಈ ಗೋಕಳ್ಳಸಾಗಣೆ ಜಾಲವನ್ನು ಮಟ್ಟ ಹಾಕಲಿದೆ ಎಂದು ಭರವಸೆ ನೀಡಿದರು.

ಸರಕಾರ ರಚಿಸಿದ ಬಳಿಕ, ಜಾನುವಾರುಗಳ ಕಳ್ಳಸಾಗಣೆಗೆ ಮೂಗುದಾರ ಹಾಕಲು ವಿಶೇಷ ತಂಡವೊಂದನ್ನು ರಚಿಸಲಿದ್ದೇವೆ ಎಂದು ಸಚಿವ ಶಾ ಹೇಳಿದರು. ಬಿಜೆಪಿಯ ರಾಷ್ಟ್ರೀಯ ಭದ್ರತಾ ದಾಖಲೆ ಅಪೂರ್ವವೆಂದು ನಾಡಿಯಾದಲ್ಲಿನ ಪ್ರತ್ಯೇಕ ಸಾರ್ವಜನಿಕ ಸಭೆಯಲ್ಲಿ ಸಚಿವ ಶಾ ಗಮನ ಸೆಳೆದರು. ನಾಡಿಯಾದಲ್ಲೀಗ ಮೊತ್ತ ಮೊದಲು ಹುತಾತ್ಮ ಜೊಂತು ಆಲಿ ಶೇಖ್‌ಗೆ ನಾನು ಹೃತ್ಪೂರ್ವಕ ನಮನಗಳನ್ನು ಅರ್ಪಿಸುತ್ತೇನೆ. ಏ.22ರಂದು ಪಾಕ್ ಜತೆಗಿನ ಸಂಘರ್ಷ ಸಂದರ್ಭ ಆಲಿ ಶೇಖ್ ರಾಷ್ಟ್ರಕ್ಕಾಗಿ ಪ್ರಾಣಾರ್ಪಣೆ ಮಾಡಿದವರು. ಈ ದುರ್ಘಟನೆ ಬೆನ್ನಲ್ಲೇ ಪ್ರಧಾನಿ ನರೇಂದ್ರ ಮೋದಿ ಆಪರೇಶನ್ ಸಿಂದೂರ್‌ಗೆ ಹಸಿರು ನಿಶಾನೆ ನೀಡಿದರು.


ವಿಪಕ್ಷಗಳು ಉಗ್ರರಿಗೆ ಬಿರಿಯಾನಿ ಕೊಡುತ್ತಿದ್ದವು

ಹಿಂದಿನ ಸರಕಾರಗಳು ಭಯೋತ್ಪಾದಕರ ಬಗ್ಗೆ ಬಲು ಮೃದು ಧೋರಣೆ ಹೊಂದಿದ್ದವೆಂದು ಛೀಮಾರಿ ಹಾಕಿದ ಸಚಿವ ಶಾ, ಮಮತಾ ಮತ್ತು ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಭಯೋತ್ಪಾದಕರಿಗೆ ಬಿರಿಯಾನಿ ತಿನ್ನಿಸುತ್ತಿದ್ದರು. 2014ರಲ್ಲಿ ನರೇಂದ್ರ ಮೋದಿ ಅವರು ಪ್ರಧಾನಿಯಾದಾಗ ಉರಿಯಲ್ಲಿ ಭಯೋತ್ಪಾದಕರು ಸೇನಾ ಶಿಬಿರ ಮೇಲೆ ದಾಳಿ ನಡೆಸಿದ್ದರು. ಪ್ರತೀಕಾರವಾಗಿ ಸರ್ಜಿಕಲ್ ಸ್ಟ್ರೈಕ್ ನಡೆಯಿತು. ಪುಲ್ವಾಮಾ ದಾಳಿಗೆ ಪ್ರತಿಯಾಗಿ ಏರ್ ಸ್ಟ್ರೈಕ್ ನಡೆಸಿದೆವು. ಪಹಲ್ಗಾಮ್ ದಾಳಿ ನಂತರ ನಾವು ಪಾಕ್‌ಗೆ ನುಗ್ಗಿ ಭಯೋತ್ಪಾದಕರನ್ನು ದಮನಿಸಿಬಿಟ್ಟೆವು. ಪ್ರಸಕ್ತ ಕೇಂದ್ರ ಸರಕಾರ ಭಯೋತ್ಪಾದನೆ ಮತ್ತು ತೀವ್ರಗಾಮಿಗಳ ವಿರುದ್ಧ ಕಠಿಣ ನಿಲುವು ಹೊಂದಿದೆ ಎಂದು ವಿವರಿಸಿದರು.

ಪಾಕ್‌ಗೆ ಪ್ರವಾಸ ಮಾಡುವುದು ಅನಗತ್ಯ: ಟ್ರಂಪ್

ಮಾತುಕತೆ ಬಯಸಿದರೆ ಕರೆ ಮಾಡಲಿ


ವಾಷಿಂಗ್ಟನ್: ಹಾರ್ಮುಜ್ ಮೇಲಿನ ಅಮೆರಿಕದ ದಿಗ್ಬಂಧನ ತೆರವು ಸಹಿತ ಮಧ್ಯಪ್ರಾಚ್ಯ ಸಂಘರ್ಷಕ್ಕೆ ಅಂತ್ಯ ಹಾಡುವ ಉದ್ದೇಶದಿಂದ ಪಾಕ್‌ನಲ್ಲಿ ನಡೆಯಬೇಕಿದ್ದ 2ನೇ ಹಂತದ ಮಾತುಕತೆಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಂತ್ಯ ಹಾಡಿದ್ದಾರೆ ಅಥವಾ ಪಾಕ್‌ಗೆ ತನ್ನ ಸಂಧಾನಕಾರರ ಭೇಟಿಯನ್ನು ರದ್ದುಪಡಿಸಿದ್ದಾರೆ. ಅಮೆರಿಕದ ಸಂಧಾನಕಾರರಾದ ಸ್ಟೀವ್ ವಿಟ್ಕಾಫ್ ಮತ್ತು ಜರೆಡ್ ಕುಶ್ನರ್ ಪಾಕ್‌ಗೆ ಭೇಟಿ ನೀಡುವುದಿಲ್ಲ ಎಂದು ಟ್ರಂಪ್ ಘೋಷಿಸಿದ್ದಾರೆ.



ಮಾತುಕತೆ ನಡೆಸಲು ಇರಾನ್ ಬಯಸಿದ್ದರೆ ಅವರು ನನಗೆ ಫೋನ್ ಕರೆ ಮಾಡಲಿ ಎಂದು ಟ್ರಂಪ್‌ತಮ್ಮ ಸಾಮಾಜಿಕ ಜಾಲತಾಣ ಟ್ರುತ್ ಸೋಷ್ಯಲ್‌ನಲ್ಲಿ ಶನಿವಾರ ಬರೆದಿದ್ದಾರೆ. ತನ್ಮೂಲಕ ಪಾಕ್‌ಗೆ ತನ್ನ ಸಂಧಾನಕಾರರನ್ನು ಕಳುಹಿಸುವುದಿಲ್ಲ ಎಂದು ಪರೋಕ್ಷ ಸುಳಿವು ನೀಡಿದ್ದಾರೆ. ತಮ್ಮ ನಿಲುವು ಸಡಿಲಿಸಲು ಅಮೆರಿಕ ಮತ್ತು ಟೆಹ್ರಾನ್ ಸಿದ್ಧರಿಲ್ಲದ ಕಾರಣ, ಇರಾನ್ ವಿರುದ್ಧ ಅಮೆರಿಕ-ಇಸ್ರೇಲ್ ಸಮರವನ್ನು ರಾಜತಾಂತ್ರಿಕ ಪ್ರಯತ್ನಗಳಿಂದ ಕೊನೆಗಾಣಿಸುವ ಸಾಧ್ಯತೆಗಳು ಕ್ಷೀಣವಾಗಿವೆ. ಜತೆಗೆ ಸುದೀರ್ಘ ಕದನವಿರಾಮ ಸಾಧ್ಯತೆಗಳೂ ಮಂಕಾಗಿವೆ.

ಇರಾನಿಗಳ ಅರೆಬರೆ ಮನಸ್ಸಿನ ಪ್ರಸ್ತಾವ ಪರಿಗಣನೆಗಾಗಿ ಒಂದಷ್ಟು ವೆಚ್ಚ ಮಾಡಿ ದೂರದ ಪಾಕ್‌ಗೆ ಪ್ರವಾಸ ಮಾಡುವುದು ಅನಗತ್ಯ. ಇರಾನ್‌ನ ಪ್ರಸ್ತಾವ ಸಾಲದು ಎಂದು ಟ್ರಂಪ್ ಫ್ಲೋರಿಡಾದಲ್ಲಿ ಸುದ್ದಿಗಾರರಿಗೆ ತಿಳಿಸಿದ್ದಾರೆ. ಇರಾನ್ ನಾಯಕತ್ವದೊಳಗೆ ಸಾಕಷ್ಟು ಒಳಜಗಳವಿದೆ. ಯಾರು ಉಸ್ತುವಾರಿ ಎಂಬುದು ಯಾರಿಗೂ ಗೊತ್ತಿಲ್ಲ. ಈ ವಿಚಾರದಲ್ಲಿ ನಾವು ಉತ್ತಮ ವ್ಯವಸ್ಥೆ ಹೊಂದಿದ್ದೇವೆ, ಆದರೆ ಅವರು ಹೊಂದಿಲ್ಲ. ಅವರಿಗೆ ಮಾತುಕತೆಯ ಆಶಯವಿದ್ದಲ್ಲಿ ತನಗೊಂದು ಕರೆ ಮಾಡಲಿ ಎಂದು ಟ್ರಂಪ್ ಜಾಲತಾಣಕ್ಕೆ ಹಾಕಿರುವ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ತನ್ಮೂಲಕ ಇಡೀ ಜಗತ್ತನ್ನು ಕಾಡಿರುವ ಪ.ಏಷ್ಯಾ ಸಂಘರ್ಷಕ್ಕೆ ಸದ್ಯ ಕೊನೆಯಿಲ್ಲ ಎಂಬ ಸಂದೇಶವನ್ನು ಟ್ರಂಪ್ ಪರೋಕ್ಷ ನೀಡಿದ್ದಾರೆ.

2026ರಲ್ಲಿ ಭಾರತ ತೀವ್ರ ಹವಾಮಾನ ಸವಾಲುಗಳನ್ನು ಎದುರಿಸುವ ಸಾಧ್ಯತೆ ಹೆಚ್ಚಿದೆ. ವಿಶ್ವ ಹವಾಮಾನ ಸಂಸ್ಥೆ ನೀಡಿರುವ ಎಚ್ಚರಿಕೆಯಂತೆ, ಪೆಸಿಫಿಕ್ ಮಹಾಸಾಗರದಲ್ಲಿ ರೂಪುಗೊಳ್ಳುವ ಎಲ್ ನಿನೋ ಸ್ಥಿತಿ ಮೇ-ಜುಲೈ ಅವಧಿಯಲ್ಲಿ ಆರಂಭವಾಗುವ ಸಾಧ್ಯತೆ ಇದ್ದು, ಇದರ ಪರಿಣಾಮವಾಗಿ ದೇಶದಲ್ಲಿ ಸಾಮಾನ್ಯಕ್ಕಿಂತ ಕಡಿಮೆ ಮಳೆ ಹಾಗೂ ಹೆಚ್ಚಿನ ಉಷ್ಣತೆ ಕಾಣಿಸಿಕೊಳ್ಳಬಹುದು. ತಜ್ಞರ ಪ್ರಕಾರ ಈ ಬಾರಿ ಎಲ್ ನಿನೋ ಸ್ಥಿತಿ ಬಲಿಷ್ಠವಾಗುವ ಸಾಧ್ಯತೆ ಇದೆ. ಸಾಮಾನ್ಯವಾಗಿ ಇಂತಹ ಪರಿಸ್ಥಿತಿಯಲ್ಲಿ ಭಾರತದಲ್ಲಿ ಮುಂಗಾರು ದುರ್ಬಲಗೊಳ್ಳುತ್ತದೆ. ಪರಿಣಾಮವಾಗಿ ಮಳೆಯ ಪ್ರಮಾಣ ಕುಸಿಯುವುದರ ಜೊತೆಗೆ, ಉಷ್ಣತೆಯ ತೀವ್ರತೆ ಹೆಚ್ಚುವ ಸಾಧ್ಯತೆ ಇದೆ.



ಸುದ್ದಿ ಸಮಗ್ರ

ಎಲ್ ನಿನೋ ಭಾರತಕ್ಕೆ ಮಳೆ ಕಡಿಮೆ?

ವಿಶ್ವ ಹವಾಮಾನ ಸಂಸ್ಥೆ ಎಚ್ಚರಿಕೆ: ಮೇ, ಜುಲೈ ಅವಧಿಯಲ್ಲಿ ಪರಿಣಾಮ ಆರಂಭ ಸಾಧ್ಯ

ಮುಂದಿನ ಸವಾಲುಗಳು

2026ರಲ್ಲಿ ಎದುರಾಗುವ ಸಾಧ್ಯತೆ ಇರುವ ಎಲ್ ನಿನೋ ಪರಿಸ್ಥಿತಿ ದೇಶದ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ. ಮಳೆ ಕೊರತೆಯಿಂದ ಕೃಷಿ ಉತ್ಪಾದನೆ ಕುಸಿಯುವ ಭೀತಿ ಇದ್ದು, ಇದರ ಪರಿಣಾಮವಾಗಿ ಆಹಾರ ಭದ್ರತೆ ಮೇಲೆ ಒತ್ತಡ ಹೆಚ್ಚಬಹುದು.

ಇನ್ನೊಂದೆಡೆ, ಉಷ್ಣತೆಯ ಏರಿಕೆಯಿಂದ ವಿದ್ಯುತ್ ಬಳಕೆ ಹೆಚ್ಚಾಗುವ ಸಾಧ್ಯತೆ ಇದೆ. ಇದರಿಂದ ವಿದ್ಯುತ್ ಬೇಡಿಕೆ ಮತ್ತು ಪೂರೈಕೆ ನಡುವೆ ಅಂತರ ಹೆಚ್ಚಾಗಬಹುದು. ಗ್ರಾಮೀಣ ಪ್ರದೇಶಗಳಲ್ಲಿ ಆದಾಯ ಕುಸಿತ ಕಂಡುಬರುವ ಸಾಧ್ಯತೆ ಇದ್ದು, ಆರ್ಥಿಕ ಚಟುವಟಿಕೆಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ.ಒಟ್ಟಾರೆ, 2026ರಲ್ಲಿ ಸಂಭವಿಸುವ ಎಲ್ ನಿನೋ ಪರಿಸ್ಥಿತಿ ಭಾರತಕ್ಕೆ ಗಂಭೀರ ಹವಾಮಾನ ಸವಾಲುಗಳನ್ನು ತಂದೊಡ್ಡುವ ಸಾಧ್ಯತೆ ಇದೆ. ಬಿಸಿಲು, ಮಳೆ ಕೊರತೆ ಮತ್ತು ಕೃಷಿ ಸಂಕಷ್ಟವನ್ನು ಎದುರಿಸಲು ಮುಂಚಿತ ಸಿದ್ಧತೆ ಹಾಗೂ ಸಮರ್ಪಕ ಯೋಜನೆ ಅಗತ್ಯವಾಗಿದೆ ಎಂದು ತಜ್ಞರು ಸೂಚಿಸಿದ್ದಾರೆ.



ಹಿಮದ ಪ್ರಮಾಣ ಕುಸಿತ

ದಿ ಇಂಟರ್ನ್ಯಾಷನಲ್ ಸೆಂಟರ್ ಫಾರ್ ಇಂಟಿಗ್ರೇಟೆಡ್ ಮೌಂಟೇನ್ ಡೆವಲಪ್‌ಮೆಂಟ್ ವರದಿ ಪ್ರಕಾರ, ಹಿಂದೂ ಕುಶ್ ಹಿಮಾಲಯದಲ್ಲಿ ಹಿಮದ ಹೊದಿಕೆ ದೀರ್ಘಾವಧಿ ಸರಾಸರಿಗಿಂತ ಶೇ.27.8ರಷ್ಟು ಕಡಿಮೆಯಾಗಿದೆ. ಇದು ಸತತ ನಾಲ್ಕು ವರ್ಷಗಳ ದಾಖಲೆಗಳಲ್ಲಿ ಅತ್ಯಂತ ಕಡಿಮೆ ಪ್ರಮಾಣವಾಗಿದೆ. ಈ ಪ್ರದೇಶವು ಗಂಗಾ, ಸಿಂಧೂ ಮತ್ತು ಬ್ರಹ್ಮಪುತ್ರದಂತಹ ಪ್ರಮುಖ ನದಿಗಳಿಗೆ ನೀರನ್ನು ಪೂರೈಸುತ್ತದೆ. ಸಾಮಾನ್ಯವಾಗಿ ಹಿಮದ ಮಟ್ಟಗಳು ಮುಖ್ಯವಾಗಿವೆ ಏಕೆಂದರೆ ಅವು ನೈಸರ್ಗಿಕ ನೀರಿನ ಶೇಖರಣೆಯಾಗಿ ಕಾರ್ಯನಿರ್ವಹಿಸುತ್ತವೆ. ಹಿಮವು ನಿಧಾನವಾಗಿ ಕರಗಿದಾಗ, ಅದು ಒಣ ತಿಂಗಳುಗಳಲ್ಲಿ ನದಿಗಳಲ್ಲಿ ನೀರಿನ ಹರಿವನ್ನು ಹೆಚ್ಚಿಸುತ್ತದೆ. ಕಡಿಮೆ ಹಿಮ ಎಂದರೆ ಬೇಸಿಗೆಯಲ್ಲಿ ನದಿಯ ಹರಿವು ಕಡಿಮೆಯಾಗುವುದು, ಕೆಳಭಾಗದ ಪ್ರದೇಶಗಳಲ್ಲಿ ಬರಗಾಲದ ಹೆಚ್ಚಿನ ಅಪಾಯ, ಕುಡಿಯುವ ನೀರು ಮತ್ತು ನೀರಾವರಿ ವ್ಯವಸ್ಥೆಗಳ ಮೇಲೆ ಒತ್ತಡ ಎದುರಾಗುತ್ತದೆ.

ಜಾಗತಿಕ ಮಟ್ಟದಲ್ಲಿ ಪರಿಣಾಮ

ಎಲ್ ನಿನೋ ಪರಿಣಾಮ ಭಾರತಕ್ಕೆ ಮಾತ್ರ ಸೀಮಿತವಾಗಿಲ್ಲ. ಜಾಗತಿಕ ಮಟ್ಟದಲ್ಲಿಯೂ ಹವಾಮಾನ ಅಸ್ಥಿರತೆ ಹೆಚ್ಚಾಗುವ ಸಾಧ್ಯತೆ ಇದೆ. ಕೆಲವು ದೇಶಗಳಲ್ಲಿ ಅತಿಯಾದ ಮಳೆಯಾಗುವ ಸಾಧ್ಯತೆ ಇದ್ದರೆ, ಇನ್ನೂ ಕೆಲವು ಪ್ರದೇಶಗಳಲ್ಲಿ ಬರ ಪರಿಸ್ಥಿತಿ ಉಂಟಾಗಬಹುದು. ಈ ಪರಿಸ್ಥಿತಿ ಜಾಗತಿಕ ಆಹಾರ ಉತ್ಪಾದನೆ ಹಾಗೂ ಸರಬರಾಜು ವ್ಯವಸ್ಥೆಯ ಮೇಲೆ ಒತ್ತಡವನ್ನು ಹೆಚ್ಚಿಸಬಹುದು. ಹವಾಮಾನ ಬದಲಾವಣೆ ಹಿನ್ನೆಲೆಯಲ್ಲೇ ಎಲ್ ನಿನೋ ಪರಿಣಾಮ ಹೆಚ್ಚು ತೀವ್ರಗೊಳ್ಳುತ್ತಿರುವುದು ತಜ್ಞರ ಗಮನಕ್ಕೆ ಬಂದಿದೆ. ಇದರಿಂದ ತಾಪಮಾನ ಏರಿಕೆ ಮತ್ತು ಮಳೆಯ ವ್ಯತ್ಯಾಸಗಳು ಇನ್ನಷ್ಟು ಗಂಭೀರವಾಗುವ ಸಾಧ್ಯತೆ ಇದೆ.

ಎಲ್ ನಿನೋ ಎಂದರೇನು?

ಫೆಸಿಫಿಕ್ ಮಹಾಸಾಗರದ ಮಧ್ಯ ಮತ್ತು ಪೂರ್ವ ಭಾಗದಲ್ಲಿ ಸಮುದ್ರದ ಮೇಲ್ಮೈ ತಾಪಮಾನ ಏರಿಕೆಯಾಗುವ ಹವಾಮಾನ ಪ್ರಕ್ರಿಯೆಯೇ ಎಲ್ ನಿನೋ ಎಂದು ಕರೆಯಲಾಗುತ್ತದೆ. ಈ ಪ್ರಕ್ರಿಯೆ ಜಾಗತಿಕ ಹವಾಮಾನ ಮಾದರಿಗಳಲ್ಲಿ ಬದಲಾವಣೆ ತರಲು ಕಾರಣವಾಗುತ್ತದೆ. ಭಾರತದಲ್ಲಿ, ವಿಶೇಷವಾಗಿ ದಕ್ಷಿಣ-ಪಶ್ಚಿಮ ಮಾನ್ಸೂನ್ ದುರ್ಬಲಗೊಳ್ಳಲು ಇದು ಪ್ರಮುಖ ಕಾರಣವಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಮಳೆ ಪ್ರಮಾಣ ಕಡಿಮೆಯಾಗುವುದು ಮತ್ತು ಉಷ್ಣತೆ ಏರಿಕೆಯಾಗುವುದು ಸಾಮಾನ್ಯವಾಗಿ ಕಂಡುಬರುವ ಪರಿಣಾಮಗಳಾಗಿವೆ.

ಭಾರತಕ್ಕೆ ಸಂಭವನೀಯ ಪರಿಣಾಮ

ಹವಾಮಾನ ತಜ್ಞರು ನೀಡಿರುವ ಮುನ್ಸೂಚನೆ ಪ್ರಕಾರ, 2026ರಲ್ಲಿ ಎಲ್ ನಿನೋ ಪರಿಣಾಮ ಸ್ಪಷ್ಟವಾಗಿ ಕಾಣಿಸಿಕೊಳ್ಳುವ ಸಾಧ್ಯತೆ ಇದೆ. ದೇಶದ ಹಲವೆಡೆಗಳಲ್ಲಿ ಬಿಸಿಲಿನ ತೀವ್ರತೆ ಹೆಚ್ಚಾಗುವ ಸಾಧ್ಯತೆ ಇದ್ದು, ಹೀಟ್‌ವೇವ್‌ಗಳ ಪ್ರಮಾಣ ಹೆಚ್ಚಬಹುದು. ಅದೇ ಸಮಯದಲ್ಲಿ ಮಾನ್ಸೂನ್ ಮಳೆಯ ಪ್ರಮಾಣ ಕಡಿಮೆಯಾಗುವ ಸಾಧ್ಯತೆ ಇದೆ. ಈ ಪರಿಸ್ಥಿತಿ ಜಲಾಶಯಗಳ ನೀರಿನ ಮಟ್ಟದ ಮೇಲೆ ಪರಿಣಾಮ ಬೀರಬಹುದು. ಕುಡಿಯುವ ನೀರಿನ ಸಮಸ್ಯೆ ಹಾಗೂ ಕೃಷಿ ಕ್ಷೇತ್ರದಲ್ಲಿ ಅನಿಶ್ಚಿತತೆ ಹೆಚ್ಚಾಗುವ ಭೀತಿ ಇದೆ. ಈಗಾಗಲೇ ಕೆಲವು ಭಾಗಗಳಲ್ಲಿ ಪೂರ್ವ ಮುಂಗಾರು ಮಳೆಯ ಕೊರತೆ ಕಂಡುಬಂದಿರುವುದು ಮುಂದಿನ ಪರಿಸ್ಥಿತಿಗೆ ಸೂಚಕವಾಗಿದೆ.

ಮಾರ್ಗಸೂಚಿ ನೀಡಿದ ಐಎಂಡಿ

ಈ ಬೆನ್ನಲ್ಲೆ ದೇಶದ ಹಲವೆಡೆ ತಾಪಮಾನ ಏರಿಕೆಯಾಗುತ್ತಿರುವ ಹಿನ್ನೆಲೆ ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಕೂಲಂಕುಶವಾಗಿ ಬಿಸಿಗಾಳಿ ಮಾರ್ಗಸೂಚಿಗಳು ಮತ್ತು ಸಲಹೆಗಳನ್ನು ಬಿಡುಗಡೆಗೊಳಿಸಿದೆ. ಐಎಂಡಿ ಬಿಡುಗಡೆಗೊಳಿಸಿದ ಮಾರ್ಗಸೂಚಿಯಲ್ಲಿ ಸೂರ್ಯನ ಕಿರಣಕ್ಕೆ ಹೆಚ್ಚು ಹೊತ್ತು ನಿಲ್ಲದಿರಲು, ಅದರಲ್ಲೂ ಮಧ್ಯಾಹ್ನದ ಸಮಯದಲ್ಲಿ ಹೆಚ್ಚು ಹೊರಗಡೆ ಇರುವುದು, ಆದಷ್ಟು ನೀರು ಕುಡಿಯುವುದು, ಹಗುರವಾದ ಮತ್ತು ಉಸಿರಾಡಲು ಸುಲಭವಾಗುವಂತಹ ಬಟ್ಟೆ ಧರಿಸುವುದು ಮತ್ತು ಅತಿ ಉಷ್ಣಾಂಶದಲ್ಲಿ ಹೊರಗೆ ಹೆಚ್ಚು ಕೆಲಸ ಮಾಡದಿರುವುದು ಇತ್ಯಾದಿ ಸಲಹೆ ನೀಡಿದೆ.



ಕಿರುಸುದ್ದಿ

ಭಯೋತ್ಪಾದಕರ ದಾಳಿ: ಮಾಲಿ ರಕ್ಷಣಾ ಸಚಿವರ ಹತ್ಯೆ

ಬಮಾಕೊ: ರಾಜಧಾನಿ ಹತ್ತಿರದ ಕಟಿ ಮಿಲಿಟರಿ ನೆಲೆಯ ನಿವಾಸದ ಮೇಲೆ ಆಲ್ ಖೈದಾ ಸಂಯೋಜಿತ ಜೆಎನ್‌ಐಎಂ (ಜೆಎನ್‌ಐಎಂ) ಗುಂಪು ನಡೆಸಿದ ದಾಳಿಯಲ್ಲಿ ಮಾಲಿ ರಕ್ಷಣಾ ಸಚಿವ ಸಡಿಯೊ ಕ್ಯಾಮರಾ ಹತ್ಯೆಯಾಗಿದ್ದಾರೆ. ಜೆಎನ್‌ಐಎಂ ಮತ್ತು ತುವಾರೆಗ್ ಬಂಡುಕೋರರು ಇತ್ತೀಚಿನ ವರ್ಷಗಳಲ್ಲಿ ಅತಿದೊಡ್ಡ ಸಂಘಟಿತ ಕಾರ್ಯಾಚರಣೆ ನಡೆಸಿದ್ದು, ಚಿನ್ನದ ಗಣಿಗಳು ಸೇರಿದಂತೆ ದೇಶದಾದ್ಯಂತ ಹಲವು ಸ್ಥಳಗಳನ್ನು ಗುರಿಯಾಗಿಸಿಕೊಂಡಿದ್ದಾರೆ.

ಖ್ಯಾತ ಛಾಯಾಗ್ರಾಹಕ ರಘು ರಾಯ್ ನಿಧನ

ಹೊಸದಿಲ್ಲಿ: ಸ್ವತಂತ್ರ ಭಾರತದ ಅಗ್ರಗಣ್ಯ ಇತಿಹಾಸಕಾರರಲ್ಲಿ ಒಬ್ಬರೆಂದು ವ್ಯಾಪಕವಾಗಿ ಪರಿಗಣಿಸಲ್ಪಟ್ಟ ಅಂತಾರಾಷ್ಟ್ರೀಯ ಖ್ಯಾತಿಯ ಛಾಯಾಗ್ರಾಹಕ ರಘು ರಾಯ್ ತಮ್ಮ 83ನೇ ವಯಸ್ಸಿನಲ್ಲಿ ನಿಧನರಾದರು. ಕಳೆದ ಎರಡು ವರ್ಷಗಳಿಂದ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಅವರಿಗೆ ಇತ್ತೀಚೆಗೆ ವಯೋಸಹಜ ಸಮಸ್ಯೆಗಳೂ ಇದ್ದವು ಎಂದು ಛಾಯಾಗ್ರಾಹಕರಾದ ಮತ್ತು ರಘು ರಾಯ್ ಅವರ ಪುತ್ರ ನಿತಿನ್ ರಾಯ್ ತಿಳಿಸಿದ್ದಾರೆ.

ಬಿಜೆಪಿ ರಾಜ್ಯಗಳಲ್ಲಿ ವಿಶೇಷ ಅಧಿವೇಶನ

ಹೊಸದಿಲ್ಲಿ: ಮಹಿಳೆಯರಿಗೆ ಸಂಸತ್ ಮತ್ತು ವಿಧಾನಸಭೆಗಳಲ್ಲಿ ಶೇ.33 ಮೀಸಲು ಒದಗಿಸುವ ಉದ್ದೇಶದ ಸಂವಿಧಾನ ತಿದ್ದುಪಡಿ ಮಸೂದೆಗೆ ಬೆಂಬಲ ಒಗ್ಗೂಡಿಸಲು ಭಾರತೀಯ ಜನತಾ ಪಕ್ಷ (ಬಿಜೆಪಿ) ಮಹತ್ವದ ರಾಜಕೀಯ ಹೆಜ್ಜೆ ಇಟ್ಟಿದೆ. ಈ ಹಿನ್ನೆಲೆಯಲ್ಲಿ ನಾಲ್ಕು ರಾಜ್ಯಗಳಲ್ಲಿ ವಿಶೇಷ ವಿಧಾನಸಭಾ ಅಧಿವೇಶನ ನಡೆಸಲು ಅದು ತೀರ್ಮಾನಿಸಿದೆ.

ಈ ಅಧಿವೇಶನಗಳಲ್ಲಿ ಮಹಿಳಾ ಮೀಸಲು ಮಸೂದೆಗೆ ಬೆಂಬಲ ವ್ಯಕ್ತಪಡಿಸುವ ನಿರ್ಣಯಗಳನ್ನು ಅಂಗೀಕರಿಸುವ ಮೂಲಕ, ರಾಷ್ಟ್ರ ಮಟ್ಟದಲ್ಲಿ ಒತ್ತಡ ನಿರ್ಮಿಸುವುದು ಬಿಜೆಪಿ ಉದ್ದೇಶವಾಗಿದೆ. ಸಂಸತ್ತಿನಲ್ಲಿ ಮಸೂದೆ ಅಂಗೀಕಾರವಾಗದ ಹಿನ್ನೆಲೆ, ರಾಜ್ಯಗಳ ಮೂಲಕ ರಾಜಕೀಯ ಸಂದೇಶ ನೀಡಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

» ಮಹಿಳಾ ಮಸೂದೆ ವಿಚಾರದಲ್ಲಿ ಬಿಜೆಪಿ ಕಾರ್ಯತಂತ್ರ

ಯಾವ ರಾಜ್ಯಗಳಲ್ಲಿ ಅಧಿವೇಶನ?: ಬಿಜೆಪಿ ಆಡಳಿತದ ನಾಲ್ಕು ರಾಜ್ಯಗಳಲ್ಲಿ ಈ ವಿಶೇಷ ಅಧಿವೇಶನ ನಡೆಯಲಿದೆ. ಅಂದರೆ, ಮಧ್ಯಪ್ರದೇಶ, ಹರ್ಯಾಣ, ದಿಲ್ಲಿ ಮತ್ತು ಒಡಿಶಾದಲ್ಲಿ ಅಧಿವೇಶನ ನಡೆಯಲಿದೆ. ಜೊತೆಗೆ ತೆಲುಗು ದೇಶಂ ಪಕ್ಷ ಆಡಳಿತದ ಆಂಧ್ರ ಪ್ರದೇಶದಲ್ಲೂ ಮೇ ತಿಂಗಳಲ್ಲಿ ಇದೇ ವಿಷಯದ ಮೇಲೆ ವಿಶೇಷ ಅಧಿವೇಶನ ನಡೆಸುವ ಸಾಧ್ಯತೆ ಇದೆ ಎಂದು ವರದಿ ಹೇಳಿದೆ.

ದೋವಲ್,ಯುಎಇ ಅಧ್ಯಕ್ಷರ ಭೇಟಿ: ಭದ್ರತೆ ಕುರಿತು ಚರ್ಚೆ

ಅಬುಧಾಬಿ: ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಶನಿವಾರ ಅಬುಧಾಬಿಯಲ್ಲಿ ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಅವರನ್ನು ಭೇಟಿ ಮಾಡಿ, ಉಭಯ ದೇಶಗಳ ಸಮಗ್ರ ಆಯಕಟ್ಟಿನ ಪಾಲುದಾರಿಕೆ ಮತ್ತು ಪ್ರಾದೇಶಿಕ ಭದ್ರತೆಯ ಕುರಿತು ಚರ್ಚಿಸಿದರು.

ಅಬುಧಾಬಿಯಲ್ಲಿ ನಡೆದ ಈ ಭೇಟಿಯ ಸಂದರ್ಭದಲ್ಲಿ, ದೋವಲ್, ಪ್ರಧಾನಿ ನರೇಂದ್ರ ಮೋದಿ ಅವರ ಶುಭಾಶಯಗಳನ್ನು ಅಧ್ಯಕ್ಷರಿಗೆ ತಲುಪಿಸಿದರು. ಉಭಯ ನಾಯಕರು ದ್ವಿಪಕ್ಷೀಯ ಬಾಂಧವ್ಯವನ್ನು ಗಾಢಗೊಳಿಸುವ ಮತ್ತು ಇಂಧನ ಭದ್ರತೆಗೆ ಸಂಬಂಧಿಸಿದಂತೆ ಸಹಕಾರವನ್ನು ಹೆಚ್ಚಿಸುವತ್ತ ಗಮನ ಹರಿಸಿದರು. ಮಧ್ಯಪ್ರಾಚ್ಯದಲ್ಲಿನ ಬೆಳವಣಿಗೆಗಳು ಹಾಗೂ ಅವು ಅಂತಾರಾಷ್ಟ್ರೀಯ ಸ್ಥಿರತೆಯ ಮೇಲೆ ಬೀರುವ ಪರಿಣಾಮಗಳ ಬಗ್ಗೆ ಚರ್ಚಿಸಲಾಯಿತು. ಅಬುಧಾಬಿ ರಾಜಕುಮಾರ ಶೇಖ್ ಖಾಲಿದ್ ಬಿನ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಮತ್ತು ರಾಷ್ಟ್ರೀಯ ಭದ್ರತಾ ಸುಪ್ರೀಂ ಕೌನ್ಸಿಲ್‌ನ ಪ್ರಧಾನ ಕಾರ್ಯದರ್ಶಿ ಅಲಿ ಬಿನ್ ಹಮ್ಮದ್ ಅಲ್ ಶಮ್ಸಿ , ಸಭೆಯಲ್ಲಿ ಉಪಸ್ಥಿತರಿದ್ದರು.

ರಾಜತಾಂತ್ರಿಕ ಹಿನ್ನೆಲೆ: ಒಂದೇ ತಿಂಗಳ ಅವಧಿಯಲ್ಲಿ ಉಭಯ ದೇಶಗಳ ನಡುವೆ ನಡೆಯುತ್ತಿರುವ ಎರಡನೇ ಉನ್ನತ ಮಟ್ಟದ ಭೇಟಿ ಇದಾಗಿದೆ. ಇತ್ತೀಚೆಗಷ್ಟೇ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ 9ನೇ ಹಿಂದು ಮಹಾಸಾಗರ ಸಮ್ಮೇಳನದ ನಂತರ ಯುಎಇ ಅಧ್ಯಕ್ಷರನ್ನು ಭೇಟಿ ಮಾಡಿದ್ದರು. ಪಾರದರ್ಶಕ ಆಯಕಟ್ಟಿನ ಪಾಲುದಾರಿಕೆ ಕಾಯ್ದುಕೊಳ್ಳುವುದು ಈ ನಿರಂತರ ಸಂವಾದಗಳ ಉದ್ದೇಶ ಎನ್ನಲಾಗಿದೆ.

ದಾಳಿ: ಅಮೆರಿಕದ ಸೇನಾ ನೆಲೆಗಳಿಗೆ ಭಾರೀ ಹಾನಿ

ವಾಷಿಂಗ್ಟನ್: ಫೆಬ್ರವರಿ 28 ರಿಂದ ಗಲ್ಫ್ ಪ್ರದೇಶದಲ್ಲಿನ ಅಮೆರಿಕದ ಮಿಲಿಟರಿ ನೆಲೆಗಳ ಮೇಲೆ ಇರಾನ್ ನಡೆಸಿದ ದಾಳಿಗಳು ಟ್ರಂಪ್ ಆಡಳಿತ ಬಹಿರಂಗಪಡಿಸಿದ್ದಕ್ಕಿಂತ ಹೆಚ್ಚಿನ ಹಾನಿಯನ್ನುಂಟುಮಾಡಿವೆ ಎಂದು ಆಂತರಿಕ ಮೌಲ್ಯಮಾಪನ ವರದಿಗಳು ತಿಳಿಸಿವೆ. ಕನಿಷ್ಠ ಏಳು ದೇಶಗಳಲ್ಲಿನ ಮಿಲಿಟರಿ ಸೌಲಭ್ಯಗಳ ಮೇಲೆ ಇರಾನ್ ದಾಳಿ ಮಾಡಿದೆ ಎಂದು ವರದಿ ಹೇಳಿದೆ. ಕಮಾಂಡ್ ಸೆಂಟರ್‌ಗಳು, ವಿಮಾನ ಹ್ಯಾಂಗರ್‌ಗಳು, ಗೋದಾಮುಗಳು ಮತ್ತು ಉಪಗ್ರಹ ಸಂವಹನ ವ್ಯವಸ್ಥೆಗಳು ಸೇರಿವೆ. ರನ್‌ವೇಗಳು, ರಾಡಾರ್ ವ್ಯವಸ್ಥೆಗಳು ಮತ್ತು ಕೆಲವು ವಿಮಾನಗಳಿಗೂ ಹಾನಿಯಾಗಿದೆ. ಈ ನೆಲೆಗಳು ಮತ್ತು ಉಪಕರಣಗಳ ದುರಸ್ತಿ ವೆಚ್ಚ, ಹಲವು ಬಿಲಿಯನ್ ಡಾಲರ್‌ಗಳಾಗಬಹುದು, ಎಂದು ಅಂದಾಜಿಸಲಾಗಿದೆ.

ರಕ್ಷಣಾ ವ್ಯವಸ್ಥೆಯ ಲೋಪಗಳು: ಅಮೆರಿಕ ಸುಧಾರಿತ ವಾಯು ರಕ್ಷಣಾ ವ್ಯವಸ್ಥೆಗಳನ್ನು ಹೊಂದಿದ್ದರೂ, ಕೆಲವು ಲೋಪಗಳು ಕಂಡುಬಂದಿವೆ. ಒಂದು ಘಟನೆಯಲ್ಲಿ, ಇರಾನ್‌ನ ಎಫ್-5 ಫೈಟರ್ ಜೆಟ್ ಅಮೆರಿಕದ ರಕ್ಷಣಾ ವ್ಯವಸ್ಥೆಯನ್ನು ಭೇದಿಸಿ ದಾಳಿ ನಡೆಸುವಲ್ಲಿ ಯಶಸ್ವಿಯಾಗಿದೆ ಎನ್ನಲಾಗಿದೆ. ಪೆಂಟಗನ್ ಮತ್ತು ಯುಎಸ್ ಸೆಂಟ್ರಲ್ ಕಮಾಂಡ್ ಹಾನಿಯ ಬಗ್ಗೆ ನಿರ್ದಿಷ್ಟ ವಿವರಗಳನ್ನು ನೀಡಲು ನಿರಾಕರಿಸಿವೆ.

ಆರ್ಥಿಕ ಪರಿಣಾಮಗಳು: ಪೆಂಟಗನ್ ಈಗಾಗಲೇ 200 ಬಿಲಿಯನ್ ಡಾಲರ್ ಹೆಚ್ಚುವರಿ ಬಜೆಟ್ ಕೋರಿದೆ ಎನ್ನಲಾಗಿದೆ. ಯುದ್ಧದ ಮೊದಲ ವಾರದಲ್ಲಿಯೇ ಅಮೆರಿಕ 11 ಬಿಲಿಯನ್ ಡಾಲರ್ ವೆಚ್ಚ ಮಾಡಿದೆ. ಯುದ್ಧ ಪ್ರಾರಂಭವಾಗುವ ಮೊದಲು 1.5 ಟ್ರಿಲಿಯನ್ ಡಾಲರ್ ರಕ್ಷಣಾ ಬಜೆಟ್‌ಗೆ ಪ್ರಸ್ತಾವನೆ ಸಲ್ಲಿಸಲಾಗಿತ್ತು.

ಪಾಕ್‌ನಲ್ಲಿ ತೀವ್ರ ಹಸಿವಿನ ಸಂಕಷ್ಟ

» ಜಗತ್ತಿನ ಟಾಪ್ 10 ರಾಷ್ಟ್ರಗಳಲ್ಲಿ ಪಾಕಿಸ್ತಾನ

» 2025ರಲ್ಲಿ 1.1 ಕೋಟಿ ಜನರಿಗೆ ಆಹಾರ ಕೊರತೆ

ಇಸ್ಲಾಮಾಬಾದ್: ಜಗತ್ತಿನಲ್ಲಿ ತೀವ್ರ ಆಹಾರ ಅಭಾವ ಎದುರಿಸುತ್ತಿರುವ ರಾಷ್ಟ್ರಗಳ ಪಟ್ಟಿಯಲ್ಲಿ ಪಾಕಿಸ್ತಾನವು ಪ್ರಮುಖ 10 ರಾಷ್ಟ್ರಗಳಲ್ಲಿ ಒಂದಾಗಿ ಗುರುತಿಸಲ್ಪಟ್ಟಿದೆ. ವಿಶ್ವಸಂಸ್ಥೆಯ ಬೆಂಬಲದೊಂದಿಗೆ ಪ್ರಕಟವಾದ 2026ರ ಜಾಗತಿಕ ಆಹಾರ ಸಂಕಷ್ಟ ವರದಿ ಈ ಸಂಗತಿಯನ್ನು ಬಹಿರಂಗಪಡಿಸಿದೆ.ಈ ವರದಿ ಪ್ರಕಾರ, ಪಾಕಿಸ್ತಾನವು ಅಫ್ಘಾನಿಸ್ತಾನ, ಬಾಂಗ್ಲಾದೇಶ, ಕಾಂಗೋ, ಮ್ಯಾನ್ಮಾರ್, ನೈಜೀರಿಯಾ, ದಕ್ಷಿಣ ಸುಡಾನ್, ಸುಡಾನ್, ಸಿರಿಯಾ ಮತ್ತು ಯೆಮನ್ ದೇಶಗಳ ಜೊತೆಗೂಡಿ ತೀವ್ರ ಹಸಿವಿನ ಪ್ರಮುಖ ಕೇಂದ್ರಗಳಲ್ಲಿ ಒಂದಾಗಿದೆ. 2025ರಲ್ಲಿ ಪಾಕಿಸ್ತಾನದಲ್ಲಿ ಸುಮಾರು 1.1 ಕೋಟಿ ಜನರು ತೀವ್ರ ಆಹಾರ ಅಸುರಕ್ಷತೆಗೆ ಒಳಗಾಗಿದ್ದಾರೆ. ಇವರಲ್ಲಿ 93 ಲಕ್ಷ ಜನರು ಗಂಭೀರ ಸಂಕಷ್ಟದ ಹಂತದಲ್ಲಿದ್ದರೆ, 17 ಲಕ್ಷ ಜನರು ಅತ್ಯಂತ ತುರ್ತು ಪರಿಸ್ಥಿತಿಯಲ್ಲಿ ಬದುಕುತ್ತಿದ್ದಾರೆ. ಬರಗಾಲದ ಸ್ಥಿತಿಗೆ ತಲುಪದಿದ್ದರೂ, ಈ ಪರಿಸ್ಥಿತಿ ಅತ್ಯಂತ ಗಂಭೀರವಾಗಿದೆ ಎಂದು ವರದಿ ಹೇಳಿದೆ.

ಭಾರತೀಯ ಕಂಪನಿಗಳಿಗೆ ಮಾರುಕಟ್ಟೆಗೆ ತೆರಿಗೆ ಮುಕ್ತ ಪ್ರವೇಶ

ಇಂದು ಭಾರತ-ನ್ಯೂಜಿಲೆಂಡ್ ಎಫ್‌ಟಿಎಗೆ ಸಹಿ

ಹೊಸದಿಲ್ಲಿ: ದ್ವಿಪಕ್ಷೀಯ ವ್ಯಾಪಾರವನ್ನು 5 ಬಿಲಿಯನ್ ಡಾಲರ್‌ಗೆ ದ್ವಿಗುಣಗೊಳಿಸುವ ಮತ್ತು ಹೂಡಿಕೆಯನ್ನು ಹೆಚ್ಚಿಸುವ ಗುರಿಯೊಂದಿಗೆ ಭಾರತ ಮತ್ತು ನ್ಯೂಜಿಲೆಂಡ್ ಸೋಮವಾರ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಲಿವೆ.

ಭಾರತದ ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ಮತ್ತು ನ್ಯೂಜಿಲೆಂಡ್‌ನ ಸಚಿವ ಟಾಡ್ ಮೆಕ್‌ಕ್ಲೇ, ಈ ಐತಿಹಾಸಿಕ ಒಪ್ಪಂದಕ್ಕೆ ಭಾರತ್ ಮಂಟಪದಲ್ಲಿ ಸಹಿ ಹಾಕಲಿದ್ದಾರೆ. ಈ ಒಪ್ಪಂದದಲ್ಲಿ ನ್ಯೂಜಿಲೆಂಡ್ ಮುಂದಿನ 15 ವರ್ಷಗಳಲ್ಲಿ ಭಾರತದ ಉತ್ಪಾದನೆ ಮತ್ತು ಮೂಲಸೌಕರ್ಯ ಕ್ಷೇತ್ರಗಳಲ್ಲಿ 20 ಬಿಲಿಯನ್ ಡಾಲರ್ ಹೂಡಿಕೆ ಮಾಡಲು ಬದ್ಧವಾಗಿದೆ.

ಈ ಒಪ್ಪಂದ, ಭಾರತೀಯ ಕಂಪನಿಗಳಿಗೆ ನ್ಯೂಜಿಲೆಂಡ್ ಮಾರುಕಟ್ಟೆಗೆ ತೆರಿಗೆ ಮುಕ್ತ ಪ್ರವೇಶ ನೀಡುತ್ತದೆ. ಪ್ರತಿಯಾಗಿ, ನ್ಯೂಜಿಲೆಂಡ್ ರಫ್ತು ಮಾಡುವ ಕುರಿ ಮಾಂಸ, ಉಣ್ಣೆ ಮತ್ತು ಕಲ್ಲಿದ್ದಲಿಗೆ ಭಾರತ ತೆರಿಗೆ ಮುಕ್ತ ಪ್ರವೇಶವನ್ನು ನೀಡಲಿದೆ. ಕಿವಿ ಹಣ್ಣು ಮತ್ತು ಸೇಬು ಸೇರಿದಂತೆ ನ್ಯೂಜಿಲೆಂಡ್‌ನ ಶೇ.95 ರಷ್ಟು ರಫ್ತು ವಸ್ತುಗಳ ಮೇಲಿನ ಸುಂಕವನ್ನು ಕಡಿಮೆ ಮಾಡಲಾಗುತ್ತದೆ ಅಥವಾ ರದ್ದುಗೊಳಿಸಲಾಗುತ್ತದೆ.



ಸಂರಕ್ಷಿತ ಕ್ಷೇತ್ರಗಳು: ಸ್ಥಳೀಯ ರೈತರ ಹಿತಾಸಕ್ತಿ ಕಾಪಾಡಲು ಡೈರಿ ಉತ್ಪನ್ನಗಳು, ಈರುಳ್ಳಿ, ಸಕ್ಕರೆ ಮತ್ತು ಧಾನ್ಯಗಳನ್ನು ಭಾರತ ಈ ಒಪ್ಪಂದದಿಂದ ಹೊರಗಿಟ್ಟಿದೆ. ಸೇವಾ ಕ್ಷೇತ್ರದಲ್ಲಿ, ನ್ಯೂಜಿಲೆಂಡ್ ಪ್ರತಿ ವರ್ಷ ಐಟಿ, ಆರೋಗ್ಯ ಮತ್ತು ಯೋಗ ಶಿಕ್ಷಕರು ಸೇರಿದಂತೆ ವಿವಿಧ ವೃತ್ತಿಪರರಿಗೆ 5,000 ತಾತ್ಕಾಲಿಕ ಉದ್ಯೋಗ ವೀಸಾಗಳನ್ನು ನೀಡಲಿದೆ. ಅಲ್ಲದೆ, ಜಾಗತಿಕ ಗುಣಮಟ್ಟದ ತಪಾಸಣಾ ವರದಿಗಳನ್ನು ಪರಸ್ಪರ ಅಂಗೀಕರಿಸುವ ಮೂಲಕ ಔಷಧೀಯ ವಲಯದ ರಫ್ತಿಗೂ ವೇಗ ನೀಡಲಾಗುವುದು.

ಆಗ್ರಾದ ಚರ್ಮೋದ್ಯಮಕ್ಕೆ ಭಾರೀ ಅವಕಾಶ: ಗೋಯಲ್

ಭಾರತ- ನ್ಯೂಜಿಲೆಂಡ್ ವ್ಯಾಪಾರ ಒಪ್ಪಂದ, ಆಗ್ರಾದ ಚರ್ಮೋದ್ಯಮಕ್ಕೆ ದೊಡ್ಡ ಮಾರುಕಟ್ಟೆಯನ್ನು ಒದಗಿಸಲಿದೆ ಎಂದು ಪಿಯೂಷ್ ಗೋಯಲ್ ತಿಳಿಸಿದ್ದಾರೆ. ಭಾನುವಾರ ಟಾಡ್ ಮೆಕ್‌ಕ್ಲೇ ಅವರೊಂದಿಗೆ ತಾಜ್ ಮಹಲ್‌ಗೆ ಭೇಟಿ ನೀಡಿದ ಸಂದರ್ಭದಲ್ಲಿ ಮಾತನಾಡಿದ ಅವರು, ತೆರಿಗೆ ಮುಕ್ತ ಪ್ರವೇಶದಿಂದಾಗಿ ಆಗ್ರಾದ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಹೆಚ್ಚಿನ ಲಾಭವಾಗಲಿದ್ದು, ಈ ಭಾಗದಲ್ಲಿ ಹೊಸ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ, ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಸ್ಥಳೀಯಾಡಳಿತ ಚುನಾವಣೆಯಲ್ಲಿ ಬಿಜೆಪಿ ಜಯಭೇರಿ

736 ಸ್ಥಾನಗಳಲ್ಲಿ ಬಿಜೆಪಿ ಅವಿರೋಧ ಆಯ್ಕೆ

ಗಾಂಧಿನಗರ: ಗುಜರಾತ್ ರಾಜ್ಯದ ಸ್ಥಳೀಯಾಡಳಿತ ಚುನಾವಣೆಯಲ್ಲಿ ಬಿಜೆಪಿ 736 ಸ್ಥಾನಗಳನ್ನು ಅವಿರೋಧವಾಗಿ ಗೆದ್ದಿದೆ. 2021ರ ಸ್ಥಳೀಯಾಡಳಿತ ಚುನಾವಣೆಯಲ್ಲಿ ಬಿಜೆಪಿ ಗಳಿಸಿದ್ದ ಸ್ಥಾನ 220 ಮತ್ತು 2015ರಲ್ಲಿ 37 ಸ್ಥಾನ ಪಡೆದಿತ್ತು. ಏ.15ರಂದು ವಡೋದರ, ಸೂರತ್, ಮೆಹ್ಸಾನಾ ಮತ್ತು ಬನಸ್ಕಾಂತಗಳ 400ಕ್ಕೂ ಅಧಿಕ ವಿಪಕ್ಷೀಯ ಅಭ್ಯರ್ಥಿಗಳು ಗಂಟೆಗಳೊಳಗೆ ತಮ್ಮ ನಾಮಪತ್ರ ಹಿಂಪಡೆದಿದ್ದರು. ಇದು ಸಹಜವಾಗೇ ಬಿಜೆಪಿಗೆ ಪ್ಲಸ್ ಪಾಯಿಂಟ್ ಆಯಿತು.ಇನ್ನಷ್ಟು ಮಹಾನಗರಪಾಲಿಕೆಗಳು, ಪುರಸಭೆಗಳು, ಜಿಪಂ-ತಾಪಂಗಳು ಮುಂದಿನ ದಿನಗಳಲ್ಲಿ ಚುನಾವಣೆ ಎದುರಿಸಲಿವೆ.



ರಾಜ್ಯದ 15 ಮಹಾನಗರಪಾಲಿಕೆಗಳು, 84 ಪುರಸಭೆಗಳು, 34 ಜಿಲ್ಲಾ ಪಂಚಾಯತ್‌ಗಳು , 260 ತಾಲೂಕು ಪಂಚಾಯತ್‌ಗಳು ಚುನಾವಣೆ ಎದುರಿಸುತ್ತಿವೆ. ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ನಂತರದಲ್ಲಿ ರಾಜ್ಯದಲ್ಲಿ ನಡೆದ ಪ್ರಥಮ ಚುನಾವಣೆ ಇದಾಗಿದೆ. ಈ ಬಾರಿಯ ಸ್ಥಳೀಯಾಡಳಿತ ಚುನಾವಣೆಯಲ್ಲಿ 4.1ಕೋಟಿ ಮತದಾರರು ಮತ ಚಲಾಯಿಸುವ ಹಕ್ಕು ಹೊಂದಿದ್ದಾರೆ ಮತ್ತು 25,537 ಅಭ್ಯರ್ಥಿಗಳು ಸ್ಪರ್ಧಾ ಕಣದಲ್ಲಿದ್ದಾರೆ. ಹೊಸತಾಗಿ ರೂಪುಗೊಂಡ 9 ಮಹಾನಗರಪಾಲಿಕೆಗಳು ಪ್ರಥಮ ಬಾರಿ ಚುನಾವಣೆ ಎದುರಿಸುತ್ತಿವೆ.

1995ರಿಂದ ಗುಜರಾತ್‌ನಲ್ಲಿ ಬಿಜೆಪಿ ಅಧಿಕಾರದಲ್ಲಿದೆ.ರಾಜ್ಯದಲ್ಲಿ 2027ರಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದೆ. ವಿಧಾನಸಭಾ ಚುನಾವಣೆಗೆ ಒಂದು ವರ್ಷ ಮುನ್ನ ಸ್ಥಳೀಯಾಡಳಿತ ಚುನಾವಣೆಗಳು ನಡೆದಿವೆ. 2015ರ ಸ್ಥಳೀಯಾಡಳಿತ ಚುನಾವಣೆಯಲ್ಲಿ ಕಾಂಗ್ರೆಸ್ ಪಾರಮ್ಯ ಸಾಧಿಸಿತ್ತು. ಇದು ನಂತರ 2017ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಪೂರಕವಾಗಿ ಪರಿಣಮಿಸಿತ್ತು . ಚುನಾವಣೆಯಲ್ಲಿ 182ಸದಸ್ಯ ಬಲದ ವಿಧಾನಸಭೆಯಲ್ಲಿ 77 ಸ್ಥಾನ ಹೊಂದಲು ಕಾಂಗ್ರೆಸ್‌ಗೆ ಶಕ್ಯವಾಗಿತ್ತು. ಬಿಜೆಪಿ ಸ್ಥಾನಬಲ ಆಗ 99ರಷ್ಟಿತ್ತು. ಕಳೆದ ಸ್ಥಳೀಯಾಡಳಿತ ಚುನಾವಣೆಯಲ್ಲಿ ರಾಜ್ಯದ ಬಹುತೇಕ ಎಲ್ಲಾ ಪ್ರಮುಖ ಮಹಾನಗರಪಾಲಿಕೆಗಳನ್ನು ಬಿಜೆಪಿ ಮತ್ತೆ ತನ್ನಲ್ಲೇ ಉಳಿಸಿಕೊಳ್ಳಲು ಯಶಸ್ವಿಯಾಗಿತ್ತು. ಕಾಂಗ್ರೆಸ್‌ನ್ನು ಬದಿಗೊತ್ತಿ ಆಮ್ ಆದ್ಮಿ ಪಕ್ಷ ದ್ವಿತೀಯ ಬೃಹತ್ ಪಕ್ಷವಾಗಿ ಮೂಡಿತ್ತು.

ಪ್ರಮುಖ ಪಾತ್ರ ವಹಿಸಲಿದೆ ಮೀಸಲಾತಿ: ಇತರ ಹಿಂದುಳಿದ ಜಾತಿಗಳಿಗೆ (ಒಬಿಸಿ)ಶೇ.27ಮೀಸಲಾತಿ, ಮಹಿಳೆಯರಿಗೆ ಶೇ. 50 ಸ್ಥಾನ ಮೀಸಲು ಮತ್ತು ಹಲವಾರು ಹುದ್ದೆಗಳಲ್ಲಿ ಪ.ಪಂಗಡಗಳು ಮತ್ತು ಜಾತಿ ಸ್ಥಾನಗಳ ಆವರ್ತನ ಅನುಷ್ಠಾನಗೊಂಡ ನಂತರ ನಡೆಯುತ್ತಿರುವ ಪ್ರಥಮ ಚುನಾವಣೆ ಇದಾಗಿದೆ. ಪ್ರಥಮ ಬಾರಿ ಒಬಿಸಿ ಅಭ್ಯರ್ಥಿಗಳಿಗೆ 7 ಜಿಲ್ಲಾ ಪಂಚಾಯತ್‌ಗಳ ಅಧ್ಯಕ್ಷ ಸ್ಥಾನಗಳನ್ನು ಮೀಸಲಿಡಲಾಗಿದೆ. ಸುಮಾರು 5ಸಾವಿರ ಸೀಟುಗಳಿಗೆ ಆಪ್ ಅಭ್ಯರ್ಥಿಗಳು ಸ್ಪರ್ಧಾಕಣದಲ್ಲಿದ್ದಾರೆ.

ಕಣಚೂರು: ಪದವಿ ಪ್ರದಾನ ಸಮಾರಂಭದಲ್ಲಿ ಡಾ. ಬಿ. ಎಲ್. ಸುಜಾತಾ ರಾಥೋಡ್

ಧನಾತ್ಮಕ ಚಿಂತನೆಯೊಂದಿಗೆ ಮುನ್ನಡೆಯಿರಿ



• **ಕೊಣಾಜೆ:** ಕಣಚೂರು ಸಮೂಹ ಶಿಕ್ಷಣ ಸಂಸ್ಥೆಗಳ ನರ್ಸಿಂಗ್, ಫಿಸಿಯೋಥೆರಪಿ ಹಾಗೂ ಅಲೈಡ್ ಹೆಲ್ತ್ ಸೈನ್ಸಸ್ ಕಾಲೇಜಿನ 2026ನೇ ಸಾಲಿನ ಪದವಿ ಪ್ರದಾನ ಸಮಾರಂಭವು ಸಂಸ್ಥೆಯ 'ಕಣಚೂರು ಕಾನ್ಫರೆನ್ಸ್ ಡೋಮ್'ನಲ್ಲಿ ಶನಿವಾರ ನಡೆಯಿತು.

ಕರ್ನಾಟಕ ಸರ್ಕಾರದ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕಿ ಡಾ. ಬಿ. ಎಲ್. ಸುಜಾತಾ ರಾಥೋಡ್ ಅವರು ಪದವಿ ಪ್ರದಾನ ಮಾಡಿ ಮಾತನಾಡಿ, ಪದವಿ ಗಳಿಕೆ ನಮ್ಮ ಜ್ಞಾನ, ಕೌಶಲಗಳಿಗೆ ಸಾಕ್ಷಿಯಾಗಿದೆ. ಇದರೊಂದಿಗೆ ಪರಿಶ್ರಮ, ತಾಳ್ಮೆಯೊಂದಿಗೆ ವೃತ್ತಿ ಜೀವನದಲ್ಲಿ ಮುನ್ನಡೆದರೆ ಯಶಸ್ಸುಗಳಿಸಲು ಸಾಧ್ಯ. ಡಿಜಿಟಲ್ ಯುಗದಲ್ಲಿ ಯುವ ಸಮುದಾಯ ಧನಾತ್ಮಕ ಚಿಂತನೆಯೊಂದಿಗೆ ಅವಕಾಶಗಳನ್ನು ಸದ್ಬಳಕೆ ಮಾಡಿಕೊಂಡು ಮುನ್ನಡೆಯಬೇಕು. ಆರೋಗ್ಯ ಸೇವೆಯಲ್ಲಿ ಫಿಸಿಯೋಥೆರಪಿ, ನರ್ಸಿಂಗ್, ಅಲೈಡ್ ಹೆಲ್ತ್ ಸೈಯನ್ಸ್ ಸೇವೆಗಳು ಸಮಾಜದಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದರು. ಆರೋಗ್ಯಸೇವೆ, ವೈದ್ಯಕೀಯ ವೃತ್ತಿಯು ಸಮಾಜದ ಗೌರವಯುತ ಮತ್ತು ಅತ್ಯಂತ ಜವಾಬ್ದಾರಿಯುತ ವೃತ್ತಿಯಾಗಿದೆ. ಇಂದಿನ ಡಿಜಿಟಲ್, ಸ್ಪರ್ಧಾತ್ಮಕ ಯುಗದಲ್ಲಿ ಈ ವೈದ್ಯಕೀಯ ಅಥವಾ ಆರೋಗ್ಯ ಕ್ಷೇತ್ರದಲ್ಲಿ ದುಡಿಯುವವರು ಒತ್ತಡಮುಕ್ತವಾಗಿ ಸೇವಾನಿರತರಾಗುವುದರ ಜೊತೆಗೆ ತಾಳ್ಮೆ, ಸ್ವಯಂ ಆರೋಗ್ಯ ಕಾಳಜಿ ಬೆಳೆಸಿಕೊಳ್ಳಬೇಕು ಹಾಗೂ ಮುಖ್ಯವಾಗಿ ನಮಗಾಗಿ ಕಾಯುವ ಕುಟುಂಬದವರೊಂದಿಗೂ ಬೆರೆಯಲು ಸಮಯ ಮೀಸಲಿಡಿ ಎಂದು ಹೇಳಿದರು.

ಕರ್ನಾಟಕ ರಾಜ್ಯ ಮಿತ್ರ ಮತ್ತು ಆರೋಗ್ಯ ರಕ್ಷಣಾ ಮಂಡಳಿಯ ಅಧ್ಯಕ್ಷರಾದ ಡಾ. ಯು. ಟಿ. ಇಫ್ತಿಕಾರ್ ಫರೀದ್ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿ, ಪದವಿಯ ಬಳಿಕ ನಾವು ವೃತ್ತಿಯಲ್ಲಿ ತೊಡಗಿಕೊಂಡರೂ ನಾವು ನಡೆದು ಬಂದ ಹಾದಿಯನ್ನು ಮರೆಯದೆ ಕಲಿತ ಶಿಕ್ಷಣ ಸಂಸ್ಥೆ, ಶಿಕ್ಷಕರು, ಪಾಲಕರನ್ನು ಎಂದಿಗೂ ಮರೆಯದೆ ಸಮಾಜದಲ್ಲಿ ಉತ್ತಮ ವ್ಯಕ್ತಿಯಾಗಿ ಮುನ್ನಡೆಯಿರಿ ಎಂದರು.

ಕಣಚೂರು ಇಸ್ಲಾಮಿಕ್ ಶಿಕ್ಷಣ ಟ್ರಸ್ಟ್‌ನ ಅಧ್ಯಕ್ಷರಾದ ಡಾ. ಹಾಜಿ ಯು. ಕೆ. ಮೋನು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಪ್ರತಿಯೊಬ್ಬ ತಂದೆ ತಾಯಿಗೂ ತಮ್ಮ ಮಕ್ಕಳು ಉತ್ತಮ ಹಂತಕ್ಕೆ ಬರಬೇಕೆಂಬ ಕನಸು ಇರುತ್ತದೆ. ಜೀವನದಲ್ಲಿ ಎಲ್ಲಿಯೂ ಎಡವದೇ ಉತ್ತಮ ಪರಿಶ್ರಮ ಸಾಧನೆಯೊಂದಿಗೆ ಮುನ್ನಡೆಯಿರಿ ಎಂದರು.

ಕಾರ್ಯಕ್ರಮದಲ್ಲಿ ಕಣಚೂರು ವೈದ್ಯಕೀಯ ಕಾಲೇಜಿನ ಡೀನ್ ಡಾ. ಶಹನವಾಜ್ ಮಣಿಪಾಡಿ, ಟ್ರಸ್ಟಿಗಳಾದ ರೋಹಿನಾ ಮೋನು, ಉಮಯಾ ಬಾನು, ಹೆಲ್ತ್ ಸೈನ್ಸ್ ಸಲಹಾ ಸಮಿತಿ ಅಧ್ಯಕ್ಷ ಮಹಮ್ಮದ್ ಇಸ್ಮಾಯಿಲ್, ಮೆಡಿಕಲ್ ಸುಪರಿಂಟೆಂಡೆಂಟ್ ಡಾ.ಅಂಜನ್ ಕುಮಾರ್, ಸಲಹಾ ಸಮಿತಿ ಸದಸ್ಯ ಡಾ.ವೆಂಕಟರಾಯ ಪ್ರಭು, ಕಣಚೂರು ನರ್ಸಿಂಗ್ ವಿಭಾಗದ ಪ್ರಾಂಶುಪಾಲೆ ಡಾ. ಮೋಲಿ ಸಲ್ದಾನ, ಕಣಚೂರು ಕಾಲೇಜಿನ ಫಿಸಿಯೋಥೆರಪಿ ವಿಭಾಗದ ಪ್ರಾಂಶುಪಾಲ ಮೊಹಮ್ಮದ್ ಸುಹೈಲ್, ಹೆಲ್ತ್ ಸೈಯನ್ಸ್ ವಿಭಾಗದ ಡಾ.ಶಮೀಮ ಮೊದಲಾದವರು ಉಪಸ್ಥಿತರಿದ್ದರು.

ಕಣಚೂರು ಮೆಡಿಕಲ್ ಅಕಾಡೆಮಿಯ ನಿರ್ದೇಶಕ ಅಬ್ದುಲ್ ರಹಿಮಾನ್ ಅವರು ಸ್ವಾಗತಿಸಿದರು. ಕಣಚೂರು ನರ್ಸಿಂಗ್ ವಿಭಾಗದ ಪ್ರಾಂಶುಪಾಲೆ ಡಾ. ಮೋಲಿ ಸಲ್ದಾನ ಅವರು ವಂದಿಸಿದರು. ಪ್ರತೀಕ್ಷಾ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.

ಕೆನರಾ ಕಾಲೇಜು: ಬಸವ ಜಯಂತಿ



• **ಮಂಗಳೂರು:** ಕೆನರಾ ಕಾಲೇಜು (ಸ್ವಾಯತ್ತ) ಮಂಗಳೂರು ಇದರ ಕನ್ನಡ ವಿಭಾಗ ವತಿಯಿಂದ ಬಸವ ಜಯಂತಿ ಕಾರ್ಯಕ್ರಮ ನಡೆಯಿತು.

ಮುಖ್ಯ ಅತಿಥಿಯಾಗಿದ್ದ ಸುರತ್ಕಲ್ ಗೋವಿಂದದಾಸ್ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಸಂತೋಷ್ ಆಳ್ವ ಮಾತನಾಡಿ, ಬಸವಣ್ಣರ ಸಮಾನತೆಯ ಸಂದೇಶ, ಕಾಯಕ ಮತ್ತು ದಾಸೋಹ ತತ್ವಗಳು ಇಂದಿನ ಸಮಾಜದಲ್ಲಿಯೂ ಅತ್ಯಂತ ಪ್ರಸ್ತುತವಾಗಿವೆ. ಜಾತಿ, ವರ್ಗ, ಮತಭೇದಗಳನ್ನು ಮೀರಿ ಮಾನವೀಯತೆ ಮತ್ತು ನೈತಿಕತೆ ಆಧಾರಿತ ಜೀವನವನ್ನೇ ಬಸವ ತತ್ವ ಸಾರುತ್ತದೆ. ಇಂತಹ ಮೌಲ್ಯಾಧಾರಿತ ಚಿಂತನೆಗಳು ಯುವಪೀಳಿಗೆಗೆ ದಿಕ್ಕು ತೋರಿಸುವಲ್ಲಿ ಮಹತ್ವದ ಪಾತ್ರ ವಹಿಸಬೇಕು ಎಂದರು.

ಅಧ್ಯಕ್ಷತೆವಹಿಸಿದ್ದ ಕೆನರಾ ಕಾಲೇಜಿನ ಪ್ರಭಾರ ಪ್ರಾಂಶುಪಾಲರಾದ ಪ್ರೊ. ದೇಚಮ್ಮ ಮಾತನಾಡಿ, ವೈಚಾರಿಕತೆ ವಚನ ಸಾಹಿತ್ಯದ ಮೂಲಭೂತ ವಿಚಾರ. ಪ್ರತಿಭಟನೆ ಮನೋಧರ್ಮವನ್ನು ವಚನ ಸಾಹಿತ್ಯದಲ್ಲಿ ಕಾಣಬಹುದು. ಜೀವನದ ಸಾರ ಸರ್ವಸ್ವವನ್ನು ವಚನ ಸಾಹಿತ್ಯದ ಮೂಲಕ ಸಮಾಜಕ್ಕೆ ಅರ್ಪಿಸಿದ ವಚನಕಾರರು ಶ್ರೇಷ್ಠ ಪರಂಪರೆಯ ಹರಿಕಾರರು ಎಂದು ಅಭಿಪ್ರಾಯಪಟ್ಟರು.

ಕನ್ನಡ ವಿಭಾಗದ ಮುಖ್ಯಸ್ಥೆ ವಾಣಿ ಯು. ಎಸ್ ಹಾಗೂ ಉಪನ್ಯಾಸಕ ಪ್ರದೀಪ್ ಬಿ. ಉಪಸ್ಥಿತರಿದ್ದರು. ಸುಧಾ ಸ್ವಾಗತಿಸಿದರು. ಧನುಶ್ರೀ ವಂದಿಸಿದರು. ವಿದ್ಯಾರ್ಥಿ ಅಭಿಷೇಕ್ ಕಾಮತ್ ಕಾರ್ಯಕ್ರಮವನ್ನು ನಿರೂಪಿಸಿದರು.

ಮೀನುಗಾರಿಕೆಗೆ ಸಬ್ಸಿಡಿ ದರದಲ್ಲಿ ಸೀಮೆಎಣ್ಣೆ ಒದಗಿಸಲು ಆಗ್ರಹ



• **ಬೈಂದೂರು:** ಕೈಗಾರಿಕೆ ಬಳಕೆಯ ಸೀಮೆಎಣ್ಣೆ ಪ್ರತಿ ಲೀಟರ್ ದರ 150 ರೂಪಾಯಿ ದಾಟಿದೆ. ರಾಜ್ಯದಲ್ಲಿರುವ ಸಾಂಪ್ರದಾಯಿಕ ನಾಡದೋಣಿ ಮೀನುಗಾರಿಕಾ ವಲಯ ಸೀಮೆಎಣ್ಣೆಯನ್ನೇ ಅವಲಂಬಿಸಿದ್ದು, ವಾರ್ಷಿಕ 24,080 ಲೀ. ವರೆಗೆ ಸೀಮೆಎಣ್ಣೆ ಬೇಡಿಕೆ ಇರುತ್ತದೆ. ಪ್ರಸ್ತುತ ಮೀನುಗಾರಿಗೆ ಸಬ್ಸಿಡಿ ದರದಲ್ಲಿ ಕೊಡುತ್ತಿದ್ದ ಸೀಮೆಎಣ್ಣೆ ಕೂಡ ಪೆಟ್ರೋಲ್‌ಗಿಂತ ತುಟ್ಟಿಯಾಗಿದೆ ಎಂದು ಬೈಂದೂರು ವಲಯ ನಾಡದೋಣಿ ಸಂಘದ ಅಧ್ಯಕ್ಷ ಅಳಿವೆಗದ್ದೆ ನಾಗೇಶ ಖಾರ್ವಿ ಹೇಳಿದರು.

ರಾಜ್ಯದಲ್ಲಿ ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮದ ಕೆಎಫ್‌ಡಿಸಿ ಮೂಲಕ ಮೀನುಗಾರಿಕೆಗೆ ಸೀಮೆಎಣ್ಣೆ ವಿತರಿಸಲಾಗುತ್ತದೆ ಕೆಎಫ್‌ಡಿಸಿ ವಿತರಿಸುವ ಸೀಮೆಎಣ್ಣೆಯು ಪ್ರತಿ ಲೀಟರಿಗೆ ರಾಜ್ಯ ಸರ್ಕಾರ 35 ರೂಪಾಯಿ ರಿಯಾಯಿತಿ ನೀಡುತ್ತದೆ. ಸೀಮೆಎಣ್ಣೆ ದರ ಎಷ್ಟೇ ಏರಿಕೆಯಾದರೂ ಅದರಲ್ಲಿ 35 ಕಡಿತವಾಗಿ ಮೀನುಗಾರರಿಗೆ ವಿತರಿಸಲಾಗುತ್ತದೆ. ಸದ್ಯ ಆ ಸಬ್ಸಿಡಿ ಸೀಮೆಎಣ್ಣೆ ಬೆಲೆ 117.50 ಆಗಿದ್ದು, ರಾಜ್ಯ ಸರ್ಕಾರ 35 ರೂಪಾಯಿಯವರೆಗೆ ಸಬ್ಸಿಡಿಯನ್ನು ನೀಡುತ್ತಿದೆ. ಆದರೆ ಸಾಂಪ್ರದಾಯಿಕ ನಾಡದೋಣಿ ಮೀನುಗಾರರಿಗೆ ಯಾವುದೇ ಸಬ್ಸಿಡಿ ಸಿಗುತ್ತಿಲ್ಲ ಎಂದು ಮೀನುಗಾರರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ರಾಜ್ಯದಲ್ಲಿ 830 ನಾಡದೋಣಿ ಗಳಿಗೆ ಸಬ್ಸಿಡಿ ಸೀಮೆಎಣ್ಣೆ ವಿತರಿಸಲಾಗುತ್ತಿದೆ. ಎರಡು ವರ್ಷಗಳ ಹಿಂದೆ ಇದೇ ಸಬ್ಸಿಡಿ ಸೀಮೆಎಣ್ಣೆ ದರ ಪ್ರತಿ ಲೀಟರಿಗೆ 51 ರೂಪಾಯಿ ಇತ್ತು ಕೆಲ ತಿಂಗಳ ಹಿಂದೆ 65 ಆಗಿತ್ತು. ಈಗ 117 ಆಗಿದೆ. ರಾಜ್ಯದ ಮೂರು ಜಿಲ್ಲೆಯ ನಾಡದೋಣಿ ಮೀನುಗಾರರು ಮೀನುಗಾರಿಕೆ ಮಾಡಲಾಗದ ಪರಿಸ್ಥಿತಿ ಉಂಟಾಗಿದೆ. ನಾಡದೋಣಿ ಮೀನುಗಾರರು ಜೀವನ ನಡೆಸುವುದು ತುಂಬಾ ಕಷ್ಟವಾಗಿದೆ. ಆದ್ದರಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಜನಪ್ರತಿನಿಧಿಗಳು ಗಮನಹರಿಸಬೇಕೆಂದು ನಾಗೇಶ ಖಾರ್ವಿ ಮನವಿ ಮಾಡಿದ್ದಾರೆ.

ಕೊಡಗು ಜಿಲ್ಲಾಡಳಿತದಿಂದ ಡಾ.ರಾಜ್ ಕುಮಾರ್ ಅವರ 97ನೇ ಜನ್ಮ ದಿನಾಚರಣೆ

ಕನ್ನಡ ನಾಡಿನ ಧ್ರುವತಾರೆ: ಪಿ.ಕಲಾವತಿ



• **ಮಡಿಕೇರಿ:** ಕರ್ನಾಟಕ ರತ್ನ, ಪದ್ಮಭೂಷಣ, ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಪುರಸ್ಕೃತರಾದ ಡಾ.ರಾಜ್ ಕುಮಾರ್ ಅವರು ಕನ್ನಡ ನಾಡು, ನುಡಿಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ ಎಂದು ನಗರಸಭೆ ಅಧ್ಯಕ್ಷೆ ಪಿ.ಕಲಾವತಿ ಅವರು ತಿಳಿಸಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಕುಶಾಲನಗರದ ಕನ್ನಡ ಸಿರಿ ಸ್ನೇಹ ಬಾಗ್ ಸಹಯೋಗದಲ್ಲಿ ನಗರದ ಗಾಂಧಿ ಭವನದಲ್ಲಿ ಶುಕ್ರವಾರ ನಡೆದ ಡಾ.ರಾಜ್ ಕುಮಾರ್ ಅವರ 97 ನೇ ಜನ್ಮ ದಿನಾಚರಣೆ ಹಾಗೂ ಡಾ.ರಾಜ್‌ಕುಮಾರ್ ಅವರ ಚಲನಚಿತ್ರ ಗೀತೆಗಳ ಗಾಯನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಡಾ.ರಾಜ್ ಕುಮಾರ್ ಅವರು ಗೋಕಾಕ್ ಚಳುವಳಿ ಮೂಲಕ ಕನ್ನಡ ನಾಡಿನಲ್ಲಿ ಹೊಸ ಅಲೆ ಸೃಷ್ಟಿಸಿ, ಕನ್ನಡ ನಾಡು, ನುಡಿ, ಭಾಷೆ ಅಭಿವೃದ್ಧಿಗೆ ಶ್ರಮಿಸಿದ್ದಾರೆ ಎಂದರು.

ಡಾ.ರಾಜ್ ಕುಮಾರ್ ಅವರು ಕನ್ನಡ ಚಿತ್ರರಂಗದ ಧ್ರುವತಾರೆಯಾಗಿ ಮೆರೆದಿದ್ದಾರೆ. ನಟ ಸಾರ್ವಭೌಮ ಮತ್ತು ಖ್ಯಾತ ಹಿನ್ನೆಲೆ ಗಾಯಕರಾಗಿ ಚಲನಚಿತ್ರ ರಂಗದಲ್ಲಿ ಬೆಳಕು ಚೆಲ್ಲಿದ್ದಾರೆ ಎಂದು ನಗರಸಭೆ ಅಧ್ಯಕ್ಷರು ನುಡಿದರು.

ನಿವೃತ್ತ ಶಿಕ್ಷಕ ಉ.ರಾ.ನಾಗೇಶ್ ಅವರು ಮುಖ್ಯ ಭಾಷಣಕಾರರಾಗಿ ಪಾಲ್ಗೊಂಡು ಮಾತನಾಡಿ ಡಾ.ರಾಜ್ ಕುಮಾರ್ ಅವರು 200 ಕ್ಕೂ ಹೆಚ್ಚು ಚಲನಚಿತ್ರಗಳಲ್ಲಿ 'ಮನೋಜ್ಞ ಅಭಿನಯ' ನೀಡಿ ಇಂದಿಗೂ ಸಹ ನಾಡಿನ ಜನರಲ್ಲಿ ಕಣ್ಣಿಗೆ ಕಟ್ಟುವಂತೆ ಇದ್ದಾರೆ ಎಂದು ಹೇಳಿದರು.

ಕೊಡಗು ಜಾನಪದ ಪರಿಷತ್ತು ಜಿಲ್ಲಾ ಘಟಕದ ಅಧ್ಯಕ್ಷ ಬಿ.ಜಿ.ಅನಂತಶಯನ ಅವರು ಮಾತನಾಡಿ, 'ಡಾ.ರಾಜ್ ಕುಮಾರ್ ಅವರ ಸರಳತೆ, ಕನ್ನಡ ಭಾಷೆಯ ಮೇಲಿನ ಪ್ರೀತಿ, ಸಂಸ್ಕೃತಿಯ ಕೊಡುಗೆಯಿಂದ ಡಾ.ರಾಜ್‌ಕುಮಾರ್ ಅವರನ್ನು 'ಅಣ್ಣಾವ್ರು' ಎಂದು ಕರೆಯುತ್ತಾರೆ ಎಂದು ತಿಳಿಸಿದರು.

ಡಾ.ರಾಜ್ ಕುಮಾರ್ ಅವರು ಸಾಮಾಜಿಕ ಕಳಕಳಿಯ ಚಲನಚಿತ್ರಗಳಲ್ಲಿ ನಟಿಸಿ ಇಂದಿಗೂ ಸಹ ಚಲನಚಿತ್ರಗಳನ್ನು ನೋಡುವಂತೆ ಮಾಡಿದ್ದಾರೆ. ಕನ್ನಡ ಚಿತ್ರರಂಗದಲ್ಲಿ ಮೇರು ಪರ್ವತವಾಗಿ ಹೆಸರು ಮಾಡಿದ್ದಾರೆ ಎಂದರು.

ಕುಶಾಲನಗರದ ಕನ್ನಡ ಸಿರಿ ಸ್ನೇಹ ಬಳಗದ ಅಧ್ಯಕ್ಷ ಲೋಕೇಶ್ ಸಾಗರ್ ಅವರು ಮಾತನಾಡಿ ಡಾ.ರಾಜ್ ಕುಮಾರ್ ಜಯಂತಿಯನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಜೊತೆ ಕೈಜೋಡಿಸಿ ಕಾರ್ಯಕ್ರಮ ಆಯೋಜಿಸಬೇಕೆಂದು ತೀರ್ಮಾನಿಸಲಾಗಿತ್ತು, ಅದರಂತೆ ಆಯೋಜಿಸಲಾಗಿದೆ ಎಂದರು.

'ತಿಂಗಳ (ಮಾಸದ) ನೆನಪು' ಕನ್ನಡ ಭಾಷೆಗೆ ಸಲ್ಲಿಸಿರುವ ಸೇವೆಯನ್ನು ಸ್ಮರಿಸಿ, ಸಾಹಿತಿಗಳು, ಕವಿಗಳು ಸೇರಿದಂತೆ ಕನ್ನಡ ನಾಡು ನುಡಿಗೆ ಅಪಾರ ಕೊಡುಗೆ ನೀಡಿರುವವರನ್ನು ಸ್ಮರಿಸುವ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ ಎಂದು ಹೇಳಿದರು.

ತಹಶೀಲ್ದಾರ್ ಶ್ರೀಧರ್, ಸರ್ವೋದಯ ಸಮಿತಿ ಜಿಲ್ಲಾ ಘಟಕದ ಅಧ್ಯಕ್ಷ ಅಂಬೆಕಲ್ಲು ಕುಶಾಲಪ್ಪ, ಡಿವೈಎಸ್‌ಪಿ ಸೂರಜ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕುಮಾರ, ನಗರಸಭೆ ಮಾಜಿ ಅಧ್ಯಕ್ಷೆ ಲತಾ ಬಂಗೇರ, ಪ್ರಮುಖರಾದ ಸಂಪತ್ ಕುಮಾರ್, ಅಂಬೆಕಲ್ ನವೀನ್, ಜಯಕುಮಾರ್, ಜಯಲಕ್ಷ್ಮಿ, ಕಿಗ್ಗಾಲು ಗಿರೀಶ್ ಇತರರು ಇದ್ದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕ ಚಿನ್ನಸ್ವಾಮಿ ಸ್ವಾಗತಿಸಿದರೆ, ಸಮರ್ಥ ಕನ್ನಡಿಗ ಬಳಗದ ಅಧ್ಯಕ್ಷೆ ಜಯಲಕ್ಷ್ಮಿ ಮತ್ತು ತಂಡದವರು ನಾಡಗೀತೆ ಹಾಡಿದರು. ಮಣಜೂರು ಮಂಜುನಾಥ್ ನಿರೂಪಿಸಿ, ವಂದಿಸಿದರು.

ಕನ್ನಡ ಸಿರಿ ಸ್ನೇಹ ಬಳಗದಿಂದ ಗಾಯನ

ಸಭಾಕಾರ್ಯಕ್ರಮದನಂತರಕುಶಾಲನಗರದ ಕನ್ನಡ ಸಿರಿ ಸ್ನೇಹ ಬಳಗದ ಅಧ್ಯಕ್ಷ ಲೋಕೇಶ್ ಸಾಗರ್ ಅವರ ನೇತೃತ್ವದಲ್ಲಿ, ಡಾ.ರಾಜ್ ಕುಮಾರ್ ಅವರ 97ನೇ ಜನ್ಮ ದಿನಾಚರಣೆ ಪ್ರಯುಕ್ತ ಡಾ.ರಾಜ್ ಕುಮಾರ್ ಅವರ ಗೀತಾ ಗಾಯನ ಕಾರ್ಯಕ್ರಮ ನಡೆಯಿತು.

ಸುಮಾರು ಐದು ಗಂಟೆಗೂ ಅಧಿಕ ಕಾಲ 28 ಕ್ಕೂ ಹೆಚ್ಚು ಗಾಯಕರು ಡಾ.ರಾಜ್ ಕುಮಾರ್ ಅವರು ಹಾಡಿರುವ ಹಾಡು ಹಾಡಿ ರಾಜ್ ಕುಮಾರ್ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಅರ್ಥಪೂರ್ಣಗೊಳಿಸಿದರು.

ಕುಶಾಲನಗರ ಕನ್ನಡ ಸಿರಿ ಸ್ನೇಹ ಬಳಗ ವತಿಯಿಂದ ಕೊಡಗು ಜಾನಪದ ಪರಿಷತ್ತು ಜಿಲ್ಲಾ ಘಟಕದ ಅಧ್ಯಕ್ಷ ಬಿ.ಜಿ.ಅನಂತಶಯನ, ಉ.ರಾ.ನಾಗೇಶ್, ಸಾಹಿತಿ ಕಿಗ್ಗಾಲು ಗಿರೀಶ್, ಮಣಜೂರು ಮಂಜುನಾಥ್, ಜಯಲಕ್ಷ್ಮಿ, ಚಂದ್ರಶೇಖರ್ ಅವರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ಬ್ಯಾಟರಿ ಕಳವು

• **ಕುಂಬಳೆ:** ರಸ್ತೆ ಬದಿಯಲ್ಲಿ ನಿಲ್ಲಿಸಿದ್ದ ಟೋರಸ್ ಲಾರಿಯಿಂದ ಎರಡು ಬ್ಯಾಟರಿಗಳು ಕಳವಿಗೀಡಾದ ಬಗ್ಗೆ ಕುಂಬಳೆ ಭಾಸ್ಕರ ನಗರದ ಗುರುಪ್ರಸಾದ್ ಎಂಬವರು ನೀಡಿದ ದೂರಿನಂತೆ ಕುಂಬಳೆ ಪೊಲೀಸರು ಕೇಸು ದಾಖಲಿಸಿ ತನಿಖೆಕೈಗೊಂಡಿದ್ದಾರೆ.

ಶುಕ್ರವಾರ ಸಂಜೆ ಮನೆ ಸಮೀಪದ ರಸ್ತೆ ಬದಿಯಲ್ಲಿ ಲಾರಿಯನ್ನು ನಿಲ್ಲಿಸಲಾಗಿತ್ತು. ಶನಿವಾರ ಬೆಳಗ್ಗೆ ನೋಡಿದಾಗ ಲಾರಿಯ ಎರಡು ಬ್ಯಾಟರಿ ಕಳವಿಗೀಡಾಗಿರುವುದು ಕಂಡುಬಂದಿದೆ

ಲಕ್ಕಿಡಿಪ್ ಡ್ರಾ ಮುಂದೂಡಲಾಗಿದೆ

ಕಿರೋಡಿಯನ್ ತರವಾಡು ಮನೆಯ ಪುನರ್‌ಪ್ರತಿಷ್ಠಾಪನೆಯ ಅಂಗವಾಗಿ ನಡೆಯಬೇಕಿದ್ದ ಲಕ್ಕಿಡಿಪ್ ಡ್ರಾವನ್ನು ಕಾರಣಾಂತರಗಳಿಂದ ಮುಂದೂಡಲಾಗಿದೆ. ಮುಂದಿನ ಸಂಕ್ರಮಣ ದಿನವಾದ ತಾ. 15.05.2026 ಡ್ರಾ ನಡೆಯಲಿದ್ದು, ಡ್ರಾ ಫಲಿತಾಂಶವನ್ನು ಈ ಪತ್ರಿಕೆಯಲ್ಲಿ 16.05.2026ರಂದು ಪ್ರಕಟಿಸಲಾಗುವುದು.

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸಮೃದ್ಧಿ(ನಂ.SM-52) ಡ್ರಾ ಏಪ್ರಿಲ್ 26ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
MO 550672 (THIRUVANANTHAPURAM)
Consolation Prize Rs.5,000/-
MN 550672 MP 550672 MR 550672 MS 550672
MT 550672 MU 550672 MV 550672 MW 550672
MX 550672 MY 550672 MZ 550672
2nd Prize Rs.25,00,000/- [25 Lakhs]
MS 849398 (CHITTUR)
3rd Prize Rs.5,00,000/- [5 Lakhs]
MN 206929 (THRISSUR)

FOR THE TICKETS ENDING WITH THE FOLLOWING NUMBERS

4th Prize Rs.5,000/-
0577 0854 1142 1214 1892 2500 3728 4158 6592 6785
7268 7463 7853 7857 8259 8607 8804 9472 9918
5th Prize Rs.2,000/-
0335 1838 2164 2909 4955 5101
6th Prize Rs.1,000/-
0586 0757 1445 1725 1949 2516 2735 3287 3314 3619
4608 4716 5565 5627 6893 6982 7207 7215 7485 7651
8226 8388 8400 8626 9518
7th Prize Rs.500/-
0025 0068 0229 0356 0714 0799 1031 1040 1521 1599
1609 1634 1770 1996 2161 2204 2352 2565 2592 2965
3128 3166 3218 3325 3387 3453 3523 3735 3801 4118
4337 4633 4662 4707 4981 5008 5125 5197 5332 5413
5430 5547 5787 5899 5948 5983 6062 6099 6578 6808
6950 7048 7208 7240 7612 7696 7800 8092 8432 8497
8705 8734 8864 9477 9502 9508 9527 9608 9644 9660
9662 9758 9790 9826 9873 9884
8th Prize Rs.200/-
0039 0091 0146 0202 0284 0286 0523 0944 1059 1367
1681 1784 1847 2038 2181 2223 2263 2300 2533 2591
2638 2850 2874 2968 3170 3285 3344 3647 3701 3724
3738 4053 4113 4132 4239 4259 4279 4557 4605 4800
5001 5016 5051 5110 5127 5146 5156 5400 5405 5560
5745 5850 5856 6045 6270 6371 6404 6508 6726 6793
6794 6894 6937 7059 7097 7116 7250 7323 7434 7489
7630 7703 8040 8339 8390 8459 8562 8630 8675 8756
8809 8827 8849 8896 9029 9052 9164 9461 9464 9666
9669 9709
9th Prize Rs.100/-
0030 0120 0199 0205 0234 0264 0447 0546 0675 0747
0793 0901 0905 0958 1035 1087 1133 1207 1226 1250
1344 1549 1694 1856 1876 1884 1905 1924 1990 2056
2068 2165 2180 2413 2422 2491 2536 2556 2600 2636
2793 2849 2893 3014 3123 3163 3345 3417 3552 3592
3610 3677 3706 3759 3900 3933 4062 4125 4137 4288
4299 4388 4403 4429 4499 4536 4540 4649 4788 4871
4873 4882 4904 4956 5088 5179 5291 5350 5357 5519
5540 5548 5703 5753 5757 5758 5786 5819 5878 5944
5993 6199 6223 6294 6323 6481 6577 6629 6640 6756
6861 6862 6891 6934 7003 7004 7077 7080 7088 7174
7189 7270 7355 7420 7432 7838 8017 8063 8075 8149
8158 8195 8353 8462 8538 8557 8559 8621 8678 8726
8807 8818 8944 8971 9005 9117 9173 9250 9267 9287
9431 9463 9473 9521 9574 9625 9745 9827 9951 9963

ಅಕ್ಷಯ ಕಾಲೇಜು ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಂದ ಕೈಗಾರಿಕಾ ಭೇಟಿ



• **ಪುತ್ತೂರು:** ಅಕ್ಷಯ ಕಾಲೇಜು ವಾಣಿಜ್ಯವಿಭಾಗದವಿದ್ಯಾರ್ಥಿಗಳಿಗೆ ಮಂಗಳೂರಿನ ಗುರುಚರಣ್ ಇಂಡಸ್ಟ್ರೀಸ್‌ಗೆ ಕೈಗಾರಿಕಾ ಭೇಟಿ ಆಯೋಜಿಸಲಾಯಿತು.

ಕೈಗಾರಿಕಾ ಕ್ಷೇತ್ರದ ನೈಜ ಕಾರ್ಯವಿಧಾನಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವ ಉದ್ದೇಶದಿಂದ ನಡೆದ ಭೇಟಿಯ ಸಂದರ್ಭದಲ್ಲಿ ಸಂಸ್ಥೆಯ ಸಿಬ್ಬಂದಿ ಉತ್ಪಾದನಾ ಪ್ರಕ್ರಿಯೆಗಳ ವಿವಿಧ ಹಂತಗಳನ್ನು ವಿವರಿಸಿದರು.

ಪಿ.ಪಿ. ವಿಭಾಗದ ಸಹಾಯಕ ವ್ಯವಸ್ಥಾಪಕ ಸೈಫ್ ಹಾಗೂ ಎಚ್. ಎಂ. ವಿಭಾಗದ ಸಹಾಯಕ ವ್ಯವಸ್ಥಾಪಕ ಸಜಿತ್ ಅವರು ಕೈಗಾರಿಕೆಯ ಕಾರ್ಯವಿಧಾನಗಳ ಕುರಿತು ವಿವರವಾದ ಮಾಹಿತಿ ನೀಡಿದರು. ಕಚ್ಚಾ ವಸ್ತುಗಳ ಸ್ವೀಕಾರದಿಂದ ಆರಂಭಿಸಿ ಅಂತಿಮ ಉತ್ಪನ್ನಗಳ ತಯಾರಿವರೆಗೆ ನಡೆಯುವ ಕ್ರಮಗಳನ್ನು ಹಂತ ಹಂತವಾಗಿ ತಿಳಿಸಲಾಯಿತು. ಜೊತೆಗೆ ಯಂತ್ರೋಪಕರಣಗಳ ಬಳಕೆ, ಸುರಕ್ಷತಾ ಕ್ರಮಗಳು ಹಾಗೂ ಗುಣಮಟ್ಟ ನಿಯಂತ್ರಣ ವಿಧಾನಗಳ ಕುರಿತು ಸಮಗ್ರ ಮಾಹಿತಿಯನ್ನು ನೀಡಲಾಯಿತು. ವಿದ್ಯಾರ್ಥಿಗಳು ಕೈಗಾರಿಕಾ ವ್ಯವಸ್ಥಾಪನೆ, ಕಾರ್ಮಿಕರ ಕಾರ್ಯಪದ್ಧತಿ ಹಾಗೂ ಉತ್ಪಾದನಾ ನಿರ್ವಹಣೆಯ ಬಗ್ಗೆ ನೇರವಾಗಿ ತಿಳಿದುಕೊಂಡರು.

ಈ ಸಂದರ್ಭದಲ್ಲಿ ವಾಣಿಜ್ಯ ವಿಭಾಗದ ಮುಖ್ಯಸ್ಥ ಕಿಶೋರ್ ಕುಮಾರ್ ರೈ ಹಾಗೂ ವಾಣಿಜ್ಯ ವಿಭಾಗದ ಉಪನ್ಯಾಸಕರಾದ ಮೇಘಶ್ರೀ, ರಾಕೇಶ್ ಉಪಸ್ಥಿತರಿದ್ದರು.

ತಂದೆಯನ್ನು ಕಡಿದು ಗಾಯಗೊಳಿಸಿದ ಪುತ್ರ: ಕೊಲೆಯತ್ನ ಪ್ರಕರಣ ದಾಖಲು; ಆರೋಪಿ ವಶಕ್ಕೆ

• **ಕಾಸರಗೋಡು:** ತಂದೆಯನ್ನು ಕತ್ತಿಯಿಂದ ಕಡಿದು ಗಾಯಗೊಳಿಸಿದ ದೂರಿನಂತೆ ಪುತ್ರನ ವಿರುದ್ಧ ವಿದ್ಯಾನಗರ ಪೊಲೀಸರು ಕೊಲೆಯತ್ನ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ತೆಕ್ಕಿಲ್ ಗ್ರಾಮದ ಬೆಂಡಿಚ್ಚಾಲ್ ತಾಯಲ್ ಹೌಸ್‌ನ ಅಹಮ್ಮದ್ ಇರ್ಷಾದ್ (28) ಎಂಬಾತನ ವಿರುದ್ಧ ಈ ಪ್ರಕರಣ ದಾಖಲಿಸಿಕೊಂಡಿದ್ದು, ಆರೋಪಿಯನ್ನು ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ.

ಬೆಂಡಿಚ್ಚಾಲ್ ತಾಯಲ್ ಹೌಸ್‌ನ ಮೊಹಮ್ಮದ್‌ಕುಂಞಿ (55) ಎಂಬವರಿಗೆ ಕಡಿದು ಗಂಭೀರ ಗಾಯಗೊಳಿಸಿದ ಬಗ್ಗೆ ಅವರು ನೀಡಿದ ದೂರಿನಂತೆ ಅಹಮ್ಮದ್ ಇರ್ಷಾದ್‌ನ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಅಹಮ್ಮದ್ ಇರ್ಷಾದ್ ತಂದೆ ಮೊಹಮ್ಮದ್ ಕುಂಞಿಯಿಂದ ಪದೇ ಪದೇ ಹಣ ಕೇಳುತ್ತಿದ್ದನೆಂದೂ ಆದ್ದರಿಂದ ಆತನ ಉಪಟಳ ತಾಳಲಾರದೆ ಮೊಹಮ್ಮದ್ ಕುಂಞಿ ಚೆಂಗಳ ತೊಟ್ಟಿ ಪಾಣಲಂನ ಸಹೋದರಿಯ ಮನೆಯಲ್ಲಿ ಎರಡು ವರ್ಷಗಳಿಂದ ವಾಸಿಸುತ್ತಿದ್ದರೆನ್ನಲಾಗಿದೆ. ಆರೋಪಿಯು ಮನೆಗೆ ತಲುಪಿ ತಂದೆಯಲ್ಲಿ ಹಣ ಕೇಳಿದನೆಂದೂ, ಹಣ ನೀಡದ ದ್ವೇಷದಿಂದ ಆರೋಪಿಯು ಮೊಹಮ್ಮದ್‌ಕುಂಞಿಗೆ ಕತ್ತಿಯಿಂದ ಕಡಿದು ಗಾಯಗೊಳಿಸಿದ್ದಾನೆಂದು ಪೊಲೀಸರು ತಿಳಿಸಿದ್ದಾರೆ.

ಹಲ್ಲೆ: ಆರು ಮಂದಿ ಯುವಕರ ವಿರುದ್ಧ ಎಫ್‌ಐಆರ್

• **ನಾಪೋಕ್ಲು:** ಇಲ್ಲಿನ ಚೆರಿಯ ಪರಂಬು ಎಂಬಲ್ಲಿ ಯುವಕನೊಬ್ಬನ ಮೇಲೆ ನಡೆದ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆರು ಮಂದಿ ಯುವಕರ ವಿರುದ್ಧ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳಾದ ಕೊಟ್ಟಮುಡಿಯ ಅನೀಸ್, ಬೇತು ಗ್ರಾಮದ ತೌಫಿಕ್ , ಕೊಟ್ಟ ಮುಡಿಯ ಅಫ್ಜಲ್ ಎಮ್ಮೆ ಮಾಡಿನ ನಾಜಿಮ್, ಚೆರಿಯ ಪರಂಬುವಿನ ಸಹದ್ ಹಾಗೂ ಶನಿವಾರ ಸಂತೆ ತ್ಯಾಗರಾಜ ಕಾಲೋನಿಯಲಿ ನೌಶಿಕ್ ವಿರುದ್ಧ ಪ್ರಕರಣ ದಾಖಲಾಗಿದೆ. ಎಮ್ಮೆ ಮಾಡು ಉರೂಸ್‌ಗೆ ಆಗಮಿಸಿದ ಶನಿವಾರ ಸಂತೆ ನಿವಾಸಿ ಅಬ್ದುಲ್ ರೆಹಮಾನ್ ಎಂಬ ಯುವಕನನ್ನು ಯುವಕರ ಗುಂಪೊಂದು ಗಂಭೀರವಾಗಿ ಹಲ್ಲೆ ಮಾಡಿದ್ದು ಈ ಬಗ್ಗೆ ಪೊಲೀಸರಿಗೆ ದೂರು ದಾಖಲಾಗಿತ್ತು

ಕಮರಿಗೆ ಬಿದ್ದ ಕಾರು: ಗಾಯಾಳುಗಳ ರಕ್ಷಿಸಿದ ಮಾಜಿ ಸಚಿವ ಅಂಗಾರ



• **ಸುಳ್ಯ:** ಸುಳ್ಯ ಕಡೆಗೆ ಸಾಗುತ್ತಿದ್ದ ಕಾರೊಂದು ಬ್ರೇಕ್ ವೈಫಲ್ಯಕ್ಕೀಡಾಗಿ ಕಮರಿಗೆ ಉರುಳಿದ ಘಟನೆ ನೋಣಂಗೇರಿ ಸಮೀಪದ ಮಿತ್ತ ಮಜಲು ಎಂಬಲ್ಲಿ ನಡೆದಿದ್ದು, ಇದೇ ದಾರಿ ಯಾಗಿ ತೆರಳುತ್ತಿದ್ದ ಮಾಜಿ ಸಚಿವರಾದ ಎಸ್. ಅಂಗಾರ ಅವರು ತಮ್ಮ ಚಾಲಕನೊಂದಿಗೆ ತಕ್ಷಣ ಗಾಯಾಳುಗಳ ರಕ್ಷಣೆ ನಡೆಸಿದ್ದಾರೆ.

ಶಶಾಂಕ್ ಬರೆಮೇಲು ಎಂಬವರು ಇತರ ರೊಂದಿಗೆ ಹರಿಹರ ಪಲ್ಲತಡ್ಕದ ಮಲ್ಲಾರ ಎಂಬಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿ ಹಿಂದಿರುಗುತ್ತಿದ್ದರು. ಮಿತ್ತ ಮಜಲು ಎಂಬಲ್ಲಿ ಕಾರು ಬ್ರೇಕ್ ವೈಫಲ್ಯಕ್ಕೀ ಡಾಗಿ ಕಮರಿಗೆ ಉರುಳಿದೆ. ಕಾರು ಚಾಲಕ ಸಹಿತ ಕಾರಿನಲ್ಲಿದ್ದ ಪ್ರಾಯಣಿಕರು ಯಾವುದೇ ಅಪಾಯಗಳಿಲ್ಲದೇ ಪಾರಾದರು.

ಘಟನೆ ಸಂದರ್ಭ ಆ ರಸ್ತೆಯಲ್ಲಿ ತೆರಳುತ್ತಿದ್ದ ಮಾಜಿ ಸಚಿವ ಎಸ್. ಅಂಗಾರ ಅಪಘಾತವನ್ನು ನೋಡಿ ತಕ್ಷಣ ತಮ್ಮ ಕಾರು ನಿಲ್ಲಿಸಿ ಅವರ ಕಾರಿನ ಚಾಲಕ ಮುರಳಿ ಹಾಗೂ ಮತ್ತಿತರರು ಸಹಾಯ ಪಡೆದು ಕಾರಿನಲ್ಲಿದ್ದವರನ್ನು ರಕ್ಷಿಸಿ ಹೊರ ತೆಗೆದು ಮಾನವೀಯತೆ ಮೆರೆದರು.

ಪ್ರವಾಸೋದ್ಯಮ ಡೈರೆಕ್ಟರಿ

• **ಕಾಸರಗೋಡು:** ಜಿಲ್ಲಾ ಪ್ರವಾಸೋದ್ಯಮ ಉತ್ತೇಜನ ಮಂಡಳಿ (ಡಿಟಿಪಿಸಿ) ಆಶ್ರಯದಲ್ಲಿ ಕೆಡಿಪಿ ಕಾಸರಗೋಡು ಪ್ರವಾಸೋದ್ಯಮ ಸರ್ಕ್ಯೂಟ್ ಯೋಜನೆಯ ಭಾಗವಾಗಿ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಸಾರ್ವಜನಿಕ ಮತ್ತು ಖಾಸಗಿ ವಲಯಗಳ ಎಲ್ಲಾ ಪಾಲುದಾರರ ಸಮಗ್ರ ದತ್ತಾಂಶ ಸಂಗ್ರಹವನ್ನು ನಡೆಸಲಾಗುತ್ತಿದೆ.

ಜಿಲ್ಲೆಯ ಹೋಮ್ ಸ್ಟೇಗಳು, ರೆಸಾರ್ಟ್‌ಗಳು, ವಿಲ್ಲಾಗಳು, ಸಾಹಸ ಪ್ರವಾಸೋದ್ಯಮ ಕೇಂದ್ರಗಳು, ಹೌಸ್‌ಬೋಟ್‌ಗಳು, ಪ್ರಯಾಣ ಏಜೆನ್ಸಿಗಳು, ಪ್ರವಾಸ ನಿರ್ವಾಹಕರು, ಪ್ರವಾಸಿ ಟ್ಯಾಕ್ಸಿ ನಿರ್ವಾಹಕರು, ಅಧಿಕೃತ ಪ್ರವಾಸಿ ಮಾರ್ಗದರ್ಶಿಗಳು, ಆಯುರ್ವೇದ ಕೇಂದ್ರಗಳು, ಕಳರಿ ಕೇಂದ್ರಗಳು, ಸಾಂಸ್ಕೃತಿಕ ಕೇಂದ್ರಗಳು, ಸ್ಮಾರಕ ಅಂಗಡಿಗಳು, ಕೃಷಿ ಪ್ರವಾಸೋದ್ಯಮ ಕೇಂದ್ರಗಳು ಇತ್ಯಾದಿ ಕ್ಷೇತ್ರಗಳಲ್ಲಿನ ಸಂಸ್ಥೆಗಳು / ಉದ್ಯಮಿಗಳು ತಮ್ಮ ಸ್ಥಾಪನೆಗಳ ಬಗ್ಗೆ ವಿವರವಾದ ಮಾಹಿತಿಯನ್ನು ಒದಗಿಸಬಹುದು.

ಸಂಬಂಧಿತ ಸಂಸ್ಥೆಗಳು / ಉದ್ಯಮಿಗಳು ಮಾಹಿತಿಯನ್ನು ಏ.30ರೊಳಗೆ ಕಳುಹಿಸಬೇಕು. ಹೆಚ್ಚಿನ ಮಾಹಿತಿಗೆ 8547162679 ಸಂಪರ್ಕಿಸಬಹುದು.

ಕಿರುಸುದ್ದಿ

ಏ.27-28: ವಿವೇಕಾನಂದ ಕಾಲೇಜಿನಲ್ಲಿ ವಾರ್ಷಿಕೋತ್ಸವ, ವಿದ್ಯಾರ್ಥಿ ಸಂಘದ ದಿನಾಚರಣೆ

ಪುತ್ತೂರು: ನಗರದ ವಿವೇಕಾನಂದ ಕಲಾ ವಿಜ್ಞಾನ ಮತ್ತು ವಾಣಿಜ್ಯ(ಸ್ವಾಯುತ್ತ) ಕಾಲೇಜಿನಲ್ಲಿ ಏ.27 ಮತ್ತು 28ರಂದು ಕಾಲೇಜಿನ ವಾರ್ಷಿಕೋತ್ಸವ ಹಾಗೂ ವಿದ್ಯಾರ್ಥಿ ಸಂಘದ ದಿನಾಚರಣೆಯು ಕಾಲೇಜಿನ ಆವರಣದಲ್ಲಿ ನಡೆಯಲಿದೆ.

ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಕಲ್ಲಡ್ಕ ಪ್ರಭಾಕರ ಭಟ್ ಅಧ್ಯಕ್ಷತೆಯಲ್ಲಿ ನಡೆಯಲಿರುವ ಕಾಲೇಜಿನ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಬೆಳ್ತಂಗಡಿ ಕ್ಷೇತ್ರದ ವಿಧಾನಸಭಾ ಸದಸ್ಯ ಹರೀಶ್ ಪೂಂಜಾ ಮತ್ತು ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವ ಡಾ. ಗಣೇಶ್ ಸಂಜೀವ ಭಾಗವಹಿಸಲಿದ್ದಾರೆ. ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷ ಡಾ. ಶ್ರೀಪತಿ ಕಲ್ಲೂರಾಯ ಮತ್ತು ಸಂಚಾಲಕ ಮುರಳಿಕೃಷ್ಣ ಕೆ.ಎನ್. ಗೌರವ ಉಪಸ್ಥಿತರಿರುವರು.

ವಿದ್ಯಾರ್ಥಿ ಸಂಘದ ದಿನಾಚರಣೆಯ ಅಧ್ಯಕ್ಷತೆಯನ್ನು ವಿವೇಕಾನಂದ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಡಾ.ಕೆ.ಎಂ. ಕೃಷ್ಣ ಭಟ್ ವಹಿಸಲಿದ್ದು, ಮುಖ್ಯ ಅಭ್ಯಾಗತರಾಗಿ ಬೆಟ್ಟಂಪಾಡಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಪ್ರೊ. ದಾಮೋದರ ಕಣಜಾಲು ಭಾಗವಹಿಸಲಿದ್ದಾರೆ. ಈ ಸಂದರ್ಭ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಹಾಗೂ ಉಪನ್ಯಾಸಕರ ವೃಂದದವರಿಗೆ ಸನ್ಮಾನ ಕಾರ್ಯಕ್ರಮ ಹಾಗೂ ವಿವಿಧ ದತ್ತಿನಿಧಿ ಬಹುಮಾನ ಪ್ರದಾನ ಕಾರ್ಯಕ್ರಮ ನಡೆಯಲಿದೆ. ಸಭಾ ಕಾರ್ಯಕ್ರಮದ ನಂತರ ಕಾಲೇಜಿನ ಯಕ್ಷ ರಂಜಿನಿಯ ವಿದ್ಯಾರ್ಥಿಗಳಿಂದ ಯಕ್ಷಗಾನ ಹಾಗೂ ಇನ್ನಿತರ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದೆ ಎಂದು ಕಾಲೇಜಿನ ಪ್ರಾಂಶುಪಾಲ ಕೃಷ್ಣಗಣರಾಜ ಭಟ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವ್ಯಕ್ತಿಯ ಕೊಲೆ ಯತ್ನ: ಇಂದು ಶಿಕ್ಷೆ ಪ್ರಕಟ

ಮಡಿಕೇರಿ: ಸೋಮವಾರಪೇಟೆಯ ಕಾನ್ವೆಂಟ್ ಬಾಣೆಯಲ್ಲಿ 2019ರಲ್ಲಿ ನಡೆದಿದ್ದ ಗುಂಡೇಟು ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಲಯ ಆರೋಪಿಯನ್ನು ಅಪರಾಧಿ ಎಂದು ತೀರ್ಪಿತ್ತಿದ್ದು, ಶಿಕ್ಷೆಯ ಪ್ರಮಾಣವನ್ನು ಏ. 27ಕ್ಕೆ ಪ್ರಕಟಿಸಲಿದೆ.ಕಾನ್ವೆಂಟ್ ಬಾಣೆಯ ನಿವಾಸಿ ಸುಜಿತ್ ಎಂಬವರ ಮೇಲೆ ಅದೇ ಗ್ರಾಮದ ಗಣಪತಿ ಎಂಬಾತ ಕೋವಿಯಿಂದ ಗುಂಡು ಹಾರಿಸಿ ಕೊಲೆಗೆ ಯತ್ನಿಸಿದ ಆರೋಪದಡಿ ಸೋಮವಾರಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಈ ಬಗ್ಗೆ ಅಂದಿನ ಡಿವೈಎಸ್‌ಪಿ ಮುರಳೀಧರ್ ಅವರು ತನಿಖೆ ಕೈಗೊಂಡು ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ಇದೀಗ ಸುಜಿತ್ ಅವರ ಮೇಲೆ ಗುಂಡು ಹಾರಿಸಿ ಕೊಲೆಗೆ ಯತ್ನಿಸಿದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಮಡಿಕೇರಿಯ ಸೆಷನ್ಸ್ ಜ್ಯೂನಿಯರ್ ನ್ಯಾಯಾಲಯದ ನ್ಯಾಯಾಧೀಶರು ಆರೋಪಿ ಗಣಪತಿಯನ್ನು ಅಪರಾಧಿ ಎಂದು ತೀರ್ಪಿತ್ತಿದ್ದಾರೆ. ಶಿಕ್ಷೆಯ ಪ್ರಮಾಣವನ್ನು ಏ. 27ಕ್ಕೆ ತೀರ್ಪಿನ ಮೂಲಕ ನೀಡಲಾಗುವುದು.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಶ್ರೀ ಕೊಡಮಣಿತ್ತಾಯ ಶ್ರೀ ಬ್ರಹ್ಮ ಬೈದರ್ಕಳ ಸೇವಾ ಸಮಿತಿ (ರಿ), ಕೊಡಿಪಾಡಿ, ಮಧ್ಯ, ಸುರತ್ಕಲ್.
2. ಪಿಜಿನ ಪೂಜಾರಿ, 'ಅನುಗ್ರಹ ನಿವಾಸ', ಪಣಂಬೇರಿ, ಬೋರುಗುಡ್ಡೆ.
3. ಪ್ರಖ್ಯಾತ್, ಶರಣ್ಯ, ಕಟೀಲು ದೇವಸ್ಥಾನದ ಬಳಿ – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
4. ಕಾರ್ತಿಕ್ ರಾಜ್, 'ರಾಜಶ್ರೀ ನಿಲಯ', ಕಾಜಿಲ ಹೌಸ್, ತೆಂಕುಳಿಪಾಡಿ, ಮಳಲಿ.
5. ಬೊಳ್ಳುಳ್ಳಿಮಾರುಗುತ್ತು ಗುರುರಾಜ ಮಾಡ ಕುಟುಂಬಿಕರು, ಶ್ರೀ ಸೋಮನಾಥ ಧಾಮ, ಪೆರ್ಮುದೆ, ಬಜಪೆ.
6. ಪವನಾಕ್ಷಿ ಎನ್. ಕೋಟ್ಯಾನ್, ಬೆಳ್ಳಂತೋಟ ಮನೆ, ಚೇಳ್ಯಾರು.
7. ಯಶವಂತ ಪೂಜಾರಿ, ತೌಡಬೆಟ್ಟು ಹೌಸ್, ಕೋಟೆ, ಕಟಪಾಡಿ, ಉಡುಪಿ.

ಶ್ರೀ ಧರ್ಮಸ್ಥಳ ಮೇಳ
ಕೆಂಚನೂರಿನಲ್ಲಿ
ಶ್ರೀ ಮಂಜುಶೆಟ್ಟಿ ಮತ್ತು ಮನೆಯವರು, ಮಂಜುಶ್ರೀ ನಿಲಯ, ಕಡ್ರಿಗುಡ್ಡೆ

ಶ್ರೀ ಸಾಲಿಗ್ರಾಮ ಮೇಳ
ಮಂಕಿ ಕುಳಿಮನೆ-ಹೊನ್ನಾವರದಲ್ಲಿ

ಶ್ರೀ ಪೆರ್ಡೂರು ಮೇಳ
ಪೆರಡಾಲದಲ್ಲಿ-**ಶ್ರೀ ಶನೀಶ್ವರ ಕ್ಷೇತ್ರ ಮಹಾತ್ಮೆ**

ಶ್ರೀ ಹನುಮಗಿರಿ ಮೇಳ
ಗುಂಡ್ಮಿ, ಆಲಿತೋಟದಲ್ಲಿ

ಶ್ರೀ ಪಾವಂಜೆ ಮೇಳ
ಹೆಮ್ಮಾಡಿಯಲ್ಲಿ- **ಬಪ್ಪನಾಡು ಕ್ಷೇತ್ರ ಮಹಾತ್ಮೆ**



ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಪುರುಷರಾಯ ದೈವಕ್ಕೆ ಒಂಟಿ ನೇಮ ಸೇವೆಯನ್ನು ಗುರುವಾರ ರಾತ್ರಿ ಟೀ ಇಂಡಿಯಾದ ತ್ರೋ ಡೌನ್ ಸ್ಪೆಷಲಿಸ್ಟ್ ರಾಘವೇಂದ್ರ ದ್ವಿವೇದಿ ಸಮರ್ಪಿಸಿ, ಪ್ರಸಾದ ಸ್ವೀಕರಿಸಿದರು.

ಕಡಬ: ಶ್ರೀ ಜಯದುರ್ಗಾ ಪರಮೇಶ್ವರೀ ದೇವಸ್ಥಾನದಲ್ಲಿ ಪ್ರತಿಷ್ಠಾ ವರ್ಧಂತ್ಯುತ್ಸವ

ಕಡಬ: ಇಲ್ಲಿನ ಶ್ರೀ ಜಯದುರ್ಗಾ ಪರಮೇಶ್ವರೀ ದೇವಸ್ಥಾನದಲ್ಲಿ ಪ್ರಥಮ ವರ್ಷದ ಪ್ರತಿಷ್ಠಾ ವರ್ಧಂತ್ಯುತ್ಸವ ಹಾಗೂ ಶಂಕರ ಜಯಂತ್ಯುತ್ಸವ ಕಾರ್ಯಕ್ರಮವು ತಂತ್ರಿ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿ ಅವರ ನೇತೃತ್ವದಲ್ಲಿ ನೆರವೇರಿತು.

ಬೆಳಗ್ಗೆ ಮಹಾಗಣಪತಿ ಹೋಮ, ಅಥರ್ವ ಶೀರ್ಷಾಭಿಷೇಕ, ಅಪೂಪ ಪೂಜೆ, ಪಂಚ ವಿಂಶತಿ ಕಲಶ ಸ್ಥಾಪನೆ, ಅಧಿವಾಸ ಹೋಮ, ಪಂಚಾಮೃತಾಭಿಷೇಕ, ಕಲಶಾಭಿಷೇಕ ನೆರವೇರಿತು. ಮಧ್ಯಾಹ್ನ ಮಹಾಪೂಜೆಯ ಬಳಿಕ ಅನ್ನ ಸಂತರ್ಪಣೆ ನಡೆಯಿತು. ಸಂಜೆ ಸಾಮೂಹಿಕ ಪುಷ್ಪ ಮತ್ತು ಕುಂಕುಮಾರ್ಚನೆ ನಡೆದು ಬಳಿಕ ಕಡಬದ ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಸಂಘದ ವತಿಯಿಂದ ಶಂಕರ ಜಯಂತಿ ಆಚರಣೆ ನಡೆಯಿತು. ಪುತ್ತೂರು ವಿವೇಕಾನಂದ ಮಹಾ ವಿದ್ಯಾಲಯದ ಉಪನ್ಯಾಸಕಿ ಡಾ. ಗೀತಾ ಕುಮಾರಿ ಉಪನ್ಯಾಸ ನೀಡಿದರು. ರಾತ್ರಿ ಉತ್ಸವ ಬಲಿ, ದರ್ಶನ ಬಲಿ, ಬಟ್ಟಲು ಕಾಣಿಕೆ ಹಾಗೂ ಮಂತ್ರಾಕ್ಷತೆ ನಡೆಯಿತು.

ದೇವಸ್ಥಾನದಧರ್ಮದರ್ಶಿ ಅರುಣ್‌ಕುಮಾರ್ ಜೆಡೆಮನೆ, ವಾಣಿ ಅರುಣ್ ಕುಮಾರ್, ಶ್ರೀ ದುರ್ಗಾಂಬಿಕಾ ಅಮ್ಮನವರ ದೇವಸ್ಥಾನದ ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ಕೃಷ್ಣಶೆಟ್ಟಿ ಕಡಬ, ವ್ಯವಸ್ಥಾಪನ ಸಮಿತಿಯ ಮಾಜಿ ಅಧ್ಯಕ್ಷ ಸೀತಾರಾಮ ಗೌಡ ಪೊಸವಳಿಕೆ, ಕೇಪು ಶ್ರೀ ಲಕ್ಷ್ಮೀ ಜನಾರ್ದನ ದೇವಸ್ಥಾನದ ಆಡಳಿತ ಮಂಡಳಿಯ ಅಧ್ಯಕ್ಷ ಶಿವರಾಮ ಶೆಟ್ಟಿ ಕೇಪು, ಶ್ರೀ ದುರ್ಗಾಂಬಿಕಾ ಭಜನಾ ಮಂಡಳಿಯ ಅಧ್ಯಕ್ಷ ಸೋಮಪ್ಪ ನ್ಯಾಕ್ ಕಡಬ, ಪ್ರಮುಖರಾದ ಪ್ರಮೋದ್ ರೈ ನಂದುಗುರಿ, ಲಿಂಗಪ್ಪ ಜೆ., ಚಂದ್ರಶೇಖರ ರಾವ್ ಕಾವು, ಸುರೇಶ್ ರಾವ್, ಎಂ. ಮಾಧವ ಭಟ್ ಕನಕವನ, ಗಣೇಶ್ ಭಟ್ ಪಾದೆ, ದಯಾನಂದ ಪ್ರಭು, ಸತ್ಯನಾರಾಯಣ ಹೆಗ್ಡೆ ನಡುಮಜಲು, ದಯಾನಂದ ಆರಿಗ, ರಾಮಚಂದ್ರ ಭಟ್ ಪಾದೆ, ಅಶೋಕ್ ಕುಮಾರ್ ಪಿ., ಅಶೋಕ್ ರೈ, ಅಶ್ವಿನ್ ಗೌಡ, ಅನಂತ ಬೈಪಾಡಿತ್ತಾಯ, ಪ್ರೇಮಾ ವಿದ್ಯಾನಗರ, ಕಿಶನ್ ಕುಮಾರ್ ರೈ, ಗೀತಾ ಕೇವಳ, ರಾಜೀವ್ ಕೋಲ್ಪೆ, ಲಕ್ಷ್ಮೀನಾರಾಯಣ ರಾವ್ ಆತೂರು, ರಾಧಾಕೃಷ್ಣ ಕೋಲ್ಪೆ, ಕೃಷ್ಣರಾಜ್ ತಲೇಕಿ, ಶ್ರೀಕೃಷ್ಣ ಎಂ.ಆರ್., ಅನೀಶ್ ಆರಿಗ, ಪ್ರಸನ್ನ ಪುತ್ರಬೈಲು, ಸುಧೀರ್ ಮಡಿಯಾಲ, ರಾಮಚಂದ್ರ ಭಟ್, ಭರತೇಶ್ವರ ಪುತ್ರಬೈಲು ಮತ್ತಿತರರು ಉಪಸ್ಥಿತರಿದ್ದರು.

ನಮಸ್ತೆ ಕಲೆಕ್ಟರ್ ಕಾರ್ಯಕ್ರಮಕ್ಕೆ ಮಂಜೇಶ್ವರ ಕಾಲೇಜಿನ ವಿದ್ಯಾರ್ಥಿಗಳ ಸಾಥ್

ಮುಖಾಮುಖಿ, ಮುಕ್ತ ಸಂವಾದ

ಕಾಸರಗೋಡು: ಕಾಸರಗೋಡಿನ ಕುರಿತು ಸಮಗ್ರ ಅಭಿವೃದ್ಧಿ ಕಾಳಜಿ ಹೊಂದಿರುವ ಯುವಜನಾಂಗವು ಜಿಲ್ಲೆಯಲ್ಲಿ ಬೆಳೆಯುತ್ತಿದೆ. ಈ ನಿಟ್ಟಿನಲ್ಲಿ ಹಮ್ಮಿಕೊಳ್ಳಲಾಗಿರುವ ನಮಸ್ತೆ ಕಲೆಕ್ಟರ್ ಎಂಬ ಕಾರ್ಯಕ್ರಮದಲ್ಲಿ ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ ಸ್ಮಾರಕ ಸರಕಾರಿ ಕಾಲೇಜಿನ ವಿದ್ಯಾರ್ಥಿಗಳು ಭಾಗಿಯಾಗಿ ಹಲವಾರು ಅಭಿವೃದ್ಧಿ ವಿಚಾರಗಳನ್ನು ಮನವರಿಕೆ ಮಾಡಿಕೊಂಡರು.

ಜಿಲ್ಲೆಯ ಅಭಿವೃದ್ಧಿ ನಕ್ಷೆಯಲ್ಲಿ ಯುವ ಜನಾಂಗದ ವಿಷಯಗಳಿಗೆ ಮುಕ್ತ ಅವಕಾಶ ವಿದೆ. ಜಿಲ್ಲಾಡಳಿತವು ಆರಂಭಿಸಿದ ನಮಸ್ತೆ ಕಲೆಕ್ಟರ್ ಯೋಜನೆಯನ್ನು ಶಾಲೆಗಳ ನಂತರ ಕಾಲೇಜುಗಳಿಗೂ ವಿಸ್ತರಿಸಲಾಗಿದೆ. ಕಾಸರಗೋಡು ಕಲೆಕ್ಟರೇಟ್‌ನಲ್ಲಿ ಯೋಜನೆಯ ಹೊಸ ಹಂತವನ್ನು ಉದ್ಘಾಟಿಸಿದ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು ಮಂಜೇಶ್ವರ ಗೋವಿಂದ ಪೈ ಸ್ಮಾರಕ ಸರಕಾರಿ ಕಾಲೇಜಿನ ಎನ್‌ಎಸ್‌ಎಸ್ ಸ್ವಯಂಸೇವಕರೊಂದಿಗೆ ಮುಖಾಮುಖಿಯಾಗಿ ಮುಕ್ತ ಸಂವಾದ ನಡೆಸಿದರು.

ಮಂಜೇಶ್ವರ ಕಾಲೇಜಿನ ವಿದ್ಯಾರ್ಥಿಗಳು ಕಾಸರಗೋಡಿನ ಪ್ರವಾಸೋದ್ಯಮ ಸಾಮರ್ಥ್ಯವನ್ನು ಹೆಚ್ಚಿಸುವ ಬಗ್ಗೆ ಜಿಲ್ಲಾಧಿಕಾರಿಗಳೊಂದಿಗೆ ವಿಚಾರಗಳನ್ನು ಹಂಚಿಕೊಂಡರು. ಪ್ರವಾಸೋದ್ಯಮದ ಜೊತೆಗೆ ಜಿಲ್ಲೆಯ ವಿವಿಧ ವಲಯಗಳಲ್ಲಿನ ಅಭಿವೃದ್ಧಿ ಯೋಜನೆಗಳ ಕುರಿತು ಸಮಗ್ರವಾಗಿ ಚರ್ಚಿಸಿದರು.



> ▸ ಜಿಲ್ಲೆಯ ಅಭಿವೃದ್ಧಿ ನಕ್ಷೆಯಲ್ಲಿ ಯುವ ಜನಾಂಗದ ವಿಷಯಗಳಿಗೆ ಮುಕ್ತ ಅವಕಾಶವಿದೆ.
>
> ▸ ಮಾರ್ಚ್ 18ರಂದು ನಮಸ್ತೆ ಕಲೆಕ್ಟರ್ ಎಂಬ ಈ ವಿಶೇಷ ಯೋಜನೆಯನ್ನು ಪ್ರಾರಂಭಿಸಲಾಯಿತು.

ಜಿಲ್ಲಾಡಳಿತ ಮತ್ತು ವಿದ್ಯಾರ್ಥಿಗಳ ನಡುವಿನ ಅಂತರವನ್ನು ಕಡಿಮೆ ಮಾಡಲು ಹಾಗೂ ಆಡಳಿತ ಪ್ರಕ್ರಿಯೆಯಲ್ಲಿ ಯುವಜನರ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಳ್ಳಲು ಮಾರ್ಚ್ 18ರಂದು ನಮಸ್ತೆ ಕಲೆಕ್ಟರ್ ಎಂಬ ಈ ವಿಶೇಷ ಯೋಜನೆಯನ್ನು ಪ್ರಾರಂಭಿಸಲಾಯಿತು. ಆಡಳಿತ ವ್ಯವಸ್ಥೆಗಳನ್ನು ನೇರವಾಗಿ ಅರ್ಥಮಾಡಿಕೊಳ್ಳಲು ಅವಕಾಶವನ್ನು ಒದಗಿಸುವ ಈ ಜನಪ್ರಿಯ ಯೋಜನೆಯನ್ನು ಮುಂಬರುವ ವಾರಗಳಲ್ಲಿ ಜಿಲ್ಲೆಯ ಹೆಚ್ಚಿನ ಸರಕಾರಿ ಶಾಲೆಗಳು ಮತ್ತು ಕಾಲೇಜುಗಳಿಗೆ ವಿಸ್ತರಿಸಲಾಗುವುದು.

ಇದಕ್ಕೂ ಮೊದಲು ಪೈವಳಿಕೆ, ಚೆಮ್ನಾಡು ಮತ್ತು ಬಾರಾ ಸರಕಾರಿ ಹೈಯರ್ ಸೆಕೆಂಡರಿ ಶಾಲೆಗಳ ವಿದ್ಯಾರ್ಥಿಗಳು ಜಿಲ್ಲಾಧಿಕಾರಿಗಳೊಂದಿಗೆ ಸಂವಾದ ನಡೆಸಿದರು. ಜಿಲ್ಲಾಧಿಕಾರಿಗಳು ತಮ್ಮ ಕಾರ್ಯನಿರತ ಅಧಿಕೃತ ಕರ್ತವ್ಯಗಳ ನಡುವೆಯೂ ವಿದ್ಯಾರ್ಥಿಗಳ ಸಂಶಯಗಳನ್ನು ಆಲಿಸಲು ಮತ್ತು ಅವುಗಳಿಗೆ ಉತ್ತರಿಸಲು ಸಮಯ ಕಂಡುಕೊಂಡಿರುವುದು ಶಾಲೆಗಳಿಗೆ ತುಂಬಾ ಸಂತೋಷ ತಂದಿದೆ.

ರಾಷ್ಟ್ರೀಯ ಹೆದ್ದಾರಿಯಿಂದ ಮಂಜೇಶ್ವರ ಸರಕಾರಿ ಕಾಲೇಜಿಗೆ ಪ್ರಯಾಣಿಸಲು ಅನುಕೂಲವಾಗುವಂತೆ ಪಾದಚಾರಿ ಸೇತುವೆ ನಿರ್ಮಿಸುವಂತೆ ವಿದ್ಯಾರ್ಥಿಗಳು ಜಿಲ್ಲಾಧಿಕಾರಿಯವರನ್ನು ಕೇಳಿಕೊಂಡರು. ಪಾದಚಾರಿ ಸೇತುವೆ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲು ಜಿಲ್ಲಾಧಿಕಾರಿ ರಾಷ್ಟ್ರೀಯ ಹೆದ್ದಾರಿ ಅಧಿಕಾರಿಗಳಿಗೆ ಸೂಚಿಸಿದರು ಮತ್ತು ಅದು ಶೀಘ್ರದಲ್ಲೇ ಪ್ರಾರಂಭವಾಗಲಿದೆ ಎಂದು ಭರವಸೆ ನೀಡಿದರು.

ಕೋಡಿ ಕನ್ಯಾಣದಲ್ಲಿ ಅಯೋಧ್ಯ ಉತ್ಸವದ ಅಂಗವಾಗಿ ನೂತನ ಆಟೋ ನಿಲ್ದಾಣದ ಲೋಕಾರ್ಪಣೆ

ಕೋಟ: ಇಲ್ಲಿನ ಅಯೋಧ್ಯ ಫ್ರೆಂಡ್ಸ್ ಕೋಡಿ ಕನ್ಯಾಣ ಇದರ ಐದನೇ ವರ್ಷದ ಸಂಭ್ರಮದ ಪ್ರಯುಕ್ತ ಆಯೋಜಿಸಲಾದ ಅಯೋಧ್ಯ ಉತ್ಸವದ ಪ್ರಯುಕ್ತ ಕನ್ಯಾಣದ ಶ್ರೀ ಮಹಾಸತೀಶ್ವರಿ ಆಟೋ ನಿಲ್ದಾಣವನ್ನು ಕೋಟ ಮಣೂರು ಪಡುಕರೆ ಗೀತಾನಂದ ಫೌಂಡೇಶನ್ ಪ್ರವರ್ತಕ ಆನಂದ್ ಸಿ. ಕುಂದರ್ ಲೋಕಾರ್ಪಣೆಗೊಳಿಸಿದರು.

ಈಸಂದರ್ಭದಲ್ಲಿ ಮಾತನಾಡಿದ ಆನಂದ್ ಸಿ ಕುಂದರ್ ಸಂಘಟನೆಗಳು ಸಮಾಜದ ಕಣ್ಣು ಈ ನಿಟ್ಟಿನಲ್ಲಿ ಅಯೋಧ್ಯಾ ಫ್ರೆಂಡ್ಸ್ ಗ್ರಾಮಕ್ಕೆ ಪೂರಕವಾದ ಕಾರ್ಯಕ್ರಮ ಆಯೋಜಿಸಿ ಸಮಾಜಕ್ಕೆ ಮಾದರಿಯಾಗಿದೆ ಎಂದರು. ಸಮಾಜ ಸೇವಕ ಆನಂದ್ ಸಿ. ಕುಂದರ್ ಅವರ 78ನೇ ವರ್ಷದ ಜನ್ಮದಿನದ ಸವಿನೆನಪಿಗಾಗಿ ಅಯೋಧ್ಯ ಫ್ರೆಂಡ್ಸ್ ವತಿಯಿಂದ ಅಭಿನಂದಿಸಿ ಗೌರವಿಸಲಾಯಿತು.

ಅಯೋಧ್ಯಾ ಫ್ರೆಂಡ್ಸ್ ಪ್ರಮುಖರಾದ ಜಗನ್ನಾಥ್ ಅಮೀನ್ , ರವೀಂದ್ರ ತಿಂಗಳಾಯ ಕೋಟತಟ್ಟು ಪಡುಕರೆ,ಸುರೇಂದ್ರ ಪೂಜಾರಿ ಕೋಡಿ,ಉದಯ್ ಕಾಂಚನ್ , ತಿಮ್ಮ ಪೂಜಾರಿ ಕೋಡಿ, ಬಾಬು ಕಾಂಚನ್, ಸುದಿನಾ ಕೋಡಿ,ಸಂತೋಷ್ ಕೋಡಿ ಸೇರಿದಂತೆ ಅಯೋಧ್ಯ ಫ್ರೆಂಡ್ಸ್‌ನ ಅಧ್ಯಕ್ಷರು ಹಾಗೂ ಸರ್ವ ಸದಸ್ಯರು ಉಪಸ್ಥಿತರಿದ್ದರು.



ಕೊಡಗು ಜಿಲ್ಲಾ ಪೊಲೀಸ್ ಇಲಾಖೆಯಿಂದ ಹೋಂಸ್ಟೇ ಮಾಲಕರ ಸಭೆ

ನಿಯಮಾವಳಿ ಕಟ್ಟುನಿಟ್ಟು ಪಾಲಿಸಿ: ಎಸ್ಪಿ

ಮಡಿಕೇರಿ: ಕೊಡಗು ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ಜಿಲ್ಲೆಯ ಹೋಂಸ್ಟೇ, ಹೊಟೇಲ್ ಮತ್ತು ಟ್ರಾವೆಲ್ಸ್ ಮಾಲಕರ ಸಂಘದ ಪದಾಧಿಕಾರಿಗಳ ಸಭೆ ನಡೆಯಿತು.

ಜಿಲ್ಲಾ ಪೊಲೀಸ್ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್.ಬಿಂದುಮಣಿ ಹಾಗೂ ಉಪ ವಿಭಾಗಾಧಿಕಾರಿ ನಿತಿನ್ ಚಕ್ಕಿ ಅವರು ಪ್ರವಾಸಿಗರ ಸುರಕ್ಷತೆಯ ಕುರಿತು ಸಲಹೆ ಸೂಚನೆಗಳನ್ನು ನೀಡಿದರು.

ಕೊಡಗು ಜಿಲ್ಲೆಯ ಎಲ್ಲಾ ಹೋಂಸ್ಟೇ ಮಾಲಕರು ಎಲ್ಲಯ ನಿಯಮಾವಳಿಗಳನ್ನು ಚಾಚೂತಪ್ಪದೇ ಪಾಲಿಸಬೇಕು. ಏನಾದರೂ ಘಟನೆಗಳು ಸಂಭವಿಸಿದರೆ ಅದಕ್ಕೆ ಹೋಂಸ್ಟೇ ಮಾಲಕರೇ ಹೊಣೆಗಾರರು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್.ಬಿಂದುಮಣಿ ತಿಳಿಸಿದರು.

ವಿದೇಶಿಯರು ಬಂದು ಉಳಿದುಕೊಂಡಾಗ ಸಮೀಪದ ಪೊಲೀಸ್ ಠಾಣೆಯಲ್ಲಿ 'ಸಿ' ಫಾರಂ ನೀಡುವುದು ಕಡ್ಡಾಯ. ಇದನ್ನು ಉಲ್ಲಂಘಿಸಿದರೆ ಕ್ರಮ ಖಚಿತ ಎಂದು ಎಚ್ಚರಿಸಿದ ಅವರು, ಪ್ರತಿ ಹೋಂಸ್ಟೇಗಳ ಮುಂದೆ ತಮ್ಮ ನೋಂದಣಿ ಸಂಖ್ಯೆ, ಅದರ ಅವಧಿ ಸೇರಿದಂತೆ ಮತ್ತಿತರ ವಿವರಗಳನ್ನು ಹಾಕುವುದು ಕಡ್ಡಾಯ. ಪರವಾನಗಿ ಪಡೆಯದೇ ಇದ್ದರೆ ಅಂತಹವರು ಹೋಂಸ್ಟೇ ನಡೆಸಬಾರದು ಎಂದು ಹೇಳಿದರು.

ಎಲ್ಲಾ ಹೋಂಸ್ಟೇಗಳ ಕುರಿತು ಪರಿಶೀಲನಾ ಕಾರ್ಯ ನಡೆಸಲಾಗುವುದು. ಒಂದುವೇಳೆ ಆಕ್ರಮ, ಅನಧಿಕೃತ, ನಿಯಮ ಉಲ್ಲಂಘನೆಗಳು ಕಂಡು ಬಂದರೆ ಕ್ರಮ ನಿಶ್ಚಿತ ಎಂದರಲ್ಲದೆ, ನಿಯಮಾವಳಿಯಂತೆ ಪ್ರತಿ ಪ್ರವಾಸಿಗರ ದಾಖಲಾತಿಗಳನ್ನು ಸಂಗ್ರಹಿಸಬೇಕು, ಅವರ ಸಂಪೂರ್ಣ ವಿವರಗಳನ್ನು ದಾಖಲಿಸಿಕೊಳ್ಳಬೇಕು, ರಿಜಿಸ್ಟರ್ ಅನ್ನು ಚಾಚೂತಪ್ಪದೇ ನಿರ್ವಹಿಸಬೇಕು ಎಂದರು.



> ▸ ವಿದೇಶಿಯರು ಬಂದು ಉಳಿದುಕೊಂಡಾಗ ಸಮೀಪದ ಪೊಲೀಸ್ ಠಾಣೆಯಲ್ಲಿ 'ಸಿ' ಫಾರಂ ನೀಡುವುದು ಕಡ್ಡಾಯ.
>
> ▸ ಹೋಂಸ್ಟೇಗಳ ಸಿಸಿಟಿವಿಗಳು ಚಾಲನೆಯಲ್ಲಿರಬೇಕು, ಯಾವುದೇ ಕಾರಣಕ್ಕೂ ಅವು ಕೆಟ್ಟಿರಬಾರದು.

ಹೋಂಸ್ಟೇಗಳ ಸಿಸಿಟಿವಿಗಳು ಚಾಲನೆಯಲ್ಲಿರಬೇಕು, ಯಾವುದೇ ಕಾರಣಕ್ಕೂ ಅವು ಕೆಟ್ಟಿರಬಾರದು. ತಮ್ಮಲ್ಲಿ ಕೆಲಸ ಮಾಡುವ ಕಾರ್ಮಿಕರ ಗುಣ, ನಡತೆಗಳ ಮೇಲೆ ನಿಗಾ ಇರಿಸಬೇಕು, ಕೆಟ್ಟ ಗುಣ, ಕೆಟ್ಟ ನಡತೆ ಇರುವವರ ಕುರಿತು ಪೊಲೀಸರಿಗೆ ಮಾಹಿತಿ ನೀಡಬೇಕು. ಅಂತಹವರನ್ನು ಕೆಲಸದಲ್ಲಿ ಇರಿಸಿಕೊಳ್ಳಬಾರದು ಎಂಬುದು ಸೇರಿದಂತೆ ಹಲವು ಸೂಚನೆಗಳನ್ನು ನೀಡಿದರು.

ಹೋಂಸ್ಟೇ, ಹೊಟೇಲ್‌ಗಳ ನೋಂದಣಿ, ಪ್ರವಾಸಿಗರ ಸುರಕ್ಷತೆ, ಕಾರ್ಮಿಕರ ಗುಣ ನಡತೆ ಪರಿಶೀಲನೆ, ವಿದೇಶಿ ಪ್ರವಾಸಿಗರ ನೋಂದಣಿ ಮುಂತಾದ ವಿಷಯಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಯಿತು.

ಇತ್ತೀಚೆಗೆ ಕೊಡಗಿನ ಗಡಿ ಭಾಗವಾದ ಕುಟ್ಟ ಗ್ರಾಮದ ಹೋಂಸ್ಟೇ ಒಂದರಲ್ಲಿ ವಿದೇಶಿ ಮಹಿಳೆಯೊಬ್ಬರ ಮೇಲೆ ನಡೆದಿದೆ ಎನ್ನಲಾದ ಲೈಂಗಿಕ ದೌರ್ಜನ್ಯ ಹಿನ್ನೆಲೆಯಲ್ಲಿ ಈ ಸಭೆ ಮಹತ್ವ ಪಡೆದುಕೊಂಡಿತ್ತು.

ಸಭೆಯಲ್ಲಿ ಪ್ರವಾಸೋದ್ಯಮ ಹಾಗೂ ವಾರ್ತಾ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ನಾಡಿನ ಸಾಂಸ್ಕೃತಿಕ ಲೋಕಕ್ಕೆ ರಾಮಚಂದರ್ ಬೈಕಂಪಾಡಿ ಕೊಡುಗೆ ಅಪಾರ: ಡಾ. ಜೋಶಿ

ಮಂಗಳೂರು : ಸಾಂಸ್ಕೃತಿಕ ಸಂಘಟಕ, ನಾಟಕಕಾರ ಹಾಗೂ ರಾಜಕಾರಣಿ ರಾಮಚಂದರ್ ಬೈಕಂಪಾಡಿ ಅವರಲ್ಲಿ ನೈಜ ಸಾಂಸ್ಕೃತಿಕ ಕಾಳಜಿ ಇತ್ತು. ಅವರು ರಾಜಕೀಯ ನೇತಾರರಾಗಿದ್ದರೂ ಅವರು ರಾಜಕೀಯ ಅದೃಷ್ಟವಂತರಾಗಿರಲಿಲ್ಲ, ಕರಾವಳಿಯ ಸಾಂಸ್ಕೃತಿಕ ಲೋಕಕ್ಕೆ ಅವರದ್ದು ದೊಡ್ಡ ಕೊಡುಗೆ ಇದೆ ಎಂದು ಹಿರಿಯ ವಿದ್ವಾಂಸ ಡಾ. ಪ್ರಭಾಕರ ಜೋಶಿ ಅವರು ಹೇಳಿದರು.

ಮಂಗಳೂರು ತುಳು ಭವನದಲ್ಲಿ ಶನಿವಾರ ಆಯೋಜಿಸಲಾದ ತುಳು ಅಕಾಡೆಮಿಯ ಮಾಜಿ ಸದಸ್ಯ ಹಾಗೂ ತುಳು ಅಕಾಡೆಮಿಯ ವಾರ್ಷಿಕ ಗೌರವ ಪುರಸ್ಕೃತ ನಾಟಕಕಾರ ರಾಮಚಂದರ್ ಬೈಕಂಪಾಡಿ ಅವರಿಗೆ ನುಡಿ ನಮನ ಸಲ್ಲಿಸುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಹಿರಿಯ ನಾಟಕ ನಿರ್ದೇಶಕ ವಿಜಯ ಕುಮಾರ್ ಕೊಡಿಯಾಲ್ ಬೈಲ್ ಅವರು ಮಾತನಾಡಿ, ರಾಮಚಂದರ್ ಬೈಕಂಪಾಡಿ ಅವರು ಅನೇಕ ಮಂದಿಯ ಬದುಕು ರೂಪಿಸಲು ಕಾರಣಕರ್ತರಾಗಿದ್ದರು ಎಂದು ಬಣ್ಣಿಸಿದರು.

ರಂಗ ನಿರ್ದೇಶಕ ಜಗನ್ ಪವಾರ್ ಬೇಕಲ್ ಅವರು ಮಾತನಾಡಿ, ಮಂಗಳೂರಿನಲ್ಲಿ ಎಲ್ಲಾ ಕಲಾವಿದರನ್ನು ಒಗ್ಗೂಡಿಸಿ ಸಾಂಸ್ಕೃತಿಕ ಕ್ರಿಯಾ ರಂಗ ಸಂಸ್ಥೆಯನ್ನು ಮುನ್ನಡೆಸುವಲ್ಲಿ ರಾಮಚಂದರ್ ಬೈಕಂಪಾಡಿ ಅವರು ನಾಯಕತ್ವ ನೀಡಿದವರಾಗಿದ್ದರು ಎಂದು ನೆನಪಿಸಿದರು.



ಮಂಗಳೂರು ತುಳು ಭವನದಲ್ಲಿ ನುಡಿ ನಮನ

ಜಯಕೃಷ್ಣ ಪರಿಸರ ಪ್ರೇಮಿ ಸಮಿತಿಯ ಅಧ್ಯಕ್ಷ ಹರೀಶ್ ಶೆಟ್ಟಿ ಅವರು ಮಾತನಾಡಿ, ಅನೇಕ ಪರಿಸರ ಪರ ಹೋರಾಟಗಳಲ್ಲಿ ರಾಮಚಂದ್ರ ಬೈಕಂಪಾಡಿ ಅವರು ಮುಂಚೂಣಿಯಲ್ಲಿ ಇದ್ದರು ಎಂದು ಹೇಳಿದರು.

ಸಮಾರಂಭದಲ್ಲಿ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ತಾರಾನಾಥ ಗಟ್ಟಿ ಕಾಪಿಕಾಡ್, ಅಖಿಲ ಭಾರತ ತುಳು ಒಕ್ಕೂಟದ ಅಧ್ಯಕ್ಷ ಎ.ಸಿ ಭಂಡಾರಿ, ಶ್ರೀ ಜಯಕೃಷ್ಣ ಪರಿಸರ ಪ್ರೇಮಿ ಸಮಿತಿಯ ಉಪಾಧ್ಯಕ್ಷ ಜಗದೀಶ್ ಅಧಿಕಾರಿ, ಬೈಕಂಪಾಡಿ ಮೋಗವೀರ ಸಮಾಜದ ಮುಖಂಡ ಶೋಭೇಂದ್ರ ಶಶಿಹಿತ್ಲು ನುಡಿ ನಮನ ಸಲ್ಲಿಸಿದರು.

ಹಿರಿಯ ರಂಗ ನಿರ್ದೇಶಕ ತಮ್ಮ ಲಕ್ಷ್ಮಣ, ರಾಷ್ಟ್ರೀಯ ಕ್ರೈಸ್ತ ವೇದಿಕೆಯ ಅಧ್ಯಕ್ಷ ಫ್ರಾಂಕ್ಲಿನ್ ಮೊಂತೇರೋ, ತುಳುನಾಡ ರಕ್ಷಣಾ ವೇದಿಕೆಯ ಅಧ್ಯಕ್ಷ ಯೋಗೀಶ್ ಶೆಟ್ಟಿ ಜೆಪ್ಪು, ಸಂಗೀತ ಕಲಾವಿದರ ಒಕ್ಕೂಟದ ಅಧ್ಯಕ್ಷ ಧನರಾಜ್ ಸುರತ್ಕಲ್, ನಿವೃತ್ತ ಪ್ರಾಂಶುಪಾಲ ಪ್ರೊ. ಕೃಷ್ಣಮೂರ್ತಿ ಮಾತನಾಡಿದರು.

ಹಿರಿಯ ಪತ್ರಕರ್ತ ಆನಂದ ಶೆಟ್ಟಿ, ದೇವದಾಸ್ ಭಂಡಾರಿ ಮುಂಬೈ, ಆರ್. ಎಂ. ಕುಲಾಲ್ ಮುಂಬೈ, ದಿನೇಶ್ ಕುಲಾಲ್ ಮುಂಬಯಿ, ದಯಾಸಾಗರ್ ಚೌಟ ಮುಂಬೈ, ಸಂಕೇತ್ ರಂಗ ಸಂಸ್ಥೆಯ ಅಧ್ಯಕ್ಷ ಹರೀಶ್ ಶಕ್ತಿ ನಗರ, ಕಲಾವಿದೆ ಪ್ರಮೀಳ ಮೆಂಡೋನ್ಸಾ, ನಟ ಮೋಹನ್ ಬೋಳಾರ್, ಸುಧಾಕರ ರಾವ್, ರಂಜನ್ ಬೋಳೂರು ಮೊದಲಾದವರು ಭಾಗವಹಿಸಿದ್ದರು.

ಉಡುಪಿ: ಮಹಿಳಾ ಮೋರ್ಚಾದ ಬೃಹತ್ ಪ್ರತಿಭಟನಾ ಸಭೆ

ಉಡುಪಿ: ರಾಜಕೀಯ ಪಕ್ಷಗಳು ಮಹಿಳೆಯರನ್ನು ಕೇವಲ ಮತಕ್ಕಾಗಿ ಬಳಸಿ ಅಧಿಕಾರ ಹಂಚಿಕೆಯ ವೇಳೆ ಕಡೆಗಣಿಸುತ್ತಿವೆ. ಇಂತಹ 'ಕರಿಬೇವು' ಪದ್ಧತಿಗೆ ಈಗ ಅಂತ್ಯ ಹಾಡಬೇಕಿದೆ ಎಂದು ಬಿಜೆಪಿ ಮಹಿಳಾ ಮೋರ್ಚಾ ನಾಯಕಿ ಮಂಜುಳಾ ಪ್ರಸಾದ್ ಅವರು ಆಕ್ರೋಶ ಹೊರಹಾಕಿದರು.

ನಾರಿಶಕ್ತಿ ವಂದನಾ ಅಧಿನಿಯಮವನ್ನು ಜಾರಿಗೊಳಿಸದಂತೆ ಅಡ್ಡಿಪಡಿಸುತ್ತಿರುವ ಕಾಂಗ್ರೆಸ್ ಮತ್ತು ಮಿತ್ರ ಪಕ್ಷಗಳ ನಿಲುವನ್ನು ಖಂಡಿಸಿ ಶನಿವಾರ ಮಣಿಪಾಲದ ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ನಡೆದ ಬೃಹತ್ ಪ್ರತಿಭಟನಾ ಸಭೆಯಲ್ಲಿ ಅವರು ದಿಕ್ಸೂಚಿ ಭಾಷಣ ಮಾಡಿದರು.

ಕೇವಲ ಒಂದು ನಿರ್ದಿಷ್ಟ ಕುಟುಂಬದವರಷ್ಟೇ ಮಹಿಳಾ ನಾಯಕಿಯರಾಗಬೇಕು ಎನ್ನುವ ಗುಲಾಮಗಿರಿಯ ಮನಸ್ಥಿತಿಯಿಂದ ಮಹಿಳೆಯರು ಹೊರಬರಬೇಕೆಂದು ಅವರು ಕರೆ ನೀಡಿದರು. ರಾಣಿ ಅಬ್ಬಕ್ಕ, ಕಿತ್ತೂರು ಚೆನ್ನಮ್ಮ ಹಾಗೂ ಝಾನ್ಸಿ ರಾಣಿ ಲಕ್ಷ್ಮೀಬಾಯಿಯಂತಹ ವೀರ ವನಿತೆಯರು ಕೂಡ ನಮ್ಮಂತೆ ಮಹಿಳೆಯರೇ ಆಗಿದ್ದರು. ಮಹಿಳೆಯರಿಗೂ ಅಗಾಧವಾದ ಸಾಮರ್ಥ್ಯ ಇದೆ ಎಂಬುದನ್ನು ತಿಳಿಯಬೇಕು ಎಂದರು. ಇಂದು ಪ್ರಧಾನಿ ಮೋದಿಯವರು ಮಹಿಳೆಯರಿಗೆ ಗೌರವ ನೀಡಿ ಮೀಸಲಾತಿ ನೀಡಲು ಮುಂದಾಗಿದ್ದರೆ, ವಿರೋಧ ಪಕ್ಷದವರು ಬ್ರಿಟಿಷ್ ಮನಸ್ಥಿತಿಯೊಂದಿಗೆ ಅದನ್ನು ತಡೆಯುತ್ತಿದ್ದಾರೆ ಎಂದು ಕಿಡಿಕಾರಿದರು.



ಮಹಿಳೆಯರಿಗೆ ಪ್ರಾತಿನಿಧ್ಯ ಕೊಡಿ

ಉಡುಪಿ ಜಿಲ್ಲೆಯು ಅತಿ ಹೆಚ್ಚು ಮಹಿಳಾ ಜನಸಂಖ್ಯೆಯನ್ನು ಹೊಂದಿರುವ ಜಿಲ್ಲೆಯಾಗಿದೆ. ಹೀಗಿರುವಾಗ ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮಹಿಳೆಯರಿಗೆ ಅರ್ಹ ಪ್ರಾತಿನಿಧ್ಯ ನೀಡಬೇಕು ಎಂದು ಅವರು ಒತ್ತಾಯಿಸಿದರು. ಮನೆಯಲ್ಲಿ ಮಕ್ಕಳನ್ನು ಸಾಕಿ, ಕಚೇರಿಯ ಕೆಲಸವನ್ನೂ ನಿಭಾಯಿಸುವ ಮಹಿಳೆಯರು ಹುಟ್ಟುತ್ತಲೇ ನಾಯಕತ್ವದ ಗುಣಗಳನ್ನು ಹೊಂದಿರುತ್ತಾರೆ. ಮಹಿಳೆಯರು ಅಸಮರ್ಥರು ಎಂದು ಭಾವಿಸುವವರಿಗೆ ತಕ್ಕ ಉತ್ತರ ನೀಡುವ ಸಮಯ ಬಂದಿದೆ ಎಂದು ಅವರು ಪ್ರತಿಪಾದಿಸಿದರು.

ನಾರಿಶಕ್ತಿ ಫೋರಂ ಮತ್ತು ಬಿಜೆಪಿ ಮಹಿಳಾ ಮೋರ್ಚಾ ಸಂಯುಕ್ತ ಆಶ್ರಯದಲ್ಲಿ ನಡೆದ ಈ ಪ್ರತಿಭಟನೆ ಒಯಲ್ಲಿ ಜಿಲ್ಲೆಯ ನೂರಾರು ಮಹಿಳಾ ಕಾರ್ಯಕರ್ತೆಯರು ಪಾಲ್ಗೊಂಡು ಮಹಿಳಾ ವಿರೋಧಿ ನೀತಿಗಳ ವಿರುದ್ಧ ಘೋಷಣೆಗಳನ್ನು ಕೂಗಿದರು.

ಈ ಸಂದರ್ಭದಲ್ಲಿ ಬಿಜೆಪಿ ಪ್ರಮುಖರಾದ ತಿಂಗಳೆ ವಿಕ್ರಮಾರ್ಜುನ ಹೆಗ್ಡೆ, ದಿನಕರ ಶೆಟ್ಟಿ ಹೆರ್ಗ, ಸಂಧ್ಯಾ ರಮೇಶ್, ನೀತಾ ಪ್ರಭು – ಸೌರಭಿ ಪೈ, ಅನಿತಾ ಶ್ರೀಧರ್, ರಮ್ಯಾ, ರಶ್ಮಿತಾ ಶೆಟ್ಟಿ, ಸುಮಿತ್ರಾ ನಾಯಕ್, ಪ್ರಭಾಕರ ಪೂಜಾರಿ, ಕಿರಣ್ ಕುಮಾರ್, ದಿನೇಶ್ ಅಮೀನ್, ಜ್ಯೋತಿ ಪೂಜಾರಿ ಸೇರಿ ಹಲವರು ಉಪಸ್ಥಿತರಿದ್ದರು.

ಸುಳ್ಯದಲ್ಲಿ ರಾಷ್ಟ್ರೀಯ ಪಂಚಾಯತ್‌ರಾಜ್ ದಿನಾಚರಣೆ

ಶೇ.100 ಸಾಧಕ ಪಂಚಾಯತ್‌ಗಳಿಗೆ ಪ್ರಶಂಸನಾ ಪತ್ರ

ಸುಳ್ಯ: ರಾಷ್ಟ್ರೀಯ ಪಂಚಾಯತ್‌ರಾಜ್ ದಿನಾಚರಣೆ ಅಂಗವಾಗಿ ಶುಕ್ರವಾರ ಸುಳ್ಯ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ರಾಷ್ಟ್ರೀಯ ಪಂಚಾಯತ್‌ರಾಜ್ ದಿನಾಚರಣೆ ಹಾಗೂ ಪ್ರಶಂಸನಾ ಪತ್ರ ವಿತರಣೆ ಕಾರ್ಯಕ್ರಮ ಶುಕ್ರವಾರ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ನಡೆಯಿತು.

ಸಮಾರಂಭದಲ್ಲಿ 2025–26ನೇ ಸಾಲಿನಲ್ಲಿ ಶೇ.100ರಷ್ಟು ತೆರಿಗೆ ಸಂಗ್ರಹಿಸಿದ ಗ್ರಾಮ ಪಂಚಾಯತ್‌ಗಳ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕಾರ್ಯದರ್ಶಿ, ದ್ವಿ.ದ.ಲೆಸ, ಡಾಟಾ ಎಂಟ್ರಿ ಆಪರೇಟರ್ ಮತ್ತು ಬಿಲ್ ಕಲೆಕ್ಟರ್ ಹಾಗೂ ತಾಲೂಕಿನಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ ಮಂಡೆಕೋಲು ಗ್ರಾಮ ಪಂಚಾಯತ್ ಗ್ರಂಥಾಲಯ ಮತ್ತು ಅರಿವು ಕೇಂದ್ರದ ಮೇಲ್ವಿಚಾರಕರಿಗೆ ಹಾಗೂ ತೆರಿಗೆ ವಸೂಲಾತಿಯಲ್ಲಿ ಸಾಧನೆ ಮಾಡಿರುವ 10 ಗ್ರಾಮ ಪಂಚಾಯತ್‌ಗಳಿಗೆ ಪ್ರಸಂಶನಾಪತ್ರ ನೀಡಿ ಗೌರವ ಸನ್ಮಾನ ನಡೆಯಿತು. ಸುಳ್ಯ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ರಾಜಣ್ಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಸನ್ಮಾನಿತರನ್ನು ಗೌರವಿಸಿದರು.



ಆಲೆಟ್ಟಿ ಹಾಗೂ ಅರಂತೋಡು ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಜಯಪ್ರಕಾಶ್ ಎಂ.ಆರ್. ಮಾತನಾಡಿ, ಪಂಚಾಯತ್ ರಾಜ್ ವ್ಯವಸ್ಥೆಯಿಂದ ಸಾರ್ವಜನಿಕರಿಗೆ ಸಿಗುವ ಸೌಲಭ್ಯಗಳು ಮತ್ತು ಈ ಬಗ್ಗೆ ಅಧಿಕಾರಿಗಳ ಕರ್ತವ್ಯ ಮತ್ತು ಯೋಜನೆಯನ್ನು ಫಲಾನುಭವಿಗಳಿಗೆ ದೊರಕಿಸುವಲ್ಲಿ ವಹಿಸಬೇಕಾದ ಶ್ರಮಗಳ ಬಗ್ಗೆ ಮಾಹಿತಿಯನ್ನು ನೀಡಿದರು. ವೇದಿಕೆಯಲ್ಲಿ ಪಂಚಾಯತ್‌ರಾಜ್ ಇಲಾಖೆ ಸಹಾಯಕ ನಿರ್ದೇಶಕಿ ಗೀತಾ, ಗ್ರಾಮ ಪಂಚಾಯತ್ ಸದಸ್ಯರುಗಳ ಸಮಿತಿಯ ತಾಲೂಕು ಅಧ್ಯಕ್ಷ ಶೈಲೇಶ್ ಅಂಬೆಕಲ್ಲು, ಅಧಿಕಾರಿಗಳಾದ ದೇವರಾಜ್ ಮುತ್ತಾಜೆ, ಪಂಚಾಯತ್‌ರಾಜ್ ನರೇಗಾ ಸಹಾಯಕ ನಿರ್ದೇಶಕ ರವಿಚಂದ್ರ ಉಪಸ್ಥಿತರಿದ್ದರು. ಗೀತಾ ಸ್ವಾಗತಿಸಿ, ರವಿಚಂದ್ರ ವಂದಿಸಿದರು. ಅಮರಮುಡ್ನೂರು ಅಭಿವೃದ್ಧಿ ಅಧಿಕಾರಿ ದಯಾನಂದ ಪತ್ತುಕುಂಜ ಕಾರ್ಯಕ್ರಮ ನಿರ್ವಹಿಸಿದರು. ಅವಿನಾಶ್ ಕಡಪಾಲ ಹಾಗೂ ಸಿಬ್ಬಂದಿಗಳು ಸಹಕರಿಸಿದರು.


ಕಿರು ಸುದ್ದಿ

ಕಣ್ಣೂರು ಕಿಮ್ಸ್ ಶ್ರೀಚಂದ್ ಆಸ್ಪತ್ರೆಯಲ್ಲಿ ಅತ್ಯಾಧುನಿಕ ಮಾದರಿಯ ಶಸ್ತ್ರಕ್ರಿಯೆ ಯಶಸ್ವಿ

ಕಾಸರಗೋಡು: ಶಿಶುಗಳಲ್ಲಿ ಗರ್ಭಾವಸ್ಥೆಯಲ್ಲಿಯೇ ರೂಪುಗೊಳ್ಳುವ ತಲೆಬುರುಡೆಯ ಬೆಳವಣಿಗೆಯ ಜನನ ವೈಕಲ್ಯವಾದ ಕ್ರಾನಿಯೋಸಿನೋಸ್ಟೋಸಿಸ್ ರೋಗಕ್ಕೆ ಆಧುನಿಕ ಶಸ್ತ್ರಕ್ರಿಯೆಯಾದ ಎಫ್‌ಓಎಆರ್ (ಫ್ರೋಂಟೋ ಓರ್ಬಿಟಲ್ ಅಡ್ವಾನ್ಸ್‌ಮೆಂಟ್ ಆ್ಯಂಡ್ ರೀ ಕನ್ಸ್ಟ್ರಕ್ಷನ್)ನ್ನು ಕಣ್ಣೂರಿನ ಕಿಮ್ಸ್ ಶ್ರೀಚಂದ್ ಆಸ್ಪತ್ರೆಯು ಮೂರು ಶಿಶುಗಳಲ್ಲಿ ಯಶಸ್ವಿ ಶಸ್ತ್ರಕ್ರಿಯೆಯನ್ನು ಪೂರ್ತಿಗೊಳಿಸಿದೆ ಎಂದು ಪ್ರಸ್ತುತ ಆಸ್ಪತ್ರೆಯ ಡಾ.ಟಿ.ಮಹೇಶ್ ಭಟ್ ಶನಿವಾರ ಪ್ರೆಸ್‌ಕ್ಲಬ್‌ನಲ್ಲಿ ಜರಗಿದ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ. ಆರು, ಏಳು ತಿಂಗಳ ಪ್ರಾಯವಿರುವ ಮೂರು ಶಿಶುಗಳನ್ನು ಈ ಅತ್ಯಾಧುನಿಕ ಮಾದರಿಯ ಶಸ್ತ್ರಕ್ರಿಯೆಯನ್ನು ಯಶಸ್ವಿಯಾಗಿ ಪೂರ್ತಿಗೊಳಿಸಿದೆ. ಉತ್ತರ ಮಲಬಾರ್‌ನಲ್ಲಿ ಇದೇ ಮೊದಲ ಬಾರಿಗೆ ಇಂತಹ ಶಸ್ತ್ರಕ್ರಿಯೆಯು ಈಗ ಕಣ್ಣೂರಿನ ಕಿಮ್ಸ್ ಶ್ರೀಚಂದ್ ಆಸ್ಪತ್ರೆಯಲ್ಲಿಯೂ ಲಭ್ಯವಿದೆ.

ನಿಧನ ಸುದ್ದಿ

ಬಳ್ಳಪದವು ಮಾಧವ ಉಪಾಧ್ಯಾಯ




ಕಾಸರಗೋಡು: ಕುಂಬ್ಡಾಜೆಯ ಬಳ್ಳಪದವು ನಿವಾಸಿ, ಋಗ್ವೇದ ಹಾಗೂ ತಾಂತ್ರಿಕ ವಿದ್ಯೆಯಲ್ಲಿ ಅಪಾರ ಪಾಂಡಿತ್ಯ ಹೊಂದಿದ್ದ ಮಹಾಮಹೋಪಾಧ್ಯಾಯ ಬಳ್ಳಪದವು ಮಾಧವ ಉಪಾಧ್ಯಾಯ (100) ಶುಕ್ರವಾರ ಅಣಂಗೂರಿನ ಸ್ವಗೃಹದಲ್ಲಿ ನಿಧನ ಹೊಂದಿದರು. ಮಹಾವಿದ್ವಾಂಸರಾಗಿದ್ದ ಅವರು, ತಿರುಪತಿಯ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠದಿಂದ 2018ರಲ್ಲಿ ಮಹಾಮಹೋಪಾಧ್ಯಾಯ ಎಂಬ ಬಿರುದು ಪಡೆದಿದ್ದರು. ಅಮೇರಿಕಾದ ಫ್ಲೋರಿಡಾ ಶ್ರೀ ವಿದ್ಯಾ ಅಂತಾರಾಷ್ಟ್ರೀಯ ವಿದ್ಯಾಲಯ ವೇದ ವಿಜ್ಞಾನ ವಿಭಾಗದಿಂದ ವೇದ ತಂತ್ರ ಪ್ರಯೋಗದ ಕುರಿತು ಡಾಕ್ಟರೇಟ್ ಗಳಿಸಿದ್ದರು. ದಕ್ಷಿಣಾಮೂರ್ತಿ ಸರ್ವಸ್ವ ಎಂಬ ಗ್ರಂಥ ಸಹಿತ ಹಲವಾರು ಸಂಸ್ಕೃತ ಸಾಹಿತ್ಯ ಅಲ್ಲದೆ ಅನೇಕ ದೇಗುಲಗಳ ಸುಪ್ರಭಾತಗಳು, ದೇವಿ ಸ್ತುತಿಗಳನ್ನು ರಚಿಸಿದ್ದಾರೆ. ಕಾಸರಗೋಡು ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ಹಲವು ದೇಗುಲಗಳಿಗೆ ತಂತ್ರಿವರ್ಯರಾಗಿ ಸಮರ್ಥ ಸೇವೆ ಸಲ್ಲಿಸಿದ್ದರು. ಮೃತರು ಓರ್ವ ಪುತ್ರ ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

ಸರಸ್ವತಿ ಭಟ್



ಮಂಗಳೂರು: ಪಡೀಲ್ ಕಣ್ಣೂರು ನಿವಾಸಿ, ನಿವೃತ್ತ ಯೋಧ ದಿ. ಸೀತಾರಾಮ ಭಟ್ ಸಿ.ಎಚ್. ಅವರ ಪತ್ನಿ ಸರಸ್ವತಿ ಭಟ್ (78) ಅವರು ಏ.25ರಂದು ಸ್ವಗೃಹದಲ್ಲಿ ನಿಧನ ಹೊಂದಿದರು. ಮೃತರು ಇಬ್ಬರು ಪುತ್ರರನ್ನು ಅಗಲಿದ್ದಾರೆ.

ರಾಮಚಂದ್ರ ಭಟ್




ವಿಟ್ಲ: ಇಲ್ಲಿಗೆ ಸಮೀಪದ ನೂಜಿ ನಿವಾಸಿ, ಕೃಷಿಕರಾದ ಕಾಂತಿಲ ರಾಮಚಂದ್ರ ಭಟ್ ಅವರು ಅಲ್ಪ ಕಾಲದ ಅನಾರೋಗ್ಯದಿಂದಾಗಿ ಭಾನುವಾರ ಬೆಳಿಗ್ಗೆ ನಿಧನರಾದರು. ಅವರಿಗೆ 80 ವರ್ಷ ಪ್ರಾಯವಾಗಿತ್ತು. ಅವರು ಪತ್ನಿ, ಐವರು ಪುತ್ರಿಯರು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ.

ಬಾಳಿಕೋಡಿ ಈಶ್ವರ ಭಟ್

ಬೆಳ್ತಂಗಡಿ: ತಾಲೂಕಿನ ಕೊಕ್ರಾಡಿ ಗ್ರಾಮದ ಜಂತಿಗೋಳಿ ಗೋಕುಲ ನಿವಾಸಿಯಾಗಿರುವ ಬಾಳಿಕೋಡಿ ಈಶ್ವರ ಭಟ್ಟ (91) ತಮ್ಮ ಏ. 22ರಂದು ಬೆಳಿಗ್ಗೆ 9ಕ್ಕೆ ಸ್ವಗೃಹದಲ್ಲಿ ನಿಧನರಾಗಿದ್ದಾರೆ. ಅವರು ನಾಲ್ವರು ಪುತ್ರರು, ಇಬ್ಬರು ಮೊಮ್ಮಕ್ಕಳು ಮತ್ತು ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಕೆರೆಮೂಲೆ ಸುಬ್ರಾಯ ಭಟ್



ಮಂಜೇಶ್ವರ: ಉಪ್ಪಳ ಸಮೀಪದ ಬಾಯಾರು ಕೆರೆಮೂಲೆ ನಿವಾಸಿ, ಹಿರಿಯ ಕೃಷಿಕರಾಗಿದ್ದ ಸುಬ್ರಾಯ ಭಟ್ (91) ಅಲ್ಪ ಕಾಲದ ಅಸೌಖ್ಯದಿಂದ ಶನಿವಾರ ಸಂಜೆ ನಿಧನರಾದರು. ಪ್ರಸ್ತುತ ಕೋಣಾಜೆಯಲ್ಲಿ ಪುತ್ರನ ಜೊತೆ ವಾಸಿಸುತ್ತಿದ್ದರು. ಮೃತರು ಪುತ್ರರಾದ ರಾಮ ಭಟ್, ಡಾ.ಉದಯಶಂಕರ ಎನ್.ಕೆ., ಪುತ್ರಿ ಸವಿತಾ ಎಸ್.ಭಟ್ ಅವರನ್ನು ಅಗಲಿದ್ದಾರೆ.

ಅದಿತಿ ಅಮ್ಮ ಸಾಯ



ಬಂಟ್ವಾಳ: ತಾಲೂಕು ಕರೋಪಾಡಿ ಗ್ರಾಮದ ಸಾಯ ನಿವಾಸಿ ಅದಿತಿ ಅಮ್ಮ ಸಾಯ ಅವರು ಏ. 25ರಂದು ಶನಿವಾರ ಸ್ವಗೃಹದಲ್ಲಿ ನಿಧನರಾದರು. ಅವರಿಗೆ 87 ವರ್ಷ ವಯಸ್ಸಾಗಿತ್ತು. ದಿವಂಗತ ಸಾಯ ಶಂಕರ ಭಟ್ಟರ ಪತ್ನಿಯಾಗಿದ್ದ ಅವರು ಸರಳ ಸಜ್ಜನಿಕೆಯ ವ್ಯಕ್ತಿತ್ವಕ್ಕೆ ಹೆಸರಾಗಿದ್ದರು. ಮೃತರು ಐವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು, ಮರಿಮಕ್ಕಳು ಹಾಗೂ ಅಪಾರ ಬಂಧು ಬಳಗದವರನ್ನು ಅಗಲಿದ್ದಾರೆ.

ಶ್ರೀಕೃಷ್ಣಭಟ್ ವರ್ಮುಡಿ

ಪೆರ್ಲ: ಹಿರಿಯ ಕಾಂಗ್ರೆಸ್ ಮುಖಂಡ, ಪೆರ್ಲ ಬಳಿಯ ನಲ್ಕ ವಾಗ್ದೇವಿ ಅನುದಾನಿತ ಪ್ರಾಥಮಿಕ ಶಾಲೆಯ ನಿಕಟಪೂರ್ವ ವ್ಯವಸ್ಥಾಪಕ ಶ್ರೀಕೃಷ್ಣ ಭಟ್ ವರ್ಮುಡಿ (78) ನಿಧನ ಹೊಂದಿದರು. ಅವರು ಎಣ್ಮಕಜೆ ಮಂಡಲ ಕಾಂಗ್ರೆಸ್ ಸಮಿತಿ ಕೋಶಾಧಿಕಾರಿ, ಯುಡಿಎಫ್ ಚುನಾವಣಾ ಸಮಿತಿ ಪದಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದರು. ಮೃತರು ಪತ್ನಿ ಶಂಕರಿ, ಮಕ್ಕಳಾದ ಶಾರದಾ, ರವಿಶಂಕರ, ಸತ್ಯನಾರಾಯಣ, ಗಣೇಶಕೃಷ್ಣ ಅವರನ್ನು ಅಗಲಿದ್ದಾರೆ.

ಭಾಗಿ ಪೆರ್ವೋಡಿ

ಮಂಜೇಶ್ವರ: ಬಾಯಾರು ಪೆರ್ವೋಡಿ ಮೇಕೆಪದವು ನಿವಾಸಿ ದಿ.ಗುರುವ ಅವರ ಪತ್ನಿ ಭಾಗಿ (60) ನಿಧನರಾದರು. ಮನೆಯಲ್ಲಿ ಹೃದಯಾಘಾತ ಸಂಭವಿಸಿದ್ದ ಅವರನ್ನು ಉಪ್ಪಳದ ಖಾಸಗಿ ಆಸ್ಪತ್ರೆಗೆ ಸಾಗಿಸುವ ಮಧ್ಯೆ ಅಸುನೀಗಿದರು. ಮೃತರು ಮಕ್ಕಳಾದ ಬೇಬಿ, ಪುಷ್ಪಾ ಅವರನ್ನು ಅಗಲಿದ್ದಾರೆ.

ಎಂ.ಕಸ್ತೂರಿ ಮಲ್ಯ

ಕಾಸರಗೋಡು: ಸೂರ್ಲು ಕುಂದಿಲ ಅಂಗನವಾಡಿ ಬಳಿಯ ಸತ್ಯದೇವತಾ ಕೃಪಾದ ದಿ.ಕೆ.ಪುಂಡಲೀಕ ಮಲ್ಯರ ಪತ್ನಿ ಎಂ.ಕಸ್ತೂರಿ ಮಲ್ಯ (75) ನಿಧನ ಹೊಂದಿದರು. ಅವರು ಮಂಗಳೂರಿನ ಪುತ್ರನ ಮನೆಯಲ್ಲಿ ವಿಧಿವಶರಾದರು. ಮೃತರು ಮಕ್ಕಳಾದ ಕೆ.ಗಣೇಶ್ ಮಲ್ಯ, ಪೂರ್ಣಿಮಾ ಕೆ., ಗಾಯತ್ರಿ ಕೆ. ಅವರನ್ನು ಅಗಲಿದ್ದಾರೆ.

ಸಂಜೀವ ಪೂಜಾರಿ

ಮುಳ್ಳೇರಿಯ: ಬೆಳ್ಳೂರು ನೆಟ್ಟಣಿಗೆ ಈಂದುಮೂಲೆ ನಿವಾಸಿ ಸಂಜೀವ ಪೂಜಾರಿ (72) ನಿಧನರಾದರು. ಅವರು ಕೃಷಿಕರಾಗಿದ್ದರು. ಮೃತರು ಪತ್ನಿ ಕಮಲಾ, ಮಕ್ಕಳಾದ ಉದಯ, ಗುರುಪ್ರಸಾದ್, ಭವಿತಾ ಅವರನ್ನು ಅಗಲಿದ್ದಾರೆ.



ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ ವತಿಯಿಂದ ಬಜ್ಪೆ ಸುಂಕದಕಟ್ಟೆ ಶ್ರೀ ಅಂಬಿಕಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಡೆಯುತ್ತಿರುವ ಶಾಖೆಯಲ್ಲಿ ಮಾತೃ ಧ್ಯಾನ, ಮಾತೃವಂದನ, ಮಾತೃ ಭೋಜನ ಕಾರ್ಯಕ್ರಮ ಭಾನುವಾರ ನಡೆಯಿತು. ಸುಂಕದಕಟ್ಟೆ ಶಾಖೆಯ ಯೋಗ ಬಂಧು ಲಲಿತ, ಶಿಕ್ಷಕಿಯರಾದ ಮೀರಾ, ಶುಭ, ಜಿಲ್ಲಾ ಸಂಯೋಜಕಿ ಕನಕ, ನಗರ ಸಂಚಾಲಕರಾದ ಶ್ರೀನಿವಾಸ್, ಮಂಜುನಾಥ್, ಪದ್ಮನಾಭ, ಮನೋಹರ್, ರೇಣುಕ, ಪೂರ್ಣಿಮಾ, ಅಶ್ವಿನಿ, ಪವಿತ್ರ ಉಪಸ್ಥಿತರಿದ್ದರು.

ನೀರು ಕೇಳುವ ನೆಪದಲ್ಲಿ ಮನೆಗೆ ಬಂದು ಆತಂಕಹುಟ್ಟಿಸಿದ ಆಗಂತುಕ!

ಉಪ್ಪಿನಂಗಡಿ : ಹಾಡಹಾಗಲೇ ನೀರು ಕೇಳುವ ನೆಪದಲ್ಲಿ ಮನೆಗೆ ಬಂದು ಮನೆಯಲ್ಲಿ ಮಹಿಳೆಯರೇ ಇರುವುದನ್ನು ಖಚಿತಪಡಿಸಿಕೊಂಡು ಮನೆಗೆ ನುಗ್ಗಿ ಬಾಗಿಲ ಚಿಲಕ ಹಾಕಿ ಮನೆ ಮಂದಿಯನ್ನು ಭೀತಿಗೊಳಪಡಿಸಿದ್ದ ಅಪರಿಚಿತ ವ್ಯಕ್ತಿಯನ್ನು ಉಪ್ಪಿನಂಗಡಿಯ ನಾಗರಿಕರು ಹಿಡಿದು ಪೊಲೀಸರಿಗೊಪ್ಪಿಸಿದ ಘಟನೆ ಉಪ್ಪಿನಂಗಡಿಯಲ್ಲಿ ನಡೆದಿದೆ.



ಇಲ್ಲಿನ ಬ್ಯಾಂಕ್ ರಸ್ತೆಯ ಬಳಿ ವೃದ್ಧೆಯೋರ್ವರು ಮಾತ್ರ ಮನೆಯಲ್ಲಿದ್ದ ವೇಳೆ ನೀರು ಕೇಳುವ ನೆಪದಲ್ಲಿ ಬಂದ ವ್ಯಕ್ತಿ , ವೃದ್ಧೆ ನೀರು ತರಲೆಂದು ಅಡುಗೆ ಕೋಣೆಗೆ ಹೋದ ವೇಳೆ ನೇರವಾಗಿ ಮನೆಗೆ ನುಗ್ಗಿದವನೇ ಮನೆಯ ಬಾಗಿಲ ಚಿಲಕ ಹಾಕಿದ್ದ ಇದನ್ನು ಕಂಡು ವೃದ್ಧೆ ಭೀತಿಯಿಂದ ಬೊಬ್ಬಿರಿದಾಗ ಅಲ್ಲಿಂದ ಓಡಿ ಹೋಗಿ ಸನಿಹದಲ್ಲೇ ಇದ್ದ ಇನ್ನೊಂದು ಒಂಟಿ ಮಹಿಳೆ ಇರುವ ಮನೆಯ ಕಟ್ಟಡದ ಕೊಠಡಿಯೊಂದಕ್ಕೆ ನುಗ್ಗಿ ಬಾಗಿಲ ಚಿಲಕ ಹಾಕಲೆತ್ನಿಸಿದ್ದ. ಇದನ್ನು ಗಮನಿಸಿದ ಮನೆ ಮಹಿಳೆ ಮತ್ತು ಸ್ಥಳೀಯರು ಬೊಬ್ಬೆ ಹೊಡೆದಾಗ ಅಲ್ಲಿಂದ ಪರಾರಿಯಾದ ಈತ ಉದ್ಯಮಿಯೋರ್ವರ ಮನೆಯ ಹಿಂಭಾಗದ ಕಟ್ಟಡದಲ್ಲಿ ಅವಿತು ಕೂತಿದ್ದ. ಅವನನ್ನು ಹಿಂಬಾಸಿಕೊಂಡು ಬಂದ ಸ್ಥಳೀಯರು ಈ ಬಗ್ಗೆ ಉದ್ಯಮಿಗೆ ಮಾಹಿತಿ ನೀಡಿ, ಆತನನ್ನು ಹಿಡಿದು ಪೊಲೀಸರಿಗೊಪ್ಪಿಸಿದರು. ಪ್ರಾರಂಭದಲ್ಲಿ ಮೂಕ ಭಾಷೆಯಲ್ಲಿ ನೀರು ಕೇಳುತ್ತಿದ್ದ ಈತ ಪೊಲೀಸರಿಗೊಪ್ಪಿಸುವ ವೇಳೆ ಮಲೆಯಾಳಿ ಭಾಷೆಯಲ್ಲಿ ಮಾತನಾಡಿ ತಾನು ರಬ್ಬರ್ ಟ್ಯಾಪಿಂಗ್ ವೃತ್ತಿಯವನೆಂದು ತಿಳಿಸಿದ್ದ.

ಬಿಸಿಲ ಬೇಗೆಯಲ್ಲಿ ಬಳಲಿ ಬಂದಾತನಿಗೆ ನೀರು ಕೊಡಲೆಂದು ಮಾನವೀಯ ನೆಲೆಯಲ್ಲಿ ಸ್ಪಂದಿಸಿದಾಗ ಈ ರೀತಿಯಲ್ಲಿ ಮನೆಗೆ ನುಗ್ಗಿದ ವ್ಯಕ್ತಿಯ ಬಗ್ಗೆ ಪರಿಸರದಲ್ಲಿ ಭೀತಿ ಮೂಡಿದ್ದು, ಪೊಲೀಸ್ ಅಧಿಕಾರಿಗಳು ವಶದಲ್ಲಿರುವ ವ್ಯಕ್ತಿಯ ಬಗ್ಗೆ ಪೂರ್ವಾಪರ ವಿಚಾರಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ನಾಗರಿಕರು ಆಗ್ರಹಿಸಿದ್ದಾರೆ.

ಕಟೀಲಿನಲ್ಲಿ ಭಜನೆ ತರಬೇತಿ ನೀಡಿದ ಮೈಸೂರು ರಾಮಚಂದ್ರಾಚಾರ್



ಕಟೀಲು : ದಾಸ ಸಾಹಿತ್ಯವನ್ನು ನಾಡಿನಾದ್ಯಂತ ಪ್ರಚುರ ಪಡಿಸುತ್ತಿರುವ, ಚಿತ್ರಪಟಗಳನ್ನು ತೋರಿಸುತ್ತ ಭಕ್ತಿ ಸಂಗೀತ ಹಾಡುವ ಖ್ಯಾತ ಗಾಯಕರಾದ ಮೈಸೂರು ರಾಮಚಂದ್ರಾಚಾರ್ ಕಟೀಲು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಪ್ರೌಢಶಾಲೆಯಲ್ಲಿ ಭಜನೆ ತರಬೇತಿಯನ್ನು ನಡೆಸಿಕೊಟ್ಟರು.

ಪೇಜಾವರ ಮಠದ ಸಹಯೋಗದಲ್ಲಿ ಕಟೀಲು ದೇವಸ್ಥಾನ ಆಯೋಜಿಸಿರುವ ಹಿಂದೂ ಧಾರ್ಮಿಕ ಶಿಬಿರದಲ್ಲಿ ರಾಘವೇಂದ್ರ ಸ್ವಾಮಿಗಳ, ಮುಖ್ಯಪ್ರಾಣ ದೇವರ ಹಾಡುಗಳನ್ನು ಕಲಿಸಿಕೊಟ್ಟರು. ಲೇಲೇಲೇ ಗಾ, ಭಾಗ್ಯದ ಲಕ್ಷ್ಮೀ ಬಾರಾಮ್ಮಾ, ಬಾರೋ ಬಾರೋ ಪಾಂಡುರಂಗಾ ನೀನೇ ಗತಿ, ವಿಠಲ ಬಾರೋ ಮುಂತಾದ ಸಂಕೀರ್ತನೆಗಳನ್ನು ಹೇಳಿಕೊಟ್ಟರು.

ಹರಿನಾಮ ಸಂಕೀರ್ತನೆಯಿಂದ ಆಧ್ಯಾತ್ಮದ ಒಲವು ಮಾನಸಿಕ ನೆಮ್ಮದಿ ಸಾಧ್ಯ. ದಿನಂಪ್ರತಿ ಸಾಧ್ಯವಾದಷ್ಟು ಭಜನೆಗಳನ್ನು ಹೇಳುವ ಪ್ರಯತ್ನ ಮಾಡಬೇಕು. ಭಗವಂತನ ಒಲುಮೆಯನ್ನು ಪಡೆಯಲು ಭಜನೆ ಸುಲಭ ಹಾದಿ ಎಂದು ಅವರು ಹೇಳಿದರು.

ವಿದ್ವಾಂಸ ಕುತ್ಪಾಡಿ ಕೃಷ್ಣರಾಜ ಭಟ್, ಕಟೀಲು ಶಿಕ್ಷಣ ಸಂಸ್ಥೆಗಳ ಶ್ರೀವತ್ಸ, ಶೈಲಜಾ, ಮಾಲತಿ ಮುಂತಾದವರಿದ್ದರು.

ಪರ್ಸೀನ್ ಮೀನುಗಾರರ ಸಂಘದ ರಜತ ಮಹೋತ್ಸವ ಸಮಾರೋಪ

ವೃತ್ತಿಗೆ ಸರ್ಕಾರದ ಶಕ್ತಿ: ಕೋಟ

ಉಡುಪಿ: ಆಧುನಿಕತೆಯಿಂದಾಗಿ ಇಂದು ಮೀನುಗಾರಿಕೆಯಲ್ಲಿ ಬಹಳಷ್ಟು ಬದಲಾವಣೆಗಳಾಗಿವೆ. ಪ್ರಧಾನಿ ನರೇಂದ್ರ ಮೋದಿ ಅವರು ಮೀನುಗಾರಿಕೆ ವೃತ್ತಿಗೆ ನಾವು ಶಕ್ತಿ ಕೊಟ್ಟರೆ ಅವರ ಶ್ರಮದಿಂದ ಆರ್ಥಿಕ ಬಲ ಮಾತ್ರವಲ್ಲದೇ ಆಹಾರ ಭದ್ರತೆಯನ್ನೂ ಕೊಡುತ್ತದೆ ಎಂದು ಹೇಳಿದ್ದರು. ಆ ನಿಟ್ಟಿನಲ್ಲೇ ಮೀನುಗಾರಿಕೆಗೆ ನಾವು ಹೆಚ್ಚಿನ ಉತ್ತೇಜನ ಕೊಡುತ್ತಿದ್ದು ಅದು ಇನ್ನಷ್ಟು ಸಮೃದ್ಧವಾಗಬೇಕು ಎಂದು ಸಂಸದ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

ಮಲ್ಪೆಬೀಚ್‌ನಲ್ಲಿನಡೆಯುತ್ತಿರುವಪರ್ಸೀನ್ ಮೀನುಗಾರರ ಸಂಘದ ರಜತ ಮಹೋತ್ಸವದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.



ಮೊದಲು ಕರ್ನಾಟಕದಲ್ಲಿ 4 ಲಕ್ಷ ಟನ್ ಮೀನುಗಳ ಉತ್ಪಾದನೆ ಮಾಡುತ್ತಿದ್ದೆವು. ಮತ್ಸ್ಯಸಂಪದ ಯೋಜನೆ ಪರಿಣಾಮ ಇಂದು 9 ಲಕ್ಷ ಟನ್‌ನಷ್ಟು ಉತ್ಪಾದನಾ ಸಾಮರ್ಥ್ಯ ಹೆಚ್ಚಳವಾಗಿದೆ. ಮರಿಮೀನುಗಳ ನಾಶವಾಗುತ್ತಿದೆ ಎಂಬ ಅಪಾಯದ ಗಂಟೆ ಸದ್ಯ ಎದುರಾಗಿದೆ. ಹಾಗಾಗಿ ಮತ್ಸ್ಯ ಸಂಪತ್ತು ಉಳಿಸುವ ವ್ಯವಸ್ಥೆ ಕೂಡ ಆಗಬೇಕಿದೆ ಎಂದರು. ನಾನು ಮೀನುಗಾರಿಕೆ ಸಚಿವರಾಗಿದ್ದಾಗ ಹೆಜಮಾಡಿ ಬಂದರಿಗೆ 180 ಕೋಟಿ ರೂ. ಮಂಜೂರು ಮಾಡಿದ್ದೆ. ಅದರ ಕಾಮಗಾರಿ ಶೇ. 90ರಷ್ಟು ಆಗಿದೆ. ಅದು ಪೂರ್ಣವಾದರೆ ಮಲ್ಪೆ ಬಂದರಿನ ಒತ್ತಡ ಕಡಿಮೆ ಆಗುತ್ತದೆ ಎಂದರು.

ಕಾಪು ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಮಾತನಾಡಿ, ವ್ಯಕ್ತಿ ಹಿತದೊಂದಿಗೆ ಸಮಷ್ಟಿ ಹಿತವೂ ಜೊತೆಯಾಗಬೇಕು. ಮೀನುಗಾರರ ಸಮುದಾಯ ಎಂದಿಗೂ ನೇರ ನಡೆ ನುಡಿ ಹೊಂದಿರುವವರು. ಮೀನುಗಾರಿಕೆಗೆ ಇನ್ನಷ್ಟು ಶಕ್ತಿ ಬರಬೇಕು. ನಿಮ್ಮ ಆತ್ಮ ವಿಶ್ವಾಸ ಹೆಚ್ಚಾಗಬೇಕು ಎಂದರು.

ಉಡುಪಿ ಶಾಸಕ ಯಶ್‌ಪಾಲ್ ಸುವರ್ಣ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸಮಾರೋಪ ಸಮಾರಂಭದ ಬಳಿಕ ಕರ್ನಾಟಕದ ಆಯ್ದ ತಂಡಗಳ ಗುಂಪು ನೃತ್ಯ ಸ್ಪರ್ಧೆ ಕರಾವಳಿ ನೃತ್ಯೋತ್ಸವ 2026 ನಡೆಯಿತು.

ಇದೇ ವೇಳೆ ರಜತ ಸಂಭ್ರಮದ ಸಲುವಾಗಿ ಹಮ್ಮಿಕೊಳ್ಳಲಾಗಿದ್ದ ಕ್ರೀಡೋತ್ಸವದ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಮುಳುಗು ತಜ್ಞರಾದ ಈಶ್ವರ್ ಮಲ್ಪೆ, ರವಿ ಅಂಚನ್, ರಾಣಿ ಅಬ್ಬಕ ಪ್ರಶಸ್ತಿ ಪುರಸ್ಕೃತ ಯಶೋಧ ಕೇಶವ್, ಮೀನುಗಾರ ಮುಖಂಡ ವಾಸು ಕಾಂಚನ್, ಗೋಪಾಲ್ ಮೊಗೇರ ಭಟ್ಕಳ ಅವರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಪರ್ಸೀನ್ ಮೀನುಗಾರರ ಸಂಘದ ಅಧ್ಯಕ್ಷ ನಾಗರಾಜ ಸುವರ್ಣ, ರಜತ ಸಂಭ್ರಮ ಸಮಿತಿ ಉಪಾಧ್ಯಕ್ಷ ಆನಂದ್ ಬಿ. ಸುವರ್ಣ, ಕಾಂಗ್ರೆಸ್ ಮುಖಂಡ ರಮೇಶ್ ಕಾಂಚನ್, ಪ್ರಮುಖರಾದ ಎಂ.ಕೆ ಬಾಲರಾಜ್, ಗೋಪಾಲ್ ಸಿ ಬಂಗೇರ, ರತ್ನಾಕರ ಸಾಲಿಯಾನ್ , ನಾಗರಾಜ ಬಿ ಕುಂದರ್, ಕೃಷ್ಣಕುಮಾರ್ ಬಂಗೇರ, ಹರಿಶ್ಚಂದ್ರ ಕಾಂಚನ್, ರಮೇಶ್ ಮೆಂಡನ್, ಸುಭಾಷ್ ಮೆಂಡನ್, ರವಿರಾಜ್ ಸುವರ್ಣ, ಕೃಷ್ಣ ಜಿ. ಕೋಟ್ಯಾನ್, ಕರುಣಾಕರ ಸಾಲ್ಯಾನ್, ಜಯಕರ್ ವಿ ಸುವರ್ಣ, ಶಿವಪ್ಪ ಟಿ ಕಾಂಚನ್, ಪ್ರದೀಪ್, ವಿನಯ್ ಕರ್ಕೇರ, ಗಾರ್ಗಿ ಬಿ. ಸುವರ್ಣ ಉಪಸ್ಥಿತರಿದ್ದರು.

ರಜತ ಸಂಭ್ರಮ ಸಮಿತಿ ಪ್ರಧಾನ ಕಾರ್ಯದರ್ಶಿ ಕೃಷ್ಣ ಎಸ್. ಸುವರ್ಣ ಪ್ರಾಸ್ತಾವಿಕ ಮಾತನಾಡಿ ಸ್ವಾಗತಿಸಿದರು. ಚಂದ್ರೇಶ್ ಪಿತ್ರೋಡಿ ನಿರೂಪಿಸಿ ವಂದಿಸಿದರು.

ಶ್ರೀ ಉದನೇಶ್ವರ ದೇವಸ್ಥಾನದ ನವೀಕರಣ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶೋತ್ಸವ ಧಾರ್ಮಿಕ ಸಭೆ

ನಾವೆಲ್ಲಾ ಒಂದೇ ಎಂಬ ಭಾವನೆ ಯಶಸ್ಸನ್ನು ತರುತ್ತದೆ



ಬದಿಯಡ್ಕ: ಒಂದೇ ಮನಸ್ಸಿನಿಂದ ಎಲ್ಲಾ ಭಕ್ತಜನರ ಒಗ್ಗೂಡುವಿಕೆ ಬ್ರಹ್ಮಕಲಶೋತ್ಸವವನ್ನು ಅಚ್ಚುಕಟ್ಟಾಗಿ ನೆರವೇರಿಸಲು ಕಾರಣವಾಗಿದೆ. ಮನುಷ್ಯನ ಜೀವನದ ಲಯವನ್ನು ನಿಯಂತ್ರಿಸುವವ ಶಿವ. ಮಂಗಳವನ್ನು ಉಂಟುಮಾಡುವವನೂ ಶಿವನೇ ಆಗಿದ್ದಾನೆ. ನಮ್ಮೊಳಗಿನ ನಿಲುವನ್ನು ಬದಿಗಿಟ್ಟು ನಾವೆಲ್ಲಾ ಒಂದೇ ಎಂಬ ಭಾವನೆಯಿಂದ ಇಲ್ಲಿನ ಕಾರ್ಯಕ್ರಮ ಯಶಸ್ಸನ್ನು ಕಂಡಿದೆ ಎಂದು ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರು ನುಡಿದರು.

ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದ ನವೀಕರಣ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶೋತ್ಸವ ಅಂಗವಾಗಿ ಭಾನುವಾರ ಜರಗಿದ ಧಾರ್ಮಿಕ ಸಭೆಯಲ್ಲಿ ಪಾಲ್ಗೊಂಡು ಅವರು ಆಶೀರ್ವಚನ ನೀಡಿದರು.

ಪ್ರಬುದ್ಧರಾಗೋಣ: ಒಡಿಯೂರು ಶ್ರೀ

ಒಡಿಯೂರು ಕ್ಷೇತ್ರದ ಶ್ರೀ ಗುರುದೇವಾನಂದ ಸ್ವಾಮೀಜಿ ಆಶೀರ್ವಚನ ನೀಡಿ, ಪೆರಡಾಲ ದೇವಾಲಯದಲ್ಲಿ ಸ್ವಚ್ಛತೆಗೆ ಆದ್ಯತೆಯನ್ನು ನೀಡಿದ ಕಾರ್ಯಕರ್ತರ ಶ್ರಮ ನಿಜಕ್ಕೂ ಶ್ಲಾಘನೀಯ. ಎಲ್ಲವೂ ಇದ್ದರೂ ಜನರಿಗೆ ನೆಮ್ಮದಿ ಇಲ್ಲದಂತಾಗಿದೆ. ಧ್ಯಾನ ಮತ್ತು ದಾನದ ಮೂಲಕ ನಾವು ಪ್ರಬುದ್ಧರಾಗಬೇಕು. ರಾಗ ದ್ವೇಷಗಳನ್ನು ಮೀರಿ ನಿಜಾರ್ಥದಲ್ಲಿ ನಾಡಿನ ಜನರ ಪ್ರೀತಿಯನ್ನು ಗಳಿಸಬೇಕು. ಸನಾತನ ಹಿಂದು ಧರ್ಮದ ದೀಪವನ್ನು ಬೆಳಗಿಸುವ ಜವಾಬ್ದಾರಿ ನಮಗೆಲ್ಲ ಇದೆ ಎಂದರು.


ದೃಢ ವಿಶ್ವಾಸದ ಪ್ರಾರ್ಥನೆಗೆ ದೇವರ ಅನುಗ್ರಹವಿದೆ: ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಆನುವಂಶಿಕ ಮೊಕ್ತೇಸರ ಬ್ರಹ್ಮಶ್ರೀ ಲಕ್ಷ್ಮೀನಾರಾಯಣ ಅಸ್ರಣ್ಣ ದಿವ್ಯ ಉಪಸ್ಥಿತರಿದ್ದು ಮಾತನಾಡಿ, ಸಂಸ್ಕಾರಯುತವಾದ ಹಿಂದು ಧರ್ಮದಲ್ಲಿ ಹುಟ್ಟಿದ ನಮ್ಮನ್ನು ಕಣ್ಣಿಗೆ ಕಾಣದ ಅದೃಷ್ಟ ಶಕ್ತಿ ರಕ್ಷಿಸುತ್ತದೆ. ದೃಢ ವಿಶ್ವಾಸದ ಪ್ರಾರ್ಥನೆಗೆ ದೇವರ ಅನುಗ್ರಹವಿರುತ್ತದೆ. ನಾವು ದೇವರನ್ನು ಭಕ್ತಿಯಿಂದ ಧ್ಯಾನಿಸಿದರೆ ದೇವರು ನಮ್ಮನ್ನು ರಕ್ಷಿಸುತ್ತಾರೆ ಎಂದರು.

ಪೆರಿಯ ಗೋಕುಲಂ ಗೋಶಾಲೆಯ ಬ್ರಹ್ಮಶ್ರೀ ವಿಷ್ಣು ಹೆಬ್ಬಾರ್, ಆರ್.ಕೆ.ನಾಯರ್ ಗುಜರಾತ್, ಚಿತ್ರನಟ ಶಿವಧ್ವಜ್, ಕಾರ್ತಿಕ್ ಶೆಟ್ಟಿ ಕಸ್ಯಾನ, ಜ್ಯೋತಿಷಿ ವೆಂಕಟೇಶ್ವರ ಭಟ್ ಕುಂಜಾರು, ಕರ್ಣಾಟಕ ಬ್ಯಾಂಕ್‌ನ ಆಡಳಿತ ನಿರ್ದೇಶಕ ರಾಘವೇಂದ್ರ ಎಸ್.ಭಟ್, ಕರ್ನಾಟಕ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಡಾ.ಟಿ.ಶ್ಯಾಮ ಭಟ್ ಮಾತನಾಡಿದರು.

ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಬಿ.ವಸಂತ ಪೈ ಬದಿಯಡ್ಕ, ಮಾಜಿ ಆಡಳಿತ ಮೊಕ್ತೇಸರರಾದ ಟಿ.ಕೆ.ನಾರಾಯಣ ಭಟ್, ಪಿ.ಜಿ.ಚಂದ್ರಹಾಸ ರೈ ಪೆರಡಾಲಗುತ್ತು, ಗೋವಿಂದ ಪ್ರಕಾಶ ಚಾಳೆತ್ತಡ್ಕ, ಬಾಲಕೃಷ್ಣ ಭಟ್ ಪಿ.ಎಸ್., ಕಾರ್ತಿಕ್ ಶೆಟ್ಟಿ ಮಜಿಬೈಲು, ಕಾರ್ಯದರ್ಶಿ ಭಾಸ್ಕರ ಪಂಜಿತ್ತಡ್ಕ, ಸದಾಶಿವ ಬಂಗೇರ ಮುರಿಯಂಕೂಡ್ಲು, ವಿವೇಕ್ ಪ್ರಸಾದ್ ಪಟ್ಟಾಜೆ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಾರ್ಯಾಧ್ಯಕ್ಷ ಜಗನ್ನಾಥ ರೈ ಪೆರಡಾಲಗುತ್ತು ಸ್ವಾಗತಿಸಿ, ಪ್ರಧಾನ ಕಾರ್ಯದರ್ಶಿ ನಿರಂಜನ ರೈ ಪೆರಡಾಲ ವಂದಿಸಿದರು. ಕೃಷ್ಣ ಡಿ. ಬೆಳಿಂಜ ನಿರೂಪಿಸಿದರು.

ಕಾರ್ಕಳ: ಮನೆಯಿಂದ ಲಕ್ಷಾಂತರ ರೂಪಾಯಿ ಮೌಲ್ಯದ ಚಿನ್ನಾಭರಣ ಕಳವು; ಇಬ್ಬರ ಬಂಧನ

ಕಾರ್ಕಳ : ಕಾರ್ಕಳ ತಾಲೂಕಿನ ಪತ್ತೊಂಜಿಕಟ್ಟೆ ಎಂಬಲ್ಲಿ ಮನೆಗೆ ನುಗ್ಗಿ ಚಿನ್ನಾಭರಣ ಕಳವು ಮಾಡಿದ ಪ್ರಕರಣಕ್ಕೆ ಸಂಬಂಧಿಸಿ ಇಬ್ಬರು ಆರೋಪಿಗಳನ್ನು ಬಂಧಿಸುವಲ್ಲಿ ಕಾರ್ಕಳ ನಗರ ಪೊಲೀಸರು ಯಶಸ್ವಿಯಾಗಿದ್ದಾರೆ.




ಏ.23ರ ಬೆಳಿಗ್ಗೆಯಿಂದ ಏ.24ರ ಸಂಜೆಯ ಮಧ್ಯ ಅವಧಿಯಲ್ಲಿ ಯಾರೋ ಅಪರಿಚಿತ ಕಳ್ಳರು ಪತ್ತೊಂಜಿಕಟ್ಟೆ ನಿವಾಸಿ ಶಂಕರ ಕುಲಾಲ್ ಎಂಬವರ ಮನೆಯ ಬಾಗಿಲನ್ನು ಒಡೆದು ಒಳನುಗ್ಗಿ, ಕಪಾಟಿನೊಳಗೆ ಇಟ್ಟಿದ್ದ ಸುಮಾರು 24 ಗ್ರಾಂ ತೂಕದ ಚಿನ್ನದ ನೆಕ್ಲೆಸ್, 3 ಗ್ರಾಂ ತೂಕದ ಮೂರು ಉಂಗುರಗಳು, 3 ಗ್ರಾಂ ತೂಕದ ಬೆಂಡೋಲೆ ಹಾಗೂ 3 ಗ್ರಾಂ ತೂಕದ ಜುಮ್ಕಿಗಳನ್ನು ಕಳವು ಮಾಡಿಕೊಂಡು ಪರಾರಿಯಾಗಿದ್ದರು.

ಕಳವಾದ ಚಿನ್ನಾಭರಣಗಳ ಒಟ್ಟು ಅಂದಾಜು ಮೌಲ್ಯ ರೂ. 2.64 ಲಕ್ಷ ಎಂದು ದೂರಿನಲ್ಲಿ ತಿಳಿಸಲಾಗಿದೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ತನಿಖೆಗಿಳಿದ ಕಾರ್ಕಳ ನಗರ ಪೊಲೀಸರು ಇಬ್ಬರನ್ನು ಬಂಧಿಸಿದ್ದಾರೆ. ಬೈರಂಪಳ್ಳಿ ಗ್ರಾಮದ ಆನಂದ ಕುಲಾಲ್ (40) ಹಾಗೂ ಕಳವು ಮಾಡಿದ ಚಿನ್ನಾಭರಣವನ್ನು ಖರೀದಿಸಿದ ಜಯರಾಮ ಆಚಾರ್ಯ (54) ಬಂಧಿಸಲಾಗಿದೆ. ಬಂಧಿತರಿಂದ ಒಟ್ಟು ಸುಮಾರು ರೂ. 5.60 ಲಕ್ಷ ಮೌಲ್ಯದ 39 ಗ್ರಾಂ ತೂಕದ ಚಿನ್ನಾಭರಣವನ್ನು ವಶಪಡಿಸಿಕೊಳ್ಳಲಾಗಿದೆ. ಬಂಧಿತರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಇಂದು ಸೋಮವಾರಪೇಟೆಯಲ್ಲಿ ಬಿಜೆಪಿ ಪ್ರತಿಭಟನೆ

ಮಡಿಕೇರಿ: ರಾಜ್ಯ ಕಾಂಗ್ರೆಸ್ ಸರಕಾರ ಸ್ಥಳೀಯ ಸಂಸ್ಥೆಗಳಾದ ಜಿ.ಪಂ, ತಾ.ಪಂ ಮತ್ತು ಗ್ರಾ.ಪಂ ಚುನಾವಣೆಯನ್ನು ನಡೆಸದೆ ನಿರ್ಲಕ್ಷ್ಯ ವಹಿಸಿರುವುದನ್ನು ಖಂಡಿಸಿ ಸೋಮವಾರಪೇಟೆ ಮಂಡಲ ಬಿಜೆಪಿ ವತಿಯಿಂದ ಏ.27 ರಂದು ಬೆಳಿಗ್ಗೆ 11 ಗಂಟೆಗೆ ಸೋಮವಾರಪೇಟೆ ತಾ.ಪಂ ಕಚೇರಿ ಎದುರು ಪ್ರತಿಭಟನೆ ನಡೆಯಲಿದೆ ಎಂದು ಸೋಮವಾರಪೇಟೆ ಮಂಡಲ ವಕ್ತಾರ ಬಲ್ಲಾರಂಡ ಕಂಠಿ ಕಾರ್ಯಪ್ಪ ತಿಳಿಸಿದ್ದಾರೆ. ಪತ್ರಿಕಾ ಪ್ರಕಟಣೆ ನೀಡಿರುವ ಅವರು ಸ್ಥಳೀಯ ಸಂಸ್ಥೆ ಚುನಾವಣೆಯನ್ನು ನಡೆಸಿದರೆ ಸರಕಾರದ ದುರಾಡಳಿತದ ವಿರುದ್ಧ ಜನ ಮತ ಹಾಕುವುದರಿಂದ ಕಾಂಗ್ರೆಸ್ ಸೋಲುವ ಭೀತಿಯನ್ನು ಎದುರಿಸುತ್ತಿದೆ. ಇದೇ ಕಾರಣದಿಂದ ಚುನಾವಣೆ ನಡೆಸದೆ ಕಾಲಹರಣ ಮಾಡುತ್ತಿದೆ ಎಂದು ಆರೋಪಿಸಿದ್ದಾರೆ. ಕುಟ್ಟ ಹೋಂಸ್ಟೇಯಲ್ಲಿ ನಡೆದಿರುವ ಘಟನೆ ಅತ್ಯಂತ ವಿಷಾದಕರ. ಪ್ರವಾಸಿತಾಣಗಳು ಹಾಗೂ ಪ್ರವಾಸಿಗರಿಗೆ ಸೂಕ್ತ ರಕ್ಷಣೆ ಒದಗಿಸಬೇಕೆಂದು ಕೂಡ ಪ್ರತಿಭಟನೆಯ ಸಂದರ್ಭ ಒತ್ತಾಯಿಸಲಾಗುವುದು ಎಂದು ಕಂಠಿ ಕಾರ್ಯಪ್ಪ ಹೇಳಿದ್ದಾರೆ.

ಕುಲ್ಕುಂದ: ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ವಿನೋದ್ ತಾವಟೆ ಮನ್ ಕೀ ಬಾತ್ ವೀಕ್ಷಣೆ

ಕಡಬ ಪೇಟೆಯಲ್ಲಿ ಶಾಸಕಿ ನೇತೃತ್ವದಲ್ಲಿ ಅದ್ದೂರಿಯ ಸ್ವಾಗತ

ಸುಬ್ರಹ್ಮಣ್ಯ/ಕಡಬ: ಬಿಜೆಪಿಯ ಸುಬ್ರಹ್ಮಣ್ಯ ಶಕ್ತಿಕೇಂದ್ರದಕುಲ್ಕುಂದಬೂತ್‌ನರಕಾರ್ಯಕರ್ತ ಜನಾರ್ದನ ಪಳ್ಳಿಗದ್ದೆ ಅವರ ಮನೆಯಲ್ಲಿ ಈ ತಿಂಗಳ ಮನ್ ಕಿ ಬಾತ್ ಕಾರ್ಯಕ್ರಮ ವೀಕ್ಷಣೆ ನಡೆಯಿತು, ಮನ್ ಕಿ ಬಾತ್ ವೀಕ್ಷಣೆಯಲ್ಲಿ ಭಾಜಪ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯಸಭಾ ಸದಸ್ಯ ವಿನೋದ್ ತಾವಟೆ ಹಾಗೂ ಸುಳ್ಯ ವಿಧಾನಸಭಾ ಕ್ಷೇತ್ರದ ಶಾಸಕಿ ಭಾಗೀರಥಿ ಮುರುಳ್ಯ ಭಾಗವಹಿಸಿದ್ದರು.


ಭಾಜಪ ಸುಳ್ಯ ಮಂಡಲ ಅಧ್ಯಕ್ಷರ ವೆಂಕಟ್ ವಳಲಂಬೆ ಭಾಜಪ ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಪ್ರಸನ್ನ ದರ್ಬೆ ವಿಶ್ವ ಹಿಂದು ಪರಿಷತ್ ಬಜರಂಗದಳ ಸುಬ್ರಹ್ಮಣ್ಯ ಘಟಕದ ಅಧ್ಯಕ್ಷ ಅಶೋಕ್ ಕುಮಾರ್ ಮೂಲೆಮಜಲು, ಭಾಜಪ ಹಿಂದುಳಿದ ವರ್ಗಗಳ ಮೋರ್ಚ ಸುಳ್ಯ ಮಂಡಲ ಅಧ್ಯಕ್ಷ ಗಿರೀಶ್ ಆಚಾರ್ಯ ಪೈಲಾಜೆ ಸುಬ್ರಹ್ಮಣ್ಯ ಶಕ್ತಿ ಕೇಂದ್ರದ ಪ್ರಮುಖ್ ರಾಜೇಶ್ ಎನ್ ಎಸ್ , ಪ್ರಮುಖರಾದ ದಿನೇಶ್ ಸಂಪ್ಯಾಡಿ ಚಿದಾನಂದ ಕಂದಡ್ಕ ಶಿವರಾಮ ಪಳ್ಳಿಗದ್ದೆ, ಭವ್ಯಕುಮಾರಿ, ಜಯಂತಿ ಪರಮಲೆ, ಶ್ರೀಕುಮಾರ್ ಬಿಲದ್ವಾರ, ವಿನೋದ್ ಕುಲ್ಕುಂದ, ರೋಹಿತ್ ಇಂಜಿರಾಡಿ, ಗಿರಿಧರ್ ಸ್ಕಂದ, ವನಜ ವಿ. ಭಟ್ , ಶೋಭಾ ಗಿರಿಧರ್ ಮತ್ತಿತರರು ಉಪಸ್ಥಿತರಿದ್ದರು.




ಕಡಬದಲ್ಲಿ ಅದ್ದೂರಿ ಸ್ವಾಗತ

ಕಡಬ: ಕುಕ್ಕೆ ಸುಬ್ರಹ್ಮಣ್ಯಕ್ಕೆ ಆಗಮಿಸಿದ ಬಿಜೆಪಿ ರಾಷ್ಟ್ರೀಯ ಕಾರ್ಯದರ್ಶಿ ಹಾಗೂ ರಾಜ್ಯಸಭಾ ಸದಸ್ಯ ವಿನೋದ್ ತಾವಟೆ ದಂಪತಿಯನ್ನು ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಅವರ ನೇತೃತ್ವದಲ್ಲಿ ಸುಳ್ಯ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಕಡಬ ಪೇಟೆಯಲ್ಲಿ ಅದ್ದೂರಿ ಸ್ವಾಗತದ ಮೂಲಕ ಬರಮಾಡಿಕೊಳ್ಳಲಾಯಿತು.

ವಿನೋದ್ ತಾವಟೆ ದಂಪತಿಗೆ ಶಾಲು ಹೊದೆಸಿ, ಹಾರ ಹಾಕಿ ಗೌರವಿಸಿದ ಕಾರ್ಯಕರ್ತರು ಜಯಘೋಷ ಹಾಕಿ ಪಟಾಕಿ ಸಿಡಿಸಿ ಸಂಭ್ರಮಿಸಿದರು. ಬಳಿಕ ವಾಹನ ಜಾಥಾದ ಮೂಲಕ ಅವರನ್ನು ಸುಬ್ರಹ್ಮಣ್ಯಕ್ಕೆ ಕರೆದೊಯ್ಯಲಾಯಿತು. ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಕೃಷ್ಣ ಶೆಟ್ಟಿ ಕಡಬ, ಸುಳ್ಯ ಮಂಡಲ ಪ್ರಧಾನ ಕಾರ್ಯದರ್ಶಿ ಪ್ರದೀಪ್ ರೈ ಮನವಳಿಕೆ, ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಪ್ರಸನ್ನ ದರ್ಬೆ, ಯುವ ಮೋರ್ಚಾ ಜಿಲ್ಲಾ ಕಾರ್ಯದರ್ಶಿ ಶ್ರೀಕೃಷ್ಣ ಎಂ.ಆರ್., ಕಡಬ ಶಕ್ತಿಕೇಂದ್ರದ ಅಧ್ಯಕ್ಷ ಪ್ರಕಾಶ್ ಎನ್.ಕೆ., ಕಾರ್ಯದರ್ಶಿ ಅಶೋಕ್‌ಕುಮಾರ್ ಪಿ., ಕಡಬ ಪಟ್ಟಣ ಪಂಚಾಯತ್ ಸದಸ್ಯರಾದ ದಯಾನಂದ ಪಿಜಕಳ, ಕುಸುಮ ಅಂಗಡಿಮನೆ, ಪ್ರಮುಖರಾದ ದಯಾನಂದ ಗೌಡ ಆರಿಗ, ಸುಪ್ರೀತ್ ಅಮ್ಮೆ ಬಿಳಿನೆಲೆ, ಬಾಲಚಂದ್ರ ಬಜೆತ್ತಡ್ಕ, ಕಾರ್ತಿಕ್ ಪಿಜಕಳ, ಉದಯ ಪೂವಳ, ಪುರುಷೋತ್ತಮ ಕಲ್ಲಂತಡ್ಕ, ವಿಶ್ವನಾಥ ರೈ ಪೆರಿಯಡ್ಕ, ಸುರೇಶ್ ದೇಂತಾರ್, ಮೋಹನ ಕೆರೆಕ್ಕೋಡಿ, ರಮೇಶ್ ಅಂಗಡಿಮನೆ, ಶಿವಪ್ರಸಾದ್ ರೈ ಮೈಲೇರಿ, ಸೋಮಪ್ಪ ನ್ಯಾಕ್, ಸೋಮಯ್ಯ ದೇರೋಡಿ, ದೀಪಕ್ ಗೌಡ ಮುಂತಾದವರು ಉಪಸ್ಥಿತರಿದ್ದರು.



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಪಂಜಾಬ್	7	6	0	1	13	+1.333
ಆರ್‌ಸಿಬಿ	7	5	2	0	10	+1.101
ಹೈದರಾಬಾದ್	8	5	3	0	10	+0.815
ರಾಜಸ್ಥಾನ	8	5	3	0	10	+0.602
ಗುಜರಾತ್	8	4	4	0	8	-0.475
ಚೆನ್ನೈ	8	3	5	0	6	-0.121
ದಿಲ್ಲಿ	7	3	4	0	6	-0.184
ಮುಂಬೈ	7	2	5	0	4	-0.736
ಲಖನೌ	7	2	5	0	4	-1.277
ಕೆಕೆಆರ್	7	1	5	1	3	-0.879

ದಿಲ್ಲಿ ತವರಿನಲ್ಲಿ ಪಾಟಿದಾರ್ ಪಡೆಗೆ ಗೆಲುವಿನ ವಿಶ್ವಾಸ | ಜೇಕಬ್ ಬೆಥೆಲ್, ವೆಂಕಟೇಶ್‌ಗೆ ಆಡುವ ಸಾಧ್ಯತೆ

ಕ್ಯಾಪಿಟಲ್ ಸೇಡಿಗಾಗಿ ಆರ್‌ಸಿಬಿ ಸಮರ!

ಹೊಸದಿಲ್ಲಿ: ಏ.18ರಂದು ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆರ್‌ಸಿಬಿ ತಂಡವನ್ನು 6 ವಿಕೆಟ್‌ಗಳಿಂದ ಸೋಲಿಸಿದ್ದ ದಿಲ್ಲಿ ಕ್ಯಾಪಿಟಲ್ಸ್ ತಂಡ, ಪಂಜಾಬ್ ವಿರುದ್ಧ 264 ರನ್ ಕಲೆಹಾಕಿದರೂ ಅದೇ 6 ವಿಕೆಟ್ ಅಂತರದಲ್ಲಿ ಸೋಲುಂಡಿದೆ. ಇದೀಗ ಪಂಜಾಬ್ ಕಿಂಗ್ಸ್ ಎದುರಿನ ಸೋಲಿನ ಆಘಾತದಲ್ಲಿ ಇರುವ ದಿಲ್ಲಿ ತಂಡದ ಕ್ಯಾಪಿಟಲ್‌ಗೆ ಬಂದಿಳಿದ ಆರ್‌ಸಿಬಿ ಸೇಡು ತೀರಿಸಲು ಹಾತೊರೆಯುತ್ತಿದೆ.


ಪಂಜಾಬ್ ವಿರುದ್ಧದ 6 ವಿಕೆಟ್ ಸೋಲಿನಿಂದ ದಿಲ್ಲಿ ಕ್ಯಾಪಿಟಲ್ಸ್ ಬೌಲಿಂಗ್ ಸಾಮರ್ಥ್ಯ ಪ್ರಶ್ನೆಗೆ ಗುರಿಯಾಗಿದೆ. ಕ್ಯಾಪಿಟಲ್ಸ್ ಬೌಲರ್‌ಗಳ ಮೇಲೆ ಕಿಂಗ್ಸ್ ಬ್ಯಾಟರ್‌ಗಳು ಸ್ಪಷ್ಟವಾದ ಮೇಲುಗೈ ಸಾಧಿಸಿದ್ದರು. ಬೌಲಿಂಗ್‌ನಲ್ಲಿ ಸಮಸ್ಯೆ ಎದುರಿಸಿದರೆ ಇನ್ನೊಂದೆಡೆ ಪ್ಲೇಆಫ್ ಹಂತ ಪ್ರವೇಶಿಸಬೇಕಾದ ಒತ್ತಡವೂ ಕ್ಯಾಪಿಟಲ್ಸ್ ಮೇಲಿದೆ. ಕಳೆದ 7 ಪಂದ್ಯಗಳನ್ನು ಕ್ಯಾಪಿಟಲ್ಸ್ 3 ಪಂದ್ಯಗಳನ್ನಷ್ಟೇ ಗೆದ್ದುಕೊಂಡಿದೆ. ಹೀಗಾಗಿ ಇನ್ನೊಮ್ಮೆ ಆರ್‌ಸಿಬಿ ವಿರುದ್ಧ ಬಹಳ ಮಹತ್ವದ ಪಂದ್ಯವನ್ನಾಡಲಿದೆ.

ಕ್ಯಾಪಿಟಲ್ಸ್ ತವರಿನಲ್ಲಿ ಗೆಲ್ಲುವುದು ಕೇವಲ 2 ಅಂಕ ಸಂಪಾದಿಸುವುದಲ್ಲದೆ, ತಾನು ಯಾಕಾಗಿ ಹಾಲಿ ಚಾಂಪಿಯನ್ ಎಂಬುದನ್ನು ಆರ್‌ಸಿಬಿ ಪ್ರದರ್ಶಿಸಿ ಪ್ರಾಬಲ್ಯ ಮೆರೆಯುವ ಅಗತ್ಯವಿದೆ. ಅದೇ ರೀತಿ ಕ್ಯಾಪಿಟಲ್ಸ್ ಬೌಲರ್‌ಗಳು ತಮ್ಮ ಪ್ರದರ್ಶನ ಸುಧಾರಿಸುವ ಮೂಲಕ ಬ್ಯಾಟರ್‌ಗಳ ಪ್ರಯತ್ನ ವ್ಯರ್ಥ ಆಗದಿರುವಂತೆ ನೋಡಿಕೊಳ್ಳಬೇಕಿದೆ. ಉಳಿದಂತೆ ಪಾಟಿದಾರ್ ನಾಯಕತ್ವ, ವಿರಾಟ್ ಕೊಹ್ಲಿ ಬ್ಯಾಟಿಂಗ್ ಬಲ ಆರ್‌ಸಿಬಿಗಿದ್ದು, ಜೇಕಬ್ ಬೆಥೆಲ್ ಅವರಿಗೆ ಮತ್ತೊಂದು ಅವಕಾಶ ನೀಡುವ ಸಾಧ್ಯತೆಯಿದೆ.



ಆರ್‌ಸಿಬಿ ಸಮತೋಲನದ ಆಟ

ಗುಜರಾತ್ ಟೈಟಾನ್ಸ್ ವಿರುದ್ಧದ ಪಂದ್ಯದಲ್ಲಿ ಆರ್‌ಸಿಬಿ ಬೌಲರ್‌ಗಳು ಉತ್ತಮ ಪ್ರದರ್ಶನ ನೀಡುವುದರೊಂದಿಗೆ ಪಂದ್ಯ ಗೆದ್ದುಕೊಟ್ಟಿದ್ದಾರೆ. ಒತ್ತಡದ ಪರಿಸ್ಥಿತಿಯಲ್ಲಿ ಆರ್‌ಸಿಬಿ ಬೌಲರ್‌ಗಳು ಉತ್ತಮ ಪ್ರದರ್ಶನ ನೀಡುವಲ್ಲಿ ಈ ಬಾರಿ ಯಶಸ್ವಿಯಾಗಿದ್ದು ವಿಶೇಷ. ಟೈಟಾನ್ಸ್ 200+ ಸ್ಕೋರ್ ಮಾಡಿದ್ದರೂ, ಸುಯಶ್, ಭುವನೇಶ್ವರ್ ಕುಮಾರ್ ಮತ್ತು



ಹ್ಯಾಜೆಲ್‌ವುಡ್ ಜತೆಗೂಡಿ ಡೆತ್ ಓವರ್‌ಗಳಲ್ಲಿ ಸಂಘಟಿತ ಪ್ರದರ್ಶನ ನೀಡುವ ಮೂಲಕ ಟೈಟಾನ್ಸ್ ಇನ್ನೂ ದೊಡ್ಡ ಸ್ಕೋರ್ ಮಾಡದಂತೆ ನೋಡಿಕೊಂಡರು. ಈ ಆವೃತ್ತಿಯಲ್ಲಿ ಆರ್‌ಸಿಬಿ, ಪಂಜಾಬ್ ಎರಡು ತಂಡಗಳು ಮಾತ್ರ ಬಲಾಢ್ಯ ಬ್ಯಾಟರ್‌ಗಳಿಂದ ತುಂಬಿವೆ ಎಂಬ ಮಾತಿನ ಮಧ್ಯೆ ಆರ್‌ಸಿಬಿ ಬೌಲಿಂಗ್‌ನಲ್ಲೂ ಉತ್ತಮ ಪ್ರದರ್ಶನ ನೀಡಿ ಗಮನಸೆಳೆದಿದೆ. ಯಾವ ವಿಭಾಗದಲ್ಲಿ ಕ್ಯಾಪಿಟಲ್ಸ್ ತಲೆನೋವಿಗೆ ಕಾರಣವೋ ಅದೇ ವಿಭಾಗದಲ್ಲಿ ಆರ್‌ಸಿಬಿ ಮೇಲುಗೈ ಹೊಂದಿದೆ.

ದಿಲ್ಲಿ-ಬೆಂಗಳೂರು, ದಿಲ್ಲಿ, ರಾತ್ರಿ 7.30ರಿಂದ
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್.

ಅಪಾಯಕಾರಿ ರಾಹುಲ್!

ಎರಡೂ ಪಂದ್ಯಗಳಲ್ಲಿ ಕನ್ನಡಿಗ ಕೆ.ಎಲ್. ರಾಹುಲ್ ಮಿಂಚಿದ್ದರು ಎಂಬುದು ಇನ್ನೊಂದು ಹೈಲೆಟ್. ಈ ಬಾರಿಯ ಐಪಿಎಲ್‌ನಲ್ಲಿ ಆರ್‌ಸಿಬಿ ಮತ್ತು ಕಿಂಗ್ಸ್ ಎರಡೂ ತಂಡಗಳು ಬಲಾಢ್ಯ ತಂಡಗಳೆಂದು ಜನಪ್ರಿಯತೆ ಪಡೆದುಕೊಂಡಿವೆ. ಇಂತಹ ಬಲಾಢ್ಯ ತಂಡಗಳೆದುರು ರಾಹುಲ್ ಯಾವುದೇ ಒತ್ತಡವಿಲ್ಲದೆ ಬ್ಯಾಟ್ ಬೀಸಿ ಗಮನಸೆಳೆದಿದ್ದಾರೆ. ಅದರಲ್ಲೂ ಪಂಜಾಬ್ ವಿರುದ್ಧ ಭರ್ಜರಿ 152 ರನ್ ಹೊಡೆದು ಔಟಾಗದೆ ಉಳಿದ ರಾಹುಲ್, ತಮ್ಮ ಪ್ರಚಂಡ ಲಯ ಪ್ರದರ್ಶಿಸಿದ್ದಾರೆ. ಇದು ಕ್ಯಾಪಿಟಲ್ಸ್ ತವರಿನಲ್ಲಿ ಆರ್‌ಸಿಬಿಗೊಂದು ಸವಾಲಿನ ವಿಚಾರವಾಗಿರಲಿದೆ.

ಮುಖಾಮುಖಿ: 33, ಆರ್‌ಸಿಬಿ: 20, ದಿಲ್ಲಿ: 12, ಫಲಿತಾಂಶವಿಲ್ಲ: 1

ನೆಟ್ ಅಭ್ಯಾಸ ನಡೆಸಿದ ವೆಂಕಟೇಶ್ ಅಯ್ಯರ್

ಕಿರುಸುದ್ದಿ

ರಿಂಕು ಪರಾಕ್ರಮದಿಂದಾಗಿ ಕೆಕೆಆರ್ ಸಾಧಾರಣ ಮೊತ್ತ



ಲಖನೌ: ವೇಗಿ ಮೊಹ್ಸಿನ್ ಖಾನ್ ಕರಾರುವಾಕ್ ಬೌಲಿಂಗ್‌ನಿಂದಾಗಿ ಬ್ಯಾಟಿಂಗ್ ಕ್ರಮಾಂಕದಲ್ಲಿ ಭಾರೀ ಕುಸಿತ ಕಂಡಿದ್ದ ಕೆಕೆಆರ್ ತಂಡವನ್ನು ತಮ್ಮ ಸ್ಫೋಟಕ ಬ್ಯಾಟಿಂಗ್‌ನಿಂದ ರಿಂಕು ಸಿಂಗ್ (ಅಜೇಯ 83 ರನ್) ಮೇಲೆತ್ತಿದರು. ಕೇವಲ 23 ರನ್ ಬಿಟ್ಟುಕೊಟ್ಟು 5 ವಿಕೆಟ್ ಕಬಳಿಸುವ ಮೂಲಕ ಮೊಹ್ಸಿನ್ ಕೆಕೆಆರ್ ಬ್ಯಾಟಿಂಗ್ ಬೆನ್ನೆಲುಬು ಮುರಿದಿದ್ದರು. 34 ರನ್ ಹೊಡೆದ ಕ್ಯಾಮರೂನ್ ಗ್ರೀನ್ ವಿಕೆಟನ್ನೂ ಮೊಹ್ಸಿನ್ ಅವರೇ ಕಬಳಿಸಿದ್ದರು. ರಿಂಕು ಸ್ಫೋಟಕ ಇನ್ನಿಂಗ್ಸ್‌ನಲ್ಲಿ 7 ಬೌಂಡರಿ ಮತ್ತು 5 ಸಿಕ್ಸರ್ ಒಳಗೊಂಡಿದ್ದವು. ಒಂದು ಹಂತದಲ್ಲಿ 93 ರನ್‌ಗಳಿಗೆ 7 ವಿಕೆಟ್ ಕಳೆದುಕೊಂಡಿದ್ದ ಕೆಕೆಆರ್, 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 155 ರನ್ ಪೇರಿಸಿದ್ದು ನಂಬಲಸಾಧ್ಯ ಸ್ಕೋರ್.

ಧೋನಿ ಸ್ನಾಯು ಸೆಳೆತ ಉಲ್ಬಣಿಸಿದೆ: ಫ್ಲೆಮಿಂಗ್

ಚೆನ್ನೈ: ಮೀನಖಂಡದ ಸ್ನಾಯು ಸೆಳೆತವು ಇನ್ನಷ್ಟು ಉಲ್ಬಣಿಸಿದ ಕಾರಣ ಮಹೇಂದ್ರ ಸಿಂಗ್ ಧೋನಿ ಆಡುವ ಬಳಗಕ್ಕೆ ಮರಳುವುದು ಇನ್ನಷ್ಟು ತಡವಾಗಲಿದೆ ಎಂದು ಸಿಎಸ್‌ಕೆ ಮುಖ್ಯ ತರಬೇತುದಾರ ಸ್ಟೀಫನ್ ಫ್ಲೆಮಿಂಗ್ ಬಹಿರಂಗಗೊಳಿಸಿದ್ದಾರೆ. ತಂಡದ ಜತೆ ನೆಟ್ ಅಭ್ಯಾಸದಲ್ಲಿ ಪಾಲ್ಗೊಂಡಿದ್ದರಿಂದ ಧೋನಿ ಗಾಯ ಇನ್ನಷ್ಟು ಉಲ್ಬಣಿಸಿದೆ ಎಂಬ ಮಾಹಿತಿಯನ್ನು ಫ್ಲೆಮಿಂಗ್ ನೀಡಿದ್ದಾರೆ. ಇದರಿಂದ ಸದ್ಯ ಧೋನಿ ಐಪಿಎಲ್ ಭವಿಷ್ಯ ತೂಗುಯ್ಯಾಲೆಯಲ್ಲಿದೆ.

ಊಬರ್ ಕಪ್ ಬ್ಯಾಡ್ಮಿಂಟನ್: ಉಕ್ರೇನ್ ವಿರುದ್ಧ ಗೆದ್ದ ಭಾರತ

ಹೊಸದಿಲ್ಲಿ: ಡೆನ್ಮಾರ್ಕ್‌ನಲ್ಲಿ ನಡೆದ ಊಬರ್ ಕಪ್ ಬ್ಯಾಡ್ಮಿಂಟನ್ ಪಂದ್ಯಾವಳಿಯ ಗುಂಪು ಹಂತದಲ್ಲಿ ತನ್ವಿ ಶರ್ಮಾ, ಉನ್ನತಿ ಹುಡ್ಡಾ ಮತ್ತು ದೇವಿಕಾ ಸಿಹಾಗ್ ಅವರನ್ನೊಳಗೊಂಡ ಭಾರತ ತಂಡ ಉಕ್ರೇನ್ ವಿರುದ್ಧ 4-1 ಅಂತರದಿಂದ ಗೆಲುವು ಸಾಧಿಸಿದೆ.

ಚೆಪಾಕ್‌ನಲ್ಲಿ ಸೋಲುಂಡ ಚೆನ್ನೈ

ಚೆನ್ನೈ: ನಾಯಕ ಋತುರಾಜ್ ಗಾಯಕ್ವಾಡ್ ಬ್ಯಾಟಿಂಗ್ ಪ್ರದರ್ಶನದ ಹೊರತಾಗಿಯೂ ಚೆನ್ನೈ ಸೂಪರ್ ಕಿಂಗ್ಸ್ ಸೋಲುವುದನ್ನು ತಪ್ಪಿಸಲು ಸಾಧ್ಯವಾಗಲಿಲ್ಲ. ಸಿಎಸ್‌ಕೆ ನೀಡಿದ 159 ರನ್ ಸವಾಲು ಬೆನ್ನತ್ತಿದ ಟೈಟಾನ್ಸ್ ಪರ ಆರಂಭಿಕ ಸುದರ್ಶನ್ ಬಿರುಸಿನ ಆರಂಭ ನೀಡಿದ್ದು, 2 ವಿಕೆಟ್ ಕಳೆದುಕೊಂಡು ಗುಜರಾತ್ ಗೆಲುವಿನ ದಡ ಸೇರಿತು. ಸಂಜು ಸ್ಯಾಮ್ಸನ್ ವಿಕೆಟ್ ಸಹಿತ 25ಕ್ಕೆ 3 ವಿಕೆಟ್ ಕಬಳಿಸಿ ಗೆಲುವಿನ ರೂವಾರಿಯಾದ ಕಗಿಸೋ ರಬಾಡ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. ಬ್ಯಾಟರ್‌ಗಳು ನೀಡಿದ ಕೆಟ್ಟ ಆರಂಭದಿಂದಾಗಿ ಸಿಎಸ್‌ಕೆ ದೊಡ್ಡ ಮೊತ್ತ ಪೇರಿಸಲು ಸಾಧ್ಯವಾಗಿಲ್ಲ. ಆದರೂ ನಾಯಕನಾಟ ಆಡಿದ ಗಾಯಕ್ವಾಡ್ ಸಿಎಸ್‌ಕೆ ಗೌರವದ ಮೊತ್ತ ಕಲೆಹಾಕಲು ನೆರವಾದರು. ವೇಗಿ ರಬಾಡ ಚೆನ್ನೈ ಬ್ಯಾಟಿಂಗ್ ಕ್ರಮಾಂಕದಲ್ಲಿ ನಡುಕ ಹುಟ್ಟಿಸಿದರು. ರಬಾಡ ಮತ್ತು ಸಿರಾಜ್ ದಾಳಿಗೆ ನಲುಗಿದ ಚೆನ್ನೈ ಪವರ್‌ಪ್ಲೇ ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು 28 ರನ್ ಗಳಿಸಿತ್ತು. ಇಂಪ್ಯಾಕ್ಟ್ ಪ್ಲೇಯರ್ ಸರ್ಫರಾಜ್ ಖಾನ್ ವೈಫಲ್ಯವೂ ಚೆನ್ನೈ ತಂಡವನ್ನು ಬಹಳ ಕಾಡಿತು.



ಸಂಕ್ಷಿಪ್ತ ಸ್ಕೋರ್

ಚೆನ್ನೈ 158/7(20): ಗಾಯಕ್ವಾಡ್ 74★ (ರಬಾಡ 25ಕ್ಕೆ 3).
ಗುಜರಾತ್ 162/2 (20): ಸುದರ್ಶನ್ 87, ಬಟ್ಲರ್ 39★ (ನೂರ್ 29ಕ್ಕೆ 1).

ಗಾಯಕ್ವಾಡ್ ಅರ್ಧ ಶತಕ!

ನಿರಂತರ ಟೀಕೆಗಳಿಗೆ ಆಹಾರವಾದ ಚೆನ್ನೈ ನಾಯಕ ಗಾಯಕ್ವಾಡ್ ಅರ್ಧ ಶತಕ ದಾಖಲಿಸಿದ್ದು, ಸಿಎಸ್‌ಕೆ ಪಾಲಿಗೆ ಆಧಾರಸ್ತಂಭವಾದರು. ಎರಡು ಬೌಂಡರಿಗಳ ಮೂಲಕ ತಮ್ಮ ಬ್ಯಾಟಿಂಗ್ ಆರಂಭಿಸಿದ್ದ ಋತುರಾಜ್ ತಮ್ಮ ಇನ್ನೊಂದು ಬದಿ ವಿಕೆಟ್‌ಗಳು ಉದುರುವುದನ್ನು ನೋಡುತ್ತಲೇ ಇದ್ದರು. ಆದರೂ 60 ಎಸೆತಗಳಿಂದ ಅಜೇಯ 74 ರನ್ ಗಳಿಸುವ ಮೂಲಕ ತಂಡದ ಮೊತ್ತ 158 ರನ್ ತಲುಪುವಲ್ಲಿ ನೆರವಾದರು. ಋತುರಾಜ್ ಇನ್ನಿಂಗ್ಸ್‌ನಲ್ಲಿ 6 ಬೌಂಡರಿಗಳು ಮತ್ತು 4 ಸಿಕ್ಸರ್‌ಗಳಿದ್ದವು.

5000 ರನ್ ಮೈಲಿಗಲ್ಲು ದಾಟಿದ ಸಂಜು

ಚೆನ್ನೈ: ಸಿಎಸ್‌ಕೆ-ಜಿಟಿ ನಡುವಿನ ಪಂದ್ಯದ ಎರಡನೇ ಓವರ್‌ನಲ್ಲಿ ವೇಗಿ ಕಗಿಸೋ ರಬಾಡ ಎಸೆತವನ್ನು ಸಿಕ್ಸರ್‌ಗಟ್ಟುವ ಮೂಲಕ ಚೆನ್ನೈ ಆರಂಭಿಕ ಬ್ಯಾಟರ್ ಸಂಜು ಸ್ಯಾಮ್ಸನ್ ಐಪಿಎಲ್‌ನಲ್ಲಿ 5000 ರನ್ ಮೈಲಿಗಲ್ಲು ದಾಟಿದರು. ಆದರೆ ನಂತರ 15 ಎಸೆತಗಳಲ್ಲಿ 11 ರನ್ ಗಳಿಸಿದ ಸಂಜು ರಬಾಡಗೆ ವಿಕೆಟ್ ಒಪ್ಪಿಸಿದರು. 31 ವರ್ಷದ ಸ್ಯಾಮ್ಸನ್ ರಾಜಸ್ಥಾನ್, ದಿಲ್ಲಿ ಮತ್ತು ಚೆನ್ನೈ ಫ್ರಾಂಚೈಸಿಗಳ ಪರ 185 ಪಂದ್ಯಗಳನ್ನು ಆಡಿದ್ದಾರೆ. ಐದು ಶತಕಗಳನ್ನೂ ದಾಖಲಿಸಿದ್ದಾರೆ. ಎಸೆತಗಳ ಆಧಾರದಲ್ಲಿ ಅತಿ ವೇಗದ 5,000 ರನ್ ಪೂರೈಸಿದವರ ಪಟ್ಟಿಯಲ್ಲಿ ಸಂಜು ಮೂರನೇ ಸ್ಥಾನ ಪಡೆದಿದ್ದು, ತಮ್ಮದೇ ತಂಡದ ಅನುಭವಿ ಬ್ಯಾಟರ್ ಎಂ.ಎಸ್. ಧೋನಿ (3691) ದಾಖಲೆ ಮುರಿದಿದ್ದಲ್ಲದೆ, ಹಲವರನ್ನು ಹಿಂದಿಕ್ಕಿದ್ದಾರೆ.



ಐಪಿಎಲ್‌ನಲ್ಲಿ ವೇಗದ 5,000 ರನ್ (ಬಾಲ್ಸ್)
- ಎಬಿ ಡಿ ವಿಲಿಯರ್ಸ್ - 3288
- ಡೇವಿಡ್ ವಾರ್ನರ್ - 3554
- ಸಂಜು ಸ್ಯಾಮ್ಸನ್ - 3555
- ಸುರೇಶ್ ರೈನಾ - 3620
- ಕೆಎಲ್ ರಾಹುಲ್ - 3688

ಕಡಿಮೆ ಎಸೆತಗಳಲ್ಲಿ ಈ ಸಾಧನೆಗೈದ 3ನೇ ಬ್ಯಾಟರ್

5,000 ರನ್ ಪೂರೈಸಿದ ಬ್ಯಾಟರ್ಸ್
- ವಿರಾಟ್ ಕೊಹ್ಲಿ - 8,989 ರನ್
- ರೋಹಿತ್ ಶರ್ಮಾ - 7,183 ರನ್
- ಶಿಖರ್ ಧವನ್ - 6,769 ರನ್
- ಡೇವಿಡ್ ವಾರ್ನರ್ - 6,565 ರನ್
- ಕೆ.ಎಲ್. ರಾಹುಲ್ - 5,579 ರನ್
- ಸುರೇಶ್ ರೈನಾ - 5,528 ರನ್
- ಎಂ.ಎಸ್.ಧೋನಿ - 5,439 ರನ್
- ಅಜಿಂಕ್ಯಾ ರಹಾನೆ - 5,184 ರನ್
- ಎಬಿ ಡಿ ವಿಲಿಯರ್ಸ್ - 5,162 ರನ್
- ಸಂಜು ಸ್ಯಾಮ್ಸನ್ - 5,008 ರನ್

ಅತಿ ವೇಗದ 5,000 ರನ್ (ಇನ್ನಿಂಗ್ಸ್)
- ಕೆ.ಎಲ್. ರಾಹುಲ್ - 130
- ಡೇವಿಡ್ ವಾರ್ನರ್ - 135
- ವಿರಾಟ್ ಕೊಹ್ಲಿ - 157
- ಎಬಿ ಡಿ ವಿಲಿಯರ್ಸ್ - 161
- ಶಿಖರ್ ಧವನ್ - 168


ವಿಶ್ವ 10ಕೆ: ಓಮರ್ ಅಬ್ದುಲ್ಲಾ ಭಾಗಿ

ಬೆಂಗಳೂರು: ಟಿಸಿಎಸ್ ವರ್ಲ್ಡ್ 10ಕೆ ಮ್ಯಾರಥಾನ್‌ಗೆ ಸುಮಾರು 32 ಸಾವಿರ ಜನ ಭಾಗಿಯಾಗಿದ್ದು, ಅದರಲ್ಲಿ ಶೇ.26 ರಷ್ಟು ಮಹಿಳೆಯರು ಭಾಗವಹಿಸಿದ್ದರು. ಬೆಂಗಳೂರಿಗರು ಮಾತ್ರವಲ್ಲದೆ ವಿದೇಶದಿಂದಲೂ ಜನರು ಆಗಮಿಸಿದ್ದು, ಓಮರ್ ಅಬ್ದುಲ್ಲಾ ಕೂಡ ಈ ಮ್ಯಾರಥಾನ್‌ನಲ್ಲಿ ಭಾಗಿಯಾಗಿದ್ದರು. ಈ ರೀತಿ ಕ್ರೀಡಾ ಹಾಗೂ ಪ್ರವಾಸೋದ್ಯಮ ಕಾರ್ಯಕ್ರಮಗಳನ್ನು ಮಾಡುವುದರಿಂದ ಬೆಂಗಳೂರಿಗೆ ತುಂಬಾ ಅನುಕೂಲವಾಗಲಿದೆ. ಟಿಸಿಎಸ್ ಅವರಿಗೆ ಅಭಿನಂದನೆಗಳು ಎಂದು ಡಿಸಿಎಂ ಡಿ.ಕೆ ಶಿವಕುಮಾರ್ ತಿಳಿಸಿದರು. ಮ್ಯಾರಥಾನ್‌ಗೆ ಚಾಲನೆ ನೀಡಿದ ನಂತರ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ಸುಮಾರು 5 ರಿಂದ 6 ದಿನಗಳ ಕಾಲ ಪರಿಶೀಲನೆ ಕೂಡ ನಡೆದಿತ್ತು. ಟ್ರ್ಯಾಕ್ ಈ ಬಾರಿ ತುಂಬಾ ಚೆನ್ನಾಗಿತ್ತು ಎಂಬ ಅಭಿಪ್ರಾಯ ಓಟಗಾರರಿಂದ ಕೇಳಿಬಂದಿದೆ. ಈ ಬಾರಿ ತುಂಬಾ ಚೆನ್ನಾಗಿ ಆಯೋಜಿಸಲಾಗಿದೆ ಎಂದು ಸಂಸದ ತೇಜಸ್ವಿ ಸೂರ್ಯ ಕೂಡ ಅಭಿನಂದಿಸಿದ್ದಾರೆ. ಆದರೆ, ಅವರಿಂದ ಹೊಗಳಿಕೆ ನಿರೀಕ್ಷಿಸುವವರು ಮೂರ್ಖರು ಎಂದರು. ತೇಜಸ್ವಿ ಸೂರ್ಯ ಅವರು, ಇರುವುದೇ ಟೀಕೆ ಮಾಡುವುದಕ್ಕೆ. ಅವರ ಕೈಯಿಂದ ಇನ್ನೇನು ಮಾಡಲು ಆಗುವುದಿಲ್ಲ. ಟೀಕೆ ಮಾಡದೇ ಅವರೇನು ಹೊಗಳುತ್ತಾರಾ?, ಅವರು ಹೊಗಳುತ್ತಾರೆಂದು ನಾವು ಭಾವಿಸಿದರೆ ನಾವು ಮೂರ್ಖರು ಎಂದು ತಿರುಗೇಟು ನೀಡಿದರು.



ಪದಬಂಧ

ರಾಜಾ ಸಂಗಮೇಶ ಹಿರೇಮಠ



5966

5965 ಉತ್ತರ

ಎಡದಿಂದ ಬಲಕ್ಕೆ:
1.ಬೇಸಾಯಗಾರ
3.ಮೂಜಗ 5.ನೆಗೆ
7.ತಹತಹಿಸು
9.ಬಿಂಬಸಾರ 11.ನಾಗರತ್ನ
13.ಸಂತಸಮಯ
15.ನಗ 17.ಲೆಕ್ಕಿಗ
18.ತಲೆಯೋಡಿಸು
ಮೇಲಿನಿಂದ ಕೆಳಕ್ಕೆ :
1.ಬೇಸಿಗೆ 2.ರಜತ
4.ಗಡಸು 6.ಬದನೆ
8.ಹವನಾ 10.ಮತ್ಸರ
12.ರಶನ 13.ಸಂಕೋಲೆ
14.ತನಯ 16.ಗಳಿಸು

ಎಡದಿಂದ ಬಲಕ್ಕೆ
1.ಇದು ಮಂಗಳಕರವಾದ ಗುರುತು (5)
3.ಉಣ್ಣೆಯಿಂದ ಮಾಡಿದ ದಪ್ಪನೆಯ ಹೊದಿಕೆ (3)
4.ನೂಲು ಮೊದಲಿರುವ ಬಾಗಿಲ ಚೌಕಟ್ಟು (3)
5.ಭೂಮಿಯ ಮೇಲಿನ ಕಡಿದಾದ ಜಾಗ ತಿರುಗಿದೆ (3)
7.ನಿದ್ದೆಯಲ್ಲಿ ಕಾಣುವ ಸ್ವಪ್ನ (3)
9.ಆನೆಯೂ ಹೌದು-ಬೇಡನೂ ಹೌದು (3)
10.ಚಿಗುರನ್ನು ತಿನ್ನುತ್ತಿರುವ ಜಿಂಕೆ (3)
12.ವಿಡಂಬನೆ-ಅಪಹಾಸ್ಯದ ಸಮಾನಪದ (3)
14.ತಾವರೆಯ ಒಂದು ಹೆಸರು (3)
16.ರಸವನ್ನು ಗ್ರಹಿಸುವ ಅಂಗ (3)
17.ಬತ್ತಿಯನ್ನು ಹೊಸೆದದ್ದು ಹೀಗೆ 32 ಬಾರಿ (3)
18. ಕೆಡುಕನ್ನು ಬಗೆ ಎಂಬರ್ಥದ ನುಡಿಗಟ್ಟು (5)
ಮೇಲಿನಿಂದ ಕೆಳಕ್ಕೆ
1.ಸಮುದ್ರ-ನದಿಗಳ ಏರಿಳಿತಗಳು (3)
2.ತಾತ್ಕಾಲಿಕ ವಸತಿ ತಲೆಕೆಳಗಾಗಿದೆ (4)
3.ಕೋಟೆ ಸುತ್ತಲಿನ ತಗ್ಗು (3)
6.ಗ್ರಹ ನಡುವೆ ಇಟ್ಟುಕೊಂಡು ಮದುವೆಯಾಗು (5)
8.ಸರಹದ್ದಿನಾಚೆ ಹೋಗದಂತೆ ಲಕ್ಷ್ಯದಲ್ಲಿಡುವ ಬಂಧನ (5)
11.ವಿನಾಯಕನ ಒಂದು ಹೆಸರು (4)
13.ವ್ಯಾಪಾರದ ಮೂಲವಸ್ತು ತಲೆಕೆಳಗಾಗಿದೆ (3)
15.ಮಾಡಿದ ಕೆಲಸಕ್ಕೆ ಪ್ರತಿಯಾಗಿ ಕೊಡುವ ಹಣ (3)

ದಾಖಲೆ ಮುರಿದ ಕ್ವಿಜೆರಾ, ಫ್ಲೋರೆನ್ಸ್ ಚಾಂಪಿಯನ್

ಟಿಸಿಎಸ್ ವಿಶ್ವ 10ಕೆ ಬೆಂಗಳೂರು | ಮಿಂಚಿದ ಭಾರತದ ಸಂಜೀವಿನಿ ಜಾಧವ್, ಹರ್ಮನ್‌ಜೋತ್

ಬೆಂಗಳೂರು: ನಗರದಲ್ಲಿ ಭಾನುವಾರ ನಡೆದ ಟಿಸಿಎಸ್ ವಿಶ್ವ 10ಕೆ ಬೆಂಗಳೂರು 2026ರಲ್ಲಿ ಬುರುಂಡಿಯ ರೋಡ್ರಿಗ್ ಕ್ವಿಜೆರಾ ಹೊಸ ಕೂಟ ದಾಖಲೆ (00:27:31) ನಿರ್ಮಿಸಿದರೆ, ಮಹಿಳಾ ವಿಭಾಗದಲ್ಲಿ ರುವಾಂಡಾದ ಫ್ಲೋರೆನ್ಸ್ ನಿಯೋಂಕುರು 00:30:45 ಸಮಯದಲ್ಲಿ ವಿಜೇತರಾದರು. ಭಾರತೀಯರಲ್ಲಿ ಸಂಜೀವಿನಿ ಜಾಧವ್ 35:01 ಸಮಯದಲ್ಲಿ ಹ್ಯಾಟ್ರಿಕ್ ಗೆಲುವು ಸಾಧಿಸಿದ್ದು, 2.75 ಲಕ್ಷ ರೂ. ಬಹುಮಾನ ಗೆದ್ದರು. ಪುರುಷರ ವಿಭಾಗದಲ್ಲಿ ಅತಿವೇಗದಲ್ಲಿ (29:13) ಓಟ ಮುಗಿಸಿದ ಹರ್ಮನ್‌ಜೋತ್ ಸಿಂಗ್ 3 ಲಕ್ಷ ರೂ. ಬಹುಮಾನ ಗೆದ್ದರು.



ಬುರುಂಡಿಯ ರೋಡ್ರಿಗ್ ಕ್ವಿಜೆರಾ ಓಟದ ನೋಟ.



ಪ್ರಶಸ್ತಿ ಗೆದ್ದ ರುವಾಂಡಾದ ಫ್ಲೋರೆನ್ಸ್ ನಿಯೋಂಕುರು.



ಓಟದಲ್ಲಿ ಪಾಲ್ಗೊಂಡ ಯಕ್ಷಗಾನ ವೇಷಧಾರಿಗಳು



ಅತಿ ವೇಗದ ಭಾರತೀಯ ಹರ್ಮನ್‌ಜೋತ್ ಸಿಂಗ್



ಸಂಜೀವಿನಿ ಜಾಧವ್ ಗೆಲುವಿನ ಹ್ಯಾಟ್ರಿಕ್.

ರಾಜಸ್ಥಾನದಲ್ಲಿ ಸನ್‌ರೈಸ್

ಜೈಪುರ: ದಾಖಲೆಗಳ ಮೇಲೆ ದಾಖಲೆ ಬರೆಯುತ್ತಿರುವ ಹದಿನೈದರ ಪೋರ ವೈಭವ್ ಸೂರ್ಯವಂಶಿ(103) ವೇಗದ ಶತಕ ವ್ಯರ್ಥವಾಗಿದ್ದು, ಅಭಿಷೇಕ್ ಶರ್ಮಾ(57) ಮತ್ತು ನಾಯಕ ಇಶಾನ್ ಕಿಶನ್(74) ಅರ್ಧ ಶತಕಗಳ ನೆರವಿನಿಂದ ಹೈದರಾಬಾದ್, ರಾಜಸ್ಥಾನ್ ನೀಡಿದ 229 ರನ್ ಸವಾಲನ್ನು ಸುಲಭವಾಗಿ ಬೆನ್ನತ್ತಿದೆ. ರಾಯಲ್ಸ್ ವಿರುದ್ಧ 5 ವಿಕೆಟ್ ಜಯ ಸಾಧಿಸಿದ ಸನ್‌ರೈಸರ್ಸ್ 3ನೇ ಸ್ಥಾನಕ್ಕೇರಿದೆ.

18.5 ಓವರ್‌ಗಳಲ್ಲೇ 265 ರನ್‌ಗಳನ್ನು ಬೆನ್ನತ್ತಿ ಪಂಜಾಬ್ ಕಿಂಗ್ಸ್ ಗೆದ್ದ ಬಳಿಕ ಐಪಿಎಲ್‌ನಲ್ಲಿ 200+ ರನ್ ಹೊಡೆದರೂ ಅದು ಪಂದ್ಯ ಗೆಲ್ಲಲು ಸಾಕಾಗಬಹುದೇ ಎಂಬ ಪ್ರಶ್ನೆ ಉದ್ಭವವಾಗಿದೆ. ಈ ಹಿನ್ನೆಲೆ ರಾಯಲ್ಸ್ 6 ವಿಕೆಟ್ ಕಳೆದುಕೊಂಡು 228 ರನ್ ಹೊಡೆದರೂ, ಸನ್‌ರೈಸರ್ಸ್ ಇದನ್ನು ಬೆನ್ನತ್ತುವ ನಿರೀಕ್ಷೆಯಿತ್ತು. ಮೊದಲ ಓವರ್‌ನಲ್ಲೇ ವೇಗಿ ಜೊಫ್ರಾ ಆರ್ಚರ್, ಆರಂಭಿಕ ಟ್ರಾವಿಸ್ ಹೆಡ್‌ರನ್ನು ಪೆವಿಲಿಯನ್ ಕಳುಹಿಸಿದ್ದರು. ಇದಾದ ಬಳಿಕ ಜತೆಗೂಡಿದ ಅಭಿಷೇಕ್ ಮತ್ತು ಕಿಶನ್ ಹೊಡೆಬಡಿ ಆಟವಾಡುತ್ತ ತಮ್ಮ ಅದೃಷ್ಟ ಪರೀಕ್ಷೆ ನಡೆಸಿದರು. ಇಬ್ಬರೂ ಸೇರಿ ದ್ವಿತೀಯ ವಿಕೆಟ್‌ಗೆ 55 ಎಸೆತಗಳಲ್ಲಿ 132 ರನ್ ಕಲೆಹಾಕಿದರು. ವೈಯಕ್ತಿಕವಾಗಿ ಸೂರ್ಯವಂಶಿ ಸ್ಟ್ರೈಕ್‌ರೇಟ್ ಸರಿಗಟ್ಟದಿದ್ದರೂ, ವೈಭವ್ ಮತ್ತು ಜ್ಯುರೆಲ್ ಅವರ 62 ಎಸೆತಗಳಲ್ಲಿನ 112 ರನ್ ಜತೆಯಾಟವನ್ನು ಹಿಂದಿಕ್ಕಿದರು. ಡೋನೊವನ್ ಫೆರೇರ ಇವರ ಜತೆಯಾಟವನ್ನು ಮುರಿದರು.

ಅಷ್ಟರಲ್ಲಿ ಸನ್‌ರೈಸರ್ಸ್ ಜಯಕ್ಕೆ ಕೊನೆಯ 10 ಓವರ್‌ಗಳಲ್ಲಿ ಓವರ್‌ಗೆ 9 ರನ್‌ಗಳ ಅಗತ್ಯವಿತ್ತು. ಅಭಿಷೇಕ್ ಮತ್ತೊಮ್ಮೆ ಅಬ್ಬರಿಸಿ 29 ಎಸೆತಗಳಲ್ಲಿ 11 ಬೌಂಡರಿ ಮತ್ತು 1 ಸಿಕ್ಸರ್ ಒಳಗೊಂಡಿದ್ದ 57 ರನ್ ಹೊಡೆದರು. ಕಿಶನ್ 238.7 ಸ್ಟ್ರೈಕ್‌ರೇಟ್‌ನಲ್ಲಿ ಬ್ಯಾಟ್ ಬೀಸಿದ್ದು, 31 ಎಸೆತಗಳಲ್ಲಿ 11 ಬೌಂಡರಿ ಮತ್ತು 3 ಸಿಕ್ಸರ್ ಒಳಗೊಂಡಿದ್ದ 74 ರನ್ ಹೊಡೆದಿದ್ದರು. ಉಳಿದಂತೆ ಕ್ಲಾಸನ್ 29, ನಿತೀಶ್ ಕುಮಾರ್ ರೆಡ್ಡಿ ಅಬ್ಬರದ 3 ಸಿಕ್ಸರ್ ಒಳಗೊಂಡಿದ್ದ 18 ಎಸೆತಗಳ 36 ರನ್ ಕೊಡುಗೆ ನೀಡಿ ಗೆಲುವಿನ ದಡ ಸೇರಿಸಿದ್ದರು. ಆರ್ಚರ್, ಬ್ರಿಜೇಶ್ ತಲಾ 2 ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರ್

ರಾಜಸ್ಥಾನ್ 228/6(20): ಸೂರ್ಯವಂಶಿ 103, ಜ್ಯುರೆಲ್ 51, ಫೆರೇರ 33 (ಮಾಲಿಂಗ 38ಕ್ಕೆ 2).
ಹೈದರಾಬಾದ್ 229/5: ಕಿಶನ್ 74, ಅಭಿಷೇಕ್ 57, ರೆಡ್ಡಿ 36 (ಆರ್ಚರ್ 34ಕ್ಕೆ 2, ಬ್ರಿಜೇಶ್ 44ಕ್ಕೆ 2).

ವೈಭವ್ ಶೂನ್ಯ, ಶತಕ: ಎರಡರಲ್ಲೂ ಗೆದ್ದ ಸನ್

ಹದಿಮೂರು ದಿನಗಳ ಹಿಂದೆ ತವರಿನ ಪಂದ್ಯದಲ್ಲಿ ಬ್ಯಾಟರ್ ಸೂರ್ಯವಂಶಿ ಅವರನ್ನು ಖಾತೆ ತೆರೆಯುವ ಮುನ್ನವೇ ಪೆವಿಲಿಯನ್ ಕಳುಹಿಸಿ ಗೆದ್ದಿದ್ದ ಸನ್‌ರೈಸರ್ಸ್, ಜೈಪುರದಲ್ಲಿ ವೈಭವ್ ಶತಕ ದಾಖಲಿಸಿದರೂ ಪಂದ್ಯವನ್ನು ಗೆದ್ದಿತು.

ಕಿರುಸುದ್ದಿ

ಕರಾವಳಿಯಲ್ಲೀಗ ಉರಿ ಬಿಸಿಲಿನ ವಾತಾವರಣ

ಮಂಗಳೂರು: ಮಂಗಳೂರು ಸೇರಿದಂತೆ ಕರಾವಳಿಯಲ್ಲೀಗ ಬಿರು ಬಿಸಿಲಿನ ವಾತಾವರಣ ಕಂಡುಬರುತ್ತಿದೆ. ಕಳೆದ ಕೆಲವು ದಿನಗಳಿಂದ ಬಿಸಿ ಗಾಳಿ ಬೀಸುತ್ತಿದ್ದು, ಜನತೆಯನ್ನು ಕಂಗೆಡಿಸಿದೆ. ಈಗಾಗಲೇ ಹವಾಮಾನ ಇಲಾಖೆ ಕರಾವಳಿಯಲ್ಲಿ ಉಷ್ಣಾಂಶ ತೀವ್ರವಾಗುವ ಎಚ್ಚರಿಕೆಯನ್ನು ನೀಡಿದೆ. ಕರಾವಳಿ ಭಾಗದಲ್ಲಿ ಭಾನುವಾರವೂ ಬಿಸಿಲ ಧಗೆಯ ಆರ್ಭಟ ಮುಂದುವರಿದಿತ್ತು. ಮಂಗಳೂರಿನಲ್ಲಿ ಭಾನುವಾರ ದ.ಕ ಜಿಲ್ಲೆಯಲ್ಲಿ ಗರಿಷ್ಠ 38.1ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಗಿದೆ. ಉಡುಪಿ ಜಿಲ್ಲೆಯಲ್ಲಿ ಗರಿಷ್ಠ 35.3ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ.



ಮುಂದಿನ 1-2 ದಿನಗಳ ಕಾಲ ಇದೇ ರೀತಿಯ ಬಿಸಿಯ ವಾತಾವರಣ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

2 ವರ್ಷಗಳಿಂದ ತಲೆಮರೆಸಿಕೊಂಡಿದ್ದ ಆರೋಪಿಗೆ ನ್ಯಾಯಾಂಗ ಬಂಧನ

ಮಂಗಳೂರು: ನ್ಯಾಯಾಲಯಕ್ಕೆ ಹಾಜರಾಗದೇ ಎರಡು ವರ್ಷಗಳಿಂದ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಮಂಗಳೂರು ಉತ್ತರ ಪೊಲೀಸ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಬಂದರು ಅನ್ಸಾರಿ ರೋಡ್‌ನ ಗೂಡ್ಸ್ ಅಜೀಜ್ ಎಂಬವರ ಪುತ್ರ, ಪ್ರಸ್ತುತ ಕುಲಶೇಖರ ಸಾಯಿ ಆರ್ಟ್ಸ್ ಅಪಾರ್ಟ್‌ಮೆಂಟ್‌ನಲ್ಲಿ ವಾಸವಿದ್ದ ಮುನೀರ್ ಅಹಮ್ಮದ್ ಅಲಿಯಾಸ್ ಅಹಮ್ಮದ್ (59) ಬಂಧಿತ. ಮಂಗಳೂರು ಉತ್ತರ ಪೊಲೀಸ್ ಠಾಣೆಯ ಅಪರಾಧ ಪ್ರಕರಣದಲ್ಲಿ ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಕ್ಕೆ ಹಾಜರಾಗದೆ ಸುಮಾರು ಎರಡು ವರ್ಷಗಳಿಂದ ಈತ ತಲೆ ಮರೆಸಿಕೊಂಡಿದ್ದ. ಪೊಲೀಸರಿಗೆ ಸಿಗದೆ ತಲೆಮರೆಸಿಕೊಂಡು ಓಡಾಡುತ್ತಿದ್ದರಿಂದ ನ್ಯಾಯಾಲಯವು ಆರೋಪಿ ವಿರುದ್ಧ ವಾರೆಂಟ್ ಹೊರಡಿಸಿದ್ದು, ಪೊಲೀಸರು ಕುಲಶೇಖರದ ಆತನ ಬಾಡಿಗೆ ಮನೆಯಲ್ಲಿ ಶನಿವಾರ ಬಂಧಿಸಿದ್ದಾರೆ.



ಆರೋಪಿಯನ್ನು ಮಂಗಳೂರಿನ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ನ್ಯಾಯಾಲಯವು ಆರೋಪಿಗೆ ನ್ಯಾಯಾಂಗ ಬಂಧನ ವಿಧಿಸಿದೆ. ಉತ್ತರ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕ ಸಚಿನ್ ಕುಮಾರ್ ಅವರ ನೇತೃತ್ವದಲ್ಲಿ ಉತ್ತರ ಪೊಲೀಸ್ ಠಾಣಾ ಪಿಎಸ್‌ಐ ಫೈಜುನ್ನಿಸಾ ಮತ್ತು ಸಿಬ್ಬಂದಿಗಳಾದ ಮದನ್, ಗೀತಾ ಶಂಕರಪ್ಪ ಹಾಗೂ ಸಿಬ್ಬಂದಿ ಆರೋಪಿಯನ್ನು ಬಂಧಿಸಿದ್ದಾರೆ.

ಬಾಲಕಿಗೆ ದೌರ್ಜನ್ಯ ಯತ್ನ: ವ್ಯಕ್ತಿಯ ವಿರುದ್ಧ ಪೋಕ್ಸೋ ಕೇಸು ದಾಖಲು

ಕಾಞಂಗಾಡು: ಮನೆ ಕೆಲಸಕ್ಕೆ ಆಗಮಿಸಿದ ವ್ಯಕ್ತಿ ಆರರ ಹರೆಯದ ಬಾಲಕಿಗೆ ದೌರ್ಜನ್ಯಗೈಯ್ಯಲು ಯತ್ನಿಸಿದ ಪ್ರಕರಣದ ಆರೋಪಿಯನ್ನು ಪೋಕ್ಸೋ ಪ್ರಕಾರ ಬಂಧಿಸಲಾಗಿದೆ. ತೃಕ್ಕರೀಪುರ ಎಡಾಟ್ಟುಮಲ್ ಚಾಪಯಿಲ್ ರಾಘವ (52) ಎಂಬಾತನನ್ನು ಪಯ್ಯನ್ನೂರು ಪೊಲೀಸರು ಬಂಧಿಸಿದ್ದಾರೆ. ಮನೆಗೆ ಸಾರಣೆ ಕೆಲಸಕ್ಕೆಂದು ಬಂದ ರಾಘವ ಬಾಲಕಿಯನ್ನು ದೌರ್ಜನ್ಯಗೈಯ್ಯಲು ಯತ್ನಿಸಿದ ಬಗ್ಗೆ ಬಾಲಕಿಯ ತಾಯಿಯಲ್ಲಿ ತಿಳಿಸಿದ್ದಳು. ಈ ಹಿನ್ನೆಲೆಯಲ್ಲಿ ದೂರು ನೀಡಲಾಗಿದೆ.

ಮಳ್ಳಂಗೈ ನಿವಾಸಿ ಸೌದಿ ಅರೇಬಿಯಾದಲ್ಲಿ ಕುಸಿದು ಬಿದ್ದು ಮೃತ್ಯು

ಕುಂಬಳೆ: ಬಂದ್ಯೋಡು ಮಳ್ಳಂಗೈ ನಿವಾಸಿ ಸೌದಿ ಅರೇಬಿಯಾದಲ್ಲಿ ಕುಸಿದು ಬಿದ್ದು ಮೃತಪಟ್ಟ ಘಟನೆ ನಡೆದಿದೆ. ಕಳೆದ 22 ವರ್ಷಗಳಿಂದ ಸೌದಿ ಅರೇಬಿಯಾದಲ್ಲಿ ಕೆಲಸ ನಿರ್ವಹಿಸುತ್ತಿದ್ದ ಮುಹಮ್ಮದ್ ಫಾರೂಕ್ (48) ಮೃತಪಟ್ಟವರು. ಇತ್ತೀಚೆಗೆ ಊರಿಗೆ ಬಂದಿದ್ದ ಅವರು ಈದುಲ್ ಫಿತ್ರಹಬ್ಬದ ಬಳಿಕ ಮರಳಿದ್ದರು. ದಿ.ಮುಹಮ್ಮದ್ ಹಾಜಿ ಮತ್ತು ಆಯಿಷಾ ಹಜ್ಜುಮ್ಮ ದಂಪತಿಯ ಪುತ್ರನಾದ ಮೃತರು ಪತ್ನಿ ಖೈರುನ್ನೀಸಾ ಹಾಗೂ ನಾಲ್ವರು ಮಕ್ಕಳನ್ನು ಅಗಲಿದ್ದಾರೆ.

ಉಡುಪಿ ಪೊಲೀಸರ ದಿಢೀರ್ ದಾಳಿ

ನಿಯಮ ಉಲ್ಲಂಘಿಸಿ ಮರಳು ಸಾಗಾಟಕ್ಕೆ ಬ್ರೇಕ್ | ವಿಶೇಷ ಕಾರ್ಯಾಚರಣೆಯಲ್ಲಿ 11 ವಾಹನ ವಶ

ಉಡುಪಿ: ಜಿಲ್ಲೆಯಲ್ಲಿ ನಿಯಮ ಮೀರಿ ಮರಳು ಸಾಗಾಟ ಮಾಡುತ್ತಿರುವ ವಾಹನಗಳ ವಿರುದ್ಧ ಪೊಲೀಸರು ಸಮರ ಸಾರಿದ್ದು, ಶನಿವಾರ ನಡೆಸಿದ ವಿಶೇಷ ಕಾರ್ಯಾಚರಣೆಯಲ್ಲಿ ಒಟ್ಟು 13 ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ.

ಜಿಲ್ಲೆಯಾದ್ಯಂತ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ ಏಕಕಾಲಕ್ಕೆ ಈ ಕಾರ್ಯಾಚರಣೆ ಹಮ್ಮಿಕೊಳ್ಳಲಾಗಿತ್ತು. ಮರಳು ಸಾಗಾಣಿಕೆಯಲ್ಲಿ ನಿಗದಿತ ಪ್ರಮಾಣಕ್ಕಿಂತ ಹೆಚ್ಚಿನ ಭಾರ (ಓವರ್ ಲೋಡಿಂಗ್) ಹೇರಿ ಸಾರ್ವಜನಿಕ ರಸ್ತೆಗಳಲ್ಲಿ ಸಂಚರಿಸುತ್ತಿದ್ದ ವಾಹನಗಳನ್ನು ತಡೆದು ತಪಾಸಣೆ ನಡೆಸಿದ ಸಂದರ್ಭದಲ್ಲಿ ಈ ನಿಯಮ ಉಲ್ಲಂಘನೆ ಪತ್ತೆಯಾಗಿದೆ.

ಕಾರ್ಯಾಚರಣೆಯ ವೇಳೆ ವಶಪಡಿಸಿಕೊಳ್ಳಲಾದ ಎಲ್ಲಾ 13 ವಾಹನಗಳನ್ನು ಮುಂದಿನ ಕಾನೂನು ಕ್ರಮಕ್ಕಾಗಿ ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಹಸ್ತಾಂತರಿಸಲಾಗಿದೆ. ಜಿಲ್ಲೆಯಲ್ಲಿ ಮರಳು ಸಾಗಾಣಿಕೆಯಲ್ಲಿ ನಡೆಯುತ್ತಿರುವ ಅಕ್ರಮಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಇಲಾಖೆಯು ಈ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದಾರೆ.

ಅಕ್ರಮ ಮರಳುಗಾರಿಕೆ ಪ್ರದೇಶಕ್ಕೆ ಲೋಕಾಯುಕ್ತ ಅಧಿಕಾರಿಗಳ ದಾಳಿ

ಬಾರಕೂರು ಸಮೀಪದ ಹೊಸಾಳ ಗ್ರಾಮದ ನಾಗರಮಠ ಸೀತಾನದಿ ಪ್ರದೇಶದಲ್ಲಿ ಅವೈಜ್ಞಾನಿಕ ಹಾಗೂ ಅಕ್ರಮ ಮರಳುಗಾರಿಕೆಗಾಗಿ ಗ್ರಾಮಸ್ಥರು, ಸಂತ್ರಸ್ಥರು ಹಾಗೂ ಕೃಷಿಕರಿಂದ ತೀವ್ರ ಪ್ರತಿಭಟನೆಯನ್ನು ಎದುರಿಸುತ್ತಿರುವ



ಸೀತಾನದಿ ಪ್ರದೇಶದಲ್ಲಿ ಅಕ್ರಮ ಮರಳುಗಾರಿಕೆ



ಪೊಲೀಸರು ವಶಪಡಿಸಿಕೊಂಡ ವಾಹನ

ಹಿನ್ನಲೆಯಲ್ಲಿ ಈ ಪ್ರದೇಶಕ್ಕೆ ಲೋಕಾಯುಕ್ತ ಮಂಗಳೂರು ವಿಭಾಗದ ಎಸ್ಪಿ ದಿನೇಶ್‌ಕುಮಾರ್ ಬಿ.ಪಿ. ನೇತೃತ್ವದಲ್ಲಿ ಲೋಕಾಯುಕ್ತ ಪೊಲೀಸರು ಭೇಟಿ ನೀಡಿ ತನಿಖೆ ನಡೆಸಿದ್ದಾರೆ ಎಂದು ತಿಳಿದು ಬಂದಿದೆ.

ಬುಧವಾರ ಹಾಗೂ ಗುರುವಾರ ನಾಗರಮಠದ ಸೀತಾನದಿ ಪಾತ್ರದಲ್ಲಿ ಅವೈಜ್ಞಾನಿಕವಾಗಿ ನಡೆಯುತ್ತಿರುವ ಮರಳುಗಾರಿಕೆ ಪ್ರದೇಶಕ್ಕೆ ಭೇಟಿ ನೀಡಿದ ತಂಡ, ಸ್ಥಳೀಯರು ಮಾಡುತ್ತಿರುವ ವಿವಿಧ ಆರೋಪಗಳಿಗೆ ಸಂಬಂಧಿಸಿದಂತೆ ವಿಸ್ತೃತ ತನಿಖೆ ನಡೆಸಿದೆ. ಎರಡು ದಿನಗಳ ಸ್ಥಳ ತನಿಖೆಯ ಬಳಿಕ ಶುಕ್ರವಾರ ಉಡುಪಿಯ ಲೋಕಾಯುಕ್ತ ಕಚೇರಿಗೆ ಹೋರಾಟಗಾರರನ್ನು ಕರೆಸಿಕೊಂಡು ಅವರಲ್ಲಿರುವ ದಾಖಲೆಗಳ ಪರಿಶೀಲನೆ ಹಾಗೂ ಇನ್ನಷ್ಟು ಮಾಹಿತಿ ಸಂಗ್ರಹಿಸಿದ್ದಾರೆ ಎಂದು ತಿಳಿದು ಬಂದಿದೆ.

ಇದೇ ವೇಳೆ ಗ್ರಾಮಸ್ಥರ ಸತತ ಪ್ರತಿಭಟನೆ, ಧರಣಿಯ ನಡುವೆ ಪೊಲೀಸರ ಭದ್ರತೆಯಲ್ಲಿ ಮರಳುಗಾರಿಕೆ ನಡೆಸುತ್ತಿರುವ ಗುತ್ತಿಗೆದಾರ ಕುಶ ಕುಮಾರ್ ಅವರನ್ನು ಕಚೇರಿಗೆ ಕರೆಸಿ ಅವರ ವಿಚಾರಣೆಯನ್ನೂ ನಡೆಸಲಾಗಿದೆ ಎಂದು ನಂಬಲರ್ಹ ಮೂಲದಿಂದ ತಿಳಿದುಬಂದಿದೆ.

ಇದರ ಫಲಶ್ರುತಿ ಎಂಬಂತೆ ಕಳೆದ ಎರಡು ವಾರದಿಂದ ಸತತವಾಗಿ ನಡೆಯುತಿದ್ದ ಮರಳು ಗಣಿಗಾರಿಕೆ ಶನಿವಾರ ಇದ್ದಕ್ಕಿದ್ದಂತೆ ಸ್ತಬ್ಧವಾಗಿದೆ ಎಂದು ಸ್ಥಳೀಯರು ಮಾಹಿತಿ ನೀಡಿದ್ದಾರೆ. ಇಂದು ನದಿಯಲ್ಲಿ ಮುಳುಗಿ ಮರಳು ತೆಗೆಯುವ, ಸಂಗ್ರಹಿಸಿದ ಮರಳನ್ನು ಹೊತ್ತು ಶರವೇಗದಲ್ಲಿ ಸಾಗುವ ನೂರಾರು ಲಾರಿಗಳ ಓಡಾಟ ನಿಲುಗಡೆಗೆ ಬಂದಿದೆ. ಒಟ್ಟಾರೆ ಕಳೆದ 15 ದಿನಗಳಿಂದ ಕಂಡುಬರುತಿದ್ದ ಚಟುವಟಿಕೆಗಳು ನಿಂತಿವೆ ಎಂದು ಅವರು ಖುಷಿಯಿಂದ ತಿಳಿಸಿದ್ದಾರೆ.

ಬುಧವಾರ ಹಾಗೂ ಗುರುವಾರದ ತಮ್ಮ ಭೇಟಿಯ ವೇಳೆ ಲೋಕಾಯುಕ್ತ ಪೊಲೀಸರು ಮರಳುಗಾರಿಕೆಯನ್ನು ಆರಂಭದ ದಿನದಿಂದಲೂ ವಿರೋಧಿಸುತ್ತಿರುವ, ಇದರ ಸಂತ್ರಸ್ಥರಾಗಿರುವ ಸ್ಥಳೀಯರಿಂದ ಮಾಹಿತಿಗಳನ್ನು ಸಂಗ್ರಹಿಸಿದ್ದಾರೆ. ಒಂದು ಮೀ.ಆಳದವರೆಗೆ ಮಾತ್ರ ಮರಳುಗಾರಿಕೆ ನಡೆಸಲು ಅವಕಾಶವಿದ್ದರೂ ನೀರಿನಲ್ಲಿ ಮುಳುಗಿ 3ರಿಂದ 4 ಮೀ. ಆಳಕ್ಕಿಳಿದು ಮರಳು ತೆಗೆಯುತ್ತಿರುವುದನ್ನು ಅವರು ವೀಕ್ಷಿಸಿದರು. ಇದರಿಂದ ಪರಿಸರದ ಬಾವಿಗಳ ನೀರೆಲ್ಲವೂ ಉಪ್ಪಾಗಿರುವುದನ್ನು ಸಹ ಲೋಕಾಯುಕ್ತ ಪೊಲೀಸರು ಗಮನಿಸಿದ್ದಾರೆ ಎಂದು ಹೇಳಲಾಗಿದೆ.

ಅಲ್ಲದೇ ಟ್ರಿಪ್‌ಶಿಟ್‌ನಲ್ಲಿ 3 ಟನ್ ಮರಳು ಎಂದು ನಮೂದಿಸಿ ಆರು ಟನ್ ಮರಳನ್ನು ಟಿಪ್ಪರ್ ಲಾರಿಗಳು ಸಾಗಿಸುತ್ತಿರುವುದರ ಕುರಿತು ಊರಿನವರು ನೀಡಿದ ಮಾಹಿತಿಗಳನ್ನು ಅವರು ಪರಿಶೀಲಿಸಿದ್ದಾರೆ. ದೊಡ್ಡ ಸಂಖ್ಯೆಯಲ್ಲಿ ಧರಣಿ, ಪ್ರತಿಭಟನೆಯಲ್ಲಿ ನಿರತರಾಗಿರುವ ಮಹಿಳೆಯರು ಸಹ ತಮ್ಮ ಅಹವಾಲುಗಳನ್ನು ಲೋಕಾಯುಕ್ತ ಪೊಲೀಸರ ಮುಂದೆ ಇರಿಸಿದ್ದಾರೆ.

ಊರಿನಲ್ಲಿ ಪ್ರತಿಭಟನೆ ನಡೆಸುತ್ತಿರುವವರಲ್ಲಿ ಒಬ್ಬ ಮಹಿಳೆ ಸೇರಿದಂತೆ ಆರು ಮಂದಿಯನ್ನು ಉಡುಪಿ ಲೋಕಾಯುಕ್ತ ಕಚೇರಿಗೆ ಕರೆಸಿಕೊಂಡು ಡಿವೈಎಸ್ಪಿ ಅವರು ಅವರಿಂದ ವಿಸ್ತೃತವಾದ ಹೇಳಿಕೆಯನ್ನು ಪಡೆದು ಕೊಂಡಿದ್ದಾರೆ ಎಂದು ಹೇಳಲಾಗಿದೆ.

ಭರವಸೆಯ ಬೆಳಕು

ಗ್ರಾಮಸ್ಥರು ನೀಡಿರುವ ದೂರು ಹಾಗೂ ಹೇಳಿಕೆಗಳ ಕುರಿತು ವಿಚಾರಣೆ ನಡೆಸಿದ್ದು, ಸಂಬಂಧಿತರಿಗೆ ನೋಟೀಸು ಜಾರಿಗೊಳಿಸಿ ಮುಂದಿನ ಕಾನೂನು ಕ್ರಮ ಕೈಗೊಳ್ಳುವುದಾಗಿ ಲೋಕಾಯುಕ್ತ ಪೊಲೀಸರು ಭರವಸೆ ನೀಡಿದ್ದಾರೆ. ಇದರಿಂದ ತಮಗೆ ಮರಳುಗಾರಿಕೆ ನಿಲ್ಲುವ ಕುರಿತಂತೆ ಭರವಸೆಯ ಬೆಳಕು ಕಾಣಿಸಿದೆ ಎಂದು ಸಂತ್ರಸ್ಥೆಯೊಬ್ಬರು ತಿಳಿಸಿದ್ದಾರೆ.

ಉಡುಪಿಯಲ್ಲಿ ಭೀಕರ ಬೆಂಕಿ ಅವಘಡ: ಕಣ್ಣೆದುರಲ್ಲೇ ಅಂಗಡಿಗಳು ಸುಟ್ಟು ಭಸ್ಮ



ಉಡುಪಿ: ನಗರದ ಅತ್ಯಂತ ಜನನಿಬಿಡ ಪ್ರದೇಶವಾದ ಸಿಟಿ ಬಸ್ ನಿಲ್ದಾಣದ ಸಮೀಪವಿರುವ ಖಾದರ್ ವಾಣಿಜ್ಯ ಕಟ್ಟಡಕ್ಕೆ ಭಾನುವಾರ ಸಂಜೆ ಭೀಕರ ಬೆಂಕಿ ಅವಘಡ ಸಂಭವಿಸಿದೆ. ಈ ದುರಂತದಲ್ಲಿ ಹಲವು ಅಂಗಡಿಗಳು ಸುಟ್ಟು ಭಸ್ಮವಾಗಿದೆ.

ಘಟನಾ ಸ್ಥಳದಿಂದ ಕೇವಲ 2 ಕಿಲೋಮೀಟರ್ ದೂರದಲ್ಲೇ ಅಗ್ನಿ ಶಾಮಕ ಠಾಣೆ ಇದ್ದರೂ, ವಾಹನಗಳು ಸ್ಥಳಕ್ಕೆ ತಲುಪಲು ಅರ್ಧಗಂಟೆಗೂ ಅಧಿಕ ಕಾಲ ವಿಳಂಬ ಮಾಡಿರುವುದು ಸಾರ್ವಜನಿಕರ ಮತ್ತು ಅಂಗಡಿ ಮಾಲೀಕರ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ.

ಭಾನುವಾರ ಸಂಜೆ 5.20ರ ಸುಮಾರಿಗೆ ವಾಣಿಜ್ಯ ಕಟ್ಟಡದ ನೆಲಮಹಡಿಯಲ್ಲಿರುವ ಮೊಬೈಲ್ ಅಂಗಡಿಯೊಂದರಲ್ಲಿಶಾರ್ಟ್‌ಸರ್ಕ್ಯೂಟ್ ನಿಂದಾಗಿ ಬೆಂಕಿ ಕಾಣಿಸಿಕೊಂಡಿದೆ. ನೋಡನೋಡುತ್ತಿದ್ದಂತೆಯೇ ಬೆಂಕಿಯ ಕೆನ್ನಾಲಿಗೆ ಇಡೀ ಕಟ್ಟಡಕ್ಕೆ ವ್ಯಾಪಿಸಿತು. ಕಟ್ಟಡದಲ್ಲಿದ್ದ ಮೊಬೈಲ್ ಶಾಪ್, ಹಾರ್ಡ್‌ವೇರ್ ಮತ್ತು ಪ್ಲಾಸ್ಟಿಕ್ ಅಂಗಡಿಗಳು ಸಂಪೂರ್ಣವಾಗಿ ಬೆಂಕಿಗೆ ಆಹುತಿಯಾಗಿವೆ. ಮೊಬೈಲ್ ರಿಪೇರಿ ಉಪಕರಣಗಳು ಹಾಗೂ ಪ್ಲಾಸ್ಟಿಕ್ ವಸ್ತುಗಳು ಇದ್ದಿದ್ದರಿಂದ ಬೆಂಕಿ ಕ್ಷಣಾರ್ಧದಲ್ಲಿ ರೌದ್ರರೂಪ ತಾಳಿತು.

ಬೆಂಕಿ ಕಾಣಿಸಿಕೊಂಡ ಕೂಡಲೇ ಅಗ್ನಿಶಾಮಕ ದಳಕ್ಕೆ ಮಾಹಿತಿ ನೀಡಲಾಗಿತ್ತು. ನಗರದ ಹೃದಯ ಭಾಗದಲ್ಲೇ ಈ ಅವಘಡ ಸಂಭವಿಸಿದ್ದರೂ ಮತ್ತು ಅಗ್ನಿಶಾಮಕ ಠಾಣೆ ಕೇವಲ 2 ಕಿ.ಮೀ ಅಂತರದಲ್ಲಿದ್ದರೂ, ಅಗ್ನಿಶಾಮಕ ವಾಹನ ಘಟನಾ ಸ್ಥಳಕ್ಕೆ ಬರಲು ಅರ್ಧಗಂಟೆ ತಡವಾಗಿದೆ. ಅಗ್ನಿಶಾಮಕ ದಳದ ಈ ನಿರ್ಲಕ್ಷ್ಯದಿಂದಾಗಿ ಬೆಂಕಿ ಇಡೀ ಕಟ್ಟಡಕ್ಕೆ ಹರಡಲು ದಾರಿಯಾಯಿತು ಎಂದು ಸಾರ್ವಜನಿಕರು ಕಿಡಿಕಾರಿದ್ದಾರೆ. ಅಗ್ನಿಶಾಮಕ ದಳದಲ್ಲಿ ಸೂಕ್ತ ವ್ಯವಸ್ಥೆಗಳು ಇಲ್ಲದೇ ಇರುವುದೇ ಈ ವಿಳಂಬಕ್ಕೆ ಕಾರಣ ಎಂದು ಸಿಬ್ಬಂದಿಗಳು ನೀಡಿದ ಸಮಜಾಯಿಷಿ ಜನರ ಆಕ್ರೋಶವನ್ನು ಮತ್ತಷ್ಟು ಹೆಚ್ಚಿಸಿದೆ.

ಅಗ್ನಿಶಾಮಕದಳಕ್ಕೆ ಸೌಲಭ್ಯಗಳನ್ನು ಒದಗಿಸಿಕೊಡಬೇಕೆನ್ನುವ ಒತ್ತಾಯವೂ ಈ ಸಂದರ್ಭ ಕೇಳಿ ಬಂತು.

ಹರಸಾಹಸ ಪಟ್ಟ ಸಿಬ್ಬಂದಿ

ಸ್ಥಳಕ್ಕೆ ಆಗಮಿಸಿದ ಅಗ್ನಿಶಾಮಕ ದಳದ ಮೂರು ವಾಹನಗಳು ಬೆಂಕಿ ನಂದಿಸಲು ಹರಸಾಹಸ ಪಟ್ಟವು. ಆರಂಭದಲ್ಲಿ ಬೆಂಕಿ ನಿಯಂತ್ರಣಕ್ಕೆ ಬಾರದಿದ್ದಾಗ, ಖಾಸಗಿ ಟ್ಯಾಂಕರ್‌ಗಳ ಮೂಲಕ ನೀರು ತರಿಸಿ ಕಾರ್ಯಾಚರಣೆ ಮುಂದುವರಿಸಲಾಯಿತು. ಸಾರ್ವಜನಿಕರು ಪಕ್ಕದ ಕಟ್ಟಡಗಳನ್ನು ಏರಿ ನೀರು ಎರಚುವ ಮೂಲಕ ಬೆಂಕಿ ನಂದಿಸಲು ಪ್ರಯತ್ನಿಸಿದರು. ಅಕ್ಕಪಕ್ಕದ ಅಂಗಡಿ ಮಾಲೀಕರು ತಮ್ಮ ಅಂಗಡಿಯಲ್ಲಿದ್ದ ವಸ್ತುಗಳನ್ನು ತುರ್ತಾಗಿ ಸ್ಥಳಾಂತರಿಸಿದರು. ಸುಮಾರು ಎರಡು ಗಂಟೆಗಳ ನಿರಂತರ ಕಾರ್ಯಾಚರಣೆಯ ನಂತರವೂ, ಅಂದರೆ ರಾತ್ರಿ 8 ಗಂಟೆಯ ತನಕವೂ ಬೆಂಕಿ ಸಂಪೂರ್ಣವಾಗಿ ಹತೋಟಿಗೆ ಬಂದಿರಲಿಲ್ಲ.

ಮಂಗಳೂರು ದಸರಾ ಇತಿಹಾಸದಲ್ಲಿ ಹೊಸ ಮೈಲಿಗಲ್ಲು

67 ಕೋ. ರೂ. ವೆಚ್ಚದ ಭೂಗತ ವಿದ್ಯುತ್ ಕೇಬಲ್ ಯೋಜನೆಗೆ ಮಂಜೂರಾತಿ

ಮಂಗಳೂರು: ವಿಶ್ವವಿಖ್ಯಾತ ಮಂಗಳೂರು ದಸರಾ ಮಹೋತ್ಸವದ ಮೆರವಣಿಗೆಗೆ ದಶಕಗಳಿಂದ ಎದುರಾಗಿದ್ದ ವಿದ್ಯುತ್ ತಾಂತ್ರಿಕ ಸವಾಲಿಗೆ ಈಗ ಶಾಶ್ವತ ಪರಿಹಾರ ಸಿಕ್ಕಂತಾಗಿದೆ. ಕುದ್ರೋಳಿ ಶ್ರೀ ಗೋಕರ್ಣನಾಥ ಕ್ಷೇತ್ರದ ಆಡಳಿತ ಮಂಡಳಿಯ ಸುದೀರ್ಘ ಪ್ರಯತ್ನದ ಫಲವಾಗಿ, ಮೆರವಣಿಗೆ ಸಾಗುವ ಮಾರ್ಗದಲ್ಲಿ ಅಡಚಣೆಯುಂಟುಮಾಡುತ್ತಿದ್ದ ವಿದ್ಯುತ್ ತಂತಿಗಳನ್ನು ತೆರವುಗೊಳಿಸಿ, ಭೂಗತ ಕೇಬಲ್ ಅಳವಡಿಸುವ 67 ಕೋಟಿ ರೂ. ವೆಚ್ಚದ ಯೋಜನೆಗೆ ರಾಜ್ಯ ಸರ್ಕಾರ ಮಂಜೂರಾತಿ ನೀಡಿದೆ.



ಪ್ರತಿ ವರ್ಷ ಮಂಗಳೂರು ದಸರಾ ಮೆರವಣಿಗೆಯ ಸಂದರ್ಭದಲ್ಲಿ ಸಾಲು ಸಾಲಾಗಿ ಸಾಗುವ ಎತ್ತರದ ಸ್ತಬ್ಧಚಿತ್ರಗಳು ಮತ್ತು ರಥಗಳಿಗೆ ರಸ್ತೆಯ ಮೇಲ್ಭಾಗದಲ್ಲಿ ಹಾದುಹೋಗಿದ್ದ ವಿದ್ಯುತ್ ತಂತಿಗಳು ದೊಡ್ಡ ಅಡಚಣೆಯಾಗಿದ್ದವು. ಸುರಕ್ಷತೆಯ ದೃಷ್ಟಿಯಿಂದ ಮೆರವಣಿಗೆಯ ಸಮಯದಲ್ಲಿ ನಗರದ ಹಲವು ಭಾಗಗಳಲ್ಲಿ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸುವುದು ಅನಿವಾರ್ಯವಾಗಿತ್ತು. ಇದರಿಂದಾಗಿ ಸಾರ್ವಜನಿಕರಿಗೆ ಹಾಗೂ ಸ್ಥಳೀಯ ವ್ಯಾಪಾರಿಗಳಿಗೆ ಸಾಕಷ್ಟು ತೊಂದರೆಯಾಗುತ್ತಿತ್ತು. ಈ ಗಂಭೀರ ಸಮಸ್ಯೆಯನ್ನು ಮನಗಂಡ ಕುದ್ರೋಳಿ ಕ್ಷೇತ್ರದ ಆಡಳಿತ ಮಂಡಳಿಯವರು ಕರ್ನಾಟಕ ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್ ಅವರ ಮೂಲಕ ಈ ಬಗ್ಗೆ ಸರ್ಕಾರಕ್ಕೆ ವಿಶೇಷ ಮನವಿಯನ್ನು ಸಲ್ಲಿಸಿತ್ತು.

ಈ ಸಮಸ್ಯೆಯ ಗಂಭೀರತೆಯನ್ನು ಅರಿತ ಯು.ಟಿ. ಖಾದರ್ ಅವರು, ಇಂಧನ ಸಚಿವರೊಂದಿಗೆ ಸತತ ಸಂಪರ್ಕ ವನ್ನು ಸಾಧಿಸಿ, ಬೃಹತ್ ಯೋಜನೆಗೆ ಅನುಮೋದನೆ ದೊರಕಿಸಿದ್ದಾರೆ. ಟೆಂಡರ್ ಪ್ರಕ್ರಿಯೆಯನ್ನು ವಿಳಂಬವಿಲ್ಲದೆ ಪೂರ್ಣಗೊಳಿಸಿ, ಕಾಮಗಾರಿಯ ಆರಂಭಕ್ಕೆ ಹಸಿರು ನಿಶಾನೆ ತೋರಿದ್ದಾರೆ ಎಂದು ಕ್ಷೇತ್ರದ ಕೋಶಾಧಿಕಾರಿ ಪದ್ಮರಾಜ್ ಆರ್. ಪೂಜಾರಿ ತಿಳಿಸಿದ್ದಾರೆ

ಅಪಘಾತದ ಭಯವಿಲ್ಲ

ಈ ಯೋಜನೆಯಿಂದಾಗಿ ಮುಂದಿನ ದಿನಗಳಲ್ಲಿ ವಿದ್ಯುತ್ ಅಪಘಾತಗಳ ಭಯವಿಲ್ಲದೆ ಮೆರವಣಿಗೆ ಸುಗಮವಾಗಿ ಸಾಗಲಿದ್ದು, ಮಳೆಗಾಲದಲ್ಲಿ ಮರಗಳು ಬಿದ್ದು ವಿದ್ಯುತ್ ವ್ಯತ್ಯಯ ವಾಗುವ ಸಮಸ್ಯೆಗೂ ಮುಕ್ತಿ ಸಿಗಲಿದೆ. ಅಷ್ಟೇ ಅಲ್ಲದೆ, ರಸ್ತೆಗಳಲ್ಲಿ ವಿದ್ಯುತ್ ತಂತಿಗಳ ಜಾಲವಿಲ್ಲದೆ ಮಂಗಳೂರು ನಗರವು ಮತ್ತಷ್ಟು ಸುಂದರವಾಗಿ ಕಂಗೊಳಿಸಲಿದೆ. ಈ ಮಹತ್ವದ ಕಾಮಗಾರಿಯು ಶೀಘ್ರ ದಲ್ಲೇ ಆರಂಭಗೊಳ್ಳಲಿದೆ ಎಂದು ಪದ್ಮರಾಜ್ ಆರ್. ಪೂಜಾರಿ ತಿಳಿಸಿದ್ದಾರೆ.

ಜಲವಿದ್ಯುತ್ ಉತ್ಪಾದನೆಯನ್ನು ಮೀರುತ್ತಿರುವ ಸೌರ ವಿದ್ಯುತ್

ಕಾಸರಗೋಡು: ರಾಜ್ಯದಲ್ಲಿ ಜಲವಿದ್ಯುತ್ ಉತ್ಪಾದನೆಯನ್ನು ಮೀರಿ ಸೌರ ವಿದ್ಯುತ್ ಉತ್ಪಾದನೆ ಮುಂದಕ್ಕೆ ಸಾಗತೊಡಗಿದೆ. ಕೇರಳದ ಅತೀ ದೊಡ್ಡ ಜಲವಿದ್ಯುತ್ ಯೋಜನೆಯಾದ ಇಡುಕ್ಕಿಯಲ್ಲಿ ಒಟ್ಟು 2196.36 ಮೆಘಾವಾಟ್‌ನಷ್ಟು ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯ ಹೊಂದಿದ್ದರೆ ಮಾರ್ಚ್ 31ರ ತನಕದ ಲೆಕ್ಕಾಚಾರ ಪ್ರಕಾರ ಸೌರ ವಿದ್ಯುತ್ ಯೋಜನೆಗಳ ಮೂಲಕ ಉತ್ಪಾದಿಸುವ ವಿದ್ಯುತ್ ಪ್ರಮಾಣ 2215.59 ಮೆಘಾ ಯೂನಿಟ್ ಗೇರಿದೆ. ಈ ವರೆಗೆ ಜಲವಿದ್ಯುತ್ ಯೋಜನೆಗೆ ಹೆಚ್ಚು ಪ್ರೋತ್ಸಾಹ ನೀಡುತ್ತಾ ಬಂದಿದ್ದ ವಿದ್ಯುನ್ಮಂಡಳಿ ಈಗ ಸೌರ ವಿದ್ಯುತ್ ಯೋಜನೆಗೂ ಪ್ರೋತ್ಸಾಹ ನೀಡತೊಡಗಿದೆ. ಅದರಂತೆ ಮನೆಗಳು ಮತ್ತು ಇತರ ಕಟ್ಟಡಗಳ ಮೇಲ್ಛಾವಣಿಗಳ ಮೇಲೆ ಸೋಲಾರ್ ಪ್ಯಾನೆಲ್‌ಗಳನ್ನು ಅಳವಡಿಸಿ ಹೆಚ್ಚು ಸೌರ ವಿದ್ಯುತ್ ಉತ್ಪಾದಿಸುವುದಕ್ಕೆ ವಿದ್ಯುನ್ಮಂಡಳಿ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದೆ. 2024-25ನೇ ಆರ್ಥಿಕ ವರ್ಷದಲ್ಲಿ ಹೊರಗಿನಿಂದ ವಿದ್ಯುತ್ ಖರೀದಿಸಲು ವಿದ್ಯುನ್ಮಂಡಳಿ 12749.65 ಕೋಟಿ ರೂ.ವ್ಯಯಿಸಿವೆ. ರಾಜ್ಯದಲ್ಲಿ ಸೌರ ವಿದ್ಯುತ್ ಸ್ಥಾವರಗಳನ್ನು ಇನ್ನಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಸ್ಥಾಪಿಸಿದಲ್ಲಿ ಅದು ಆಂತರಿಕ ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸಲು ಸಹಾಯಕವಾಗಲಿದೆ ಎಂದು ವಿದ್ಯುನ್ಮಂಡಳಿ ಹೇಳುತ್ತಿದೆ.

ಕಳೆದ ಬಾರಿ ಶೇ.35 ಫಲಿತಾಂಶ ಪಡೆದಿದ್ದ ಶಿರೂರು ಸರ್ಕಾರಿ ಪಿಯು ಕಾಲೇಜ್‌ಗೆ ಈ ಬಾರಿ ಶೇ. 94% ಫಲಿತಾಂಶ

ಪ್ರಾಂಶುಪಾಲೆ ಶ್ರಮಕ್ಕೆ ಶಾಸಕರ ಸಾಷ್ಟಾಂಗ ಪ್ರಣಾಮ

ಬೈಂದೂರು: ಭಾರತೀಯ ಸಂಸ್ಕೃತಿಯಲ್ಲಿ ಗುರುವಿಗೆ ದೇವರಿ ಗಿಂತಲೂ ಉನ್ನತ ಸ್ಥಾನವಿದೆ. ಇದಕ್ಕೆ ಸಾಕ್ಷಿಯೆಂಬಂತೆ, ಶಾಸಕ ಗುರುರಾಜ್ ಗಂಟಿಹೊಳೆ ಅವರು ಶಿರೂರು ಸರ್ಕಾರಿ ಪದವಿಪೂರ್ವ ಕಾಲೇಜಿನ ಅಭೂತಪೂರ್ವ ಯಶಸ್ಸಿನ ರೂವಾರಿಯಾದ ಪ್ರಾಂಶುಪಾಲೆ ಜಯಂತಿ ಟೀಚರ್ ಅವರ ಕಾಲಿಗೆ ಬಿದ್ದು ನಮಸ್ಕರಿಸಿ ಭಾವುಕರಾಗಿ ಕಣ್ಣೀರಿಟ್ಟ ದೃಶ್ಯ ನೆರೆದಿದ್ದವರ ಕಣ್ಣಾಲಿಗಳನ್ನು ಒದ್ದೆಯಾಗಿಸಿತು. ಇದು ಕೇವಲ ಫಲಿತಾಂಶದ ಸಂಭ್ರಮ ವಾಗಿರಲಿಲ್ಲ; ಬದಲಾಗಿ ಗುರು-ಶಿಷ್ಯ ಪರಂಪರೆಯ ಶ್ರಮಕ್ಕೆ ಸಿಕ್ಕ ಗೌರವದ ಪರಾಕಾಷ್ಠೆಯಾಗಿತ್ತು.

ಕಳೆದ ವರ್ಷ ಕೇವಲ ಶೇ.35ರಷ್ಟು ಎಸ್ಎಸ್ಎಲ್‌ಸಿ ಫಲಿತಾಂಶ ಪಡೆದು ಇಡೀ ಕ್ಷೇತ್ರದ ಶೈಕ್ಷಣಿಕ ಹಿನ್ನಡೆಗೆ ಕಾರಣವಾಗಿದ್ದ ಶಿರೂರು ಸರ್ಕಾರಿ ಪದವಿ ಪೂರ್ವ ಕಾಲೇಜು ಈ ಬಾರಿ ಶೇ. 94% ಫಲಿತಾಂಶ ದಾಖಲಿಸುವ ಮೂಲಕ ಪವಾಡವನ್ನೇ ಸೃಷ್ಟಿಸಿದೆ. ಸೋತಾಗ ಕೈಹಿಡಿದು ನಡೆಸುವವರು ಮತ್ತು ತಪ್ಪು ಮಾಡಿದಾಗ ತಿದ್ದಿ ಬುದ್ಧಿ ಹೇಳುವವರು ನಿಜವಾದ ಮಾರ್ಗದರ್ಶಕರು ಎಂಬುದಕ್ಕೆ ಈ ಘಟನೆ ಜ್ವಲಂತ ಉದಾಹರಣೆ.

ಅಂದು ಗರ್ಜಿಸಿದ್ದ ಶಾಸಕರು ಈಗ ಭಾವುಕ



ಕಳೆದ ವರ್ಷ ಎಸ್ಸೆಸ್ಸೆಲ್ಸಿ ಫಲಿತಾಂಶ ಕುಸಿದಾಗ ಶಾಸಕ ಗುರುರಾಜ್ ಗಂಟಿಹೊಳೆ ಅವರು ಶಾಲಾ ಪ್ರಾಂಶುಪಾಲರನ್ನು ಹಾಗೂ ಶಿಕ್ಷಕರನ್ನು ಕಟು ಮಾತುಗಳಿಂದ ತರಾಟೆಗೆ ತೆಗೆದುಕೊಂಡಿದ್ದರು. ಕ್ಷೇತ್ರದ ಶೈಕ್ಷಣಿಕ ಗುಣಮಟ್ಟ ಕುಸಿಯಬಾರದೆಂಬ ಕಳಕಳಿಯಿಂದ ಅಂದು ಅವರು ಆಡಿದ್ದ ಮಾತುಗಳು ಇಂದು ಮುತ್ತುಗಳಾಗಿವೆ. ಅಂದು ಕಠಿಣವಾಗಿದ್ದ ಶಾಸಕರು, ಇಂದು ಶಿಕ್ಷಕರ ತ್ಯಾಗ ಮತ್ತು ಶ್ರಮವನ್ನು ಕಂಡು ವೇದಿಕೆಯಲ್ಲೇ ಭಾವುಕರಾಗಿ, ಅವರ ಚರಣಗಳಿಗೆ ಶಿರಬಾಗುವ ಮೂಲಕ ನೈತಿಕ ನಾಯಕತ್ವದ ಹೊಸ ಆಯಾಮವನ್ನು ತೋರಿದರು. ಈ ಯಶಸ್ಸಿನ ಹಿಂದೆ ಪ್ರಾಂಶುಪಾಲೆ ಜಯಂತಿ ಟೀಚರ್ ಅವರ ಅಪ್ರತಿಮ ತ್ಯಾಗವಿದೆ. ಶಾಲೆಯ ಫಲಿತಾಂಶ ಸುಧಾರಿಸಲೇಬೇಕೆಂಬ ಛಲ ತೊಟ್ಟ ಅವರು, ಸ್ವಂತ ಮನೆ ಮಠವನ್ನು ಬಿಟ್ಟು ಶಾಲೆಯ ಹತ್ತಿರವೇ ಬಾಡಿಗೆ ಮನೆ ಮಾಡಿಕೊಂಡಿದ್ದರು. ಹಗಲಿರುಳು ಎನ್ನದೆ ಮಕ್ಕಳಿಗೆ ವಿಶೇಷ ತರಗತಿಗಳನ್ನು ನಡೆಸಿ, ಪ್ರತಿಯೊಬ್ಬ ವಿದ್ಯಾರ್ಥಿಯನ್ನೂ ತನ್ನ ಸ್ವಂತ ಮಗನಂತೆ ಪ್ರೀತಿಯಿಂದ ಸಾಕಿ ಸಲಹಿದ್ದಕ್ಕೆ ಇಂದು ಶೇ.94 ರಿಸಲ್ಟ್ ಬಂದಿದೆ.

ಟೀಕೆಗಳೇ ಯಶಸ್ಸಿನ ಮೆಟ್ಟಿಲು

ಅಂದು ನಾನು ತರಾಟೆಗೆ ತೆಗೆದುಕೊಂಡಿದ್ದರ ಉದ್ದೇಶ ಇಂದಿನ ಈ ಬದಲಾವಣೆಯಾಗಿತ್ತು. ಜಯಂತಿ ಟೀಚರ್ ಮತ್ತು ತಂಡ ಆ ಸವಾಲನ್ನು ಗೆದ್ದಿದೆ ಎಂದು ಶಾಸಕ ಗಂಟಿಹೊಳೆ ಅಭಿಮಾನದಿಂದ ನುಡಿದರು. ಶಾಸಕರ ಈ ಕಾಳಜಿಗೆ ಸ್ಪಂದಿಸಿದ ಜಯಂತಿ ಟೀಚರ್ ಕೂಡ ಭಾವುಕರಾಗಿ ಕಣ್ಣೀರಿಟ್ಟರು. ಶಾಲೆ ಮತ್ತು ಜನಪ್ರತಿನಿಧಿಗಳು ಒಂದು ಕುಟುಂಬದಂತೆ ಕೆಲಸ ಮಾಡಿದರೆ ಏನು ಬೇಕಾದರೂ ಸಾಧಿಸಬಹುದು ಎಂಬುದನ್ನು ಇವರು ಸಾಬೀತುಪಡಿಸಿದ್ದಾರೆ. ಒಟ್ಟಿನಲ್ಲಿ ಬೈಗುಳವನ್ನೇ ಸವಾಲಾಗಿ ಸ್ವೀಕರಿಸಿದ ಶಿಕ್ಷಕರು ಹಾಗೂ ಶಾಲೆಯನ್ನು ತನ್ನ ಕುಟುಂಬವೆಂದು ಭಾವಿಸಿದ ಶಾಸಕರ ಕಳಕಳಿಯಿಂದಾಗಿ ಶಿರೂರು ಶಾಲೆ ಇಂದು ಯಶಸ್ಸಿನ ಶಿಖರವೇರಿದೆ. ವ್ಯವಸ್ಥೆಯನ್ನು ದೂಷಿಸುವವರ ಮಧ್ಯೆ, ವ್ಯವಸ್ಥೆಯನ್ನು ತಿದ್ದುವವರು ಮತ್ತು ಅದಕ್ಕೆ ಜೀವಕೊಡುವವರು ಒಂದಾದರೆ, ಸರ್ಕಾರಿ ಶಾಲೆಗಳೂ ಕೂಡ ಸುವರ್ಣ ಅಕ್ಷರಗಳಲ್ಲಿ ಇತಿಹಾಸ ಬರೆಯಬಲ್ಲವು. ಈ ಯಶಸ್ಸಿನ ಕಥೆ ರಾಜ್ಯದ ಪ್ರತಿಯೊಂದು ಸರ್ಕಾರಿ ಶಾಲೆಗೆ ದಾರಿದೀಪವಾಗಲಿ.

ಅಸಾಧ್ಯವಾದದ್ದು ಸಾಧ್ಯವಾಯಿತು

ಕೇವಲ ಪಾಠ ಮಾಡುವವರು ಶಿಕ್ಷಕರಾದರೆ, ಮಕ್ಕಳ ಭವಿಷ್ಯಕ್ಕಾಗಿ ತನ್ನ ಬದುಕನ್ನೇ ಮೀಸಲಿಡುವವರು ಗುರು ಎನಿಸಿಕೊಳ್ಳುತ್ತಾರೆ. ಜಯಂತಿ ಟೀಚರ್ ಅವರ ಈ ಹಗಲಿರುಳ ಶ್ರಮ ಬೈಂದೂರು ಕ್ಷೇತ್ರದ ಹೆಮ್ಮೆ. ಗೆದ್ದಾಗ ಸಂಭ್ರಮಿಸುವುದು ಲೋಕರೂಢಿ, ಆದರೆ ಸೋತಾಗ ಎಬ್ಬಿಸಿ ನಿಲ್ಲಿಸುವುದು ದೈವಗುಣ. ನನ್ನ ಕಾಳಜಿಯ ಬೈಗುಳ ಮತ್ತು ಶಿಕ್ಷಕಿಯ ಅಚಲ ಪರಿಶ್ರಮ ಈ ಎರಡೂ ಸಂಗಮಿಸಿದಾಗ ಅಸಾಧ್ಯವಾದದ್ದು ಸಾಧ್ಯವಾಯಿತು

■ ಗುರುರಾಜ ಗಂಟಿಹೊಳೆ, ಶಾಸಕರು ಬೈಂದೂರು

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಸೋಮವಾರ 27, ಏಪ್ರಿಲ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU

ಪಡುಬಿದ್ರಿಯಲ್ಲಿ ಮನಸೆಳೆಯಿತು ಟ್ಯಾಬ್ಲೋ, ತಾಲೀಮು, ಕುಣಿತ ಭಜನೆಗಳ ಸಹಿತದ ಮೆರವಣಿಗೆ!



ಪಡುಬಿದ್ರಿಯ ಇತಿಹಾಸ ಪ್ರಸಿದ್ಧ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಳದ ಬ್ರಹ್ಮಕಲಶೋತ್ಸವದ ಪೂರ್ವಭಾವಿಯಾಗಿ ಭಾನುವಾರ ಬೃಹತ್ ಹಸಿರು ಹೊರೆಕಾಣಿಕೆ ಮೆರವಣಿಗೆ ನಡೆಯಿತು. ಡೋಲು, ಕಾಪು ಮಾರಿಯಮ್ಮ ಟ್ಯಾಬ್ಲೋ, ಕೊಂಬು, ಕಹಳೆ, ವಯೋಲಿನ್ ವಾದನ, ತೈಯಂ, ಬಿರುದಾವಳಿ, ಗಣಪತಿ, ಆಂಜನೇಯ ಟ್ಯಾಬ್ಲೋ, ತಾಲೀಮು, ಕುಣಿತ ಭಜನೆ ತಂಡಗಳು ಮೆರವಣಿಗೆಯ ಮೆರುಗು ಹೆಚ್ಚಿಸಿದವು.

ಸೀಮೆಎಣ್ಣೆಯ ಬೆಲೆಯಲ್ಲಿ ದಿಢೀರ್ ಏರಿಕೆ

ದಡದ ಕಡೆಗೆ ದೋಣಿ

ಸಂಕಷ್ಟದಲ್ಲಿ ಮೀನುಗಾರಿಕಾ ವಲಯ

ಕಾಸರಗೋಡು: ಒಂದೆಡೆ ತೀವ್ರಗೊಂಡ ಬೇಸಿಗೆ ಬಿಸಿಲಿಗೆ ಕಡಲಿನಲ್ಲಿ ಮತ್ಸ್ಯಕ್ಷಾಮ ಕಾಡುತ್ತಿದ್ದರೆ ಇನ್ನೊಂದೆಡೆ ಸೀಮೆಎಣ್ಣೆ ಬೆಲೆಯಲ್ಲಿ ದಿಢೀರ್ ಏರಿಕೆ ಮೀನುಗಾರಿಕಾ ವಲಯವನ್ನು ಅಕ್ಷರಶಃ ಹೈರಾಣಾಗಿಸಿದೆ.

ಬೆಲೆಯಲ್ಲಿ ಶೇಕಡಾ 50ಕ್ಕೂ ಅಧಿಕ ಏರಿಕೆ

ಇತ್ತೀಚೆಗೆ ಸೀಮೆಎಣ್ಣೆ ಬೆಲೆಯಲ್ಲಿ ದಿಢೀರ್ ಏರಿಕೆಯಾಗಿದೆ. ಶೇಕಡಾ 50ಕ್ಕೂ ಹೆಚ್ಚು ಬೆಲೆಯಲ್ಲಿ ಏರಿಕೆಯಾದ ಹಿನ್ನೆಲೆಯಲ್ಲಿ ಇದೀಗ ಮೀನುಗಾರಿಕೆಗೆ ತೆರಳಿರುವ ಹೆಚ್ಚಿನ ದೋಣಿ ಒಂದೊಂದಾಗಿ ದಡ ಸೇರಿವೆ. »ಪುಟ 6

ಪ್ರಾತಿನಿಧಿಕ ಚಿತ್ರ



ಎಲ್‌ಪಿಜಿ ಸಿಲಿಂಡರ್‌ಗೂ ಮೀನುಗಾರರ ಪರದಾಟ

ಮೀನು ಕಾರ್ಮಿಕರಿಗೆ ಅಡುಗೆ ಅನಿಲ ಕೊರತೆಯೂ ಸಮಸ್ಯೆಯಾಗುತ್ತಿದೆ. ದಿನಗಟ್ಟಲೆ ಸಮುದ್ರದಲ್ಲಿದ್ದು ಮೀನುಗಾರಿಕೆ ನಡೆಸಬೇಕಾದ ದೋಣಿಗಳಲ್ಲಿ ಅಡುಗೆಗೆ ವಾಣಿಜ್ಯ ಅನಿಲ ಸಿಲಿಂಡರ್ ಬಳಸುತ್ತಾರೆ. ಈಗ ವಾಣಿಜ್ಯ ಅವಶ್ಯಕತೆಗಿರುವ ಸಿಲಿಂಡರ್‌ಗಳು ಲಭಿಸದಿರುವುದು ಸಮಸ್ಯೆಯಾಗುತ್ತಿದೆ.

ಆಂಧ್ರಕ್ಕೆ ತೆರಳುತ್ತಿದ್ದ ವೇಳೆ ಅವಘಡ

ಚಾರ್ಮಾಡಿ ಘಾಟ್‌ನ ತಿರುವಿನಲ್ಲಿ ಬಸ್ ಪಲ್ಟಿ

20ಕ್ಕೂ ಅಧಿಕ ಮಂದಿಗೆ ಗಾಯ

ಬೆಳ್ತಂಗಡಿ: ತಾಲೂಕಿನ ಚಾರ್ಮಾಡಿ ಘಾಟಿಯ ಮೂರನೇ ತಿರುವಿನಲ್ಲಿ ಭಾನುವಾರ ಖಾಸಗಿ ಬಸ್ಸೊಂದು ಪಲ್ಟಿಯಾಗಿದ್ದು, ಈ ಘಟನೆಯಲ್ಲಿ 20ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ.

ಧರ್ಮಸ್ಥಳದಿಂದ ಆಂಧ್ರಪ್ರದೇಶಕ್ಕೆ

ಧರ್ಮಸ್ಥಳದಿಂದ ಆಂಧ್ರಪ್ರದೇಶದ ಕಡೆಗೆ ಪ್ರಯಾಣಿಸುತ್ತಿದ್ದ ಬಸ್, ಚಾರ್ಮಾಡಿ ಘಾಟಿ ತಿರುವಿನಲ್ಲಿ ನಿಯಂತ್ರಣ ತಪ್ಪಿ ಮಗುಚಿ ಬಿದ್ದಿದೆ. ಬಸ್ಸಿನಲ್ಲಿದ್ದ ಪ್ರಯಾಣಿಕರೆಲ್ಲರೂ ಆಂಧ್ರಪ್ರದೇಶ ಮೂಲದವರು ಎಂದು ಪ್ರಾಥಮಿಕ ಮಾಹಿತಿಗಳಿಂದ ತಿಳಿದುಬಂದಿದೆ. »ಪುಟ 6



ವಿವಿಧ ಆಸ್ಪತ್ರೆಗಳಿಗೆ ದಾಖಲು

ಗಾಯಾಳುಗಳನ್ನು ಕಕ್ಕಿಂಜೆಯ ಕೃಷ್ಣ ಆಸ್ಪತ್ರೆ ಹಾಗೂ ಬೆಳ್ತಂಗಡಿಯ ವಿವಿಧ ಆಸ್ಪತ್ರೆಗಳಿಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.

ಇಂದಿನ ಹವಾಮಾನ

ದಕ್ಷಿಣ ಕನ್ನಡ	ಉಡುಪಿ
34° 27°	33° 28°

ಸುತ್ತಮುತ್ತ

ಇಂದು ಬಿಜೆಪಿ ಪ್ರತಿಭಟನೆ

ಪುತ್ತೂರು: ಭಾರತೀಯ ಜನತಾ ಪಾರ್ಟಿ ಪುತ್ತೂರು ವಿಧಾನಸಭಾ ಕ್ಷೇತ್ರದ ವತಿಯಿಂದ ನಾರಿ ಶಕ್ತಿವಂದನ್ ಅಧಿನಿಯಮ ಜಾರಿ ಮಾಡಲು ವಿರೋಧ ವ್ಯಕ್ತಮಾಡಿದ ಕಾಂಗ್ರೆಸ್ ನೇತೃತ್ವದ ವಿಪಕ್ಷಗಳ ಮಹಿಳಾ ವಿರೋಧಿ ಧೋರಣೆಯನ್ನು ಖಂಡಿಸಿ ಬೃಹತ್ ಪ್ರತಿಭಟನೆಯನ್ನು ಏ. 27ರಂದು ಬೆಳಗ್ಗೆ 10.30ಕ್ಕೆ ನಗರದ ಮಿನಿ ವಿಧಾನಸೌಧದ ಮುಂಭಾಗದ ಅಮರ್ ಜವಾನ್ ಸ್ಮಾರಕ ಬಳಿ ಆಯೋಜಿಸಲಾಗಿದೆ.

ಬೇಂಕ್ಯ ಶ್ರೀಜುಮಾದಿ ಬಂಟ ದೈವಸ್ಥಾನದ ನೇಮ



ಬಂಟ್ವಾಳ: ಸಜೀಪ ಮಾಗಣೆ ಬೇಂಕ್ಯ ಶ್ರೀಜುಮಾದಿ ಬಂಟ ದೈವಸ್ಥಾನದ ವರ್ಷಾವಧಿ ನೇಮ ಜರಗಿತು. ಸಜೀಪ ಮಾಗಣೆತಂತ್ರಿ ಎಂ. ಸುಬ್ರಹ್ಮಣ್ಯ ಭಟ್, ಸಜೀಪಗುತ್ತು ಗಡಿ ಪ್ರಧಾನರಾದ ಮುತ್ತಣ್ಣ ಶೆಟ್ಟಿ ಯಾನೆ ಕಾಳ ಶೆಟ್ಟಿ ಪ್ರಮುಖರಾದ ಕಸ್ತೂರಿ ಐತಾಳ. ಕಲ್ಲಾಡಿ ಗೋಳಿ, ಶಿವಪ್ರಸಾದ್ ಶೆಟ್ಟಿ ದೇವಿಪ್ರಸಾದ ಪೂಂಜ, ಪ್ರೀತಮ್ ಪೂಂಜ, ಹರೀಶ್ ಪೆರ್ಗಡೆ, ಚಂದ್ರಶೇಖರ್ ನಾಯಕ, ಜೀವನ್ ಆಳ್ವ ಮೊದಲಾದವರಿದ್ದರು.

ಪಾಟಾಳಿ ಯಾನೆ ಗಾಣಿಗ ಸಮಾಜ ಸೇವಾ ಸಂಘ ಮಹಾಸಭೆ ಆಯ್ಕೆ



ಸುಳ್ಯ: ಪಾಟಾಳಿ ಯಾನೆ ಗಾಣಿಗ ಸಮಾಜ ಸೇವಾ ಸಂಘ ಮಹಾಸಭೆ ಹಾಗೂ ಆರೋಗ್ಯ ನಿಧಿ ಮತ್ತು ವಿಧ್ಯಾನಿಧಿ ಹಸ್ತಾಂತರ ವರ್ತಕರ ಭವನ ಸುಳ್ಯದಲ್ಲಿ ಭಾನುವಾರ ನಡೆಯಿತು. ಸಂಘದ ಅಧ್ಯಕ್ಷ ವೆಂಕಟ್ರಮಣ ಬೇರ್ಪಡ್ಕ ಅಧ್ಯಕ್ಷತೆಯಲ್ಲಿ ನಡೆದ ಮಹಾಸಭೆ ನಡೆಯಿತು. ಸಭೆಯಲ್ಲಿ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆಯು ನಡೆದು ನೂತನ ಸಮಿತಿ ಅಧ್ಯಕ್ಷರಾಗಿ ಸುರೇಶ್ ಕರ್ಲಪ್ಪಾಡಿ ಹಾಗೂ ಕಾರ್ಯದರ್ಶಿ ಗೋಪಾಲಕೃಷ್ಣ ಮೊರಂಗಲ್ಲು, ಕೋಶಾಧಿಕಾರಿಯಾಗಿ ರಾಧಾಕೃಷ್ಣ ಬೇರ್ಪಡ್ಕ,ಉಪಾಧ್ಯಕ್ಷರಾಗಿ ಹೇಮಾವತಿ ದಬ್ಬಡ್ಕ,ಜೊತೆ ಕಾರ್ಯದರ್ಶಿ ನಿತೇಶ್ ಎರ್ಮೆಟ್ಟಿ ಸಂಘಟನಾ ಕಾರ್ಯದರ್ಶಿಯಾಗಿ ವಿಜಯ ಎರ್ಮೆಟ್ಟಿ ಹಾಗೂ ನಿರ್ದೇಶಕರುಗಳಾಗಿ ವೆಂಕಟ್ರಮಣ ಬೇರ್ಪಡ್ಕ,ಸಚಿತ್ ಕಲ್ಮಡ್ಕ ,ಸತ್ಯವತಿ, ಚಂದ್ರಶೇಖರ ಉದ್ದಂತಡ್ಕ, ಸಂಜಯ್ ನೆಟ್ಟಾರು, ಸೌಮ್ಯ ರಮೇಶ್ ಇರಂತಮಜಲು, ಕೇಶವ ಮೊರಂಗಲ್ಲು, ವಿಶಾಲಾಕ್ಷಿ ಮೊರಂಗಲ್ಲು ಹಾಗೂ ಪ್ರವೀಣ್ ಕುಮಾರ್ ಆಯ್ಕೆಯಾದರು.ಆಂತರಿಕ ಲೆಕ್ಕಪರಿಶೋಧಕರಾಗಿ ಮಹಾಲಿಂಗನ್ ಭಾಜರ್ ತೊಟ್ಟಿ ಹಾಗೂ ಕಾನೂನು ಸಲಹೆಗಾರರಾಗಿ ವಕೀಲರಾದ ನಾರಾಯಣ ಕೆ ಆಯ್ಕೆಯಾದರು. ಕಾರ್ಯದರ್ಶಿ ಸಂಜಯ್ ನೆಟ್ಟಾರು ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

ಉದ್ಯೋಗಾವಕಾಶ: ನೇರ ಸಂದರ್ಶನ

ಮಂಗಳೂರು: ವಿ.ಆರ್.ಎನ್ ಇನ್ಫೋಟೆಕ್ ಖಾಸಗಿ ಕಂಪೆನಿಯ ವತಿಯಿಂದ ಮಂಗಳೂರಿನಲ್ಲಿ ಖಾಲಿಯಿರುವ ಕಸ್ಟಮರ್ ಸಪೋರ್ಟ್ ಎಕ್ಸಿಕ್ಯೂಟಿವ್ ಅಥವಾ ಟೆಲಿಕಾಲರ್ ಹುದ್ದೆಗಳಿಗೆ ನೇರ ಸಂದರ್ಶನವನ್ನು ಏ.28 ರಂದು ಪಡೀಲ್ ಜಿಲ್ಲಾಧಿಕಾರಿ ಕಚೇರಿಯಲ್ಲಿರುವ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಬೆಳಿಗ್ಗೆ 10 ರಿಂದ ಮಧ್ಯಾಹ್ನ 1–30 ರವರೆಗೆ ಆಯೋಜಿಸಲಾಗಿದೆ. ನೇರ ಸಂದರ್ಶನದಲ್ಲಿ ಪದವಿ ಹೊಂದಿರುವ ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳು ಸ್ವ-ವಿವರವುಳ್ಳ ಬಯೋಡೇಟಾದೊಂದಿಗೆ ನೇರ ಸಂದರ್ಶನದಲ್ಲಿ ಭಾಗವಹಿಸಬಹುದು ಎಂದು ಜಿಲ್ಲಾ ಉದ್ಯೋಗಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಗರಿಕ ಸಲಹಾ ಸಮಿತಿ, ಎಂಆರ್‌ಪಿಎಲ್, ಇತರ ಸಂಸ್ಥೆಗಳ ಸಹಭಾಗಿತ್ವ | ಸ್ವಚ್ಛ ಅಭಿಯಾನಕ್ಕೆ ಚಾಲನೆ

ಸ್ವಚ್ಛತೆಗೆ ಮಾದರಿಯಾಗಲಿದೆ ಸುರತ್ಕಲ್ ಬುಧವಾರದ ಸಂತೆ





ಸುರತ್ಕಲ್: ಸುರತ್ಕಲ್ ಬುಧವಾರದ ಸಂತೆ ಇದೀಗ ಸ್ವಚ್ಛತೆಯತ್ತ ದೊಡ್ಡ ಹೆಜ್ಜೆ ಇಡುತ್ತಿದೆ. ನಾಡಿನ ವಿವಿಧ ಭಾಗಗಳಿಂದ ವ್ಯಾಪಾರಿಗಳು ಆಗಮಿಸುವ ಈ ಸಂತೆಯನ್ನು 'ತ್ಯಾಜ್ಯ ಮುಕ್ತ ಮಾದರಿ ಸಂತೆ"ಯನ್ನಾಗಿ ರೂಪುಗೊಳಿಸುವ ಮಹತ್ವಾಕಾಂಕ್ಷಿ ಯೋಜನೆಯೊಂದಿಗೆ 'ಸ್ವಚ್ಛ ಸುರತ್ಕಲ್ ಅಭಿಯಾನ 2026'ಕ್ಕೆ ಚಾಲನೆ ನೀಡಲಾಗಿದೆ.

ಸುರತ್ಕಲ್ ನಾಗರಿಕ ಸಲಹಾ ಸಮಿತಿ, ಎಂಆರ್‌ಪಿಎಲ್ ಸಂಸ್ಥೆ ಹಾಗೂ 50ಕ್ಕೂ ಹೆಚ್ಚು ಸ್ಥಳೀಯ ಸಂಘಟನೆಗಳ ಸಹಭಾಗಿತ್ವದಲ್ಲಿ, ಮಂಗಳೂರು ಮಹಾನಗರ ಪಾಲಿಕೆಯ ಸಹಯೋಗದೊಂದಿಗೆ ಈ ಅಭಿಯಾನ ರೂಪುಗೊಂಡಿದೆ. ಈಗಾಗಲೇ ಮೂರು ಹಂತಗಳಲ್ಲಿ ಯಶಸ್ವಿಯಾಗಿ ನಡೆದ ಸ್ವಚ್ಛತಾ ಕಾರ್ಯಕ್ರಮಗಳ ಮುಂದುವರಿದ ಭಾಗವಾಗಿ ನಾಲ್ಕನೇ ಅಭಿಯಾನ ಪ್ರಾರಂಭಗೊಂಡಿರುವುದು ಗಮನಾರ್ಹ.

ಏ.15ರ ಬಿಸು ಹಬ್ಬದಂದು ಆರಂಭಗೊಂಡ ಈ ಅಭಿಯಾನವು ಎರಡು ಹಂತಗಳಲ್ಲಿ ನಡೆಯುತ್ತಿದ್ದು ಸಂತೆ ದಿನದ ಬೆಳಿಗ್ಗೆ 8.30ಕ್ಕೆ ಸ್ವಚ್ಛತಾ ಸ್ವಯಂಸೇವಕರು ವ್ಯಾಪಾರಿಗಳನ್ನು ವೈಯಕ್ತಿಕವಾಗಿ ಭೇಟಿ ಮಾಡಿ ನಿಷೇಧಿತ ಪ್ಲಾಸ್ಟಿಕ್ ಬಳಕೆಯನ್ನು ತಡೆಗಟ್ಟುವ ಕುರಿತು ಜಾಗೃತಿ ಮೂಡಿಸುತ್ತಿದ್ದಾರೆ. ತ್ಯಾಜ್ಯವನ್ನು ಸಂತೆ ಮುಗಿದ ನಂತರ ಪಾಲಿಕೆಯ ಸ್ವಚ್ಛತಾ ವಾಹನಗಳಿಗೆ ಒಪ್ಪಿಸಲು ಸೂಚನೆ ನೀಡಲಾಗುತ್ತಿದೆ.

ಇದೇ ವೇಳೆ ರಾತ್ರಿ 8.30ಕ್ಕೆ ಮತ್ತೆ ಪರಿಶೀಲನೆ ನಡೆಸಿ ಸೂಚನೆಗಳನ್ನು ಪಾಲಿಸಿರುವುದನ್ನು ಖಚಿತಪಡಿಸಿಕೊಳ್ಳಲಾಗುತ್ತಿದೆ. ನಿಯಮ ಉಲ್ಲಂಘಿಸಿದವರ ವಿರುದ್ಧ ದಂಡ ವಿಧಿಸುವ ಎಚ್ಚರಿಕೆಯನ್ನೂ ಅಧಿಕಾರಿಗಳು ನೀಡಿದ್ದಾರೆ.

ಅಧಿಕಾರಿಗಳು ಕಾರ್ಯಪ್ರವೃತ್ತ

ಮಂಗಳೂರು ಮಹಾನಗರ ಪಾಲಿಕೆಯ ಸುರತ್ಕಲ್ ವಲಯ ಆಯುಕ್ತ ಬಾಲಚಂದ್ರ ಅವರ ನಿರ್ದೇಶನದಂತೆ ಹಿರಿಯ ಆರೋಗ್ಯ ನಿರೀಕ್ಷಕ ಸಂಜಯ್ ಹಾಗೂ ಆರೋಗ್ಯ ವಿಭಾಗದ ಸಿಬ್ಬಂದಿ ತಂಡ ಕಾರ್ಯಪ್ರವೃತ್ತರಾಗಿದ್ದು, ಸ್ವಚ್ಛತಾ ಜಾಗೃತಿ ಮೂಡಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದಾರೆ.

ಭಾನುವಾರ ನಡೆದ ಕಾರ್ಯಕ್ರಮದಲ್ಲಿ ನಾಗರಿಕ ಸಲಹಾ ಸಮಿತಿಯ ಕಾರ್ಯದರ್ಶಿ ಸತೀಶ್ ಸದಾನಂದ್ ಸ್ವಚ್ಛತೆಯ ಮಹತ್ವವನ್ನು ವಿವರಿಸಿದರು. ಈ ಸಂದರ್ಭದಲ್ಲಿ ರಮೇಶ್ ಆಳಪೆ, ಓಂ ಪ್ರಕಾಶ್, ಭೋಜ ಶೆಟ್ಟಿಗಾರ್, ಗೀತಾ ಶರತ್, ಪೂವಪ್ಪ ನಾಯಕ್, ಕೃಷ್ಣಮೂರ್ತಿ, ಪ್ರಕಾಶ್ ಪುತ್ತೂರು ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಅಭಿಯಾನ ಯಶಸ್ವಿಯಾಗಲಿದೆ

ಸ್ಥಳೀಯರ ಸಹಕಾರದೊಂದಿಗೆ ಈ ಅಭಿಯಾನ ಯಶಸ್ವಿಯಾಗಲಿದೆ ಎಂದು ಸಂಘಟಕ ಸತೀಶ್ ಸದಾನಂದ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಸುರತ್ಕಲ್ ಸಂತೆಯನ್ನು ರಾಜ್ಯ ಮಟ್ಟದ ಮಾದರಿ ಸ್ವಚ್ಛ ಸಂತೆಯನ್ನಾಗಿಸಲು ಬದ್ಧರಾಗಿದ್ದೇವೆ ಎಂದು ಅವರು ಹೇಳಿದ್ದಾರೆ.

ಆರೋಗ್ಯ ವಿಭಾಗದ ಹಿರಿಯ ಆರೋಗ್ಯ ನಿರೀಕ್ಷಕ ಸಂಜಯ್, ಆರೋಗ್ಯ ಮೇಲ್ವಿಚಾರಕರಾದ ಚೇತನ್, ಪ್ರವೀಣ್, ಸುಭಾಷ್, ಶ್ರವಣ್ ಹಾಗೂ ಸಮುದಾಯ ಸಂಘಟಕರಾದ ಭಾಗ್ಯವತಿ, ಜಾನೆಟ್ ಲೋಬೊ, ನಯನ, ಶಾಲಿನಿ, ಗೀತಾ, ವಿಶಾಲಾಕ್ಷಿ, ದಿವ್ಯ, ಜೀವಿತ ಇವರು ಅಭಿಯಾನದಲ್ಲಿ ಸಕ್ರಿಯವಾಗಿ ಪಾಲ್ಗೊಂಡರು.

ನಿಡ್ವಾಳ ಕ್ಷೇತ್ರದಲ್ಲಿ ಬ್ರಹ್ಮಕಲಶೋತ್ಸವ ಧಾರ್ಮಿಕ ಸಭೆ | ಶಾಸಕಿ ಮುರುಳ್ಯ ಆಶಯ

ಸಂಸ್ಕಾರ ಅನುಷ್ಠಾನದಿಂದ ಬದುಕು ಪಾವನ



ಸುಬ್ರಹ್ಮಣ್ಯ: ಧಾರ್ಮಿಕ ಶ್ರದ್ಧೆಯು ಸರ್ವರಿಗೂ ಅತ್ಯಗತ್ಯ.ಸಂಸ್ಕಾರ ಮತ್ತು ಸಂಸ್ಕೃತಿಗಳ ಅನುಷ್ಠಾನವು ಬದುಕಿಗೆ ಪಾವನತೆಯನ್ನು ನೀಡುತ್ತದೆ ಎಂದು ಶಾಸಕಿ ಭಾಗೀರಥಿ ಮುರುಳ್ಯ ಹೇಳಿದರು. ನಿಡ್ವಾಳ ಮಹಾವಿಷ್ಣು ದೇವಳದ ಪುನಃಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶೋತ್ಸವದಕಾರ್ಯಕ್ರಮಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು. ಸಭಾಧ್ಯಕ್ಷತೆಯನ್ನು ಪಂಬೆತ್ತಾಡಿ ಪ್ರಾ.ಕೃ.ಪ.ಸ.ಸಂಘದ ಅಧ್ಯಕ್ಷ ಮಹೇಶ್ ಕುಮಾರ್ ಕರಿಕಳ ವಹಿಸಿದ್ದರು. ಕ್ಷೇತ್ರದ ವಾಸ್ತು ಶಿಲ್ಪಿ ಎಸ್.ಎಮ್ ಪ್ರಸಾದ್ ಮುನಿಯಂಗಳ ಧಾರ್ಮಿಕ ಉಪನ್ಯಾಸ ನೀಡಿದರು. ಚೊಕ್ಕಾಡಿ ಶ್ರೀ ರಾಮ ದೇವಾಲಯ ಆಡಳಿತ ಮಂಡಳಿ ಅಧ್ಯಕ್ಷ ಮಹೇಶ್ ಭಟ್ ಚೂಂತಾರು, ಮಾಡಬಾಗಿಲು ಕಂಬಳ ಆನಂದ ಗೌಡ ಟ್ರಸ್ಟ್ ಅಧ್ಯಕ್ಷ ಬಿ.ಎಂ. ಆನಂದ ಗೌಡ ಕಂಬಳ, ಪುತ್ತೂರು ಸಮರ್ಪಣಾ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಕೆ. ರಾಜೇಂದ್ರ ಪ್ರಸಾದ್ ಶೆಟ್ಟಿ ಎಣ್ಮೂರು ಗುತ್ತು, ಪಂಜ ಪ್ರಾ.ಕೃ.ಪ.ಸ.ಸಂಘದ ಅಧ್ಯಕ್ಷ ಚಂದ್ರಶೇಖರ ಶಾಸ್ತ್ರಿ, ಪಂಜ ಶ್ರೀ ಸದಾಶಿವ ಪರಿವಾರ ಪಂಚಲಿಂಗೇಶ್ವರ ದೇಗಲುದ ದೇವಸ್ಥಾನದ ಸಮಿತಿ ಅಧ್ಯಕ್ಷ ಡಾ.ದೇವಿ ಪ್ರಸಾದ್ ಕಾನತ್ತೂರ್, ಶ್ರೀ ಪೈಂದೋಡಿ ಸುಬ್ರಾಯ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕೇಶವ ಗೌಡ ಕುದ್ವ, ಉದ್ಯಮಿ ವೀಣಾ ಕರುಣಾಕರ ಕೇರ್ಪಡ, ನಿವೃತ್ತ ಪ್ರಾಂಶುಪಾಲ ಚಿದಾನಂದ ಬಾಳಿಲ, ನಿವೃತ್ತ ಶಿಕ್ಷಕ ಸೀತಾರಾಮ ಗೌಡ ಕುದ್ವ ಮುಖ್ಯ ಅತಿಥಿಗಳಾಗಿದ್ದರು.

ಸನ್ಮಾನ

ಇದೇ ವೇಳೆ ದೇಗುಲದ ವಾಸ್ತು ಶಿಲ್ಪಿ ಎಸ್.ಎಂ. ಪ್ರಸಾದ್ ಮುನಿಯಂಗಳ, ಶ್ರೀ ಚಾಮುಂಡಿ ದೈವದ ಚಾವಡಿಯ ಸ್ಥಳದಾನಿ ಸಿ.ಎಂ. ಅಬ್ದುಲ್ ರಹಿಮಾನ್ ಐವತ್ತೊಕ್ಲು ಮತ್ತು ಸಹೋದರರ ಪರವಾಗಿ ಸಿ.ಎಂ. ರಫೀಕ್ ಐವತ್ತೊಕ್ಲು, ಗುಳಿಗ ದೈವದ ಕಟ್ಟೆಯ ಸೇವಾರ್ಥಿಗಳು ಮತ್ತು ಸ್ಥಳದಾನಿ ಜಗನ್ನಾಥ ರೈ ಕುಳಾಯಿತ್ತೋಡಿ, ದೇಗುಲದ ಕಾಷ್ಠ ಶಿಲ್ಪಿ ವಸಂತ ಆಚಾರ್ಯ ಅವರನ್ನು ಸನ್ಮಾನಿಸಲಾಯಿತು.

ದೇವಳದ ಆಡಳಿತ ಟ್ರಸ್ಟ್ ಅಧ್ಯಕ್ಷ ಚಂದ್ರಪ್ರಕಾಶ್ ಕಂಬಳ, ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ನೇಮಿರಾಜ ಪಲ್ಲೋಡಿ, ಪ್ರಧಾನ ಕಾರ್ಯದರ್ಶಿ ಕುಸುಮಾಧರ ಕರಿಮಜಲು, ಕಾರ್ಯದರ್ಶಿ ಅಶೋಕ್ ಮೇಲ್ಪಾಡಿ,ಪ್ರಧಾನಸಂಚಾಲಕರಾಮಕೃಷ್ಣ ಸಾಯಿಕೃಪಾ , ದೇವಳದ ಆಡಳಿತ ಟ್ರಸ್ಟ್ ಕಾರ್ಯದರ್ಶಿ ಗುರುಪ್ರಸಾದ್ ತೋಟ, ಬ್ರಹ್ಮಕಲಶೋತ್ಸವ ಸಮಿತಿ ಕೋಶಾಧಿಕಾರಿ ಕುಶಾಲಪ್ಪ ಮೇಲ್ಪಾಡಿ, ದೇವಳದ ಪ್ರಧಾನ ಅರ್ಚಕ ಅಕ್ಷಯ್ ಭಟ್ ಬರ್ಲಾಯಬೆಟ್ಟು, ವೇದಿಕೆಯಲ್ಲಿ ಉಪಸ್ಥಿತರಿದ್ದರು. ಪ್ರಣತ ಜೋಗಿಬೆಟ್ಟು ಪ್ರಾರ್ಥಿಸಿದರು. ನೇಮಿರಾಜ ಪಲ್ಲೋಡಿ ಸ್ವಾಗತಿಸಿದರು. ಸೋಮಶೇಖರ ನೇರಳ ನಿರೂಪಿಸಿದರು.ಗುರುಪ್ರಸಾದ್ ತೋಟ ವಂದಿಸಿದರು.

ಸುರತ್ಕಲ್ ಎನ್‌ಐಟಿಕೆಯಲ್ಲಿ ಪ್ರತಿಷ್ಠಿತ ರಿಂಗ್ ಪ್ರೆಸೆಂಟೇಶನ್

2,100 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ



ಮಂಗಳೂರು: ಸುರತ್ಕಲ್ ರಾಷ್ಟ್ರೀಯ ತಂತ್ರಜ್ಞಾನಸಂಸ್ಥೆ(ಎನ್‌ಐಟಿಕೆ)ಯಪ್ರತಿಷ್ಠಿತ ರಿಂಗ್ ಪ್ರೆಸೆಂಟೇಶನ್ ನೆರವೇರಿತು.

2,100 ಪದವಿ ಪಡೆದ ವಿದ್ಯಾರ್ಥಿಗಳು ಎನ್‌ಐಟಿಕೆ ಲಾಂಛನ ಮತ್ತು ಅವರ ಪದವಿ ವರ್ಷವನ್ನು ಕೆತ್ತಿದ ಬೆಳ್ಳಿ ಉಂಗುರಗಳನ್ನು ಸ್ವೀಕರಿಸಿದರು. ಇದು ಸಂಸ್ಥೆಯೊಂದಿಗಿನ ಅವರ ಜೀವಮಾನದ ಸಂಪರ್ಕದ ಸಂಕೇತವಾಗಿದೆ.

ಈ ಪರಂಪರೆಯನ್ನು ಐವತ್ತು ವರ್ಷಗಳ ಹಿಂದೆ ಪ್ರೊ. ಎ.ಎಸ್. ಅಡ್ಕೆ ಪ್ರಾರಂಭಿಸಿದ್ದರು. ಭಾರತದಲ್ಲಿ ವಿಶಿಷ್ಟವಾದ ಈ ಸಂಪ್ರದಾಯದಲ್ಲಿ, ಪ್ರತಿ ವಿದ್ಯಾರ್ಥಿಗೆ ಅಧ್ಯಾಪಕರು ಸ್ವತಃ ಉಂಗುರವನ್ನು ನೀಡಿ, ಅವರ ಭವಿಷ್ಯದ ಯಶಸ್ಸಿಗೆ ಶುಭಾಶಯ ಕೋರುತ್ತಾರೆ. ಬಿಟೆಕ್ (988), ಒ.ಟಿಜಿಟಿಬಿ (708), ಎಂಸಿಎ (67), ಎಂಬಿಎ (75), ಎಂಎಸ್ಸಿ ಭೌತಶಾಸ್ತ್ರ (34), ಎಂಎಸ್ಸಿ ರಸಾಯನಶಾಸ್ತ್ರ (34), ಬಿಎಂಟೆಕ್ ಸಂಶೋಧನೆ (40), ಮತ್ತು ಪಿಎಚ್ ಡಿ (154) ತಮ್ಮಉಂಗುರಗಳನ್ನುಪಡೆದಿದ್ದಾರೆ. ಬೆಂಗಳೂರಿನ ವನ್ಯಜೀವಿ ಅಧ್ಯಯನ ಕೇಂದ್ರದ ನಿವೃತ್ತ ನಿರ್ದೇಶಕ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಡಾ. ಕೋಟ ಉಲ್ಲಾಸ್ ಕಾರಂತ್ ಮುಖ್ಯ ಅತಿಥಿಯಾಗಿ ಮಾತನಾಡಿ, ವನ್ಯಜೀವಿ ವಿಜ್ಞಾನವನ್ನು ಎಂಜಿನಿಯರಿಂಗ್ ಮತ್ತು ಮೆಡಿಸಿನ್‌ಗೆ ಹೋಲಿಸಿ, ಸಂರಕ್ಷಣಾ ಜೀವಶಾಸ್ತ್ರವು ಮೂಲಭೂತ ತತ್ವಗಳನ್ನು ಬಳಸಿ ನೈಜ ಜಗತ್ತಿನ ಸಮಸ್ಯೆಗಳನ್ನು ಪರಿಹರಿಸುವ ಅನ್ವಯಿಕ ವಿಜ್ಞಾನವೆಂದು ವಿವರಿಸಿದರು. ಅವರು ವನ್ಯಜೀವಿ ಸಂರಕ್ಷಣೆಯ ಮೂರು ಪ್ರಮುಖ ಅಂಶಗಳನ್ನು ವಿವರಿಸಿದರು. ಅವರು ಇಕೋ-ಮಾಡರ್ನಿಸಂ ಮತ್ತು ಸಸ್ಟೇನಬಲ್ ಲ್ಯಾಂಡ್‌ಸ್ಕೇಪ್ ಎಂಬ ಆಧುನಿಕ ಸಂರಕ್ಷಣಾ ಪರಿಕಲ್ಪನೆಗಳ ಕುರಿತು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

ಎನ್‌ಐಟಿಕೆ ನಿರ್ದೇಶಕ ಪ್ರೊ. ಬಿ. ರವಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಬಿ. ರವಿ, ಎನ್‌ಐಟಿಕೆ ಸಮುದ್ರ ತೀರ ಮತ್ತು ಪಶ್ಚಿಮ ಘಟ್ಟಗಳ ನಡುವೆ ನೆಲೆಸಿರುವುದರಿಂದ ವಿದ್ಯಾರ್ಥಿಗಳಿಗೆ ಪ್ರಕೃತಿಯೊಂದಿಗೆ ಸಂಪರ್ಕದಲ್ಲಿರಲು ದೊರೆಯುವ ವಿಶೇಷ ಅವಕಾಶಗಳನ್ನು ಉಲ್ಲೇಖಿಸಿದರು. ನಾಲ್ಕು-ಐದು ದಶಕಗಳ ಹಿಂದಿನ ಹಳೆಯ ವಿದ್ಯಾರ್ಥಿಗಳು ಇನ್ನೂ ತಮ್ಮ ಉಂಗುರಗಳನ್ನು ಹೆಮ್ಮೆಯಿಂದ ಧರಿಸುತ್ತಾರೆ ಎಂಬುದನ್ನು ಅವರು ಹಂಚಿಕೊಂಡರು. ಪದವಿ ಪಡೆದ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿ, ಉದ್ಯೋಗ, ಉನ್ನತ ಶಿಕ್ಷಣ, ಸಂಶೋಧನೆ, ಉದ್ಯಮಶೀಲತೆ ಅಥವಾ ತಮ್ಮ ಆಸಕ್ತಿಯ ಮಾರ್ಗವನ್ನು ಅನುಸರಿಸುವುದರಲ್ಲಿ ಯಶಸ್ಸು ಸಾಧಿಸಲು ಶುಭಾಶಯ ಕೋರಿದರು.

ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿ ಕಲ್ಯಾಣ ವಿಭಾಗದ ಡೀನ್ ಪ್ರೊ. ಗೋವಿಂದ ರಾಜ್ ಮಂಡೇಲಾ, ಶೈಕ್ಷಣಿಕ ವಿಭಾಗದ ಡೀನ್ ಪ್ರೊ. ದ್ವಾರಕೀಶ್; ಎನ್‌ಐಟಿಕೆ ಅಸೋಸಿಯೇಟ್ ಡೀನ್‌ಗಳು, ಕಾರ್ಯನಿರ್ವಾಹಕರು, ಅಧ್ಯಾಪಕರು ಮತ್ತು ಸಿಬ್ಬಂದಿ ಸೇರಿದಂತೆ ಗೌರವಾನ್ವಿತ ಗಣ್ಯರು ಉಪಸ್ಥಿತರಿದ್ದರು.

ಪಾಣಾಜೆ ಸುಬೋಧ ಪ್ರೌಢಶಾಲೆ ಎಸೆಸೆಲ್ಸಿ ಟಾಪರ್ಸ್‌ಗಳಿಗೆ ಸನ್ಮಾನ



ನಿಡ್ಪಳ್ಳಿ: ಎಸೆಸೆಲ್ಸಿ ಪರೀಕ್ಷೆಯಲ್ಲಿ ಶೇಕಡಾ 90 ಕ್ಕಿಂತ ಹೆಚ್ಚು ಅಂಕ ಗಳಿಸಿದ ಪಾಣಾಜೆ ಸುಬೋಧ ಪ್ರೌಢಶಾಲೆಯ ಐವರು ವಿದ್ಯಾರ್ಥಿಗಳನ್ನು ಮೋಳ್ಯ ಎಜುಕೇಶನಲ್ ಎಕ್ಸಲೆನ್ಸ್ ಫೌಂಡೇಶನ್ ವತಿಯಿಂದ ಸನ್ಮಾನಿಸಿ ಅಭಿನಂದಿಸಲಾಯಿತು.

ದೀಪಕ್ ಪಿ.ಎಸ್. (97.76), ಲಾವಣ್ಯ (93.12), ಪ್ರಜೇಶ್ (92.12), ಫಾತಿಮತ್ ಮುಫಿದ (91.52) ಹಾಗೂ ದೀಪ್ತಿಲಕ್ಷ್ಮಿ (90.04) ಅವರನ್ನು ಗೌರವಿಸಲಾಯಿತು.

ಫೌಂಡೇಶನ್ ವತಿಯಿಂದ ಆಗಮಿಸಿದ ರಫೀಕ್ ಮಾಸ್ಟರ್ ಮಕ್ಕಳನ್ನು ಉದ್ದೇಶಿಸಿ ಪ್ರೇರಣಾದಾಯಕ ಮಾತುಗಳನ್ನಾಡಿದರು. ಶಾಲಾ ಸಂಚಾಲಕ ಗಿಳಿಯಾಲು ಮಹಾಬಲೇಶ್ವರ ಭಟ್ ಅಧ್ಯಕ್ಷತೆ ವಹಿಸಿದ್ದರು. ಉದ್ಯಮಿ ಮೊಹಮ್ಮದ್ ಹಾಜಿ ಕುಕ್ಕುವಳ್ಳಿ, ಆಡಳಿತ ಮಂಡಳಿ ಸದಸ್ಯರು, ಶಾಲಾ ಶಿಕ್ಷಕರು ವಿದ್ಯಾರ್ಥಿಗಳು ಮತ್ತು ಹೆತ್ತವರು, ಹಿರಿಯ ವಿದ್ಯಾರ್ಥಿ ಹರೀಶ್ ನೆಲ್ಲಿತ್ತಿಮಾರು ಇದ್ದರು. ಮುಖ್ಯ ಶಿಕ್ಷಕಿ ನಿರ್ಮಲ ಕೆ. ವಂದಿಸಿದರು. ದೈಹಿಕ ಶಿಕ್ಷಣ ಶಿಕ್ಷಕ ಸುಧೀರ್ ಎಸ್.ಪಿ. ನಿರ್ವಹಿಸಿದರು.

ಸತತ 4 ವರ್ಷದಿಂದ ಶೇ. 100 ಫಲಿತಾಂಶ

ಸತತವಾಗಿ 4 ವರ್ಷಗಳಿಂದ 100 ಶೇ. ಫಲಿತಾಂಶ ಪಡೆಯುತ್ತಿರುವ ಈ ಗ್ರಾಮೀಣ ವಿದ್ಯಾ ಸಂಸ್ಥೆಯ ಸಂಚಾಲಕ ಮಹಾಬಲೇಶ್ವರ ಭಟ್ ಗಿಳಿಯಾಲು ಹಾಗೂ ಶಾಲಾ ಮುಖ್ಯ ಶಿಕ್ಷಕಿ ನಿರ್ಮಲ ಕೆ. ಅವರನ್ನು ಕೂಡ ಶಾಲಾ ಪರವಾಗಿ ಸನ್ಮಾನಿಸಿ ಅಭಿನಂದಿಸಲಾಯಿತು.

ಮಾಣಿ: ರಿಕ್ಷಾ ಚಾಲಕರು, ನಾಗರಿಕರ ಜೊತೆ ಪೊಲೀಸರ ಸಮಾಲೋಚನೆ



ಬಂಟ್ವಾಳ: ಮಾಣಿ ಜಂಕ್ಷನ್‌ನಲ್ಲಿ ಆಗಾಗ ನಡೆಯುತ್ತಿರುವ ಅಪಘಾತಗಳ ಹಿನ್ನೆಲೆಯಲ್ಲಿ ವಿಟ್ಲ ಪಿಎಸ್ ಐ ರಾಮಕೃಷ್ಣ ಅವರು ಸ್ಥಳೀಯ ರಿಕ್ಷಾ ಚಾಲಕರು ಹಾಗೂ ಸಾರ್ವ ಜನಿಕರೊಂದಿಗೆ ಸಮಾಲೋಚನೆ ಸಭೆ ನಡೆಸಿದರು.

ಈ ವೇಳೆ ಮಾತನಾಡಿದ ಅವರು ಅಪರಾಧಗಳನ್ನು ತಡೆಯಲು ಸಾರ್ವಜನಿಕರು ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕು, ಯಾವುದೇ ಘಟನೆಗಳು ನಡೆದಾಗ ಇಲ್ಲವೇ ಅನುಮಾನಾಸ್ಪದ ವ್ಯಕ್ತಿಗಳು ಕಂಡುಬಂದಲ್ಲಿ ತಕ್ಷಣ ತಿಳಿಸಬೇಕು.ಅಪಘಾತಗಳು ನಡೆದಾಗ ಅಪಘಾತಕ್ಕೆ ಒಳಗಾದವರಿಗೆ ಸಹಕಾರ ನೀಡಬೇಕು.ಪ್ರಥಮ ಚಿಕಿತ್ಸೆಯನ್ನು ಒದಗಿಸುವುದರೊಂದಿಗೆ ಠಾಣೆಗೆ ಮಾಹಿತಿ ನೀಡಬೇಕೆಂದರು.

ಲೈಂಗಿಕ ಕಿರುಕುಳ ಅಥವಾ ಮಹಿಳೆಯರ ಮೇಲಿನ ದೌರ್ಜನ್ಯದಂತಹ ಪ್ರಕರಣಗಳು ಕಂಡುಬಂದಲ್ಲಿ ತಿಳಿಸಬೇಕು.

ಬೀಟ್ ಪೊಲೀಸ್ ಚಿದಾನಂದ ಪಿ.ಎಸ್. ಮತ್ತು ಮಾಣಿ ಗ್ರಾಮದ ನಾಗರಿಕರು ಭಾಗವಹಿಸಿದ್ದರು.

112ಗೆ ಕರೆ ಮಾಡಿ

ಮನೆಯಿಂದ ಹೊರಗೆ ಹೋಗಬೇಕಾದ ಸಂದರ್ಭಗಳಲ್ಲಿ ಚಿನ್ನಾಭರಣಗಳನ್ನು ಬ್ಯಾಂಕ್ ಲಾಕರಿನಲ್ಲಿಡುವುದು ಒಳ್ಳೆಯದು. ಸೈಬರ್ ಕ್ರೈಮ್ ಗಳು ನಡೆದಲ್ಲಿ ಕೂಡಲೇ ತಿಳಿಸಬೇಕೆಂದರು. 112 ಸಂಖ್ಯೆಗೂ ಕರೆಮಾಡಬಹುದು ಎಂದು ಎಂದು ಪಿಎಸ್‌ಐ ರಾಮಕೃಷ್ಣ ತಿಳಿಸಿದರು.

ಕರಾವಳಿ ನೃತ್ಯ ಪರಿಷತ್‌ನಿಂದ ವಿಶೇಷ ನೃತ್ಯ ಕಾರ್ಯಾಗಾರ




ಮಂಗಳೂರು: ಶಿಕ್ಷಣದಲ್ಲಿ ಕಲೆಗಳು ಕೇವಲ ಒಂದು ವಿಷಯವಲ್ಲ, ಬದಲಿಗೆ ಕಲಿಕೆಯ ಅನುಭವಗಳನ್ನು ಶ್ರೀಮಂತಗೊಳಿಸುವ ಸಾಧನವಾಗಿದೆ ಎಂದು ಶಾರದಾ ವಿದ್ಯಾ ಸಂಸ್ಥೆಗಳ ಅಧ್ಯಕ್ಷ ಡಾ. ಎಂ.ಬಿ. ಪುರಾಣಿಕ್ ನುಡಿದರು.

ಅವರು ಕರ್ನಾಟಕ ಕರಾವಳಿ ನೃತ್ಯ ಕಲಾ ಪರಿಷತ್ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರ ಸಹಾಯಿಗದಲ್ಲಿ ಹಮ್ಮಿಕೊಂಡಿರುವ ಭರತನಾಟ್ಯದ ವಿದ್ವತ್ ಪರೀಕ್ಷೆಗಳಿಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಶಾರದಾ ವಿದ್ಯಾಲಯದಲ್ಲಿ ನಡೆದ 'ಭಾವಗಳ ಭಾಷೆ ರಸೋತ್ಪತ್ತಿ ಮತ್ತು ನಾಯಿಕನಾಯಕ' ಎಂಬ ವಿಷಯದಲ್ಲಿ ವಿಶೇಷ ನೃತ್ಯ ಕಾರ್ಯಾಗಾರ ಉದ್ಘಾಟಿಸಿ ಮಾತಾಡಿದರು. ಪರಿಷತ್ ಅಧ್ಯಕ್ಷೆ ವಿದುಷಿ ರಾಜಶ್ರೀ ಉಳ್ಳಾಲ್ ಪ್ರಸ್ತುತ ಪರಿಷತ್ ಹಮ್ಮಿಕೊಳ್ಳುವ ಕಾರ್ಯಕ್ರಮಗಳ ಬಗ್ಗೆ ಮಾತನಾಡಿದರು. ಉಪಾಧ್ಯಕ್ಷ ವಿದ್ವಾನ್ ಚಂದ್ರಶೇಖರ ನಾವಡ, ಕಾರ್ಯದರ್ಶಿ ವಿದುಷಿ ಶಾರದಾಮಣಿ ಶೇಖರ್, ಮಾಜಿ ಅಧ್ಯಕ್ಷ ವಿದ್ವಾನ್ ಯು.ಕೆ ಪ್ರವೀಣ್, ಕೋಶಾಧಿಕಾರಿ ವಿದ್ವಾನ್ ಸುರೇಶ್ ಅತ್ತಾವರ್ ಇದ್ದರು. ಗುರು ಶ್ರೀಧರ ಹೊಳ್ಳ ಸ್ವಾಗತಿಸಿ ನಿರೂಪಿಸಿದರು. ಸಂಪನ್ಮೂಲ ವ್ಯಕ್ತಿಯಾಗಿ ಶಿರಸಿಯ ಪ್ರಸಿದ್ಧ ನೃತ್ಯ ಕಲಾವಿದೆ ಡಾ. ಸಹನಾ ಭಟ್ ಕಾರ್ಯಾಗಾರ ನಡೆಸಿಕೊಟ್ಟರು. ಮಂಗಳೂರಿನ ಸುಮಾರು 130 ಕ್ಕೂ ನೃತ್ಯ ಕಲಾವಿದರು ಭಾಗವಹಿಸಿದ್ದರು.

ಪುತ್ತೂರು ಬಲ್ನಾಡು ದಂಡನಾಯಕ ಉಳ್ಳಾಲ್ತಿ ದೈವಸ್ಥಾನದಲ್ಲಿ ನೇಮದ ಪೂರ್ವಭಾವಿ ಸಭೆ | ಶಾಸಕ ಅಶೋಕ್ ಕುಮಾರ್ ರೈ ಹೇಳಿಕೆ

ಈ ಬಾರಿ ಅತ್ಯಂತ ವ್ಯವಸ್ಥಿತ, ವಿಜೃಂಭಣೆಯಿಂದ ನೆರವೇರಲಿದೆ ಬಲ್ನಾಡು ದೈವಸ್ಥಾನದ ನೇಮ



ಪುತ್ತೂರು: ಬಲ್ನಾಡು ಶ್ರೀ ದಂಡನಾಯಕ ಉಳ್ಳಾಲ್ತಿ ದೈವಸ್ಥಾನದಲ್ಲಿ ಈ ವರ್ಷದ ನೇಮ ಅತ್ಯಂತ ವ್ಯವಸ್ಥಿತವಾಗಿ ಹಾಗೂ ವಿಜೃಂಭಣೆಯಿಂದ ನಡೆಸಲಾಗುವುದು ಎಂದು ಶಾಸಕ ಅಶೋಕ್ ಕುಮಾರ್ ರೈ ಹೇಳಿದರು.

ಏ.28ರಂದು ನಡೆಯಲಿರುವ ವರ್ಷಾವಧಿ ನೇಮ ನಡಾವಳಿಯ ಅಂಗವಾಗಿ ಬಲ್ನಾಡು ದೈವಸ್ಥಾನದಲ್ಲಿ ಶಾಸಕರು ಭಕ್ತಾದಿಗಳ ಸಭೆ ನಡೆಸಿದರು.

ದಂಡನಾಯಕ ಉಳ್ಳಾಲ್ತಿ ನೇಮೋತ್ಸವದಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಭಾಗವಹಿಸಲಿದ್ದಾರೆ. ಪ್ರಸಾದ ವಿತರಣೆ, ಅನ್ನಸಂತರ್ಪಣೆ ವಿತರಣೆಯಲ್ಲಿ ಯಾವುದೇ ರೀತಿಯ ಸಮಸ್ಯೆ ಉಂಟಾಗಬಾರದು. ಎಲ್ಲರೂ ಯಾವುದೇ ತೊಂದರೆ ಇಲ್ಲದೆ ಪ್ರಸಾದ ಸ್ವೀಕರಿಸುವ ವ್ಯವಸ್ಥೆಯಾಗಬೇಕು. ಬಿಸಿಲಿನ ಪ್ರಭಾವ ಬಹಳಷ್ಟಿದ್ದು ಶಾಮಿಯಾನ, ಫ್ಯಾನ್, ಕುಡಿಯುವ ನೀರಿನ ಸೌಲಭ್ಯ ಹಾಗೂ ಸ್ವಚ್ಛತೆಗೆ ಆದ್ಯತೆ ನೀಡಲಾಗುವುದು.

ಅನ್ನಸಂತರ್ಪಣೆ ವಿತರಣೆಯನ್ನು ವ್ಯವಸ್ಥಿತವಾಗಿ ಮಾಡುವ ನಿಟ್ಟಿನಲ್ಲಿ ಹೆಚ್ಚುವರಿ ಕೌಂಟರ್‌ಗಳನ್ನು ಮಾಡಲಾಗುವುದು. ಪ್ರಸಾದ ವಿತರಣೆಯಲ್ಲಿ ಬದಲಾವಣೆ ಮಾಡಲಾಗುವುದು. ಹೆಚ್ಚುವರಿ ಜನರನ್ನು ನಿಯೋಜಿಸಲಾಗುವುದು. ನೇಮೋತ್ಸವದಲ್ಲಿ ಭಕ್ತರಿಗೆ ಪ್ರಸಾದ ಹಾಗೂ ಅನ್ನಪ್ರಸಾದ ನೀಡಿ ಕಳುಹಿಸಿಕೊಡುವ ಜವಾಬ್ದಾರಿ ಬಲ್ನಾಡು ಗ್ರಾಮದವರಿಗಿದೆ ಎಂದರು.

ಜಿಲ್ಲಾ ಧಾರ್ಮಿಕ ಪರಿಷತ್ ಸದಸ್ಯ ಶಿವನಾಥ ರೈ ಮೇಗಿನಗುತ್ತು, ಉತ್ಸವ ಸಮಿತಿ ಅಧ್ಯಕ್ಷ ತಿಮ್ಮಪ್ಪಗೌಡ ಬ್ರಹ್ಮರಕೋಡಿ, ಆಡಳಿತಾಧಿಕಾರಿ ದೇವಪ್ಪ ಪಿ.ಆರ್., ಕಚೇರಿ ವ್ಯವಸ್ಥಾಪಕ ಚಂದ್ರಶೇಖರ ಭಟ್ ಹಾಗೂ ಅರ್ಚಕ ರವಿಚಂದ್ರ ನೆಲ್ಲಿತ್ತಾಯ, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ರವಿಕೃಷ್ಣ ಕಲ್ಲಾಜೆ ವೇದಿಕೆಯಲ್ಲಿದ್ದರು. ಉತ್ಸವ ಸಮಿತಿ ಕಾರ್ಯದರ್ಶಿ ನವೀನ್ ಕರ್ಕೇರ ರಾಂಬೈಲ್ ಸ್ವಾಗತಿಸಿ, ಸದಸ್ಯ ಕಿರಣ್ ಬಸಂತಕೋಡಿ ವಂದಿಸಿದರು. ಉತ್ಸವ ಸಮಿತಿ ಸದಸ್ಯರು, ವ್ಯವಸ್ಥಾಪನಾ ಸಮಿತಿ ಮಾಜಿ ಸದಸ್ಯರು ಹಾಗೂ ಭಕ್ತಾದಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ಭಟ್ಟಿ ವಿನಾಯಕ ದೇಗುಲ ಜೀರ್ಣೋದ್ಧಾರ

ನೇಮ ಆದ ಬಳಿಕ ಪ್ರಶ್ನಾ ಚಿಂತನೆ ನಡೆಸಿ ಬಲ್ನಾಡು ಭಟ್ಟಿ ವಿನಾಯಕ ದೇವಸ್ಥಾನದ ಜೀರ್ಣೋದ್ಧಾರ ನಡೆಸಿ ಬ್ರಹ್ಮಕಲಶ ನಡೆಸಲಾಗುವುದು. ಜೊತೆಯಲ್ಲಿ ದೈವಸ್ಥಾನದಲ್ಲಿ ಆಗಬೇಕಾದ ಬದಲಾವಣೆಗಳ ಬಗ್ಗೆ ಚಿಂತನೆ ನಡೆಸಲಾಗುವುದು. ಭಂಡಾರ ಬರುವ ರಸ್ತೆ ಕಾಂಕ್ರೀಟೀಕರಣ, ತಡೆಗೋಡೆ ನಿರ್ಮಾಣದ ಯೋಜನೆಯಿದೆ. ಜೀರ್ಣೋದ್ಧಾರದ ಕೆಲಸ ವ್ಯವಸ್ಥಿತವಾಗಿ ಮಾಡಲಾಗುವುದು.

● ಅಶೋಕ್ ಕುಮಾರ್ ರೈ, ಶಾಸಕರು ಪುತ್ತೂರು

ಮುಂಡ್ಯ ಹಾಕುವ ಕಾರ್ಯಕ್ರಮ

ಶ್ರೀ ದಂಡನಾಯಕ ಉಳ್ಳಾಲ್ತಿ ದೈವಸ್ಥಾನದಲ್ಲಿ ಏ.28ರಂದು ನಡೆಯಲಿರುವ ವರ್ಷಾವಧಿ ನೇಮ ನಡಾವಳಿಯ ಅಂಗವಾಗಿ ಏ.25ರಂದು ಮುಂಡ್ಯ ಹಾಕುವ ಕಾರ್ಯಕ್ರಮವು ಪೂರ್ವ ಸಂಪ್ರದಾಯದಂತೆ ನೆರವೇರಿತು. ನೇಮ ನಡಾವಳಿಗೆ ಗೊನೆ ಮುಹೂರ್ತ ನಡೆದು 4 ದಿನಗಳ ಬಳಿಕ ವಾಲಸರಿ ಗದ್ದೆಯಲ್ಲಿ ಮುಂಡ್ಯ ಹಾಕುವ ಮತ್ತು ಚೆಂಡು ಉರುಳಿಸುವ ಕಾರ್ಯಕ್ರಮದ ಮೂಲಕ ನೇಮ ನಡಾವಳಿಗೆ ಚಾಲನೆ ನೀಡಲಾಗುತ್ತದೆ.

ದೈವಸ್ಥಾನದ ಮೂಲ ಸ್ಥಾನದಲ್ಲಿ ಪ್ರಧಾನ ಅರ್ಚಕ ರವಿಚಂದ್ರ ನೆಲ್ಲಿತ್ತಾಯ ಅವರು ಪ್ರಾರ್ಥಿಸಿದ ಬಳಿಕ ಮಲರಾಯದೈವದದರ್ಶನಪಾತ್ರಿಯೊಂದಿಗೆಆಡಳಿತ ಮಂಡಳಿ ಹಾಗೂ ಊರ ಭಕ್ತಾದಿಗಳು ಸೇರಿಕೊಂಡು ವಾಲಸರಿ ಗದ್ದೆಗೆ ಹೋಗಿ ಅಲ್ಲಿ ಮುಂಡ್ಯ ಹಾಕಿ ಬಳಿಕ ಗದ್ದೆಗೆ ಚೆಂಡು ಉರುಳಿಸುವ ಕಾರ್ಯಕ್ರಮ ನಡೆಯಿತು. ಪ್ರಧಾನ ಅರ್ಚಕ ರವಿಚಂದ್ರ ನೆಲ್ಲಿತ್ತಾಯ ಗದ್ದೆಗೆ ಚೆಂಡನ್ನು ಉರುಳಿಸಿದರು. ಸಂಪ್ರದಾಯದಂತೆ ರವಿ ಬಲ್ನಾಡು ಅವರು ಗದ್ದೆಯುದ್ದಕ್ಕೂ ಚೆಂಡನ್ನು ಉರುಳಿಸಿಕೊಂಡು ಮೂರು ಸುತ್ತು ಬರುವ ಮೂಲಕ ನೇಮ ನಡಾವಳಿಗೆ ಚಾಲನೆ ನೀಡಲಾಯಿತು.

ಸುತ್ತಮುತ್ತ

ಮಳಲಿ ಸೂರ್ಯನಾರಾಯಣ ದೇವಳ ಜೀರ್ಣೋದ್ಧಾರದ ಮಹಿಳಾ ಸಮಿತಿ ರಚನೆ



ಕೈಕಂಬ: ಜೀರ್ಣೋದ್ಧಾರಗೊಳ್ಳುತ್ತಿರುವ ಪುರಾಣ ಪ್ರಸಿದ್ಧ ಮಳಲಿ (ಮಣೇಲ್) ದೇವರಗುಡ್ಡೆ ಶ್ರೀ ಸೂರ್ಯನಾರಾಯಣ ದೇವಸ್ಥಾನದ ಪುನರ್ ನಿರ್ಮಾಣ ಮತ್ತು ಧಾರ್ಮಿಕ ಕಾರ್ಯಗಳಲ್ಲಿ ಮಹಿಳೆಯರ ಪಾತ್ರ ಬಲಪಡಿಸುವ ನಿಟ್ಟಿನಲ್ಲಿ ಜೀರ್ಣೋದ್ಧಾರ ಸಮಿತಿಯ ಮಹಿಳಾ ಸಮಿತಿ ರಚಿಸಲಾಗಿದೆ. ಮಹಿಳಾ ಸಮಿತಿಯ ಪ್ರಧಾನ ಸಂಚಾಲಕರಾಗಿ ಶಾಲಿನಿ ವಿ. ರಾವ್ ಗಜಂತೋಡಿ ಆಯ್ಕೆಯಾಗಿದ್ದು, ಸುಜಾತಾ ರುಕ್ಮಯ ಕುಲಾಲ್, ಚಂಚಲಾಕ್ಷಿ ಕುಕ್ಕಟ್ಟೆ, ಪ್ರಭಾವತಿ ದೇವರಗುಡ್ಡೆ, ಕಲಾವತಿ ಪದ್ಮನಾಭ, ಪ್ರೇಮಾ ರಾಮಚಂದ್ರ, ಸೌಮ್ಯ ಮೋಹನ್, ನಾರಾಯಣಿ ಶೆಟ್ಟಿ ರಾಜೀವಿ ದೇಜಪ್ಪ, ಉಷಾ ತೆಕ್ಕಿಪಡ್ಪು ಮತ್ತು ರೇಖಾ ಮೊಗರು ಸಹ ಸಂಚಾಲಕರಾಗಿ ಆಯ್ಕೆಯಾಗಿದ್ದಾರೆ. ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷರಾದ ಶೇಖರ್ ಜೋಗಿ ಮಟ್ಟಿ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ಭಜನಾ ಕಾರ್ಯಕ್ರಮಗಳ ವ್ಯವಸ್ಥಿತ ನಿರ್ವಹಣೆಗಾಗಿ ಪ್ರತ್ಯೇಕ ಭಜನಾ ನಿರ್ವಹಣಾ ಸಮಿತಿ ಯನ್ನು ರಚಿಸಲು ನಿರ್ಧರಿಸಲಾಗಿದೆ. ಜೀರ್ಣೋದ್ಧಾರ ಸಮಿತಿಯ ಕಾರ್ಯಾಧ್ಯಕ್ಷ ಭಾಸ್ಕರ ಭಟ್ ಗಂಜಿಮಠ ಸಭೆಯಲ್ಲಿ ಉಪಸ್ಥಿತರಿದ್ದರು. ಪ್ರಧಾನ ಕಾರ್ಯದರ್ಶಿ ಶಿವರಾಜ್ ನಾರಳ ನಿರೂಪಿಸಿದರು. ಸಂಘಟನಾ ಕಾರ್ಯದರ್ಶಿ ಹರೀಶ್ ಮಟ್ಟಿ ವಂದಿಸಿದರು.

ನಾಳೆ ವಿದ್ಯುತ್ ವ್ಯತ್ಯಯ

ಬಂಟ್ವಾಳ: ಬಂಟ್ವಾಳ ಉಪಕೇಂದ್ರ ವ್ಯಾಪ್ತಿಯಲ್ಲಿ ಬರುವ ತುಂಬೆ, ಬಿ.ಸಿ.ರೋಡ್ ನಗರ ಪ್ರದೇಶ, ಕಳ್ಳಿಗೆ, ಫರಂಗಿಪೇಟೆ ಫೀಡರ್‌ಗಳಲ್ಲಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ತುರ್ತು ನಿರ್ವಹಣಾ ಕಾಮಗಾರಿಯ ಹಿನ್ನಲೆಯಲ್ಲಿ ಏ.28 ರಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬಂಟ್ವಾಳ ಮೆಸ್ಕಾಂ ಕಾರ್ಯನಿರ್ವಾಹಕ ಇಂಜಿನಿಯರ್ ಅವರ ಪ್ರಕಟಣೆ ತಿಳಿಸಿದೆ.


ಕೇರಳ ಎನ್‌ಜಿಒ ಸಂಘ ಜಿಲ್ಲಾ ಸಮ್ಮೇಳನ: ಪೂರ್ವಭಾವಿ ಜಿಲ್ಲಾ ಕೌನ್ಸಿಲ್ ಸಭೆ

ಕಾಸರಗೋಡು: ಕೇರಳ ಎನ್‌ಜಿಒ ಸಂಘದ 41ನೇ ಕಾಸರಗೋಡು ಜಿಲ್ಲಾ ಸಮ್ಮೇಳನದ ಪೂರ್ವಭಾವಿಯಾಗಿ ಜಿಲ್ಲಾ ಕೌನ್ಸಿಲ್ ಸಭೆಯು ಕರಂದಕ್ಕಾಡ್‌ನಲ್ಲಿರುವ ಎನ್‌ಜಿಒ ಸಂಘದ ಕಚೇರಿಯಲ್ಲಿ ಶನಿವಾರ ಸಂಜೆ ಜರಗಿತು. ಸಭೆಯನ್ನು ಉದ್ಘಾಟಿಸಿ ಎನ್‌ಜಿಒ ಸಂಘದ ಕೇರಳ ರಾಜ್ಯ ಎಕ್ಸಿಕ್ಯೂಟಿವ್ ಸಮಿತಿ ಸದಸ್ಯ ಪಿ.ಪೀತಾಂಬರನ್ ಮಾತನಾಡಿ, ರಾಜ್ಯ ಸರಕಾರಿ ನೌಕರರಿಗೆ ಹಾಗೂ ಪಿಂಚಣಿದಾರರಿಗೆ ಮತ್ತು ಅವರ ಆಶ್ರಿತರಿಗಾಗಿ ರಾಜ್ಯ ಸರಕಾರ ಜಾರಿಗೊಳಿಸಿದ ದ್ವಿತೀಯ ಹಂತದ ಮೆಡಿಸೆಪ್ ಆರೋಗ್ಯ ವಿಮಾ ಯೋಜನೆಗಳ ಕುರಿತು ವ್ಯಾಪಕ ದೂರುಗಳಿವೆ. ಆದ್ದರಿಂದ ಸರಕಾರ ಇದರಲ್ಲಿ ಕೂಡಲೇ ಹಸ್ತಕ್ಷೇಪ ನಡೆಸಿ ಎಲ್ಲಾ ಸದಸ್ಯರಿಗೂ ವಿಮಾ ಸಂರಕ್ಷಣೆ ಖಾತರಿಪಡಿಸಬೇಕೆಂದು ಸರಕಾರವನ್ನು ಒತ್ತಾಯಿಸಿದರು. 10 ಲಕ್ಷ ಸದಸ್ಯರಿಂದ ತಲಾ 687 ರೂ.ಗಳ ಕಡ್ಡಾಯ ಪ್ರೀಮಿಯಂನ್ನು ವಸೂಲಿ ಮಾಡುತ್ತಿದ್ದರೂ ಸದಸ್ಯರಿಗೆ ಯಾವುದೇ ಪ್ರಯೋಜನವಿಲ್ಲದ ವಿಮಾ ಯೋಜನೆಯಾಗಿ ಬದಲಾವಣೆಯಾಗಿದೆ ಎಂದು ಆರೋಪಿಸಿ ಅವರು ನೌಕರರನ್ನು ಮತ್ತು ಪಿಂಚಣಿದಾರರನ್ನು ವಂಚಿಸುವ ಸರಕಾರದ ಈ ಕ್ರಮವು ಖಂಡನಾರ್ಹವಾಗಿದೆ ಎಂದು ಹೇಳಿದರು. ಜಲ್ಲಾಧ್ಯಕ್ಷ ಕೆ.ರಂಜಿತ್ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿ ಪಿ.ಸಿ.ಸುನಿಲ್ ವಾರ್ಷಿಕ ವರದಿ ಹಾಗೂ ಜಿಲ್ಲಾ ಕೋಶಾಧಿಕಾರಿ ಕೆ.ರವಿಕುಮಾರ್ ಆಯವ್ಯಯವನ್ನು ಮಂಡಿಸಿದರು. ರಾಜ್ಯ ಸಮಿತಿ ಸದಸ್ಯ ವಿ.ಶ್ಯಾಮಪ್ರಸಾದ್, ಜಿಲ್ಲಾ ಜೊತೆ ಕಾರ್ಯದರ್ಶಿ ರಾಜೀವ್ ರಾಘವನ್, ಸಿವಿಲ್ ಸ್ಟೇಷನ್ ಬ್ರಾಂಚ್ ಅಧ್ಯಕ್ಷ ವಿ.ಕೆ.ಸಂತೋಷ್ ಮಾತನಾಡಿದರು.

ಕುಂದೂರುಮೊಟ್ಟೆ: ವಾರ್ಷಿಕ ಮಹೋತ್ಸವ ಸಂಪನ್ನ

ಸುಂಟಿಕೊಪ್ಪ: ಕೊಡಗರಹಳ್ಳಿಯ ಕುಂದೂರುಮೊಟ್ಟೆ ಚಾಮುಂಡೇಶ್ವರಿ ಸೇವಾ ಸಮಿತಿ ವತಿಯಿಂದ ಶ್ರೀ ಮಹಾವಿಷ್ಣು, ಶ್ರೀ ಚಾಮುಂಡೇಶ್ವರಿ, ರಕ್ತೇಶ್ವರಿ ಪರಿವಾರ ದೇವರುಗಳ 48 ನೇ ವಾರ್ಷಿಕ ಮಹೋತ್ಸವಕ್ಕೆ ವಿವಿಧ ಪೂಜೆ ಮತ್ತು ಧಾರ್ಮಿಕ ವಿಧಿ ವಿಧಾನಗಳೊಂದಿಗೆ ವಿದ್ಯುಕ್ತವಾಗಿ ನಡೆದು ಸಂಪನ್ನಗೊಂಡಿತು. ಏ.13ರಂದು ಸಂಜೆ ಶ್ರೀ ಮುನಿಶ್ವರ ಪೂಜೆಯೊಂದಿಗೆ ಜಾತ್ರಾ ಮಹೋತ್ಸವಕ್ಕೆ ಚಾಲನೆ ನೀಡಲಾಯಿತು. ಏ.22ರಂದು ಪೂರ್ವಾಹ್ನ ಅಜ್ಜಪ್ಪ ಕೋಲ, ವಿಷ್ಣುಮೂರ್ತಿ ಕೋಲ, ರಕ್ತೇಶ್ವರಿ ಹಾಗೂ ಚಾಮುಂಡೇಶ್ವರಿ ಕೋಲದೊಂದಿಗೆ ರಾತ್ರಿ 8 ಗಂಟೆಗೆ ಶ್ರೀದೇವಿ ನೇವೈದ್ಯದೊಂದಿಗೆ ವಾರ್ಷಿಕ ಜಾತ್ರಾ ಮಹೋತ್ಸವಕ್ಕೆ ತೆರೆ ಬಿದ್ದಿತು.

ಪ್ರಸಿದ್ಧ ಯುವ ಗಾಯಕ ರಾಹುಲ್ ವೆಳ್ಳಾಲ್‌ರಿಂದ ಸಂಗೀತ ಸಂಧ್ಯಾ



ಬದಿಯಡ್ಕ: ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದಲ್ಲಿ ಬ್ರಹ್ಮಕಲಶೋತ್ಸವದ ಶುಭಸಂದರ್ಭ 3ನೇ ದಿನದಂದು ಪ್ರಸಿದ್ಧ ಯುವ ಗಾಯಕ ರಾಹುಲ್ ವೆಳ್ಳಾಲ್ ಮತ್ತು ಬಳಗದವರು ಬೆಂಗಳೂರು ಇವರಿಂದ ಸಂಗೀತ ಸಂಧ್ಯಾ ಕಾರ್ಯಕ್ರಮ ಜನಮನ ಸೂರೆಗೊಂಡಿತು. ವಾತಾಪಿ ಗಣಪತಿಂ ಭಜೇ ಎಂದು ಗಣಪತಿಯ ಸ್ತುತಿಯೊಂದಿಗೆ ಗಾಯನ ಪ್ರಾರಂಭಿಸಲಾಯಿತು. ಕಿಕ್ಕಿರಿದು ಪ್ರೇಕ್ಷಕರು ಸೇರಿದ್ದರು. ಬಿ.ವಸಂತ ಪೈ ಬದಿಯಡ್ಕ ಅವರ ಮುತುವರ್ಜಿಯಲ್ಲಿ ಬ್ರಹ್ಮಕಲಶ ಸಮಿತಿ ನೇತೃತ್ವದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಸಾಕು ಪ್ರಾಣಿಗಳಿಗೆ, ಬೀದಿ ಶ್ವಾನಗಳಿಗೆ ಉಚಿತ ರೇಬಿಸ್ ಲಸಿಕಾ ಶಿಬಿರ ಉದ್ಘಾಟನೆ

ಪ್ರಾಣಿ-ಮಾನವ ನಡುವೆ ಸಮನ್ವಯತೆ ಅಗತ್ಯ: ಕ್ಯಾ.ಚೌಟ

ಉಳ್ಳಾಲ: ಪ್ರಾಣಿಗಳು ಮತ್ತು ಮಾನವರು ಜತೆಯಾಗಿ ಬದುಕಬೇಕೆನ್ನುವ ಮನಸ್ಥಿತಿಯನ್ನು ನಾವು ಬೆಳೆಸಿದಾಗ ಮಾತ್ರ ಪ್ರಕೃತಿಯಲ್ಲಿ ಸಮತೋಲನ ಸಾಧಿಸಲು ಸಾಧ್ಯವೆಂದು ಸಂಸದ ಕ್ಯಾ.ಬ್ರಿಜೇಶ್ ಚೌಟ ಅಭಿಪ್ರಾಯಪಟ್ಟರು.

ಕರ್ನಾಟಕ ಪಶುವೈದ್ಯಕೀಯ ಸಂಘ ದ.ಕ.ಜಿಲ್ಲಾ ಘಟಕ, ಫೀಡ್ ಅನಿಮಲ್ಸ್-ಸೇವ್ ಅನಿಮಲ್ಸ್ ಟ್ರಸ್ಟ್ ಮಂಗಳೂರು ಮತ್ತು ಅಸ್ತ್ರ ಗ್ರೂಪ್ ಇವರ ಸಂಯುಕ್ತ ಆಶ್ರಯದಲ್ಲಿ ನಂದಾ ದೀಪ ಸೇವಾ ಬಳಗ ಮಡ್ಯಾರ್ ಕೋಟೆಕಾರ್ ಇವರ ಸಹಕಾರದೊಂದಿಗೆ ವಿಶ್ವ ಪಶು ವೈದ್ಯಕೀಯ ದಿನಾಚರಣೆ 2026 ಅಂಗವಾಗಿ ಮಡ್ಯಾರ್ ಶಾಸ್ತಾರ ಅಶ್ವಥಕಟ್ಟೆ ಮುಂಭಾಗದಲ್ಲಿ ಶನಿವಾರದಂದು ಹಮ್ಮಿಕೊಂಡ ಸಾಕು ಪ್ರಾಣಿಗಳಿಗೆ (ನಾಯಿ ಮತ್ತು ಬೆಕ್ಕು) ಹಾಗೂ ಬೀದಿ ನಾಯಿಗಳಿಗೆ ಉಚಿತ ರೇಬಿಸ್ ಲಸಿಕಾ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.



ಪ್ರಾಣಿಗಳಿಗೆ ಲಸಿಕೆ ನೀಡಬೇಕು

ಮರಗಳನ್ನು ಬೆಳೆಸುವುದು, ಪ್ರಾಣಿಗಳನ್ನು ರಕ್ಷಿಸುವುದು, ಪರಿಸರದ ಜೊತೆ ಸಮನ್ವಯದಿಂದ ಬದುಕುವುದೆಲ್ಲವೂ ಜಗತ್ತಿನ ಸಹಜ ನಿಯಮವಾಗಿದೆ. ಹಿಂದಿನ ಕಾಲದಲ್ಲಿ ಜನರು ಪ್ರಕೃತಿಗೆ ಹತ್ತಿರವಾಗಿ ಜೀವಿಸುತ್ತಿದ್ದು ಅದು ಸಹಜವಾದ ಜೀವನ ಶೈಲಿ ಆಗಿತ್ತು. ಪ್ರಸ್ತುತ ಕಾಲಘಟ್ಟದಲ್ಲಿ ಮತ್ತೆ ಆ ಸಮನ್ವಯತೆ ನಾವು ಬೆಳೆಸಿಕೊಳ್ಳಬೇಕಿದೆ.ವಿಶೇಷವಾಗಿ ಪ್ರಾಣಿಗಳಿಗೆ ಆಹಾರ ನೀಡುವವರು ಹಾಗೂ ಪ್ರಾಣಿ ಸಲಹುವವರು ಕೂಡ ಜಾಗರೂಕರಾಗಿರಬೇಕು. ಪ್ರಾಣಿಗಳಿಂದ ಹರಡುವ ರೇಬಿಸ್ ಮೊದಲಾದ ಮಾರಕ ರೋಗಗಳ ಬಗ್ಗೆ ಅರಿವು ಇರಬೇಕು, ಸಮಯಕ್ಕೆ ಸರಿಯಾಗಿ ಪ್ರಾಣಿಗಳಿಗೆ ಲಸಿಕೆ ನೀಡಬೇಕು ಎಂದರು.

ಪಶು ಆರೋಗ್ಯದ ಕಡೆ ಗಮನಹರಿಸಿ

ಕರ್ನಾಟಕ ಪಶುವೈದ್ಯಕೀಯ ಸಂಘದ ಜಿಲ್ಲಾಧ್ಯಕ್ಷ ಡಾ.ಅರುಣ್ ಕುಮಾರ್ ಶೆಟ್ಟಿ ಎನ್. ಮಾತನಾಡಿ, ದೇಶದಲ್ಲಿ ಜಾನುವಾರುಗಳ ರೋಗ ನಿಯಂತ್ರಣಕ್ಕಾಗಿ ರಾಷ್ಟ್ರೀಯ ಪ್ರಾಣಿ ರೋಗ ನಿಯಂತ್ರಣ ಕಾರ್ಯಕ್ರಮ ಮೂಲಕ ಲಸಿಕೆಗಳನ್ನು ನೀಡಲಾಗುತ್ತಿದೆ. ಹಲವಾರು ಸಾಂಕ್ರಾಮಿಕ ರೋಗಗಳು ಪ್ರಾಣಿಗಳಿಂದ ಮನುಷ್ಯರಿಗೆ ಹರಡುವ ಸಾಧ್ಯತೆಯಿದ್ದು ಆ ನಿಟ್ಟಿನಲ್ಲಿ ಪಶು ಆರೋಗ್ಯದ ಕಡೆ ಹೆಚ್ಚಿನ ಗಮನವಹಿಸಬೇಕೆಂದರು.

ಅಸ್ತ್ರ ಗ್ರೂಪ್‌ನ ನಿರ್ದೇಶಕ ಲಂಚುಲಾಲ್, ಫೀಡ್ ಅನಿಮಲ್ಸ್-ಸೇವ್ ಅನಿಮಲ್ಸ್ ಟ್ರಸ್ಟ್ ಮಂಗಳೂರು ಇದರ ಮುಖ್ಯಸ್ಥರಾದ ರಜನಿ ಶೆಟ್ಟಿ ,ಕೋಟೆಕಾರು ಪಟ್ಟಣ ಪಂಚಾಯತ್ ಸದಸ್ಯ ಹರೀಶ್ ರಾವ್ ಮಡ್ಯಾರ್, ಸುರೇಶ್ ಗುರೂಜಿ, ಪಶು ವೈದ್ಯಕೀಯ ಸಂಘದ ಉಪಾಧ್ಯಕ್ಷ ಡಾ.ಚಂದ್ರಶೇಖರ್, ನಡಾರು ಫ್ರೆಂಡ್ಸ್ ಕ್ಲಬ್ ಅಧ್ಯಕ್ಷ ರಮೇಶ್ ಎಚ್. ಸಾಮಾನಿ,ಸದಾನಂದ ನಡಾರು, ಶೋಭಾ ಗಟ್ಟಿ , ಅನು ಸುವರ್ಣ, ದಾಮೋದರ್ ಶೆಟ್ಟಿ , ಸುಮಿತ್ ಮಡ್ಯಾರ್, ಶೋಭಾ ರಾಣಿ , ಕೋಟೆಕಾರು ಪಶು ಇಲಾಖೆ ಸಿಬ್ಬಂದಿ ಆಶಾಲತಾ, ಜಯಂತಿ, ರಜನಿ ಕುತ್ತಾರ್ ಮೊದಲಾದವರು ಉಪಸ್ಥಿತರಿದ್ದರು. ಹರೀಶ್ ರಾಜಕುಮಾರ್ ನಿರೂಪಿಸಿದರು. ಡಾ.ನಿತಿನ್ ಪ್ರಭು ಸ್ವಾಗತಿಸಿ ವಂದಿಸಿದರು.

> **ಜಾಗೃತಿ ಮೂಡಿಸಬೇಕಿದೆ**
>
> ತಿಂಗಳಿಗೆ ಸರಾಸರಿ 2000 ದಷ್ಟು ನಾಯಿಗಳ ಕಡಿತ ಪ್ರಕರಣಗಳು ದಾಖಲಾದರೆ ಅದರಲ್ಲಿ 1600 ರಷ್ಟು ಪ್ರಕರಣಗಳು ಮನೆಯ ಸಾಕು ನಾಯಿಗಳಿಂದಲೇ ನಡೆಯುವುದು ಗಮನಾರ್ಹ.ಆದ್ದರಿಂದ ಸಾಕು ನಾಯಿಗಳಿಗೆ ಸಹ ಸಮಯಕ್ಕೆ ಸರಿಯಾಗಿ ಲಸಿಕೆ ನೀಡುವುದು ಅತ್ಯವಶ್ಯಕ.ರೇಬಿಸ್ ರೋಗವನ್ನು ದೇಶದಿಂದ ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಪ್ರತೀಯೊಬ್ಬ ನಾಗರಿಕರು ತಮ್ಮ ಸಾಕುಪ್ರಾಣಿಗಳಿಗೆ ನಿಯಮಿತವಾಗಿ ಲಸಿಕೆ ಕೊಡಿಸಿ ಜನರಲ್ಲೂ ಜಾಗೃತಿ ಮೂಡಿಸಬೇಕಿದೆ.
>
> ● ಡಾ.ಅರುಣ್ ಕುಮಾರ್ ಶೆಟ್ಟಿ
> ಜಿಲ್ಲಾಧ್ಯಕ್ಷರು, ಕರ್ನಾಟಕ ಪಶುವೈದ್ಯಕೀಯ ಸಂಘ

ಎಸ್‌ಡಿಎಂ ಕಾಲೇಜಿನಲ್ಲಿ 28ನೇ ರಾಷ್ಟ್ರೀಯ ಕಾನೂನು ಹಬ್ಬ 'ಲೆಕ್ಸ್‌ಅಲ್ಟಿಮಾ' ಉದ್ಘಾಟನೆ



ಮಂಗಳೂರು: ವಿದ್ಯಾರ್ಥಿಗಳಲ್ಲಿ ಅಡಕವಾಗಿರುವ ಅವ್ಯಕ್ತ ಪ್ರತಿಭೆಗಳ ಅನಾವರಣಕ್ಕೆ ಇಂದು ಭರಪೂರ ವೇದಿಕೆಗಳು ಲಭ್ಯವಿದ್ದು ಎಲ್ಲರೂ ಅದನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಕೇರಳದ ಕೊಚ್ಚಿಯ ರಾಷ್ಟ್ರೀಯ ಕಾನೂನು ವಿವಿ ಕುಲಪತಿ ಡಾ.ಜಿ.ಬಿ. ರೆಡ್ಡಿ ಅಭಿಪ್ರಾಯಪಟ್ಟರು.

ಮಂಗಳೂರಿನ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾನೂನು ಮಹಾವಿದ್ಯಾಲಯದ 28ನೇ ವರ್ಷದ ರಾಷ್ಟ್ರೀಯ ಕಾನೂನು ಹಬ್ಬ 'ಲೆಕ್ಸ್‌ಅಲ್ಟಿಮಾ' ಉದ್ಘಾಟಿಸಿ ಅವರು ಮಾತನಾಡಿದರು. ಇಂದು ಕಾನೂನು ಅಧ್ಯಯನಗೈಯುತ್ತಿರುವ ವಿದ್ಯಾರ್ಥಿಗಳಿಗೆ ತಂತ್ರಜ್ಞಾನದ ಬೆಳವಣಿಗೆಯ ಜತೆಯಲ್ಲಿ ಹಲವಾರು ವೇದಿಕೆಗಳು ಲಭ್ಯವಿದ್ದು, ಅತೀ ಸೂಕ್ಷ್ಮ ಮಾಹಿತಿಗಳು ಕೂಡಾ ಅಂಗೈಯಲ್ಲೇ ದೊರೆಯುತ್ತಿವೆ. ವಿದ್ಯಾರ್ಥಿಗಳು ಇವುಗಳನ್ನು ಧನಾತ್ಮಕವಾಗಿ ಬಳಸಿಕೊಂಡಲ್ಲಿ ಔನ್ನತ್ಯ ಸಾಧಿಸುವುದು ಕಷ್ಟವಲ್ಲ ಎಂದರು.

ಮಂಗಳೂರಿನ ವಕೀಲ ಹಾಗೂ ಎಸ್.ಡಿ.ಎಂ. ಹಿರಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ರಾಘವೇಂದ್ರ ರಾವ್ ಅತಿಥಿಗಳಾಗಿದ್ದರು. ಪ್ರಾಂಶುಪಾಲ ಡಾ.ತಾರಾನಾಥ ಅಧ್ಯಕ್ಷತೆ ವಹಿಸಿದ್ದರು. ಕಾನೂನು ಹಬ್ಬದ ಸಂಚಾಲಕಿ ಡಾ.ಅಶ್ವಿನಿ ವಿ.ಸ್ವಾಗತಿಸಿದರು. ವಿದ್ಯಾರ್ಥಿ ಸಂಚಾಲಕಿ ವಿಂಧ್ಯಾ ವಂದಿಸಿದರು. ವಿದ್ಯಾರ್ಥಿ ನಾಯಕ ನರಸಿಂಹ ಭಂಡಾರಿ, ಸಂಯೋಜಕರಾದ ಮಹಾನ್, ಸಂಜನಾ ಶೆಟ್ಟಿ, ಸ್ವಾತಿ ಶೆಟ್ಟಿ, ಸೃಜನ್ ಪ್ರಸಾದ್ ಉಪಸ್ಥಿತರಿದ್ದರು. ಕಾಲೇಜಿನ ನ್ಯೂಸ್ ಲೆಟರ್ 'ಎಸ್. ಡಿ.ಎಂ. ಕ್ರೊನಿಕಲ್ಸ್'ನ್ನು ಹಾಗೂ ನಾಲ್ಕನೇ ವರ್ಷದ ಬಿ.ಎ.ಎಲ್.ಎಲ್.ಬಿ. ವಿದ್ಯಾರ್ಥಿ ಯೋಹಾನ್ ನಿಮ್ಸನ್ ಬರೆದಿರುವ ಅಣಕು ನ್ಯಾಯಾಲಯ ಕೈಪಿಡಿಯನ್ನು ಈ ಸಂದರ್ಭ ಬಿಡುಗಡೆಗೊಳಿಸಲಾಯಿತು.

ಅಪ್ರತಿಮ ಕಲಾ ಪ್ರತಿಭೆ ವರ್ಷಾ ಶೆಟ್ಟಿಗೆ 'ಪ್ರತಿಷ್ಠಿತ ಕಲಾ ಸಾರಥಿ 2026' ಗೌರವ



ಮಂಜೇಶ್ವರ: ಉಪ್ಪಳ ಐಲ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ವಾರ್ಷಿಕ ಜಾತ್ರೋತ್ಸವದ ಪ್ರಯುಕ್ತ ನಡೆದ ಗಡಿನಾಡ ಸಾಂಸ್ಕೃತಿಕ ಕಲಾ ವೇದಿಕೆ ಕಾಸರಗೋಡು ಸಂಸ್ಥೆಯ ಸಾಂಸ್ಕೃತಿಕ ಕಲಾ ವೈಭವ ಕಾರ್ಯಕ್ರಮದ ವೇದಿಕೆಯಲ್ಲಿ ವರ್ಷಾ ಶೆಟ್ಟಿ ಅವರಿಗೆ ಪ್ರತಿಷ್ಠಿತ ಕಲಾ ಸಾರಥಿ – 2026 ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಗುರುರಾಜ್ ಕಾಸರಗೋಡು ಅವರ ನೇತೃತ್ವದಲ್ಲಿ ಈ ಕಾರ್ಯಕ್ರಮ ಜರಗಿತು. ವೇದಿಕೆಯಲ್ಲಿ ಶ್ರೀ ಕ್ಷೇತ್ರದ ಆಡಳಿತ ಮೊಕ್ತೇಸರ ನಾರಾಯಣ ಹೆಗ್ಡೆ ಕೋಡಿಬೈಲು, ಸೇವಾ ಸಮಿತಿಯ ಅಧ್ಯಕ್ಷ ಸುಧೀಶ್ಚಂದ್ರ ಶೆಟ್ಟಿ ಇಚ್ಲಂಗೋಡು, ಪ್ರಧಾನ ಕಾರ್ಯದರ್ಶಿ ಎಂ.ವಿಜಯಕುಮಾರ್ ರೈ, ಮೊಕ್ತೇಸರ ಮಂಡಳಿ ಸದಸ್ಯ ಕೃಷ್ಣ ಕುಮಾರ್ ಐಲ, ಪುರುಷೋತ್ತಮ ಐಲ, ಗಡಿನಾಡ ಸಾಂಸ್ಕೃತಿಕ ಕಲಾ ವೇದಿಕೆ ಸಂಸ್ಥೆಯ ಗೌರವಾಧ್ಯಕ್ಷ ಗಣೇಶ್ ಪ್ರಸಾದ್ ಆಳ್ವ ಜಯಪ್ರಭಾ ವೈ., ಅನ್ನಪೂರ್ಣ ಶೆಟ್ಟಿ ಮುಂತಾದ ಗಣ್ಯರ ಸಮ್ಮುಖದಲ್ಲಿ ಅಪ್ರತಿಮ ಬಹುವಿಧ ಕಲಾ ಪ್ರತಿಭೆ ವರ್ಷಾ ಶೆಟ್ಟಿ ಅವರಿಗೆ ಕಲಾ ಪ್ರಸ್ತುತಿಯ ನೂರು ವೇದಿಕೆ ಪೂರೈಸಿ ಮುಂದುವರಿಯುತ್ತಿರುವ ಹಿನ್ನೆಲೆ ಸಂಸ್ಥೆಯಿಂದ ಪ್ರತಿಷ್ಠಿತ ಕಲಾ ಸಾರಥಿ – 2026 ಬಿರುದು ನೀಡಿ ಗೌರವಿಸಲಾಯಿತು.

ವರ್ಷಾ ಶೆಟ್ಟಿ ಅವರು ಕಾಸರಗೋಡು ಜಿಲ್ಲೆಯ ಅಂಡಿತ್ತಡ್ಕ ನಿವಾಸಿಯಾದ ಪ್ರಕಾಶ್ ಮತ್ತು ಚೇತನಾ ದಂಪತಿಯ ಪುತ್ರಿ. ಎಳವೆಯಿಂದಲೇ ಕಲೆಗಳಲ್ಲಿ ಆಸಕ್ತಿ ಹೊಂದಿ ಓದಿನ ಜೊತೆಗೆ ಕಲಾ ಪ್ರಕಾರಗಳಲ್ಲಿ ತನ್ನನ್ನು ತೊಡಗಿಸಿಕೊಂಡು ಮನೆಯವರ, ಹಿರಿಯರ, ಪ್ರೋತ್ಸಾಹಕರ ಮಾರ್ಗದರ್ಶನದಲ್ಲಿ ತನ್ನ ಸ್ವಂತ ಪ್ರತಿಭೆಯಿಂದ ಕಲೆಯನ್ನು ಪ್ರಸ್ತುತಪಡಿಸಿ ಸೈ ಎನಿಸಿಕೊಂಡಿರುತ್ತಾರೆ. ಅಲ್ಲದೆ ಹತ್ತು ಹಲವು ಸನ್ಮಾನ ಪುರಸ್ಕಾರಗಳು ಬಂದಿವೆ.

ಬಿಜೆಪಿ ಕಾರ್ಕಳ ಮಂಡಲದಿಂದ ಕಾರ್ಯಕರ್ತರಿಗೆ ಪ್ರಶಿಕ್ಷಣವರ್ಗ



ಕಾರ್ಕಳ : ಪಂಡಿತ್ ದೀನದಯಾಳ್ ಉಪಾಧ್ಯಾಯ ಪ್ರಶಿಕ್ಷಣ ವರ್ಗ 2026 ರ ಅಂಗವಾಗಿ ಬಿಜೆಪಿ ಕಾರ್ಕಳ ಮಂಡಲ ಪಕ್ಷದ ಕಾರ್ಯಕರ್ತರಿಗಾಗಿ ಎರಡು ದಿನಗಳ ಪ್ರಶಿಕ್ಷಣವರ್ಗ ಆಯೋ ಜಿಸಿದ್ದು ಶುಕ್ರವಾರ ಸಾಣೂರು ರಾಧಾ ಫಾರ್ಮ್ಸ್ ಆವರಣದಲ್ಲಿ ಉದ್ಘಾಟನೆಗೊಂಡಿತು.

ಕಾರ್ಯಕ್ರಮವನ್ನು ಬೋಳ ಪ್ರಭಾಕರ ಕಾಮತ್ ಉದ್ಘಾಟಿಸಿದರು. ಕಾರ್ಕಳ ಬಿಜೆಪಿ ಮಂಡಲಾಧ್ಯಕ್ಷ ನವೀನ್ ನಾಯಕ್, ಕಾರ್ಕಳ ಶಾಸಕ ವಿ. ಸುನಿಲ್ ಕುಮಾರ್, ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಶ್ರೀಕಾಂತ್ ನಾಯಕ್, ಪ್ರಶಿಕ್ಷಣ ವರ್ಗ ಕಾರ್ಕಳ ಮಂಡಲದ ಸಂಯೋಜಕ ರವೀಂದ್ರ ಕುಮಾರ್ ಹಾಗೂ ಪಕ್ಷದ ಪ್ರಮುಖರಾದ ಮಣಿರಾಜ್ ಶೆಟ್ಟಿ ಮತ್ತಿತರರಿದ್ದರು.

ಸುವರ್ಣಗಿರಿ ಹೊಳೆ ಕುಕ್ಕಾರು ತೋಡು ದುಸ್ತರ: ಗ್ರಾಮ ಪಂಚಾಯತ್ ಅಧ್ಯಕ್ಷರ ಭೇಟಿ, ಪರಿಶೀಲನೆ

ಉಪ್ಪಳ: ಮಂಗಲ್ಪಾಡಿ ಗ್ರಾ.ಪಂ. ವ್ಯಾಪ್ತಿಯ ಸುವರ್ಣಗಿರಿ ಹೊಳೆಯ ಕುಕ್ಕಾರು ತೋಡು ಶೋಚನೀಯಾವಸ್ಥೆಯಲ್ಲಿದೆ. ಇದರಿಂದ ಸ್ಥಳೀಯ ಕೃಷಿಕರು ಸಂಕಷ್ಟಕ್ಕೀಡಾಗಿದ್ದು, ಈ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯತ್ ಅಧ್ಯಕ್ಷ ಗೋಲ್ಡನ್ ಅಬ್ದುಲ್ ರಹಿಮಾನ್ ಸ್ಥಳ ಸಂದರ್ಶಿಸಿದರು.



ಅಲ್ಲದೆ ಕೃಷಿಕರಿಂದ ಮಾಹಿತಿ ಪಡೆದು ಸಮಸ್ಯೆ ಅರಿತು ತೋಡನ್ನು ಎನ್‌ಆರ್‌ಜಿ ಮೂಲಕ ಅಭಿವೃದ್ಧಿಗೊಳಿಸುವುದಾಗಿ ಪಂ. ಅಧ್ಯಕ್ಷ ಗೋಲ್ಡನ್ ಅಬ್ದುಲ್ ರಹಿಮಾನ್ ಭರವಸೆ ನೀಡಿದರು. ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ನಿಟ್ಟಿನಲ್ಲಿ ಕುಕ್ಕಾರು ತೋಡಿಗೆ ನೂತನ ಸೇತುವೆ ನಿರ್ಮಿಸಲಾಗಿದ್ದು, ಈ ವೇಳೆ ಮಣ್ಣು ತೋಡಿನಲ್ಲಿ ತುಂಬಿ ಸಮತಟ್ಟುಗೊಂಡಿದೆ.

ಅಲ್ಲದೆ ತ್ಯಾಜ್ಯ, ಕಾಡು ಪೊದೆಗಳಿಂದ ಆವರಿಸಿ ತೋಡು ಇಲ್ಲದಂತಾ ಗಿದ್ದು, ಈ ಹಿನ್ನೆಲೆ ಕಳೆದ ಹಲವು ವರ್ಷಗಳಿಂದ ಮಳೆ ನೀರು ಪೂರ್ತಿ ಪರಿಸರದ ಕೃಷಿಕರ ಗದ್ದೆ ಮೂಲಕ ಹರಿದು ಹೋಗುವುದರಿಂದ ಸ್ಥಳೀಯರಿಗೆ ಕೃಷಿ ಮಾಡಲು ಸಾಧ್ಯವಾಗದೆ ಸಂಕಷ್ಟ ಅನುಭವಿಸುತ್ತಿದ್ದಾರೆ. ಕೃಷಿಕರ ಈ ಸಮಸ್ಯೆ ಅರಿತ ಪಂ. ಅಧ್ಯಕ್ಷ ಗೋಲ್ಡನ್ ಅಬ್ದುಲ್ ರಹಿಮಾನ್ ಸ್ಥಳ ಸಂದರ್ಶಿಸಿ ಕೃಷಿಕರಿಂದ ಸಮಗ್ರ ಮಾಹಿತಿ ಪಡೆದರು. ಈ ತೋಡನ್ನು ಅಭಿವೃದ್ಧಿಗೊಳಿಸುವ ಮೂಲಕ ಕೃಷಿಕರ ಸಮಸ್ಯೆಗೆ ಪರಿಹಾರ ಕಲ್ಪಿಸಲಾಗುವುದು ಎಂದು ಪಂ. ಅಧ್ಯಕ್ಷರು ತಿಳಿಸಿದ್ದಾರೆ.

ಸಂಭ್ರಮದಿಂದ ನಡೆದ ಯಡೂರು ಗ್ರಾಮದ ಶ್ರೀ ಸಬ್ಬಮ್ಮ ದೇವಿ ಸುಗ್ಗಿ ಉತ್ಸವ



ಸೋಮವಾರಪೇಟೆ: ಯಡೂರು ಗ್ರಾಮದ ಶ್ರೀ ಸಬ್ಬಮ್ಮ ದೇವಿಯ ಸುಗ್ಗಿ ಉತ್ಸವ ಶುಕ್ರವಾರ ರಾತ್ರಿ ಹಾಗೂ ಶನಿವಾರ ಹಗಲು ಭಕ್ತಾದಿಗಳ ಸಮ್ಮುಖದಲ್ಲಿ ಶ್ರದ್ಧಾಭಕ್ತಿಯಿಂದ ನೆರವೇರಿತು.

ಸಾಮೂಹಿಕ ಪೂಜೆ

ಯಡೂರು ಗ್ರಾಮದ ಐತಿಹಾಸಿಕ ಹಿನ್ನೆಲೆಯುಳ್ಳ ಸುಗ್ಗಿಕಟ್ಟೆಯಲ್ಲಿ ಮಲೆನಾಡಿನ ಜನರ ಗ್ರಾಮೀಣ ಸಂಸ್ಕೃತಿಯನ್ನು ಬಿಂಬಿಸುವ ಸಾಂಪ್ರದಾಯಿಕ ಪೂಜಾ ಕಾರ್ಯಗಳು ನಡೆದವು. ಶುಕ್ರವಾರ ರಾತ್ರಿ ಸುಗ್ಗಿಕಟ್ಟೆಯಲ್ಲಿ ದೇವಿಗೆ ಮಡೆ ಇಟ್ಟ ಗ್ರಾಮಸ್ಥರು ಊರಿನ ಸಮೃದ್ಧಿ ಹಾಗು ಮಳೆ ಬೆಳೆಗಾಗಿ ಸಾಮೂಹಿಕ ಪೂಜೆ ಸಲ್ಲಿಸಿದರು. ಸಹಭೋಜನ ನೆರವೇರಿತು.

ಶನಿವಾರ ಬೆಳಿಗ್ಗೆ ಗ್ರಾಮದ ದೇವರಬಾವಿಯಲ್ಲಿ ಬಸವಣ್ಣ ದೇವರ ಗಂಗಾಸ್ನಾನ ನಡೆಯಿತು. ಬಸವಣ್ಣ ದೇವರನ್ನು ಅಡ್ಡಪಲ್ಲಕ್ಕಿಯಲ್ಲಿ ಕುಳ್ಳಿರಿಸಿ, ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಪ್ರತಿ ಮನೆಯವರು ಈಡುಗಾಯಿಯೊಂದಿಗೆ ಪೂಜೆ ಸಲ್ಲಿಸಿದರು. ಅಡ್ಡೆಹೊತ್ತವರ ಕುಣಿತವನ್ನು ಜನರು ವೀಕ್ಷಿಸಿ ಚಪ್ಪಾಳೆಯೊಂದಿಗೆ ಪ್ರೋತ್ಸಾಹಿಸಿದರು.

ಮೆರವಣಿಗೆ

ಸುಗ್ಗಿಕಟ್ಟೆಯಲ್ಲಿ ಗ್ರಾಮಸ್ಥರ ಸಾಮೂಹಿಕ ಕುಣಿತದೊಂದಿಗೆ, ದೇವತಕ್ಕರ ಮೆರವಣಿಗೆ ನಡೆಯಿತು.

13 ದಿನಗಳ ಸುಗ್ಗಿ ಉತ್ಸವ ಮುಕ್ತಾಯ

ಭಾನುವಾರ ಮಲ್ಲಸುಗ್ಗಿ, ಸೋಮವಾರ ಹಗಲು ಸುಗ್ಗಿ, ಮಂಗಳವಾರ ಮಾರಿ ಕಳುಹಿಸುವ ಕಾರ್ಯದೊಂದಿಗೆ 13 ದಿನಗಳ ಸುಗ್ಗಿ ಉತ್ಸವ ಮುಕ್ತಾಯಗೊಳ್ಳಲಿದೆ.

ಯಡೂರು ಗ್ರಾಮಾಭಿವೃದ್ಧಿ ಮಂಡಳಿ ನಿಯೋಜಿತ ಅಧ್ಯಕ್ಷ ಡಿ.ಡಿ.ಮುತ್ತಣ್ಣ, ಕಾರ್ಯದರ್ಶಿ ಸುಧೀರ್, ಉಪಾಧ್ಯಕ್ಷ ಲೋಕೇಶ್, ದೇವರ ಒಡೆಕಾರರು ಸುಗ್ಗಿ ಉತ್ಸವದ ಜವಾಬ್ದಾರಿ ವಹಿಸಿದ್ದರು.

'ಸಂಗೀತ' ಒಂದು ದೈವಿಕ ಕಲೆ, ಜ್ಞಾನದ ವರ್ಧನೆಗೆ ಚಿಕಿತ್ಸಾ ಪದ್ಧತಿ: ಶಶಿಕಲಾ ಜಿ.



ಮಂಜೇಶ್ವರ: ಕಲಾ ಕುಂಚ ಸಾಂಸ್ಕೃತಿಕ ಸಂಸ್ಥೆ ದಾವಣಗೆರೆ ಇದರ ಕೇರಳ ಗಡಿನಾಡ ಶಾಖೆಯ ಪ್ರಾಯೋಜಕತ್ವದಲ್ಲಿ ಸುಗಮ ಸಂಗೀತ ಕಾರ್ಯಾಗಾರವು ಎರಡು ದಿನಗಳ ಕಾಲ ಮಂಗಲ್ಪಾಡಿ ಪರಂಕಿಲ ಶಾರದಾ ಏಕಾಹ ಭಜನಾ ಮಂದಿರದಲ್ಲಿ ನಡೆಯಿತು. ಸಂಪನ್ಮೂಲ ವ್ಯಕ್ತಿಗಳಾಗಿ ಪುತ್ತೂರು ಉದಯಗಾನ ಸಂಗೀತ ಕಲಾ ಕೇಂದ್ರದ ಸಂಗೀತ ಶಿಕ್ಷಕಿ ಸುಮನಾ ರಾವ್ , ಸುಪ್ರಜಾ ರಾವ್ ಪಾಲ್ಗೊಂಡಿದ್ದರು.

ಮೂವತ್ತು ಮಂದಿ ಶಿಬಿರಾರ್ಥಿಗಳೂ ಪೋಷಕರೂ ಭಾಗವಹಿಸಿದ್ದರು. ಈ ಬಾರಿ ಜ್ಞಾನದ ಅದಿ ದೇವತೆ ಶಾರದೆಯ ಬಗ್ಗೆ ಹಾಡುಗಳು ಹೆಚ್ಚಾಗಿದ್ದವು. ದುರ್ಗಾ ಸ್ತುತಿಯಾದ ಅಯಿ ಗಿರಿ ನಂದಿನಿಯ ಇಪ್ಪತ್ತೊಂದು ಶ್ಲೋಕ ಎರಡು ದಿನವೂ ಅಭ್ಯಾಸ ಮಾಡಲಾಯಿತು.

ನಿವೃತ್ತ ಮುಖ್ಯೋಪಾಧ್ಯಾಯ ರಾಧಾಕೃಷ್ಣ ತುಂಗ ಕಾರ್ಯಕ್ರಮ ಉದ್ಘಾಟಿಸಿದರು. ಬಳಿಕ ಸುಮನಾ ರಾವ್ ಮತ್ತು ಸುಪ್ರಜಾ ರಾವ್ ಶಿಬಿರಾರ್ಥಿಗಳಿಗೆ ಸಂಗೀತ ಪಾಠ ಹೇಳಿಕೊಟ್ಟರು. ಒಟ್ಟು 10 ಗೀತೆಗಳನ್ನು ಅಭ್ಯಾಸ ಮಾಡಿಸಿದರು. ಸಂಗೀತದ ಜೊತೆಗೆ ರಾಮಾಯಣ, ಮಹಾಭಾರತದ ಕುರಿತಾಗಿ ರಸಪ್ರಶ್ನೆ, ಅಂತ್ಯಾಕ್ಷರಿ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಶಿಬಿರಾರ್ಥಿಗಳು ತಾವು ಕಲಿತ ಹಾಡುಗಳನ್ನು ಹಾಡಿ ರಂಜಿಸಿದರು.

ಸಮಾರೋಪ

ಸಮಾರೋಪದಲ್ಲಿ ನಿವೃತ್ತ ಮುಖ್ಯೋಪಾಧ್ಯಾಯಿನಿ ಶಶಿಕಲಾ ಜಿ. ಮಯ್ಯ, ಸಂಗೀತ ಎನ್ನುವುದು ದೈವಿಕ ಕಲೆ. ಮಾನಸಿಕ ನೆಮ್ಮದಿಗೆ, ಜ್ಞಾನದವರ್ಧನೆಗೆ ಅದು ಒಂದು ಚಿಕಿತ್ಸಾಪದ್ಧತಿ ಎಂದರೆ ತಪ್ಪಾಗಲಾರದೆಂದರು. ಭಾಗವಹಿಸಿದ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು.

ಕಲಾಕುಂಚದ ಸ್ಥಾಪಕ ಅಧ್ಯಕ್ಷೆ ಜಯಲಕ್ಷ್ಮಿ ಕಾರಂತ, ರಾಮ ಕಾರಂತ, ಜಯಲಕ್ಷ್ಮಿ ಆರ್. ಹೊಳ್ಳ, ದಿವ್ಯಾ ಕಾರಂತ, ಚಂದನ್ ಕಾರಂತ, ತಾರಾ ಪ್ರವೀಣ್ ಮತ್ತಿತರರಿದ್ದರು.

ಹಿಂದೂ ಟೂರಿಸ್ಟ್ ಡ್ರೈವರ್ಸ್: ಸಹಾಯಧನ ವಿತರಣೆ



ಬಂಟ್ವಾಳ: ಇತ್ತೀಚೆಗೆ ಪಾಣೆಮಂಗಳೂರಿನಲ್ಲಿ ಬೈಕ್ ಅಪಘಾತಕ್ಕೀಡಾಗಿ ಮೃತಪಟ್ಟ ವಿಡಿಯೋಗ್ರಾಫರ್ ರಕ್ಷಿತ್ ರೈ ಕುಟುಂಬಕ್ಕೆ ಹಿಂದೂ ಟೂರಿಸ್ಟ್ ಡ್ರೈವರ್ಸ್‌ನಿಂದ 1,39,218 ರೂ. ಸಹಾಯಧನ ವಿತರಿಸಲಾಯಿತು. ಈ ಸಹಾಯಧನದಲ್ಲಿ 1 ಲಕ್ಷ ರೂ. ಮೃತ ರಕ್ಷಿತ್ ರೈ ಪುತ್ರಿಯ ಹೆಸರಲ್ಲಿ ಬ್ಯಾಂಕ್‌ನಲ್ಲಿ ಠೇವಣಿ ಇರಿಸಲಾಗಿದ್ದು, ಉಳಿಕೆ 39,218 ರೂ. ಅವರ ತಾಯಿಗೆ ಹಸ್ತಾಂತರ ಮಾಡಲಾಯಿತು. ವೃತ್ತಿಯಲ್ಲಿ ವಿಡಿಯೋಗ್ರಾಫರ್ ಆಗಿದ್ದ ರಕ್ಷಿತ್ ಕಳೆದ ಹಲವು ವರ್ಷಗಳಿಂದ ಹಿಂದೂ ಟೂರಿಸ್ಟ್ ಡ್ರೈವರ್ಸ್ ನ ಸದಸ್ಯರಾಗಿದ್ದರು. ಮನೆ ಆಧಾರಸ್ತಂಭವಾಗಿದ್ದ ರಕ್ಷಿತ್ ರೈ ಅಪಘಾತದಿಂದ ಸಾವಿಗೀಡಾದ ಬಳಿಕ ಅವರ ಮನೆ ಸ್ಥಿತಿ ಅರಿತುಕೊಂಡ ಹಿಂದೂ ಟೂರಿಸ್ಟ್ ಡ್ರೈವರ್ಸ್ ಸದಸ್ಯರು ಸಹಾಯಧನವನ್ನಿತ್ತು ಮಾನವೀಯತೆ ಮೆರೆದಿದ್ದಾರೆ.

28ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಹಕರಿಸಿದವರಿಗೆ ಕೃತಜ್ಞತಾ ಸಮಾರಂಭ। ಶ್ರೀನಾಥ್ ಅಭಿಪ್ರಾಯ

ಸಮ್ಮೇಳನ ಸರ್ವ ರೀತಿಯಲ್ಲಿ ಯಶಸ್ಸು ಕಂಡಿದ್ದು, ಶ್ಲಾಘನೆಗೆ ಪಾತ್ರವಾಗಿದೆ

ಬಂಟ್ವಾಳ: ಯಾವುದೇ ಸಮಾರಂಭ, ಸಮ್ಮೇಳನದ ಯಶಸ್ಸು ಆ ಊರಿನ ಜನರ ತೊಡಗುವಿಕೆಯ ಮೇಲೆ ಅವಲಂಬಿತವಾಗಿದೆ. ಊರಿನ ಮಂದಿ ತಮ್ಮ ಅಹಂ, ಅಂತಸ್ತು ಮರೆತು ಸಮಾನ ಮನಸ್ಕರಾಗಿದ್ದುಕೊಂಡು ಜೊತೆಯಾಗಿ ಶ್ರಮಿಸಿದಾಗ ಅಲ್ಲಿ ಯಶಸ್ಸನ್ನು ಕಾಣಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಬಂಟ್ವಾಳದಲ್ಲಿ ನಡೆದ 28ನೇ ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನವು ಸರ್ವ ರೀತಿಯಲ್ಲಿ ಯಶಸ್ಸು ಕಂಡು ಎಲ್ಲರ ಶ್ಲಾಘನೆಗೆ ಪಾತ್ರವಾಗಿದೆ ಎಂದು ದ.ಕ.ಜಿಲ್ಲಾ ಕಸಾಪ ಅಧ್ಯಕ್ಷ ಡಾ.ಎಂ.ಪಿ.ಶ್ರೀನಾಥ್ ಹೇಳಿದರು.

ಬಿ.ಸಿ.ರೋಡು ಸ್ಪರ್ಶಾ ಕಲಾ ಮಂದಿರದಲ್ಲಿ ನಡೆದಿದ್ದ 28ನೇ ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಆಯೋಜಿಸಿದ್ದ ಕೃತಜ್ಞತಾ ಮತ್ತು ಅಭಿನಂದನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಯಾವುದೇ ಸಾಹಿತ್ಯ ಸಮ್ಮೇಳನವು ಹಣಕಾಸಿನ ಕೊರತೆ ಕಾಣದೆ ವಿಭಿನ್ನವಾಗಿ, ವಿಶಿಷ್ಟವಾದ ರೀತಿಯಲ್ಲಿ ಎಲ್ಲೆಡೆ ಮಾದರಿಯಾಗುವಂತೆ ನಡೆದುಕೊಂಡು ಬಂದಿದೆ.ಈ ಬಾರಿಯ ಜಿಲ್ಲಾ ಸಮ್ಮೇಳನವೂ ಎಲ್ಲಕ್ಕಿಂತ ಮಿಗಿಲು ಎನ್ನುವಂತೆ ಎಲ್ಲ ವರ್ಗದವರಿಗೂ ಮೆಚ್ಚುಗೆಯಾಗುವಂತೆ ಮೂರು ದಿನಗಳ ಕಾಲ ನಡೆದಿದ್ದು,ಇದಕ್ಕಾಗಿ ಶ್ರಮಿಸಿದ ಸ್ವಾಗತ ಸಮಿತಿ,ಜಿಲ್ಲಾ ಸಮಿತಿ ಮತ್ತು ಬಂಟ್ವಾಳ ಕಸಾಪ ಘಟಕ , ಸಹಕಾರ ನೀಡಿದ ಬಂಟ್ವಾಳದ ಸರ್ವ ನಾಗರಿಕರಿಗೆ, ಕನ್ನಡಾಭಿಮಾನಿಗಳಿಗೆ ಅಭಿನಂದನೆ ಮತ್ತು ಕೃತಜ್ಞತೆ ಸಲ್ಲಿಸಬೇಕಾದ್ದು ನಮ್ಮ ಕರ್ತವ್ಯ ಎಂದರು.



ಜಿಲ್ಲಾ ಕಸಾಪದ ಗೌರವ ಕಾರ್ಯದರ್ಶಿ ರಾಜೇಶ್ವರಿ ಮಾತನಾಡಿ, ಬಂಟ್ವಾಳದ ಜಿಲ್ಲಾ ಸಮ್ಮೇಳನದ ಯಶಸ್ಸು ತಮ್ಮ ವೈಯಕ್ತಿಕ ಕೆಲಸ ಕಾರ್ಯ ಬದಿಗಿರಿಸಿ ಪಾಲ್ಗೊಂಡವರಿಂದ ಸಾಧ್ಯವಾಗಿದ್ದು ಅವರನ್ನು ಅತ್ಯಂತ ಗೌರವದಿಂದ ಅಭಿನಂದಿಸಬೇಕು ಎಂದರು. ಸಮ್ಮೇಳನದ ಯಶಸ್ಸಿನ ಕುರಿತಾಗಿ ಸ್ವಾಗತ ಸಮಿತಿಯ ಕಾರ್ಯದರ್ಶಿ ರಾಮದಾಸ್ ಬಂಟ್ವಾಳ, ಪುತ್ತೂರು ಕಸಾಪ ಘಟಕದ ಅಧ್ಯಕ್ಷ ಉಮೇಶ್ ನಾಯಕ್, ಸ್ವಾಗತ ಸಮಿತಿಯ ಕೋಶಾಧಿಕಾರಿ ಸುಭಾಶ್ಚಂದ್ರ ಜೈನ್, ಸಾಂಸ್ಕೃತಿಕ ಸಮಿತಿ ಸಂಚಾಲಕ ಉದಯ್ ಬಂಟ್ವಾಳ ಕಸಾಪ ಘಟಕದ ವಿ.ಸು.ಭಟ್,ಅಬ್ದುಲ್ ರಹಿಮಾನ್ ಡಿ.ಬಿ.ಮತ್ತಿತರರು ಮಾತನಾಡಿದರು.

ಅಬೂಬಕ್ಕರ್ ಅಮ್ಮುಂಜೆಗೆ ಸನ್ಮಾನ

ಈ ಸಂದರ್ಭ ಸಮ್ಮೇಳನದ ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿ ಅಬೂಬಕ್ಕರ್ ಅಮ್ಮುಂಜೆ ಅವರನ್ನು ಜಿಲ್ಲಾ ಕಸಾಪದಿಂದ ಅಭಿನಂದಿಸಲಾಯಿತು. ಬೆಳ್ತಂಗಡಿ ಕಸಾಪ ಅಧ್ಯಕ್ಷ ಯದುಪತಿ ಗೌಡ,ಬಂಟ್ವಾಳ ಕಸಾಪ ಅಧ್ಯಕ್ಷ ವಿಶ್ವನಾಥ ಬಂಟ್ವಾಳ,ಮೂಡಬಿದಿರೆ ಕಸಾಪ ಘಟಕದ ಅಧ್ಯಕ್ಷ ವೇಣುಗೋಪಾಲ ಶೆಟ್ಟಿ, ಕಲಾವಿದ ಎಚ್.ಕೆ.ನಯನಾಡ್,ಸ್ವಾಗತ ಸಮಿತಿ ಕಾರ್ಯದರ್ಶಿ ದೇವಪ್ಪ ಕುಲಾಲ್, ಪಾಣೆಮಂಗಳೂರು ಹೋಬಳಿ ಅಧ್ಯಕ್ಷ ಮಹಮ್ಮದ್ ಪಾಣೆಮಂಗಳೂರು, ಜಿಲ್ಲಾ ಸದಸ್ಯ ಪೂವಪ್ಪ ನೇರಳಕಟ್ಟೆ,ಅಬ್ಬಾಸ್ ಅಲಿ,ಜಯರಾಮ ಪಡ್ರೆ,ಸತೀಶ್ ಕಾರ್ತಿಕ್ ,ಸನತ್ ಕುಮಾರ್ ಜೈನ್, ಜನಾರ್ದನ ಅಮ್ಮುಂಜೆ, ಮೋಹನ್ ಸಾಲಿಯಾನ್ ಬೆಂಜನಪದವು, ನಾರಾಯಣ ಬಡಕಬೈಲು, ರಜನಿ ಚಿಕ್ಕಯಮಠ, ಸನ್ಮತಿ ಜೈನ್, ಗೀತಾ ಕೊಂಕೋಡಿ ಮತ್ತಿತರರಿದ್ದರು.

ಪುಟ ಸಂಖ್ಯೆ | website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb | ಸೋಮವಾರ 27, ಏಪ್ರಿಲ್ 2026

ಸುತ್ತಮುತ್ತ

ಸಂತ ಜೋಸೆಫರ ಪ್ರೌಢಶಾಲೆಗೆ ಶೇ. 100 ಫಲಿತಾಂಶ

ಕುಂದಾಪುರ: ಸಂತ ಜೋಸೆಫರ ಪ್ರೌಢಶಾಲೆ, ಕುಂದಾಪುರ 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.100 ಫಲಿತಾಂಶ ದಾಖಲಿಸಿದೆ. ಪರೀಕ್ಷೆಗೆ ಹಾಜರಾದ 37 ವಿದ್ಯಾರ್ಥಿಗಳ ಪೈಕಿ 3 ಮಂದಿ ವಿಶಿಷ್ಟ ಶ್ರೇಣಿಯಲ್ಲಿ, 25 ಮಂದಿ ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ, 7 ಮಂದಿ ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಹಾಗೂ ಇಬ್ಬರು ವಿದ್ಯಾರ್ಥಿಗಳು ತೃತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ರಕ್ಷಾ ಪೂಜಾರಿ 561 ಅಂಕ ಗಳಿಸಿ ಶಾಲೆಗೆ ಪ್ರಥಮ ಸ್ಥಾನ ಹಾಗೂ ಪಲ್ಲವಿ 555 ಅಂಕ ಗಳಿಸಿ ಶಾಲೆಗೆ ದ್ವಿತೀಯ ಸ್ಥಾನ ಹಾಗೂ ತನ್ವಿ 540 ಅಂಕ ಗಳಿಸಿ ಶಾಲೆಗೆ ತೃತೀಯ ಸ್ಥಾನವನ್ನು ಪಡೆದಿದ್ದಾರೆ.



ಬಿ.ಮೂಡ ಸರಕಾರಿ ಹೈಸ್ಕೂಲ್‌ಗೆ ಶೇ.100 ಫಲಿತಾಂಶ

ಬಂಟ್ವಾಳ: ಈ ಬಾರಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಬಿ.ಸಿ.ರೋಡಿನ ಅಜ್ಜಿಬೆಟ್ಟುವಿನಲ್ಲಿರುವ ಬಿ.ಮೂಡ ಸರಕಾರಿ ಹೈಸ್ಕೂಲ್ ಗೆ ಶೇ.100 ಫಲಿತಾಂಶ ದೊರಕಿದೆ. 5 ಮಂದಿ ಡಿಸ್ಟಿಂಕ್ಷನ್, 12 ಮಂದಿ ಪ್ರಥಮ ದರ್ಜೆ, ಒಬ್ಬರು ದ್ವಿತೀಯ ದರ್ಜೆ ಹಾಗೂ 2 ಪಾಸ್ ಕ್ಲಾಸ್ ನಲ್ಲಿ ತೇರ್ಗಡೆ ಹೊಂದಿದ್ದಾರೆ. ಒಟ್ಟು 20 ಮಂದಿ ಪರೀಕ್ಷೆಗೆ ಹಾಜರಾಗಿದ್ದರು. ಫಲಿತಾಂಶದಿಂದ ಶಾಲೆಗೆ ಎ ಗ್ರೇಡ್ ಲಭಿಸಿದೆ. ಮಯೂರ್ 577, ತೇಜಸ್ 568, ಕಿರಣ್ ಕುಮಾರ್ 566, ಪ್ರಣತಿ 539, ಚಂದ್ರಕಲಾ 533 ಗರಿಷ್ಠ ಅಂಕ ಗಳಿಸಿದ ವಿದ್ಯಾರ್ಥಿಗಳು ಎಂದು ಶಾಲಾ ಮುಖ್ಯೋಪಾಧ್ಯಾಯರ ಪ್ರಕಟಣೆ ತಿಳಿಸಿದೆ.

ಗುತ್ತಿಗಾರು ಕಾಲೇಜ್ ಪ್ರೌಢ ಶಾಲಾ ವಿಭಾಗಕ್ಕೆ ಶೇ. 100 ಸಾಧನೆ

ಸುಬ್ರಹ್ಮಣ್ಯ: ಗುತ್ತಿಗಾರು ಜೂನಿಯರ್ ಕಾಲೇಜ್‌ನ ಪ್ರೌಢ ಶಾಲಾ ವಿಭಾಗ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.100 ತೇರ್ಗಡೆ ದಾಖಲಿಸಿದೆ. ಒಟ್ಟು 72 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು 20 ಮಂದಿ ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಸುಜನ್ ಎ.ಜೆ.-595, ರಿತೇಶ್ ಕೆ.ಜೆ.-587 ಹಾಗೂ ರಿತೇಶ್ ಕೆ.ಎಂ.-584 ಅಂಕಗಳನ್ನು ಗಳಿಸಿದ್ದಾರೆ.

ಕನ್ನಡ ಜಾಗೃತಿ ಸಮಿತಿ ಕಾರ್ಯದರ್ಶಿಯಾಗಿ ರಂಜಿತ್ ಆಯ್ಕೆ

ಮಡಿಕೇರಿ: ಕರ್ನಾಟಕ ಸರಕಾರದ ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ರಚಿಸಲ್ಪಟ್ಟಿರುವ ಕೊಡಗು ಜಿಲ್ಲಾ ಕನ್ನಡ ಜಾಗೃತಿ ಸಮಿತಿಯ ಮನೆಗೊಂದು ಗ್ರಂಥಾಲಯ ಅನುಷ್ಠಾನ ಸಭೆ ಜಿಲ್ಲಾ ಸಂಚಾಲಕ ಎಂ.ಪಿ. ಕೇಶವ ಕಾಮತ್ ಅವರ ಅಧ್ಯಕ್ಷತೆಯಲ್ಲಿ ಕೊಡಗು ಪತ್ರಿಕಾ ಭವನದಲ್ಲಿ ನಡೆಯಿತು. ಸಮಿತಿ ಸದಸ್ಯರಾಗಿರುವ ಪತ್ರಕರ್ತ ರಂಜಿತ್ ಕವಲಪಾರ ಅವರನ್ನು ಜಿಲ್ಲಾ ಜಾಗೃತಿ ಸಮಿತಿಯ ಗೌರವ ಕಾರ್ಯದರ್ಶಿಯಾಗಿ ಆಯ್ಕೆ ಮಾಡಲಾಯಿತು.



ಮೊದಲನೇ ಕಾರ್ಯಕ್ರಮವಾಗಿ ವಿಶ್ವ ಪುಸ್ತಕ ದಿನಾಚರಣೆ ಮತ್ತು ವಿದ್ಯಾರ್ಥಿಗಳಿಗೆ ಪುಸ್ತಕ ವಿತರಣೆ ಕಾರ್ಯಕ್ರಮ ನಡೆಯಿತು. ಜಿಲ್ಲೆಯಲ್ಲಿ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ಸಾರ್ವಜನಿಕರ ಮನವೊಲಿಸಿ ಮನೆಗೊಂದು ಗ್ರಂಥಾಲಯ ಯೋಜನೆ ಅನುಷ್ಠಾನ ಮಾಡುವಂತೆ ತೀರ್ಮಾನಿಸಲಾಯಿತು. ಮೇ ತಿಂಗಳಿನಲ್ಲಿ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ಎರಡು ಮನೆಗಳನ್ನು ಆಯ್ಕೆ ಮಾಡಿ ಮನೆಗೊಂದು ಗ್ರಂಥಾಲಯ ಯೋಜನೆ ಅನುಷ್ಠಾನ ಮಾಡುವಂತೆಯೂ ಆ ಕಾರ್ಯಕ್ರಮಕ್ಕೆ ರಾಜ್ಯಾಧ್ಯಕ್ಷ ಡಾ. ಮಾನಸ ಅವರನ್ನು ಆಹ್ವಾನಿಸುವಂತೆ ತೀರ್ಮಾನಿಸಲಾಯಿತು. ಜಿಲ್ಲಾ ಕನ್ನಡ ಜಾಗೃತಿ ಸಮಿತಿಯ ಸಭೆಯಲ್ಲಿ ಸದಸ್ಯರುಗಳಾದ ಟಿ.ಪಿ ರಮೇಶ್, ಬಿ.ಎನ್ ಪ್ರಕಾಶ್ ಕೆ.ವಿ ಉಮೇಶ್, ಎಚ್.ಎಲ್ ದಿವಾಕರ್, ಪ್ರತಿಮಾ ಹರೀಶ್ ರೈ ಉಪಸ್ಥಿತರಿದ್ದರು.

ಆಗ್ರಾರ್ ಹೋಲಿ ಸೇವಿಯರ್ ಶಾಲೆಗೆ ಶೇ. 100 ಫಲಿತಾಂಶ

ಬಂಟ್ವಾಳ: ಆಗ್ರಾರ್ ಹೋಲಿ ಸೇವಿಯರ್ ಶಾಲೆಯಲ್ಲಿ ಎಸ್ ಎಸ್ ಎಲ್ ಸಿ ವಾರ್ಷಿಕ ಪರೀಕ್ಷೆಗೆ ಹಾಜರಾದ ಒಟ್ಟು 33 ಮಂದಿ ವಿದ್ಯಾರ್ಥಿಗಳ ಪೈಕಿ ಎಲ್ಲರೂ ತೇರ್ಗಡೆ ಗೊಳ್ಳುವ ಮೂಲಕ ಶೇ. 100 ಫಲಿತಾಂಶ ದಾಖಲಿಸಿದೆ.ಒಟ್ಟು 17 ಮಂದಿ ಡಿಸ್ಟಿಂಕ್ಷನ್, 16 ಮಂದಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಗೊಂಡಿದ್ದಾರೆ. ಈ ಪೈಕಿ ವಿದ್ಯಾರ್ಥಿನಿಯರಾದ ನಿಯೋಲಾ ಫ್ರಾಂಕ್ ಒಟ್ಟು 616, ಲಿಷಾ ಲೋಬೊ 615, ಅಲ್ ಸ್ವಾನ್ ಸಿಕ್ವೆರಾ 611, ಶಾನೆಲ್ ಸಿಕ್ವೆರಾ 609ಅಂಕ ಗಳಿಸುವ ಮೂಲಕ ಶಾಲೆಗೆ ಕೀರ್ತಿ ತಂದಿದ್ದಾರೆ ಎಂದು ಮುಖ್ಯಶಿಕ್ಷಕಿ ಸಿಸ್ಟರ್ ಪ್ರಶಾಂತಿ ಮೋನಿಸ್ ತಿಳಿಸಿದ್ದಾರೆ.

ಸಿದ್ಧಕಟ್ಟೆ : ಗುಣಶ್ರೀ ವಿದ್ಯಾಲಯ ಶೇ. 100 ಫಲಿತಾಂಶ

ಬಂಟ್ವಾಳ: ಸಿದ್ದಕಟ್ಟೆ ಗುಣಶ್ರೀ ವಿದ್ಯಾಲಯದಲ್ಲಿ 80 ಮಂದಿ ವಿದ್ಯಾರ್ಥಿಗಳ ಪೈಕಿ ಎಲ್ಲರೂ ತೇರ್ಗಡೆ ಗೊಂಡು ಶೇ . 100 ಫಲಿತಾಂಶ ದಾಖಲಿಸಿದೆ. ಒಟ್ಟು 31 ಮಂದಿ ಡಿಸ್ಟಿಂಕ್ಷನ್, 30 ಮಂದಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಗೊಂಡಿದ್ದಾರೆ. ಈ ಪೈಕಿ ವಿದ್ಯಾರ್ಥಿನಿ ಸೃಷ್ಟಿ ಪಿ. ಶೆಟ್ಟಿ ಒಟ್ಟು 606 ಅಂಕ ಗಳಿಸುವ ಮೂಲಕ ಶಾಲೆಯಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ ಎಂದು ಮುಖ್ಯಶಿಕ್ಷಕಿ ಜಯಶ್ರೀ ತಿಳಿಸಿದ್ದಾರೆ.

ಚೇಯಕಪೂವಂಡ ಕುಟುಂಬಸ್ಥರ ಕೊಡವ ಕೇರ್ ಬಲಿ ನಮ್ಮೆ ಪಂದ್ಯಾಟ | ಶಾಸಕ ಪೊನ್ನಣ್ಣ ವಿಷಾದ

ಸೌಲಭ್ಯ ಕೊರತೆಯಿಂದ ಕೊಡಗಿನ ಕ್ರೀಡಾ ಸಾಧನೆಗೆ ಹಿನ್ನಡೆ

ನಾಪೋಕ್ಲು: ಕೊಡಗು ಜಿಲ್ಲೆಯಲ್ಲಿ ಹೆಚ್ಚಿನ ಕ್ರೀಡಾಪಟುಗಳಿದ್ದರೂ ಮೂಲಭೂತ ಸಮಸ್ಯೆಗಳಿಂದ ನಿರೀಕ್ಷಿತ ಸಾಧನೆ ಸಾಧ್ಯವಿಲ್ಲದಂತಾಗಿದೆ. ಆದುದರಿಂದ ಕ್ರೀಡಾಭಿವೃದ್ಧಿಗೆ ಹೆಚ್ಚಿನ ಶ್ರಮವಹಿಸುವುದಾಗಿ ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಹಾಗೂ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರಾದ ಅಜ್ಜಿಕುಟ್ಟೀರ ಎಸ್.ಪೊನ್ನಣ್ಣ ಹೇಳಿದರು.
ಸ್ಥಳೀಯ ಕೆಪಿಎಸ್ ಶಾಲಾ ಮೈದಾನದಲ್ಲಿ ಚೇಯಕಪೂವಂಡ ಕುಟುಂಬಸ್ಥರ ವತಿಯಿಂದ ಏರ್ಪಡಿಸಲಾದ 5ನೇ ವರ್ಷದ ಕೊಡವ ಕೌಟುಂಬಿಕ ಹಗ್ಗಜಗ್ಗಾಟ (ಕೇರ್ ಬಲಿ ನಮ್ಮೆ) ಪಂದ್ಯಾಟವನ್ನು ಉದ್ಘಾಟಿಸಿ ಅವರು ಮಾತನಾಡಿದರು.
ಹಾಕಿ ಮತ್ತು ಕ್ರಿಕೆಟ್ ನಂತೆ ಹಗ್ಗಜಗ್ಗಾಟ ಪಂದ್ಯಾಟವು ಯಶಸ್ವಿಯಾಗಿ 5ನೇ ವರ್ಷಕ್ಕೆ ತಲುಪಿದೆ. ಮುಂದಿನ ವರ್ಷಗಳಲ್ಲಿ ಇದು ಕೂಡ ದಾಖಲೆ ಸೃಷ್ಟಿಸಲಿ ಎಂದು ಹಾರೈಸಿದರು. ಜಿಲ್ಲೆಯ ಕ್ರೀಡಾ ಅಭಿವೃದ್ಧಿಗೆ ಹೆಚ್ಚಿನ ಪ್ರಯತ್ನ ಮಾಡುತ್ತಿರುವುದಾಗಿ ಹೇಳಿದ ಅವರು ಪೊನ್ನಂಪೇಟೆಯಲ್ಲಿ ಬಾಲಕ -ಬಾಲಕಿಯರಿಗೆ ವಸತಿ ಶಾಲೆ, ಟರ್ಫ್ ಮೈದಾನದ ನವೀಕರಣ 3.50



ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುವುದು. ಅಲ್ಲಿನ ಶೌಚಾಲಯ, ನೀರಿನ ಟ್ಯಾಂಕ್, ಮತ್ತಿತರ ಕಾಮಗಾರಿಗಳಿಗೆ ಸರಕಾರದಿಂದ 3.50 ಕೋಟಿ ರೂ. ಮಂಜೂರು ಮಾಡಲಾಗಿದೆ ಎಂದರು.
ಬಾಡಗ ಗ್ರಾಮದಲ್ಲಿ ಕ್ರೀಡಾ ಸಂಕೀರ್ಣಕ್ಕೆ 11.50 ಎಕರೆ ಜಾಗ ಗುರುತಿಸಲಾಗಿದ್ದು ಸರಕಾರದಿಂದ 30 ಕೋಟಿ ರೂ., ರಾಜ್ಯಸಭಾ ಸದಸ್ಯರಾದ ಅಜಯ್ ಮಕೇನ್ ಅವರ 15 ಕೋಟಿ ರೂ. ಅನುದಾನದಿಂದ ಕಾಮಗಾರಿ ಕೈಗೊಳ್ಳಲಾಗುವುದು ಎಂದರು.
ರಾಜ್ಯ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷ ಚೆಪ್ಪುಡಿರ ಅರುಣ್ ಮಾಚಯ್ಯ ಮಾತನಾಡಿ, ಕೊಡವರು ಶೌರ್ಯಕ್ಕೆ ಹೆಸರುವಾಸಿ. ಕೇರ್ ಬಲಿ ನಮ್ಮೆಯಲ್ಲಿ ತಾಕತ್ತು ಪ್ರದರ್ಶನವಾಗುತ್ತದೆ. ಎಲ್ಲಾ ಕ್ರೀಡೆಗಳಿಗೂ ತಾಕತ್ತು ಹಾಗೂ ಚಾಣಕ್ಷ ಬೇಕು ಎಂದರು.
ಟಗ್ ಆಫ್ ವಾರ್ ಅಕಾಡೆಮಿ ಅಧ್ಯಕ್ಷ ಪೊನ್ನೋಲತಂಡ ಕಿರಣ್ ಪೊನ್ನಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಅಧ್ಯಕ್ಷತೆ ವಹಿಸಿದ ಚೇಯಕಪೂವಂಡ ಹಗ್ಗಜಗ್ಗಾಟ ಸಮಿತಿ ಸದಸ್ಯ ಚೇಯಕಪೂವಂಡ ಕೆ.ಬೋಪಣ್ಣ ಮಾತನಾಡಿದರು. ವೇದಿಕೆಯಲ್ಲಿ ಚೇಯಕಪೂವಂಡ ಕುಟುಂಬದ ಪಟ್ಟೆದಾರ ಚಿಟ್ಟಿಯಪ್ಪ ನಾಪೋಕ್ಲು ಕೊಡವ ಸಮಾಜದ ಅಧ್ಯಕ್ಷ ಮುಂಡಂಡ ನಾಣಯ್ಯ, ಕೆ.ಪಿ.ಎಸ್ ಶಾಲಾ ಪ್ರಾಂಶುಪಾಲೆ ಮೇದುರ ವಿಶಾಲ್, ಕಾಫಿ ಬೆಳೆಗಾರ ಬೊಳ್ಳಚೆಟ್ಟಿರ ಸುರೇಶ್, ಬೊಟ್ಟೋಳಂಡ ಗಣಪತಿ, ಚೆಟ್ಟಂಗಡ ರವಿ ಸುಬ್ಬಯ್ಯ, ಬಾಳೆಕುಟ್ಟೀರ ರಾಯಪ್ಪ ಮಂದಣ್ಣ ಪೊನ್ನೋಲತಂಡ ಸೋಮಣ್ಣ ಅಶೋಕ್, ಮತ್ತಿತರರು ಇದ್ದರು.
ಸ್ವರ ತಂಗಮ್ಮ ಪ್ರಾರ್ಥನೆ, ಚೇಯಕಪೂವಂಡ ಕುಟುಂಬದ ಅಧ್ಯಕ್ಷ ಅಪ್ಪಚ್ಚು ಸ್ವಾಗತ , ಮಾಳೇಟಿರ ಶ್ರೀನಿವಾಸ್ ನಿರೂಪಿಸಿ, ಚೇಯಕಪೂವಂಡ ಸುಜ್ಞಾ ಅಯ್ಯಪ್ಪ ವಂದಿಸಿದರು. ಅದಕ್ಕೂ ಮೊದಲು ಟಗ್ ಆಫ್ ಅಕಾಡೆಮಿ ಹಾಗೂ 5 ವರ್ಷ ಹಗ್ಗಜಗ್ಗಾಟ ಪಂದ್ಯಾಟದ ಉಸ್ತುವಾರಿ ವಹಿಸಿದ ಕುಟುಂಬಗಳ ಧ್ವಜ ಆರೋಹಣ ನೆರವೇರಿಸಲಾಯಿತು. ಈಶ್ವರ ಇಗ್ಗುತ್ತಪ್ಪ ಎ ಮತ್ತು ಈಶ್ವರ ಇಗ್ಗುತಪ್ಪ ಬಿ ತಂಡಗಳ ನಡುವೆ ನಡೆದ ಪ್ರದರ್ಶನ ಪಂದ್ಯದಲ್ಲಿ ಈಶ್ವರ ಇಗ್ಗುತ್ತಪ್ಪ ಎ ತಂಡವು ಜಯಶಾಲಿಯಾಯಿತು. ಹಗ್ಗಜಗ್ಗಾಟ ಪಂದ್ಯಾಟದ ಪ್ರಯುಕ್ತ ನಾಪೋಕ್ಲು ಪಟ್ಟಣದ ಪೊನ್ನಾಡ್ ಸೂಪರ್ ಮಾರ್ಕೆಟ್ ಬಳಿಯಿಂದ ಪಂದ್ಯಾಟ ನಡೆಯುವ ಕೆಪಿಎಸ್ ಶಾಲಾ ಮೈದಾನದವರೆಗೆ ಚೇಯಕಪೂವಂಡ ಕುಟುಂಬಸ್ಥರು ಸಾಂಪ್ರದಾಯಿಕ ಉಡುಗೆ, ತೊಡುಗೆ, ತಳಿಯತಕ್ಕಿ ಬೊಳಕ್, ಓಲಗ ಮೂಲಕ ಮೆರವಣಿಗೆ ನಡೆಸಿ ಎಲ್ಲರ ಗಮನ ಸೆಳೆದರು. ಮೆರವಣಿಗೆಯಲ್ಲಿ ಚೇಯಕಪೂವಂಡ ಮುತ್ತಪ್ಪ ಬೋಪಣ್ಣ ಜೋಯಪ್ಪ ರಾಜಾ ಸೋಮಯ್ಯ ದುಡಿಕೊಟ್ಟ್ ಪಾಟ್ ಪ್ರದರ್ಶಿಸಿದರು. ಚೇಯಕಪೂವಂಡ ಹಗ್ಗಜಗ್ಗಾಟ ಸಮಿತಿ ಉಪಾಧ್ಯಕ್ಷ ಚೇಯಕಪೂವಂಡ ಕಟ್ಟಿ ಮಂಜುನಾಥ್, ನವೀನ್ ನಾಚಪ್ಪ, ಸಿ.ಎ.ನಾಚಪ್ಪ ಸತೀಶ್ ದೇವಯ್ಯ, ಸುನಿಲ್ ಮಾಚಯ್ಯ, ಸಚಿನ್ ಮುತ್ತಪ್ಪ ಪ್ರಕಾಶ್ ಮಂದಣ್ಣ, ಸಚಿನ್ ಪೂವಯ್ಯ, ಶಂಭು ನಂಜಪ್ಪ ಸೇರಿದಂತೆ ಕುಟುಂಬದ ಎಲ್ಲಾ ಹಿರಿಯರು, ಕಿರಿಯರು ಪಾಲ್ಗೊಂಡಿದ್ದರು. ಕಾರ್ಯಕ್ರಮದಲ್ಲಿ ಗೋಣಿಕೊಪ್ಪಲು ಕಾವೇರಿ ಕಾಲೇಜು ವಿದ್ಯಾರ್ಥಿಗಳಿಂದ ಕತ್ತಿಯಾಟ್, ಕೋಲಾಟ್ ನೃತ್ಯಪ್ರದರ್ಶನ ನಡೆಯಿತು.

ಮಜ್ಜಾರು ಕ್ಷೇತ್ರದಲ್ಲಿ ಉಳ್ಳಾಕ್ಲು, ರಾಜನ್ ದೈವಗಳ ಪ್ರತಿಷ್ಠೆ, ನೇಮ



ಕಡಬ: ಕೋಡಿಂಬಾಳ ಗ್ರಾಮದ ಮಜ್ಜಾರು ಶ್ರೀ ಉಳ್ಳಾಕ್ಲು, ರಾಜನ್, ಸಪರಿವಾರ ದೈವ ಚಾವಡಿಯಲ್ಲಿ ದೈವಗಳ ಪುನರ್‌ಪ್ರತಿಷ್ಠೆ ಹಾಗೂ ವಾರ್ಷಿಕ ನೇಮೋತ್ಸವ ಏ.20ರಿಂದ 25ರ ತನಕ ನೆರವೇರಿತು.
20ರಂದು ಪುಣ್ಯಾಹ ವಾಚನ, ಪಂಚಗವ್ಯ, ಸುದರ್ಶನ ಹೋಮ, ಬಾಧಾ ಉಚ್ಚಾಟನೆ ನೆರವೇರಿತು. 21ರಂದು ಪುಣ್ಯಾಹ ವಾಚನ, ಗಣಪತಿ ಹೋಮ, ಚಂಡಿಕಾ ಹೋಮ, ಆಶ್ಲೇಷ ಬಲಿ, ಚತುರ್ಮೂರ್ತಿ ಆರಾಧನೆ, ಅನ್ನಸಂತರ್ಪಣೆ ನಡೆಯಿತು. ಏ. 22ರಂದು ಬೆಳಗ್ಗೆ ಶ್ರೀ ಮಹಾವಿಷ್ಣು ದೇವಸ್ಥಾನದಲ್ಲಿ ಹಾಲು ಪಾಯಸ, ಮಹಾಪೂಜೆ ನಡೆದು ಸಂಜೆ ಉಗ್ರಾಣ ಮುಹೂರ್ತ ನಡೆದು ಊರ ಮತ್ತು ಪರವೂರ ಭಕ್ತಾದಿಗಳಿಂದ ಹೊರೆಕಾಣಿಕೆ ಸಮರ್ಪಣೆ, ಧಾರ್ಮಿಕ ವಿಧಿಗಳು, ವಾಸ್ತು ಹೋಮ, ವಾಸ್ತು ಪೂಜೆ, ವಾಸ್ತು ಬಲಿ, ಬಿಂಬ ಶುದ್ಧಿ, ಕಲಶಾಧಿವಾಸ ನಡೆದು ಬಳಿಕ ಅನ್ನ ಸಂತರ್ಪಣೆ ನಡೆಯಿತು.
23ರಂದು ಬೆಳಗ್ಗೆ ಗಣಪತಿ ಹೋಮ, ಪ್ರತಿಷ್ಠಾ ಹೋಮ, ನವಗ್ರಹ ಹೋಮ ನಡೆದು ದೈವಗಳ ಬಿಂಬ ಪುನರ್‌ಪ್ರತಿಷ್ಠೆ ಕಲಶಾಭಿಷೇಕ ನೆರವೇರಿತು. ಏ.24ರಂದು ಬೆಳಗ್ಗೆ ಶ್ರೀ ಮಹಾವಿಷ್ಣು ದೇವರ ಸನ್ನಿಧಿಯಲ್ಲಿ ಭಜನೆ, ಮಹಾಪೂಜೆ ಇತ್ಯಾದಿ ಧಾರ್ಮಿಕ ವಿಧಿಗಳು ನೆರವೇರಿತು. ದೈವ ಚಾವಡಿಯಲ್ಲಿ ಸಂಜೆ ದೈವಗಳ ಭಂಡಾರ ತೆಗೆದು ರಾತ್ರಿ ಮಲೆ ಉಳ್ಳಾಕ್ಲು, ಉಳ್ಳಾಲ್ತಿ, ಪುರುಷ ದೈವ, ಪರಿವಾರ ದೈವಗಳ ನೇಮ ನಡೆದು ಅನ್ನ ಸಂತರ್ಪಣೆ ನಡೆಯಿತು. ಸಿಡಿಮದ್ದು ಪ್ರದರ್ಶನದ ಬಳಿಕ ಪಟ್ಟನ್ ದೈವ, ವ್ಯಾಘ್ರ ಚಾಮುಂಡಿ, ಪಂಜುರ್ಲಿ, ಪರಿವಾರ ದೈವಗಳ ನೇಮ ಜರಗಿತು.
25ರಂದು ಬೆಳಗ್ಗೆ ರಾಜನ್ ದೈವದ ನೇಮ ನಡೆದು ಶ್ರೀಮುಡಿ ಗಂಧ ಪ್ರಸಾದ ವಿತರಣೆ, ಹರಿಕೆ ಸಲ್ಲಿಕೆಯ ಬಳಿಕ ಅನ್ನಸಂತರ್ಪಣೆ ನಡೆಯಿತು. ಅಪರಾಹ್ನ ಬಲಿ ಪೀಠದಲ್ಲಿ ಬಲಿ ನಡೆದು ಸಂಜೆ ಗುಳಿಗ ದೈವದ ನೇಮ ಜರಗಿತು.
ಕ್ಷೇತ್ರದ ಮೊಕ್ತೇಸರ ಕೆ. ಕೃಷ್ಣ ಭಟ್ ಎಡಪತ್ಯ, ಆಡಳಿತ ಸಮಿತಿಯ ಅಧ್ಯಕ್ಷ ಚಿದಾನಂದ ಗೌಡ ಪಡೆಜ್ಜಾರು, ಕಾರ್ಯದರ್ಶಿ ಕೇಶವ ಬೇರಿಕೆ, ಕೋಶಾಧಿಕಾರಿ ಮಾಧವ ಕೋಲ್ಪೆ ಉತ್ಸವ ಸಮಿತಿಯ ಅಧ್ಯಕ್ಷ ಜಯರಾಮ ಗಟ್ಟಿಗಾರು, ಕಾರ್ಯದರ್ಶಿ ಸುರೇಶ ಕೋಡಿಂಬಾಳ, ಕೋಶಾಧಿಕಾರಿ ಜಗನ್ನಾಥ ಪಲ್ಲತಡ್ಕ, ಅರ್ಚಕ ವಿಕ್ರಾಂತ ರಾಜ್, ದೈವ ಪರಿಚಾರಕ ಲಕ್ಷ್ಮಣ ಗೌಡ ಪಡೆಜ್ಜಾರು ಮತ್ತಿತರರು ಉಪಸ್ಥಿತರಿದ್ದರು.

ಪಂಚವರ್ಣದಿಂದ ಆನಂದ್ ಸಿ ಕುಂದರ್ 78ನೇ ಹುಟ್ಟುಹಬ್ಬ ಆಚರಣೆ



ಕೋಟ: ಆನಂದ್ ಸಿ ಕುಂದರ್ ಈ ಸಮಾಜದ ದೊಡ್ಡ ಆಸ್ತಿ ಇಂತಹ ಮಹಾನ್ ವ್ಯಕ್ತಿಗಳ ಹೆಸರಿನಲ್ಲಿ ಹುಟ್ಟುಹಬ್ಬ ಆಚರಿಸಿ ಆಶ್ರಮಗಳಿಗೆ ನೆರವು ಕಾರ್ಯ ಅತ್ಯಂತ ಪ್ರಶಂಸನೀಯವಾದದ್ದು ಎಂದು ಸಾಂಸ್ಕೃತಿಕ ಚಿಂತಕಿ ಭಾರತಿ ವಿ. ಮಯ್ಯ ಹೇಳಿದರು.
ಕೋಟದ ಪಂಚವರ್ಣ ಯುವಕ ಮಂಡಲ ಪ್ರವರ್ತಿತ ಸಂಸ್ಥೆ ಪಂಚವರ್ಣ ಮಹಿಳಾ ಮಂಡಲದ ನೇತೃತ್ವದಲ್ಲಿ ಸಮಾಜಸೇವಕ, ಜಿಲ್ಲೆಯ ಮಹಾದಾನಿ ಆನಂದ್ ಸಿ ಕುಂದರ್ ರವರ 78ನೇ ಹುಟ್ಟುಹಬ್ಬ ಆಚರಣೆ ಹಾಗೂ ಆಶ್ರಮಕ್ಕೆ ನೆರವು ಎಂಬ ಶೀರ್ಷಿಕೆಯಡಿ ಕಾರ್ಯಕ್ರಮದಲ್ಲಿ ಮಾತನಾಡಿ, ಅಶಕ್ತ ಅನಾರೋಗ್ಯ ಪೀಡಿತರಿಗೆ ಆಶ್ರಯದಾತರಾಗಿ ತಮ್ಮ ಜೀವಿತ ಅವಧಿಯಲ್ಲಿ ಸರ್ವ ಶ್ರೇಷ್ಠ ಕಾಯಕ ಮಾಡುತ್ತಿರುವ ಆನಂದ್ ಸಿ ಕುಂದರ್ ಅವರಿಗೆ ವ್ಯಕ್ತಿತ್ವಕ್ಕೆ ಪರ್ಯಾಯ ಇನ್ನೊಬ್ಬರಿಲ ಇಂತಹ ವ್ಯಕ್ತಿಗಳು ಸಮಾಜದ ಕಣ್ಣಾಗಿ ನೂರಾರು ವರ್ಷ ಬಾಳಿ ಬದುಕಲಿ ಎಂದು ಆಶಿಸಿ ಪಂಚವರ್ಣದ ಈ ಮಹಾನ್ ಕಾರ್ಯವನ್ನು ಕೊಂಡಾಡಿದರು.
ಇದೇ ವೇಳೆ ಬ್ರಹ್ಮಾವರದ ಮಟಪಾಡಿಯ ವಿಜಯ ಬಾಲನಿಕೇತನ ಅನಾಥ ಬಾಲಾಶ್ರಮಕ್ಕೆ ದಿನಸಿ ಪರಿಕರನ್ನು ಆನಂದ್ ಸಿ ಕುಂದರ್ ಆಶ್ರಮದ ಸಂಯೋಜಕ ಜಯರಾಮ ಇವರಿಗೆ ಹಸ್ತಾಂತರಿಸಿದರು.
ಕೋಟ ಪಂಚಾಯತ್ ಮಾಜಿ ಸದಸ್ಯ ಭುಜಂಗ ಗುರಿಕಾರ, ಪಂಚವರ್ಣ ಯುವಕ ಮಂಡಲದ ಅಧ್ಯಕ್ಷ ಮನೋಹರ್, ಸ್ಥಾಪಕಾಧ್ಯಕ್ಷ ಶೇವಧಿ ಸುರೇಶ್ ಗಾಣಿಗ, ಮಹಿಳಾ ಮಂಡಲದ ಅಧ್ಯಕ್ಷೆ ಲಲಿತಾ ಪೂಜಾರಿ ಇದ್ದರು. ನಿಕಟಪೂರ್ವ ಅಧ್ಯಕ್ಷ ಅಜಿತ್ ಆಚಾರ್ ಸ್ವಾಗತಿಸಿ, ಮಹಿಳಾ ಮಂಡಲದ ಕಾರ್ಯಾಧ್ಯಕ್ಷೆ ಕಲಾವತಿ ಅಶೋಕ್ ನಿರೂಪಿಸಿ, ರವೀಂದ್ರ ಕೋಟ ವಂದಿಸಿ ಸಂಯೋಜಿಸಿದರು.

ಗೋಶಾಲೆ ಮೇವಿನ ದಾಸ್ತಾನು ಕೊಠಡಿ ನಿರ್ಮಾಣಕ್ಕೆ ಗುದ್ದಲಿಪೂಜೆ



ಪಡುಬಿದ್ರಿ: ಕಾಪು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಎಲ್ಲೂರು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ನಿರ್ಮಾಣ ಹಂತದಲ್ಲಿರುವ ಸರ್ಕಾರಿ ಗೋಶಾಲೆಯಲ್ಲಿ ಮೇವಿನ ದಾಸ್ತಾನು ಕೊಠಡಿ ನಿರ್ಮಾಣ ಕಾಮಗಾರಿಗೆ 17 ಲಕ್ಷ ರೂಪಾಯಿ ಅನುದಾನ ಮಂಜೂರಾಗಿದ್ದು, ಇದರ ಗುದ್ದಲಿ ಪೂಜೆಯನ್ನು ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಅವರು ಏ. 25 ರಂದು ನೆರವೇರಿಸಿದರು.
ಮಾಜಿ ಉಪಾಧ್ಯಕ್ಷರಾದ ಉಷಾ, ಮಾಜಿ ಸದಸ್ಯರಾದ ವಸಂತಿ ಮಧ್ವರಾಜ್, ದಯಾನಂದ ಶೆಟ್ಟಿಗಾರ್, ಶೋಭಾ ಶೆಟ್ಟಿ ಎಲ್ಲೂರು ಬಿಜೆಪಿ ಶಕ್ತಿ ಕೇಂದ್ರ ಸಂಚಾಲಕ ಸತೀಶ್ ಶೆಟ್ಟಿ ಗುಡ್ಡೆಚ್ಚಿ ಪ್ರಮುಖರಾದ ಗಣೇಶ್ ಬೆಳ್ಳಿಬೆಟ್ಟು, ಸುಕೇಶ್ ಶೆಟ್ಟಿ, ಸಂದೇಶ್ ಶೆಟ್ಟಿ ಪಶು ವೈದ್ಯಾಧಿಕಾರಿ ವೆಂಕಟಗಿರಿ, ಡಾ. ವಸಂತ್, ನಿರ್ಮಿತಿ ಕೇಂದ್ರದ ಮುಕೇಶ್ ಗುತ್ತಿಗೆದಾರ ಮನೋಜ್ ಉಪಸ್ಥಿತರಿದ್ದರು.

ಸಮಾನ ಮನಸ್ಕರ ಗುಂಪು 'ಟೀಮ್ ಏಕತಾ ಟ್ರಸ್ಟ್'ನ ಸದಸ್ಯರ ಸಮಾವೇಶ



ಕುಂದಾಪುರ: ಅನಾರೋಗ್ಯ ಪೀಡಿತರು ಹಾಗೂ ಆರ್ಥಿಕ ಸಂಕಷ್ಟದಲ್ಲಿರುವ ಸಮುದಾಯದ ಸದಸ್ಯರಿಗೆ ನೆರವಾಗಲು ಸಮಾನ ಮನಸ್ಕರ ಗುಂಪು ರಚಿಸಿದ 'ಟೀಮ್ ಏಕತಾ ಟ್ರಸ್ಟ್'ನ ಸದಸ್ಯರ ಸಮಾವೇಶ ಕುಂದಾಪುರದ ವ್ಯಾಸರಾಜ ಕಲ್ಯಾಣ ಮಂಟಪದಲ್ಲಿ ಶನಿವಾರ ನಡೆಯಿತು.
ತಾಲೂಕು ಗಾಣಿಗರ ಸೇವಾ ಸಂಘದ ಅಧ್ಯಕ್ಷ ಸತೀಶ್ ಗಾಣಿಗ ಉದ್ಘಾಟಿಸಿ, ಶುಭ ಹಾರೈಸಿದರು. ಕುಂದಾಪುರ ತಾಲೂಕು ಗಾಣಿಗರ ಸೇವಾ ಸಂಘದ ಕೋಶಾಧಿಕಾರಿ ಎಚ್.ಎಸ್. ಗಾಣಿಗ, ಪತ್ರಕರ್ತ ಚಂದ್ರಶೇಖರ ಬೀಜಾಡಿ, ಸುಬ್ರಹ್ಮಣ್ಯ ಜಿ. ಉಪ್ಪುಂದ, ನಿವೃತ್ತ ಮುಖ್ಯ ಶಿಕ್ಷಕ ಗಣೇಶ್ ಚೆಲ್ಲೆಮಕ್ಕಿ, ಬಾರ್ಕೂರು ಸಂಘದ ಪರವಾಗಿ ಪ್ರಾಣೇಶ್, ಮಂಜುನಾಥ ಆಲಂದೂರು, ಹರೀಶ್ ಶೃಂಗೇರಿ ಅಭಿಪ್ರಾಯ ವ್ಯಕ್ತಪಡಿಸಿದರು.
ಈ ಸಂದರ್ಭದಲ್ಲಿ ಟೀಮ್ ಏಕತಾ ಟ್ರಸ್ಟ್ ಅಧ್ಯಕ್ಷ ಭಾಸ್ಕರ ಗಾಣಿಗ ಕುಂದಾಪುರ, ಕಾರ್ಯದರ್ಶಿ ರಮೇಶ್ ಗಾಣಿಗ ಮಟಪಾಡಿ, ಕೋಶಾಧಿಕಾರಿ ರಮಶ್ ಜಿ.ಎಸ್. ಮತ್ತಿತರರು ಉಪಸ್ಥಿತರಿದ್ದರು.

ಸಾಧಕ ವಿದ್ಯಾರ್ಥಿನಿಗೆ ಅಮೃತಭಾರತಿ ಆಡಳಿತ ಮಂಡಳಿಯಿಂದ ಗೌರವಾರ್ಪಣೆ



ಹೆಬ್ರಿ: ಹೆಬ್ರಿ ಪಿಆರ್‌ಎನ್ ಅಮೃತ ಭಾರತಿ ವಿದ್ಯಾಲಯ ಹೈಸ್ಕೂಲ್ ವಿಭಾಗದ 2025 - 26 ನೇ ಸಾಲಿನ 10ನೇ ತರಗತಿ ಪಬ್ಲಿಕ್ ಪರೀಕ್ಷೆಯಲ್ಲಿ ಪ್ರಣಮ್ಯ ಕೆ. 606 ಅಂಕವನ್ನು ಪಡೆದು ಸಂಸ್ಥೆಗೆ ತೃತೀಯ ಸ್ಥಾನವನ್ನು ಪಡೆದಿದ್ದು, ಅಮೃತಭಾರತಿ ಟ್ರಸ್ಟಿನ ಸ್ಥಾಪಕ ಅಧ್ಯಕ್ಷ ಸತೀಶ್ ಪೈ ಹೆಬ್ರಿ, ಟ್ರಸ್ಟಿನ ಕಾರ್ಯದರ್ಶಿ ಎಚ್. ಗುರುದಾಸ್ ಶೆಣೈ ವಿದ್ಯಾರ್ಥಿನಿಗೆ ಅಭಿನಂದನೆ ಸಲ್ಲಿಸಿದರು.
ಹೆಬ್ರಿ ಕಬ್ಬಿನಾಲೆ ಮೂಲದವರಾದ ಪೋಷಕರು ಪ್ರಸ್ತುತ ಶೃಂಗೇರಿ ಸಂಸ್ಕೃತ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ ಉಪನ್ಯಾಸಕ ಪ್ರೊ.ಹರಿಪ್ರಸಾದ ಕೆ., ಅಖಿಲಾ ಕೆ ದಂಪತಿ ಸುಪುತ್ರಿಯಾಗಿದ್ದು, ಸಂಸ್ಕೃತ ಮಾತೃಭಾಷೆಯಾಗಿದೆ. ಈ ಸಂದರ್ಭದಲ್ಲಿ ಸಂಸ್ಥೆಯ ಸಾರ್ವಜನಿಕ ಸಂಪರ್ಕ ಅಧಿಕಾರಿ ವಿಜಯಕುಮಾರ್ ಶೆಟ್ಟಿ, ಪ್ರಾಥಮಿಕ ವಿಭಾಗದ ಮುಖ್ಯೋಪಾಧ್ಯಾಯಿನಿ ಶಕುಂತಲಾ, ಪ್ರೌಢಶಾಲಾ ವಿಭಾಗದ ಉಪಮುಖ್ಯೋಪಾಧ್ಯಾಯ ಮಹೇಶ ಹೈಕಾಡಿ, ಸಂಸ್ಥೆ ವಿಜ್ಞಾನ ಮಾತಾಜಿ ಸೌಪರ್ಣಿಕಾ ಜೋಶಿ ಉಪಸ್ಥಿತರಿದ್ದರು.

ನಾರ್ಕೋಡು ಬಡ್ಡಡ್ಕ ರಸ್ತೆ ದುರಸ್ತಿಗೆ ಅನುದಾನ ಬಿಡುಗಡೆಗೊಳಿಸಲು ಮನವಿ



ಸುಳ್ಯ: ಸುಳ್ಯ ತಾಲೂಕಿನ ನಾರ್ಕೋಡು-ಆಲೆಟ್ಟಿ-ಬಡ್ಡಡ್ಕ ಲೋಕೋಪಯೋಗಿ ರಸ್ತೆಯು ಕರ್ನಾಟಕ ಕೇರಳ ಅಂತರಾಜ್ಯ ಸಂಪರ್ಕ ರಸ್ತೆಯಾಗಿದ್ದು, ಅಗಲ ಕಿರಿದಾಗಿ, ಹೊಂಡ ಗುಂಡಿಗಳಿಂದ ಜನ ಸಂಚಾರಕ್ಕೆ ಮತ್ತು ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುವ ಹಿನ್ನೆಲೆಯಲ್ಲಿ ರಸ್ತೆಯನ್ನು ಸಂಪೂರ್ಣ ಅಭಿವೃದ್ಧಿಪಡಿಸುವಂತೆ ಆಲೆಟ್ಟಿ ಗ್ರಾಮ ಪಂಚಾಯತ್ ಮಾಜಿ ಸದಸ್ಯ ಸತ್ಯಕುಮಾರ್ ಆಡಿಂಜ ನೇತೃತ್ವದಲ್ಲಿ ಮನವಿ ಸಲ್ಲಿಸಲಾಯಿತು.
ಸತ್ಯಕುಮಾರ್ ಆಡಿಂಜ ನೇತೃತ್ವದಲ್ಲಿ ಗುರುವಾರ ಕಾಂಗ್ರೆಸ್ ಮುಖಂಡರ ನಿಯೋಗ ಬೆಂಗಳೂರಿನಲ್ಲಿ ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ಅವರನ್ನು ಭೇಟಿಯಾಗಿ ಕಳೆದ 35 ವರ್ಷಗಳಿಂದ ಅಭಿವೃದ್ಧಿ ಕಾಣದೆ ತೀರಾ ಹದೆಗೆಟ್ಟಿರುವ ನಾರ್ಕೋಡು-ಆಲೆಟ್ಟಿ-ಬಡ್ಡಡ್ಕ ರಸ್ತೆಗೆ ಕೂಡಲೇ ಅನುದಾನ ಬಿಡುಗಡೆಗೊಳಿಸಿ ತುರ್ತು ಅಭಿವೃದ್ಧಿಗೊಳಿಸುವಂತೆ ಮನವರಿಕೆ ಮಾಡಿದರು.
ಈ ಬಗ್ಗೆ ಸ್ಪಂದಿಸಿದ ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ, ಅನುದಾನ ಬಿಡುಗಡೆಗೊಳಿಸಿ ತುರ್ತು ಕಾಮಗಾರಿ ಆರಂಭಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ನಿಯೋಗದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಧಾಕೃಷ್ಣ ಬೊಳ್ಳೂರು, ಹಿರಿಯ ಕಾಂಗ್ರೆಸ್ ಮುಖಂಡ ಮಾಜಿ ಜಿಲ್ಲಾ ಪರಿಷತ್ ಸದಸ್ಯ ದೇವಪ್ಪ ನಾಯ್ಕ ಹೊನ್ನೆಡಿ, ನಗರ ಪಂಚಾಯತ್ ಮಾಜಿ ಅಧ್ಯಕ್ಷ ಎಸ್. ಸಂಶುದ್ದೀನ್, ನಗರ ಪಂಚಾಯತ್ ಮಾಜಿ ಸದಸ್ಯ ಶಿವಕುಮಾರ್ ಕಂಡಡ್ಕ ಕಾಂಗ್ರೆಸ್ ಮುಖಂಡರಾದ ರಕ್ಷಿತ್ ದೊಡ್ಡಡ್ಕ ಕೇಶವ ಮೊರಂಗಲ್ಲು ಉಪಸ್ಥಿತರಿದ್ದರು.

ಕುಲ್ಕುಂದ: ವಸಂತ ವೇದ ಪಾಠ ಶಾಲೆ ಉದ್ಘಾಟನೆ



ಸುಬ್ರಹ್ಮಣ್ಯ: ಕುಲ್ಕುಂದ ಬಸವನಮೂಲೆ ಶ್ರೀ ಬಸವೇಶ್ವರ ದೇವಸ್ಥಾನವಸಂತ ವೇದ ಪಾಠ ಶಿಬಿರ ಉದ್ಘಾಟನೆಗೊಂಡಿತು. ಬಿಳಿನೆಲೆ ಗೋಪಾಲಕೃಷ್ಣ ಪ್ರೌಢ ಶಾಲೆ ನಿವೃತ್ತ ಮುಖ್ಯೋಪಾಧ್ಯಾಯ ಶ್ರೀಕೃಷ್ಣ ಶರ್ಮ ಉದ್ಘಾಟಿಸಿದರು. ದೇವಳದ ಆಡಳಿತ ಮಂಡಳಿ ಅಧ್ಯಕ್ಷ ಗಿರಿಧರ ಸ್ಕಂದ ಶುಭ ಹಾರೈಸಿದರು. ಅಧ್ಯಾಪಕ ಕೃಷ್ಣಭಟ್ ಎಂ. ನಿರ್ವಹಿಸಿದರು.

ಟಿಸಿಎಸ್ ಕಾರ್ಪೊರೇಟ್ ಜಿಹಾದ್, ಮತಾಂತರದ ವಿರುದ್ಧ ವಿಹಿಂಪ, ಬಜರಂಗದಳ ಬಂಟ್ವಾಳ ಪ್ರಖಂಡ ಪ್ರತಿಭಟನೆ

ಧರ್ಮದ ಮೇಲಿನ ಆಕ್ರಮಣ ಎದುರಿಸಲು ಹಿಂದು ಸಮಾಜ ಜಾಗೃತವಾಗಬೇಕಿದೆ

ಬಂಟ್ವಾಳ: ವಿಶ್ವ ಹಿಂದೂ ಪರಿಷದ್ ಮತ್ತು ಬಜರಂಗದಳ ಬಂಟ್ವಾಳ ಪ್ರಖಂಡದ ವತಿಯಿಂದ ಟಿಸಿಎಸ್ ಕಾರ್ಪೊರೇಟ್ ಜಿಹಾದ್ ಹಾಗೂ ಮತಾಂತರದ ವಿರುದ್ಧ ಪ್ರತಿಭಟನೆ ಬಿ.ಸಿ ರೋಡಿನಲ್ಲಿ ಶನಿವಾರ ರಾತ್ರಿ ನಡೆಯಿತು.
ಪ್ರತಿಭಟನೆಯನ್ನುದ್ದೇಶಿಸಿ ಹಿಂದು ನಾಯಕ ಮುರಳಿಕೃಷ್ಣ ಹಸಂತಡ್ಕ ಅವರು ಮಾತನಾಡಿ, ಹಿಂದು ಸಮಾಜ ಲವ್ ಜಿಹಾದ್‌ನ ಪ್ರಕರಣಗಳಿಂದ ತನ್ನನ್ನು ತಾನು ರಕ್ಷಿಸಿಕೊಳ್ಳಲು ಸಿದ್ಧವಿದ್ದು, ಇದೇ ರೀತಿ ಸಮಾಜದ ಮೇಲೆ ಆಕ್ರಮಣ ಮುಂದುವರಿದರೆ ತೀವ್ರ ಪರಿಣಾಮ ಎದುರಿಸಬೇಕಾದಿತು ಎಂದು ಎಚ್ಚರಿಸಿದರು.
ವಿಶ್ವ ಹಿಂದೂ ಪರಿಷದ್ ಬಂಟ್ವಾಳ ಪ್ರಖಂಡದ ಅಧ್ಯಕ್ಷ, ನ್ಯಾಯವಾದಿ ಪ್ರಸಾದ್‌ಕುಮಾರ್ ರೈ



ಮಾತನಾಡಿ, ಸಾವಿರಾರು ವರ್ಷಗಳಿಂದ ಹಿಂದೂ ಸಮಾಜ ನಿರಂತರವಾಗಿ ಆಕ್ರಮಣಗಳನ್ನು ಎದುರಿಸಿಕೊಂಡು ಬದುಕಿ ಉಳಿದಿದೆ. ಈಗ ಜಿಹಾದಿಶಕ್ತಿಗಳು ತಮ್ಮ ಬಣ್ಣ ಬದಲಾಯಿಸಿ 2047ಕ್ಕೆ ಭಾರತವನ್ನು ಇಸ್ಲಾಮಿಕರಣಗೊಳಿಸುವ ಕಾರ್ಯಕ್ಕೆ ಮುಂದಾಗಿದ್ದಾರೆ. ಶಾಲಾ ಕಾಲೇಜು, ಜಿಮ್‌ಗಳು. ಸಾರ್ವಜನಿಕ ಕ್ಷೇತ್ರವಾದ ಕಾರ್ಪೊರೇಟ್ ಕಂಪನಿಗಳ ಮೂಲಕ ಲವ್ ಜಿಹಾದ್‌ಗಳನ್ನು ಮಾಡುತ್ತ ನಿರಂತರವಾಗಿ ಆಕ್ರಮಣ ಮುಂದುವರಿದಿದೆ. ಇದನ್ನು ಸಮರ್ಥವಾಗಿ ಎದುರಿಸಲು ಹಿಂದು

- **ಹಿಂದು ಸಮಾಜ ಲವ್ ಜಿಹಾದ್‌ನ ಪ್ರಕರಣಗಳು ಇದೇ ರೀತಿ ಮುಂದುವರಿದರೆ ತೀವ್ರ ಪರಿಣಾಮ ಎದುರಿಸಬೇಕಾದಿತು**
- **ಶಾಲಾ ಕಾಲೇಜು, ಜಿಮ್‌ಗಳು. ಸಾರ್ವಜನಿಕ ಕ್ಷೇತ್ರವಾದ ಕಾರ್ಪೊರೇಟ್ ಲವ್ ಜಿಹಾದ್ ಮೂಲಕ ಧರ್ಮದ ಮೇಲೆ ನಿರಂತರ ಆಕ್ರಮಣ**
- **ಆಕ್ರಮಣ ಎದುರಿಸಲು ಹಿಂದೂ ಸಮಾಜವನ್ನು ಜಾಗೃತಗೊಳಿಸಬೇಕಾಗಿದೆ**

ಸಮಾಜವನ್ನು ಜಾಗೃತಗೊಳಿಸಬೇಕಾಗಿದೆ ಎಂದು ಹೇಳಿದರು.
ಹಿಂದೂ ಜಾಗರಣ ವೇದಿಕೆಯ ಜಿಲ್ಲಾ ಸಂಯೋಜಕ್ ನರಸಿಂಹ ಮಾಣಿ ಮಾತನಾಡಿ, ನಮ್ಮ ಸಮಾಜದ ರಕ್ಷಣೆಗೆ ನಾವು ಕಟಿಬದ್ಧರಾಗಬೇಕಾಗಿದೆ ಎಂದು ಹೇಳಿದರು.
ಈ ಸಂದರ್ಭದಲ್ಲಿ ಹಿಂದೂ ಮುಖಂಡರಾದ ಸರಪಾಡಿ ಅಶೋಕ್ ಶೆಟ್ಟಿ ಶ್ರೀಧರ್ ತೆಂಕಿಲ, ರಾಜಾರಾಮ್ ಐತಾಳ್ ಕಲ್ಲಡ್ಕ, ಗೋವಿಂದ ಪ್ರಭು ಬಂಟ್ವಾಳ, ಪ್ರಶಾಂತ್ ಕೆಂಪುಗುಡ್ಡೆ, ಸುದರ್ಶನ್ ಬಜ, ಬಂಟ್ವಾಳ ಪ್ರಖಂಡದ ಪ್ರಮುಖರು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.
ಬಜರಂಗದಳದ ಜಿಲ್ಲಾ ಸುರಕ್ಷಾ ಪ್ರಮುಖ್ ಸಂತೋಷ್ ಸರಪಾಡಿ ಸ್ವಾಗತಿಸಿ,ಕಾರ್ಯಕ್ರಮ ನಿರೂಪಿಸಿದರು. ನೂರಾರು ಸಂಖ್ಯೆಯಲ್ಲಿ ಹಿಂದೂ ಕಾರ್ಯಕರ್ತರು ಈ ಸಂದರ್ಭದಲ್ಲಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಸುತ್ತಮುತ್ತ

ಫ್ಯಾಷನ್ ಡಿಸೈನಿಂಗ್‌ನಲ್ಲಿ ಪದವಿ: ಅರ್ಜಿ ಆಹ್ವಾನ

ಕಾಸರಗೋಡು: ಕೇಂದ್ರ ಜವುಳಿ ಸಚಿವಾಲಯದ ಅಧೀನದಲ್ಲಿರುವ ಉಡುಪು ತರಬೇತಿ , ವಿನ್ಯಾಸ ಕೇಂದ್ರದ ಕಣ್ಣೂರು ಮತ್ತು ತಳಿಪರಂಬ ಕೇಂದ್ರಗ ಳಲ್ಲಿ 3 ವರ್ಷಗಳ ಫ್ಯಾಷನ್ ವಿನ್ಯಾಸ , ಚಿಲ್ಲರೆ ವ್ಯಾಪಾರ, ಉಡುಪು ತಯಾರಿಕೆ ಹಾಗೂ ಉದ್ಯಮಶೀಲತಾ ಕೋರ್ಸ್‌ಗಳು ಮತ್ತು ಒಂದು ವರ್ಷದ ಫ್ಯಾಷನ್ ವಿನ್ಯಾಸ ತಂತ್ರಜ್ಞಾನ ಡಿಪ್ಲೊಮಾ ಕೋರ್ಸ್‌ಗೆ ಪ್ಲಸ್ ಟು ಅರ್ಹತೆ ಪಡೆದ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಕಾಸರಗೋಡು ಜಿಲ್ಲೆಯ ನಿವಾಸಿಗಳು ಅರ್ಜಿಗಳನ್ನು ಅಪ್ಯಾರಲ್ ಟ್ರೈನಿಂಗ್ ಮತ್ತು ಡಿಸೈನ್ ಸೆಂಟರ್, ಕಿನ್ ಫ್ರಾ ಟೆಕ್ಸ್‌ಟೈಲ್ ಸೆಂಟರ್, ನಾಡುಕಣಿ, ಪಳ್ಳಿವಾಯಲ್ ಪಿ.ಒ., ತಳಿಪರಂಬ, ಕಣ್ಣೂರು – 670142 ಕಳುಹಿಸಬಹುದು. ಮಾಹಿತಿಗೆ 9995004269 ಅಥವಾ 8301030362 ಕರೆ ಮಾಡಬಹುದು.

ಪ್ರವೇಶಾತಿ ಪ್ರಾರಂಭ

ಕಾಸರಗೋಡು: ಜಿಲ್ಲೆಯ ಕುಂಡಂಗುಳಿಯಲ್ಲಿರುವ ಸಾವಿತ್ರಿ ಭಾಯಿ ಫುಲೆ ಸ್ಮಾರಕ ಆಶ್ರಮ ಶಾಲೆಯಲ್ಲಿ (ಇಂಗ್ಲಿಷ್ ಮಾಧ್ಯಮ, ರಾಜ್ಯ ಪಠ್ಯಕ್ರಮ) 2 ರಿಂದ 5ನೇ ತರಗತಿಯ ವರೆಗೆ ಖಾಲಿ ಇರುವ ಸೀಟುಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಕೊರಗ ವರ್ಗಕ್ಕೆ ಆದ್ಯತೆ ನೀಡಲಾಗುವುದು. ಆದಾಯ ಮಿತಿ 2 ಲಕ್ಷ ರೂ. ಮೀರಬಾರದು. ಪೋಷಕರು ಕೇಂದ್ರ ಅಥವಾ ರಾಜ್ಯ ಸಾರ್ವಜನಿಕ ವಲಯದ ಸಂಸ್ಥೆಗಳ ಉದ್ಯೋಗಿಗಳಲ್ಲ ಎಂದು ತಿಳಿಸುವ ಅಫಿಡವಿಟ್‌ನ್ನು ಅರ್ಜಿಯೊಂದಿಗೆ ಸಲ್ಲಿಸಬೇಕು. ಪರಿಶಿಷ್ಟ ಪಂಗಡಕ್ಕೆ ಸೇರಿದ ಮಕ್ಕಳ ವಸತಿ ನಿಲಯದಲ್ಲಿ ಉಳಿದು ಅಧ್ಯಯನ ಮಾಡಲು ಆಸಕ್ತಿ ಹೊಂದಿರುವ ಪೋಷಕರು ಅಗತ್ಯದ ದಾಖಲೆಗಳೊಂದಿಗೆ ಶಾಲೆಗೆ ಖುದ್ದಾಗಿ ಅರ್ಜಿಗಳನ್ನು ಸಲ್ಲಿಸಬೇಕು. ಅರ್ಜಿಗಳನ್ನು ಮೇ 2 ರಿಂದ 15ರ ತನಕ ಸ್ವೀಕರಿಸಲಾಗುತ್ತದೆ. ಹೆಚ್ಚಿನ ವಿವರಗಳಿಗೆ 8129107016 ಅಥವಾ 9947886384 ಸಂಪರ್ಕಿಸಬಹುದು.

ಜಿಲ್ಲೆಯಲ್ಲಿ ಅಘೋಷಿತ ವಿದ್ಯುತ್ ಲೋಡ್ ಶೆಡ್ಡಿಂಗ್

ಕಾಸರಗೋಡು: ಬೇಸಿಗೆ ಕಾಲದಲ್ಲಿ ವಿದ್ಯುತ್ ಲೋಡ್ ಶೆಡ್ಡಿಂಗ್ ಅಥವಾ ಪವರ್ ಕಟ್ ಏರ್ಪಡಿಸು ವುದಿಲ್ಲ ಎಂದು ರಾಜ್ಯ ವಿದ್ಯುತ್ ಇಲಾಖೆ ಭರವಸೆ ನೀಡಿದ್ದರೂ, ಅದಕ್ಕೆ ತದ್ವಿರುದ್ಧವಾಗಿ ಕಾಸರಗೋಡು ಜಿಲ್ಲೆಯಲ್ಲಿ ಅಘೋಷಿತ ಲೋಡ್ ಶೆಡ್ಡಿಂಗ್ ಜಾರಿಗೆ ಬಂದಿದೆ. ಬೇಸಿಗೆ ಕಾಲದಲ್ಲಿ ಜಿಲ್ಲೆಯಲ್ಲಿ ವಿದ್ಯುತ್ ಉಪಯೋಗ ದಿನ ಕಳೆದಂತೆ ಹೆಚ್ಚುತ್ತಿದ್ದು, ಸಾರ್ವಕಾಲಿಕ ದಾಖಲೆಯತ್ತ ಸಾಗಿದೆ. ಇದರಿಂದಾಗಿ ಪದೇ ಪದೇ ವಿದ್ಯುತ್ ಮೊಟಕು ಕೈಗೊಳ್ಳಲಾಗುತ್ತಿರುವುದಾಗಿ ಹೇಳಲಾಗುತ್ತಿದೆ.

ಜಿಲ್ಲೆಯಲ್ಲಿ ಹಾಲು ಉತ್ಪಾದನೆ ಕುಸಿತ

ಕಾಸರಗೋಡು: ಬಿಸಿಲಿನ ತಾಪಮಾನ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಕಾಸರಗೋಡು ಜಿಲ್ಲೆಯಲ್ಲಿ ಹಾಲು ಉತ್ಪಾದನೆ ಬಹಳಷ್ಟು ಇಳಿಮುಖಗೊಂಡಿದೆ. ಏ.15ರ ಅನಧಿಕೃತ ಲೆಕ್ಕಾಚಾರವೊಂದರ ಪ್ರಕಾರ ಜಿಲ್ಲೆಯಲ್ಲಿ ಹಾಲು ಉತ್ಪಾದನೆಯಲ್ಲಿ 600 ಲೀಟರ್‌ನಷ್ಟು ಕುಸಿತ ಕಂಡುಬಂದಿದೆ. ಆದರೆ ಇದು ಅಂದಾಜು ಲೆಕ್ಕಾಚಾರವಾಗಿದೆ.
ಏಪ್ರಿಲ್ ತಿಂಗಳ ಹಾಲು ಉತ್ಪಾದನೆಯ ಅಧಿಕೃತ ಅಂಕಿ ಅಂಶ ಈ ತನಕ ಬಿಡುಗಡೆಯಾಗಿಲ್ಲ, ಅದು ಲಭಿಸಿದಲ್ಲಿ ಮಾತ್ರ ಸ್ಪಷ್ಟ ಚಿತ್ರಣ ಹೊರಬೀಳಬಹುದು ಎಂದು ಹೈನುಗಾರಿಕಾ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ. ಈ ಮಧ್ಯೆ ಉತ್ಪಾದನಾ ವೆಚ್ಚಕ್ಕೆ ಹೊಂದಿಕೊಂಡು ಆದಾಯ ದೊರಕುತ್ತಿಲ್ಲ ಎಂಬ ದೂರುಗಳು ಹೈನುಗರಿಕಾ ಕೃಷಿಕರಿಂದ ಕೇಳಿಬರುತ್ತಿವೆ. ಹಾಲಿನ ಬೆಲೆ ಏರಿಸಿದಲ್ಲಿ ಮಾತ್ರವೇ ಇದಕ್ಕೆ ಪರಿಹಾರ ದೊರಕಲಿದೆ ಎಂದು ಕೃಷಿಕರು ಹೇಳುತ್ತಾರೆ.

ಕುಂಬಳೆಯಲ್ಲಿ ವಿದ್ಯುತ್ ಸಗಿತ: ಬಿಜೆಪಿ ಪ್ರತಿಭಟನೆಗೆ ಸಿದ್ಧತೆ

ಕುಂಬಳೆ: ಕುಂಬಳೆ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ವ್ಯಾಪಕವಾಗಿ ವಿದ್ಯುತ್ ಸ್ಥಗಿತಗೊಳ್ಳುತ್ತಿದ್ದು, ಇದರ ವಿರುದ್ಧ ಕ್ರಮ ಕೈಗೊಳ್ಳದಿದ್ದರೆ ತೀವ್ರ ಹೋರಾಟಕ್ಕೆ ಸನ್ನದ್ಧರಾಗಬೇಕಾದೀತು ಎಂದು ಬಿಜೆಪಿ ಕುಂಬಳೆ ಪಂಚಾಯತ್ ಸಮಿತಿ ಸಭೆಯು ಎಚ್ಚರಿಸಿದೆ.
ಪಂಚಾಯತ್ ವ್ಯಾಪ್ತಿಯಲ್ಲಿ ಪದೇ ಪದೇ ವಿದ್ಯುತ್ ಸ್ಥಗಿತಗೊಳ್ಳುತ್ತಿರುವುದರಿಂದ ಕೃಷಿಕರು, ವ್ಯಾಪಾರಿಗಳು, ಜನಸಾಮಾನ್ಯರು ಸಂಕಷ್ಟ ಅನುಭವಿಸುತ್ತಿದ್ದಾರೆಂದು ಬಿಜೆಪಿ ಸಭೆಯಲ್ಲಿ ತಿಳಿಸಲಾಯಿತು. ವಿದ್ಯುತ್ ಇಲಾಖೆ ಅಧಿಕಾರಿಗಳ ಅನಾಸ್ಥೆಯಿಂದಾಗಿ ಈ ಸ್ಥಿತಿ ನಿರ್ಮಾಣಗೊಂಡಿದೆ. ಶೀಘ್ರವೇ ಸಮಸ್ಯೆ ಪರಿಹಾರಕ್ಕೆ ಕ್ರಮ ಕೈಗೊಳ್ಳದಿದ್ದಲ್ಲಿ ಬಿಜೆಪಿ ಪ್ರಬಲ ಪ್ರತಿಭಟನೆ ನಡೆಸಲಿದೆ ಎಂದು ಸಭೆಯಲ್ಲಿ ಮುನ್ನೆಚ್ಚರಿಕೆ ನೀಡಲಾಯಿತು.
ಕುಂಬಳೆ ಬಿಜೆಪಿ ಕಚೇರಿಯಲ್ಲಿ ಜರಗಿದ ಸಭೆಯಲ್ಲಿ ಪಂಚಾಯತ್ ಸಮಿತಿಯ ಅಧ್ಯಕ್ಷ ಕೆ.ಸುಜಿತ್ ರೈ ಅಧ್ಯಕ್ಷತೆ ವಹಿಸಿದ್ದರು. ಮಂಡಲ ಉಪಾಧ್ಯಕ್ಷ ವಿಕ್ರಮ್ ಪೈ ಉದ್ಘಾಟಿಸಿ ಮಾತನಾಡಿದರು. ಪಂಚಾಯತ್ ಸದಸ್ಯರಾದ ರಮೇಶ್ ಭಟ್ ಕುಂಬಳೆ, ಕಾಂಚಾರ, ಕೇಶವ ಶಾಂತಿಪಳ್ಳ, ರಾಮಚಂದ್ರ ಕೋಟೆಕಾರು, ಪಂಚಾಯತ್ ಸಮಿತಿಯ ಪ್ರಧಾನ ಕಾರ್ಯದರ್ಶಿ ವಿವೇಕಾನಂದ ಶೆಟ್ಟಿ ಗೋಪಾಲ ಪೂಜಾರಿ ಮುಂತಾದವರು ಮಾತನಾಡಿದರು.

ಅರ್ಜಿಗಳ ಆಹ್ವಾನ

ಮುಳ್ಳೇರಿಯ: ಕಾಸರಗೋಡು ಜಿಲ್ಲೆಯ ಆಡೂರಿನಲ್ಲಿರುವ ಸರಕಾರಿ ಪ್ರಿ ಮೆಟ್ರಿಕ್ ಹಾಸ್ಟೆಲ್‌ನಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷಕ್ಕೆ ಖಾಲಿಯಿರುವ 9 ಸೀಟುಗಳಿಗೆ ಮಕ್ಕಳಿಂದ ಅರ್ಜಿಗಳ ಆಹ್ವಾನಿಸಲಾಗಿದೆ. 5 ರಿಂದ 10ನೇ ತರಗತಿಯ ಪರಿಶಿಷ್ಟ ಜಾತಿಯ ಬಾಲಕರು ಅರ್ಜಿ ಸಲ್ಲಿಸಬಹುದು.
ಅರ್ಜಿಗಳನ್ನು ದಾಖಲೆಗಳೊಂದಿಗೆ ಮೇ 20 ರೊಳಗೆ ಕಾರಡ್ಕ ಬ್ಲಾಕ್ ಪರಿಶಿಷ್ಟ ಜಾತಿ ಅಭಿವೃದ್ಧಿ ಕಚೇರಿಗೆ ಸಲ್ಲಿಸಬೇಕು. ಈ ಬಗ್ಗೆ ಹೆಚ್ಚಿನ ಮಾಹಿತಿಗೆ 9656701575 ಅಥವಾ 9188920096 ಕರೆ ಮಾಡಬಹುದು.

ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದಲ್ಲಿ ಸಂಭ್ರಮ | ರಾಘವೇಶ್ವರ ಶ್ರೀ ಆಶೀರ್ವಚನ

ಬ್ರಹ್ಮಕಲಶೋತ್ಸವದಿಂದ ನಾಡಿನ ಸಮಗ್ರ ಅಭಿವೃದ್ಧಿ ಸಾಧ್ಯ


ಬದಿಯಡ್ಕ: ಜೀರ್ಣೋದ್ಧಾರಗೊಂಡ ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನವು ಅತ್ಯಂತ ರಮ್ಯಾದ್ಭುತವಾಗಿದೆ. ದೇವಾಲಯವು ಹೇಗಿರ ಬೇಕೋ ಹಾಗೇ ಬದಲಾಗಿದೆ. ಬಹಳಷ್ಟು ಮಂದಿ ಊರು ಬಿಟ್ಟು ಹೊರಹೋಗಿದ್ದರೂ ಉದನೇಶ್ವರನ ಮೂಲಕ ಭಕ್ತರು ಒಂದಾಗಿದ್ದಾರೆ. ಉದನೇಶ್ವರನ ಬಿಟ್ಟು ದೂರಹೋಗಿಲ್ಲ, ಜೀವನಕ್ಕೋಸ್ಕರ ಹೊರರಾಜ್ಯದಲ್ಲಿದ್ದರೂ ಅವರೆಲ್ಲರೂ ಉದನೇಶ್ವರನ ಭಕ್ತರಾಗಿಯೇ ಇದ್ದಾರೆ ಎಂದು ಶ್ರೀ ಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳು ಹೇಳಿದ್ದಾರೆ.
ಪೆರಡಾಲ ಶ್ರೀ ಉದನೇಶ್ವರ ದೇವಳ ನವೀಕರಣ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶ ಸಮಾರಂಭದ ನಟರಾಜ ವೇದಿಕೆಯಲ್ಲಿ ಭಾನುವಾರ ಜರಗಿದ ಧಾರ್ಮಿಕ ಸಭೆಯಲ್ಲಿ ಭಾಗವಹಿಸಿ ಅವರು ಆಶೀರ್ವಚನ ನೀಡಿದರು.
ಅನೇಕ ಪರದೇಶಿಯರು ಬಂದು ಭಾರತವನ್ನು ಕೊಳ್ಳೆ ಹೊಡೆಯುತ್ತಿದ್ದರು. ಇಂದು ನಮ್ಮವರೇ ಉದ್ಯೋಗಕ್ಕಾಗಿ ಅನ್ಯ ದೇಶಕ್ಕೆ ತೆರಳುತ್ತಿದ್ದಾರೆ. ತಂತ್ರ, ಜ್ಯೋತಿಷ್ಯದಂತಹ ಹಲವಾರು ಪಾರಂಪರಿಕ ವಿದ್ಯೆಯ ಶ್ರೀಮಂತಿಕೆ ಇರುವ ಈ ನಾಡಿನ ಸ್ಥಿತಿ ಅಧೋಗತಿಯಾಗಬಾರದು. ಉದನೇಶ್ವರನ ಬಳಿ ಎಷ್ಟೇ ಕೆಟ್ಟವರಾದರೂ ಒಳ್ಳೆಯವರಾಗಿ ಪರಿವರ್ತಿತರಾಗುತ್ತಾರೆ. ಕ್ಷೇತ್ರಗಳ ಬ್ರಹ್ಮಕಲಶದಿಂದ ನಾಡಿನ ಸಮಗ್ರ ಅಭಿವೃದ್ಧಿ ಸಾಧ್ಯವಿದೆ ಎಂದರು.
ಶ್ರೀ ಕ್ಷೇತ್ರಕ್ಕೆ ಆಗಮಿಸಿದ ರಾಘವೇಶ್ವರ ಶ್ರೀಗಳನ್ನು ಪೂರ್ಣಕುಂಭ, ಮುತ್ತುಕೊಡೆ, ಬ್ಯಾಂಡ್ ವಾದ್ಯಗಳೊಂದಿಗೆ ಸ್ವಾಗತಿಸಲಾಯಿತು. ಶ್ರೀ ದೇವರ ದರ್ಶನಗೈದ ಅವರು ಬ್ರಹ್ಮಶ್ರೀ ರವೀಶ ತಂತ್ರಿ ಕುಂಟಾರು ಅವರೊಂದಿಗೆ ಬ್ರಹ್ಮಕಲಶದ ಬಗ್ಗೆ ಸಮಾಲೋಚನೆ ನಡೆಸಿ ಮೆಚ್ಚುಗೆ ವ್ಯಕ್ತಪಡಿಸಿದರು.
ಸಭಾ ಕಾರ್ಯಕ್ರಮದಲ್ಲಿ ಸತ್ಯನಾರಾಯಣ ಶರ್ಮ ಪಂಜಿತ್ತಡ್ಕ ಪ್ರಸ್ತಾವನೆಗೈದರು. ಬ್ರಹ್ಮಕಲಶ ಸಮಿತಿ ಅಧ್ಯಕ್ಷ, ಕೊಡುಗೈದಾನಿ, ಉದ್ಯಮಿ ಬಿ. ವಸಂತ ಪೈ ಬದಿಯಡ್ಕ, ಕಾರ್ಯಾಧ್ಯಕ್ಷ ಜಗನ್ನಾಥ ರೈ ಪೆರಡಾಲಗುತ್ತು, ಕೋಶಾಧಿಕಾರಿ ಸೂರ್ಯನಾರಾಯಣ ಬಿ., ಪ್ರಧಾನ ಕಾರ್ಯದರ್ಶಿ ನಿರಂಜನ ರೈ ಪೆರಡಾಲ ಮತ್ತಿತರರು ಈ ಸಂದರ್ಭ ಇದ್ದರು.





ಪೆರಡಾಲ ಶ್ರೀ ದೇವರಿಗೆ ಬ್ರಹ್ಮಕಲಶಾಭಿಷೇಕ

ಬದಿಯಡ್ಕ: ಸಹಸ್ರಾರು ಮಂದಿ ಭಗವದ್ಭಕ್ತರ ಶ್ರದ್ಧಾಭಕ್ತಿಯ ಪ್ರಾರ್ಥನೆಯೊಂದಿಗೆ ಪೆರಡಾಲ ಶ್ರೀ ಉದನೇಶ್ವರ ದೇವರಿಗೆ ಕ್ಷೇತ್ರಾಚಾರ್ಯ ಬ್ರಹ್ಮಶ್ರೀ ರವೀಶ ತಂತ್ರಿ ಕುಂಟಾರು ಬ್ರಹ್ಮಕಲಶಾಭಿಷೇಕ ನೆರವೇರಿಸಿದರು. ಭಾನುವಾರ ಪ್ರಾತಃಕಾಲ ಗಣಪತಿ ಹೋಮ, ಗೋವಿನ ದರ್ಶನದೊಂದಿಗೆ ಕವಾಟೋದ್ಘಾಟನೆ ನಡೆಯಿತು. ಶ್ರೀ ದೇವರನ್ನು ಪ್ರಾರ್ಥಿಸಿದ ತಂತ್ರಿಗಳು ದೇವಸ್ಥಾನದ ಗರ್ಭಗುಡಿಯ ಬಾಗಿಲನ್ನು ತೆರೆದರು. ಕವಾಟಬಂಧನದ ಸಂದರ್ಭ ಉರಿಸಿದ 3 ಭದ್ರದೀಪಗಳು ಬೆಳಗುತ್ತಿರಲು ಶ್ರೀ ದೇವರಿಗೆ ಶುದ್ಧ ದೇಶೀಯ ತಳಿಯ ಗೋವಿನ ದರ್ಶನ ಮಾಡಲಾಯಿತು. ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರ ದಿವ್ಯ ಉಪಸ್ಥಿತಿಯಲ್ಲಿ ಸಹಸ್ರ ಕಲಶಾಭಿಷೇಕ



– ಬ್ರಹ್ಮಕಲಶಾಭಿಷೇಕ, ಅವಭೃತ ಪ್ರೋಕ್ಷಣೆ, ಮಹಾಪೂಜೆ, ಮಂಗಲ ಮಂತ್ರಾಕ್ಷತೆ ನಡೆಯಿತು. ಊರಪರವೂರ ಭಕ್ತರು ಪಾಲ್ಗೊಂಡಿದ್ದರು.

ಮೆಡಿಸೆಪ್ ಯೋಜನೆ ಸರಳಗೊಳಿಸಿ, ಆಸ್ಪತ್ರೆಗಳ ಸಂಖ್ಯೆಯ ಹೆಚ್ಚಿಸಬೇಕು: ಬಿಆರ್‌ಪಿಎಂಎಸ್



ಕಾಸರಗೋಡು: ಕೇರಳ ಸರಕಾರ ಜಾರಿಗೊಳಿಸಿರುವ ಮೆಡಿಸೆಪ್ ಯೋಜನೆಯ ಪ್ರಯೋಜನ ಅತ್ಯಂತ ಸುಲಭ ರೀತಿಯಲ್ಲಿ ದೊರಕುವಂತೆ ಮಾಡಿ ಯೋಜನೆಯ ಸೌಲಭ್ಯ ದೊರಕುವ ಆಸ್ಪತ್ರೆಗಳ ಸಂಖ್ಯೆ ಅಧಿಕಗೊಳಿಸಬೇಕೆಂದು ಭಾರತೀಯ ರಾಜ್ಯ ಪೆನ್ಷನರ್ಸ್ ಮಹಾಸಂಘವು ಕೇರಳ ಸರಕಾರವನ್ನು ಒತ್ತಾಯಿಸಿದೆ.
ಈ ಯೋಜನೆ ಪ್ರಕಾರ ಸೌಲಭ್ಯ ಪಡೆ ಯಲು ಈಗಿರುವ ವ್ಯವಸ್ಥೆಯು ಕಠಿಣ ವಾಗಿದ್ದು, ಆಸ್ಪತ್ರೆಗಳ ಸಂಖ್ಯೆ ಬಹಳ ಕಡಿಮೆಯಿದೆ. ಇದರಿಂದೆವಯೋಜನರಾದ ಪೆನ್ಷನರ್ಸ್ ಸುಲಭವಾಗಿ ಬಹಳ ಕಷ್ಟ ಅನುಭವಿಸುವಂತಾಗಿದೆ. ಆದ್ದರಿಂದ ಈ ಯೋಜನೆಯ ಸೌಲಭ್ಯ ಸುಲಭದಲ್ಲಿ ದೊರಕುವಂತೆ ವ್ಯವಸ್ಥೆಗೊಳಿಸಬೇಕಾಗಿದೆ ಎಂದು ಸಂಘದ ಜಿಲ್ಲಾ ಕಾರ್ಯಕರ್ತರ ಸಭೆಯಲ್ಲಿ ಸರಕಾರಕ್ಕೆ ಮನವಿ ಸಲ್ಲಿಸಲು ತೀರ್ಮಾನಿಸಲಾಗಿದೆ.
ಅಲ್ಲದೆ ಕಳನಾಡು ರೈಲ್ವೆ ನಿಲ್ದಾಣದಲ್ಲಿ ಪ್ರಾದೇಶಿಕ ಜನರ ಅನುಕೂಲಕ್ಕಾಗಿ ಕೊಯಂಬತ್ತೂರು - ಮಂಗಳೂರು ರೈಲುಗಾಡಿಗೆ ನಿಲುಗಡೆ ಮಂಜೂರುಗೊಳಿಸಬೇಕೆಂದು ಕೇಂದ್ರ ಸರಕಾರಕ್ಕೆ ಮನವಿ ಸಲ್ಲಿಸಲು ತೀರ್ಮಾನಿಸಲಾಯಿತು.
ಸಂಘದ ಜಿಲ್ಲಾಧ್ಯಕ್ಷ ಕೆ.ಬಾಲಕೃಷ್ಣ ಅಧ್ಯಕ್ಷತೆ ವಹಿಸಿದ್ದರು. ರಾಷ್ಟ್ರೀಯ ಅಧ್ಯಕ್ಷ ಸಿ.ಎಚ್. ಸುರೇಶ್ ಸಂಘದ ಬೆಳವಣಿಗೆ ಹಾಗೂ ಚಟುವಟಿಕೆಗಳ ಕುರಿತು ವಿವರಿಸಿದರು. ರಕ್ಷಾಧಿಕಾರಿ ಬಾಲಕೃಷ್ಣ ಮಲ್ಲಿಗೆಮಾಡು, ರಾಷ್ಟ್ರೀಯ ಕೋಶಾಧಿಕಾರಿ ದಯಾನಂದ ಮುಜುಂಗಾವು, ಹಿರಿಯ ಸದಸ್ಯರಾದ ಚಂದ್ರು, ಉಮಾದೇವಿ, ಜಿಲ್ಲಾ ಕೋಶಾಧಿಕಾರಿ ಮಾಧವನ್ ನಾಯರ್, ಬಾಲಚಂದ್ರ ಕೂಡ್ಲು, ರವೀಂದ್ರನ್ ನಾಯರ್ ಚಾತಂಗೈ, ಬಿ.ಸತೀಶ, ಗೋಪಾಲನ್, ಸಿ.ಎಚ್.ಶ್ರೀಧರ ಮುಂತಾದವರು ಮಾತನಾಡಿದರು.
ಕೆ.ಎನ್.ಶ್ರೀಕಾಂತನ್ ಸ್ವಾಗತಿಸಿ, ಎ.ಮುರಳೀಧರನ್ ವಂದಿಸಿದರು.

41ನೇ ವರ್ಷದ ಕೇರಳ ಎನ್‌ಜಿಒ ಸಂಘದ ಕಾಸರಗೋಡು ಜಿಲ್ಲಾ ಸಮ್ಮೇಳನ ಉದ್ಘಾಟನೆ



ಕಾಸರಗೋಡು: ಕೇರಳ ರಾಜ್ಯ ಸರಕಾರಿ ನೌಕರರ ತುಟ್ಟಿಭತ್ಯೆ, ವೇತನ ಪರಿಷ್ಕರಣೆ, ಲೀವ್ ಸರಂಡರ್ ಸಹಿತವಿರುವ ಸೌಲಭ್ಯಗಳನ್ನುಸಮಯಕ್ಕೆಸರಿಯಾಗಿಮಂಜೂರುಗೊಳಿಸಬೇಕೆಂದು ಕೇರಳ ಎನ್‌ಜಿಒ ಸಂಘದ ಕೇರಳ ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್. ರಾಜೇಶ್ ರಾಜ್ಯ ಸರಕಾರವನ್ನು ಒತ್ತಾಯಿಸಿದ್ದಾರೆ.
ಕಾಸರಗೋಡು ಕೋ ಓಪರೇಟಿವ್ ಟೌನ್ ಬ್ಯಾಂಕ್ ಸೆಂಟಿನರಿ ಸಭಾಂಗಣದಲ್ಲಿ ಭಾನುವಾರ ಜರಗಿದ ಕೇರಳ ಎನ್‌ಜಿಒ ಸಂಘದ 41ನೇ ಕಾಸರಗೋಡು ಜಿಲ್ಲಾ ಸಮ್ಮೇಳನವನ್ನು ದೀಪ ಬೆಳಗಿಸಿ ಉದ್ಘಾಟಿಸಿ ಅವರು ಮಾತನಾಡಿದರು.
ನೌಕರರನ್ನು ಅವಗಣಿಸಿ ಸೌಲಭ್ಯ ಮತ್ತು ಹಕ್ಕುಗಳಿಗೆ ತಡೆಯೊಡ್ಡಿ ದ್ರೋಹ ಬಗೆದ ಪಿಣರಾಯಿ ವಿಜಯನ್ ಸರಕಾರದ ನೀತಿ ಸಿವಿಲ್ ಸರ್ವೀಸ್‌ನ ಕಾರ್ಯದಕ್ಷತೆ ಅಧಃಪತನಗೊಳಿಸುತ್ತಿದೆ. ಸರಕಾರದ ಕ್ಷೇಮ ಅಭಿವೃದ್ಧಿ ಯೋಜನೆ ಜನರೆಡೆಗೆ ತಲುಪಿಸು ವುದಕ್ಕಾಗಿ ಕಾರ್ಯಾಚರಿಸುವ ನೌಕರರನ್ನು ವಿಶ್ವಾಸಕ್ಕೆತೆಗೆದುಕೊಳ್ಳುವುದರ ಮೂಲಕ ಮಾತ್ರ ಸಂತೃಪ್ತಿ-ಕಾರ್ಯದಕ್ಷತೆಯಿಂದ ಕೂಡಿದ ಸಿವಿಲ್ ಸರ್ವೀಸ್‌ನ್ನು ಸಾಕಾರಗೊಳಿಸಬಹುದು ಎಂದರು.
ಜಿಲ್ಲಾಧ್ಯಕ್ಷ ಕೆ.ರಂಜಿತ್ ಅಧ್ಯಕ್ಷತೆ ವಹಿಸಿದ್ದರು. ರಾಜ್ಯಕೋಶಾಧಿಕಾರಿಸಜೀವನ್‌ಚಾಯೋತ್ತ್, ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಪಿ.ಪೀತಾಂಬರನ್, ಬಿಎಂಎಸ್ ಜಿಲ್ಲಾ ಜೊತೆ ಕಾರ್ಯದರ್ಶಿ ಪಿ. ದಿನೇಶ್ ಬಂಬ್ರಾಣ, ಎನ್‌ಟಿಯು ಜಿಲ್ಲಾಧ್ಯಕ್ಷ ಕೃಷ್ಣನ್ ಮಾಸ್ಟರ್, ಕೆ.ರಾಜೇಶ್, ಪಿ.ಸಿ. ಸುನಿಲ್, ಕೆ.ರವಿಕುಮಾರ್ ಮಾತನಾಡಿದರು.

ಸನ್ಮಾನ

ಜಿಲ್ಲೆಯಲ್ಲಿ ಅತ್ಯುತ್ತಮ ವಿಲ್ಲೇಜ್ ಆಫೀಸರ್ ಆಗಿ ಆಯ್ಕೆಗೊಂಡ ಜಯಲಕ್ಷ್ಮೀ, ಅತ್ಯುತ್ತಮ ಬೂತ್ ಲೆವೆಲ್ ಆಫೀಸರ್ ಆಗಿ ಆಯ್ಕೆಗೊಂಡ ಸಿ.ಎಚ್.ರಾಜೇಶ್ ಅವರನ್ನು ಗೌರವಿಸಲಾಯಿತು.

ಕಾಳ್ಯಂಗಾಡು ಶ್ರೀ ಮೂಕಾಂಬಿಕಾ ಕ್ಷೇತ್ರ: ಪುನರ್ ಪ್ರತಿಷ್ಠಾ ಬ್ರಹ್ಮಕಲಶಕ್ಕೆ ಚಾಲನೆ



ಕಾಸರಗೋಡು: ಕಾಳ್ಯಂಗಾಡು ಶ್ರೀ ಮೂಕಾಂಬಿಕಾ ಕ್ಷೇತ್ರದಲ್ಲಿ ಪುನರ್ ಪ್ರತಿಷ್ಠಾ ಬ್ರಹ್ಮಕಲಶದ ಪ್ರಯುಕ್ತ ಭಾನುವಾರಬೆಳಗ್ಗೆಭಜನಾಸಂಕೀರ್ತನೆ ಮೂಲಕ ಚಾಲನೆ ನೀಡಲಾಯಿತು. ಬಳಿಕ ವಿವಿಧ ಭಜನಾ ತಂಡಗಳಿಂದ ಭಜನೆ ನಡೆಯಿತು.
ನಂತರಜರಗಿದಉಗ್ರಾಣಮುಹೂರ್ತವನ್ನು ಬ್ರಹ್ಮಕಲಶ ಸಮಿತಿ ಅಧ್ಯಕ್ಷ ಡಾ.ಕೆ.ಎನ್. ವೆಂಕಟ್ರಮಣ ಹೊಳ್ಳ ಉದ್ಘಾಟಿಸಿ ಶುಭ ಹಾರೈಸಿದರು. ಪಾಕ ಪ್ರವೀಣ ಕೆ.ಎನ್.ರಾಮಕೃಷ್ಣ ಹೊಳ್ಳ , ಪ್ರಧಾನ ಅರ್ಚಕ ಯೋಗೀಶ, ಕ್ಷೇತ್ರದ ಮೊಕ್ತೇಸರ ಅಚ್ಯುತ ಕಾಳ್ಯಂಗಾಡು, ಪ್ರಧಾನ ಕಾರ್ಯದರ್ಶಿ ದಯಾನಂದ ಕೊಳ್ಕೆಬೈಲು, ಕಾರ್ಯದರ್ಶಿಗಳಾದ ರಂಜಿತ್ ಮನ್ನಿಪ್ಪಾಡಿ, ಗೋವಿಂದ ಕಾಳ್ಯಂಗಾಡು, ಕೋಶಾಧಿಕಾರಿ ಶಾಂತಕುಮಾರ್ ಮುಂಡ್ಯತ್ತಡ್ಕ, ರಘು ಮೀಪುಗುರಿ, ಮೋಹನ್ ರಾಜ್, ಪುಷ್ಪಾವತಿ, ಮಹಾಲಿಂಗ ಮತ್ತಿತರರು ಉಪಸ್ಥಿತರಿದ್ದರು.
ಮಹಿಳಾ ಸಮಿತಿಯಿಂದ ಗೀತಾ ಪಾರಾಯಣ ನೆರವೇರಿತು. ವಿವಿಧ ಭಕ್ತರು ಸ್ವಯಂಸೇವಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅಲ್ಲದೆ ಹಲವಾರು ಸಮಿತಿಗಳ ಪದಾಧಿಕಾರಿಗಳು ಬ್ರಹ್ಮಕಲಶ ಯಶಸ್ವಿಗಾಗಿ ಅಹೋರಾತ್ರಿ ಕಾರ್ಯನಿರತವಾಗಿದ್ದಾರೆ. ವಿವಿಧೆಡೆಗಳಿಂದ ಭಕ್ತರು ಶ್ರೀ ಕ್ಷೇತ್ರಕ್ಕೆ ಆಗಮಿಸಿ ಹಲವು ಸುವಸ್ತುಗಳು, ದೇಣಿಗೆ, ಕಾಣಿಕೆಗಳನ್ನು ನೀಡಿ ಸಹಕರಿಸುತ್ತಿದ್ದಾರೆ. ಕಾಸರಗೋಡು ಪೇಟೆಯಿಂದ ಅನತಿ ದೂರವಿರುವ ಪ್ರಕೃತಿ ರಮಣೀಯ ಪ್ರದೇಶವಾದ ಕಾಳ್ಯಂಗಾಡು ಕ್ಷೇತ್ರದಲ್ಲಿ ಇದೀಗ ಉತ್ಸವದ ಕಳೆ ಮೂಡಿದೆ.

ಏ.28ರಂದು ಐಸಿಡಿಎಸ್ ನೌಕರರ ಸಭೆ

ಕಾಸರಗೋಡು: ರಾಷ್ಟ್ರೀಯ ಆಹಾರ ಸುರಕ್ಷತಾ ಕಾಯ್ದೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕಾಸರಗೋಡು ಜಿಲ್ಲೆಯ ಐಸಿಡಿಎಸ್ ನೌಕರರ ಸಭೆಯು ಏ.28 ರಂದು ಬೆಳಿಗ್ಗೆ 10.30ಕ್ಕೆ ಡಿಪಿಸಿ ಸಭಾಂಗಣದಲ್ಲಿ ನಡೆಯಲಿದೆ.

ಮಧೂರು ಗ್ರಾ.ಪಂ.ನ ಸದಸ್ಯರಾಗಿ ಆಯ್ಕೆಯಾದ ನವನೀತ ರೈಗೆ ಗೌರವ



ಕಾಸರಗೋಡು: ಮಧೂರು ಗ್ರಾಮ ಪಂಚಾಯತ್ ಸದಸ್ಯರಾಗಿ ಆಯ್ಕೆಗೊಂಡ ನವನೀತ ರೈ ಅವರನ್ನು ಸಿರಿಬಾಗಿಲು ಕಜೆ ಕುಟುಂಬದ ವತಿಯಿಂದ ನಡೆದ ಸಮಾರಂಭದಲ್ಲಿ ಗೌರವಿಸಲಾಯಿತು.
ನವನೀತ ರೈ ಅವರು ಕುಟುಂಬದ ದೈವಸ್ಥಾನದ ಕಾರ್ಯಕ್ರಮಗಳಿಗೆ ಮುಂಚೂಣಿಯಲ್ಲಿ ನಿಂತು ಸಲ್ಲಿಸುತ್ತಿರುವ ಸೇವೆ ಮತ್ತು ಸಾಮಾಜಿಕ ಕಳಕಳಿ ಶ್ಲಾಘನೀಯವೆಂದು ಹೇಳಿ ಅವರ ಸಾಧನೆಗಳನ್ನು ವಿವರಿಸಿದರು.
ಕಜೆ ಕುಟುಂಬ ಸೇವಾ ಸಮಿತಿಯ ಗೌರವಾಧ್ಯಕ್ಷ ಶಂಕರ ಶೆಟ್ಟಿ ಅಡ್ಕ ಶಾಲು ಹೊದೆಸಿದರು. ಸಮಿತಿ ಅಧ್ಯಕ್ಷ ಸುಬ್ಬಣ್ಣ ಆಳ್ವ ಕುಚ್ಚಿಕ್ಕಾಡು ಫಲಪುಷ್ಪಗಳನ್ನು ನೀಡಿ ಅವರು ಇನ್ನಷ್ಟು ಜನರ ಸೇವೆಗೆ ತನ್ನನ್ನು ತೊಡಗಿಸಿಕೊಳ್ಳಬೇಕು ಹಾಗೂ ಆ ಮೂಲಕ ಆರಿಸಿದ ಜನರ ಸಮಸ್ಯೆಗಳಿಗೆ ಸ್ಪಂದಿಸಿ ಪರಿಹರಿಸಲು ಪ್ರಯತ್ನಿಸಬೇಕೆಂದು ಹಿತ ವಚನ ನೀಡಿದರು.

ಸಹಕಾರ ನೀಡುತ್ತೇನೆ

ಕುಟುಂಬದ ದೈವಸ್ಥಾನದ ಕಾರ್ಯಗಳನ್ನು ಇನ್ನು ಮುಂದೆ ನಿರ್ವಹಿಸುವುದರೊಂದಿಗೆ ಆರಿಸಿದ ಮತದಾರರ ಸಮಸ್ಯೆಗಳಿಗೂ ಸ್ಪಂದಿಸುತ್ತೇನೆ.

● ನವನೀತ ರೈ

ಕಜೆ ಕುಟುಂಬದ ಹಿರಿಯರಾದ ಕೊರಗಪ್ಪ ಶೆಟ್ಟಿ ಇಚ್ಲಂಗೋಡು, ಪ್ರೇಮಾ ಶೆಟ್ಟಿ ಮಂಗಳೂರು, ಸರಿತಾ ಶೆಟ್ಟಿ ಮಂಗಳೂರು, ಸೀತಾರಾಮ ಶೆಟ್ಟಿ ಕಿದೂರು, ಬಾಲಕೃಷ್ಣ ಆಳ್ವ ಕಜೆ, ದೈವಸ್ಥಾನದ ಅರ್ಚಕ ರವೀಂದ್ರ ಶೆಟ್ಟಿ ಕಜೆ ಮೊದಲಾದವರು ಶುಭಹಾರೈಸಿದರು. ಕಜೆಕುಟುಂಬಸೇವಾಸಮಿತಿಕಾರ್ಯದರ್ಶಿ ಮೋಹನಕುಮಾರ್ ಶೆಟ್ಟಿ ಸ್ವಾಗತಿಸಿ, ರೇವತಿ ಉದಯ ಕುಮಾರ್ ರೈ ವಂದಿಸಿದರು.

ಅಮ್ಮೆ ಶ್ರೀಕೃಷ್ಣ ಭಜನಾ ಮಂದಿರದ ರಜತ ಮಹೋತ್ಸವ, ಧಾರ್ಮಿಕ ಸಭೆ ಉದ್ಘಾಟನೆ



ಕಾಸರಗೋಡು: ಕಾಸರಗೋಡು ಅಮ್ಮೆ ಶ್ರೀಕೃಷ್ಣಭಜನಾ ಮಂದಿರದ ರಜತ ಮಹೋತ್ಸವದ ಅಂಗವಾಗಿ ಶನಿವಾರ ಶ್ರೀ ಪಾರ್ಥಸಾರಥಿ ಗೀತಾ ಪಾರಾಯಣ ತಂಡ ಕಾಸರಗೋಡು ಇದರ ವತಿಯಿಂದ ಬೆಳಿಗ್ಗೆ ಶ್ರೀಮದ್ ಭಗವದ್ಗೀತಾ ಪಾರಾಯಣ, ಮಧ್ಯಾಹ್ನಸಾಮೂಹಿಕಶ್ರೀಸತ್ಯನಾರಾಯಣ ಪೂಜೆ , ಸಂಜೆ ಧಾರ್ಮಿಕ ಸಭೆ ಜರಗಿತು, ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನ ಶ್ರೀ ಗುರುದೇವಾನಂದ ಸ್ವಾಮೀಜಿ ಸಭೆ ಉದ್ಘಾಟಿಸಿ ಆಶೀರ್ವಚನ ನೀಡಿದರು.
ಹಿಂದೂ ಸಾಮಾಜಿಕ ಕಾರ್ಯಕರ್ತ ಶ್ರೀಕಾಂತ್ ಶೆಟ್ಟಿ ಕಾರ್ಕಳ ಧಾರ್ಮಿಕ ಭಾಷಣ ಮಾಡಿದರು. ರಜತ ಮಹೋತ್ಸವ ಗೌರವಾಧ್ಯಕ್ಷ ಜಗನ್ನಾಥ್ ವಿಟ್ಲ ಅಧ್ಯಕ್ಷತೆ ವಹಿಸಿದ್ದರು.
ಅತಿಥಿಗಳಾಗಿ ಕಾಸರಗೋಡು ಯುನೈಟೆಡ್ ಮೆಡಿಕಲ್ ಸೆಂಟರ್‌ನ ಡಾ.ವೀಣಾ ಮಂಜುನಾಥ್, ಕೊಲ್ಯ ಶ್ರೀ ದೇವಿ ಮೂಕಾಂಬಿಕಾ ದೇವಸ್ಥಾನ ಟ್ರಸ್ಟಿ ಮಧುಸೂದನ ಆಯರ್, ನಿವೃತ್ತ ಡಿವೈಎಸ್‌ಪಿ ಹರಿಶ್ಚಂದ್ರ ನಾಯ್ಕ್ ಉಪಸ್ಥಿತರಿದ್ದರು.
ಅಮ್ಮೆ ಭಜನಾ ಮಂದಿರ ಅಧ್ಯಕ್ಷ ಗುಣಪಾಲ ಅಮ್ಮೆ, ಉಪಾಧ್ಯಕ್ಷೆ ಪುಷ್ಪಾ ಉಪಸ್ಥಿತರಿದ್ದರು. ರಜತ ಮಹೋತ್ಸವ ಮಹಿಳಾ ಸಮಿತಿ ಅಧ್ಯಕ್ಷೆ ಶ್ರೀಲತಾ ಟೀಚರ್ ಎಸ್‌ವಿಟಿ ಪ್ರಾರ್ಥಿಸಿ, ರಾಜೇಶ್ ಅಮ್ಮೆ ಸ್ವಾಗತಿಸಿ, ಕಿಶೋರ್ ಎಸ್‌ವಿಟಿ ವಂದಿಸಿದರು. ರಜತ ಮಹೋತ್ಸವದ ಪ್ರಧಾನಸಲಹೆಗಾರ ದೇವದಾಸ್ ನುಳ್ಳಿಪ್ಪಾಡಿ ಕಾರ್ಯಕ್ರಮ ನಿರೂಪಿಸಿದರು. ಗಡಿನಾಡ ಸಾಂಸ್ಕೃತಿಕ ಕಲಾವೇದಿಕೆ ಕಾಸರಗೋಡು ಇವರಿಂದ ನೃತ್ಯ ವೈಭವ ಜರಗಿತು.

ಗೌರವ

ಮಂದಿರದ ಹಿರಿಯರಾದ ರಾಮದಾಸ್ ಪಾಂಡೇಶ್ವರ್, ನಾರಾಯಣ ಅಮ್ಮೆ, ಗಂಗಾಧರ ಅಮ್ಮೆ, ಲಲಿತಾ ಅಮ್ಮೆ, ಪದ್ಮಾವತಿ ಅಮ್ಮೆ ಅವರನ್ನು ಫಲಪುಷ್ಪ, ಸ್ಮರಣಿಕೆ ನೀಡಿ ಗೌರವಿಸಲಾಯಿತು.

ಮಾಯಿಪ್ಪಾಡಿಗುತ್ತು ತರವಾಡು ಶ್ರೀ ಧೂಮಾವತಿ ನೇಮ, ದೈವಗಳ ಕೋಲ: ಆಮಂತ್ರಣ ಬಿಡುಗಡೆ



ಕಾಸರಗೋಡು: ಮಾಯಿಪ್ಪಾಡಿಗುತ್ತು ತರವಾಡು ಮನೆಯಲ್ಲಿ ಶ್ರೀ ಧೂಮಾವತಿ ದೈವದ ಧರ್ಮನೇಮ ಮತ್ತು ಶ್ರೀ ಕೊರತಿ ದೈವದ ಕೋಲಗಳು ಮೇ 10 ಮತ್ತು 11ರಂದು ವಿವಿಧ ಕಾರ್ಯಕ್ರಮಗಳೊಂದಿಗೆ ನಡೆಯುವುದು. ಧರ್ಮನೇಮದ ಆಮಂತ್ರಣ ಪತ್ರಿಕೆ ಬಿಡುಗಡೆ ಕಾರ್ಯಕ್ರಮ ಮಾಯಿಪ್ಪಾಡಿ ಗುತ್ತು ತರವಾಡು ಮನೆಯಲ್ಲಿ ನಡೆಯಿತು.
ಮೇ 10ರಂದು ಬೆಳಗ್ಗೆ ಗಣಪತಿ ಹೋಮ, ತಂಬಿಲ, ಪಾನಕಪೂಜೆ, ಮಧ್ಯಾಹ್ನ ಅನ್ನಸಂತರ್ಪಣೆ ನಡೆಯುವುದು. ಅಪರಾಹ್ನ ಮಾಯಿಪ್ಪಾಡಿ ಶ್ರೀ ದುರ್ಗಾ ಮಹಿಳಾ ಭಜನಾ ಸಂಘ, ಮಾಯಿಪ್ಪಾಡಿ ಶ್ರೀ ರಾಜರಾಜೇಶ್ವರಿ ಭಜನಾ ಸಂಘ ಮತ್ತು ಮಾಯಿಪಾಡಿಗುತ್ತು ಕುಟುಂಬಸ್ಥರಿಂದ ಭಜನಾ ಕಾರ್ಯಕ್ರಮ ನಡೆಯು ವುದು. ರಾತ್ರಿ ಪುತ್ತೂರುಕೊಟ್ಯ ದಿಂದ ಮಾಯಿಪ್ಪಾಡಿ ಗುತ್ತು ತರವಾಡಿಗೆ ಭಂಡಾರ ಆಗಮನ, ಬಳಿಕ ಅನ್ನ ಸಂತರ್ಪಣೆ ನಡೆಯುವುದು.

ಶ್ರೀ ಧೂಮಾವತಿ ದೈವ ಧರ್ಮನೇಮ

ಮೇ 11ರಂದು ಬೆಳಿಗ್ಗೆ ಶ್ರೀ ಧೂಮಾವತಿ ದೈವದ ಧರ್ಮನೇಮ, ಮಧ್ಯಾಹ್ನ ಅನ್ನ ಸಂತರ್ಪಣೆ, ರಾತ್ರಿ ಕೊರತಿ ದೈವದ ಕೋಲ ನಡೆಯುವುದು. ಮೇ 12ರಂದು ರಾತ್ರಿ ಕೊರತಿ ದೈವದ ಹರಕೆಯ ಕೋಲ ನಡೆಯುವುದು.

ಬಾವಿಕ್ಕೆರೆಯಲ್ಲಿರುವ ಪಂಪಿಂಗ್ ಸ್ಟೇಷನ್‌ನಲ್ಲಿ ವೋಲ್ಟೇಜ್ ಸಮಸ್ಯೆ | ನಿರಂತರ ಕೈಕೊಡುತ್ತಿರುವ ವಿದ್ಯುತ್

ಕಾಸರಗೋಡು ನಗರ -ಪಂಚಾಯತ್‌ಗಳಲ್ಲಿ ಅಸಮರ್ಪಕ ನೀರು ಪೂರೈಕೆ

ಕಾಸರಗೋಡು: ಬೇಸಿಗೆಯಲ್ಲಿ ಜನರು ಕುಡಿಯುವ ನೀರಿನ ಕೊರತೆ ಎದುರಿಸುತ್ತಿರುವ ಸಂದರ್ಭದಲ್ಲಿ ಕಾಸರಗೋಡು ನಗರ ಹಾಗೂ ಪರಿಸರಗಳಲ್ಲಿ ಜಲಪ್ರಾಧಿಕಾರದ ಮೂಲಕ ವಿತರಿಸಲಾಗುವ ಕುಡಿಯುವ ನೀರು ಪೂರೈಕೆ ಅಸಮರ್ಪಕವಾಗಿದೆ ಎಂದು ದೂರಲಾಗಿದೆ.
ಬಾವಿಕ್ಕೆರೆಯಲ್ಲಿರುವ ಪಂಪಿಂಗ್ ಸ್ಟೇಷನ್‌ನಲ್ಲಿ ವೋಲ್ಟೇಜ್ ಇಲ್ಲದಿರುವುದು, ನಿರಂತರ ವಿದ್ಯುತ್ ಮೊಟಕುಗಳಿಂದ ಕಾಸರಗೋಡು ನಗರ ವ್ಯಾಪ್ತಿಯಲ್ಲಿ ಅಸಮರ್ಪಕ ನೀರು ಪೂರೈಕೆಯಾಗುತ್ತಿದೆ. ಚೆಂಗಳ, ಮೊಗ್ರಾಲ್‌ಪುತ್ತೂರು, ಮುಳಿಯಾರು, ಕುಂಬಳೆ ಮೊದಲಾದ ಪಂಚಾಯತ್‌ಗಳಲ್ಲಿ ಕುಡಿಯುವ ನೀರಿನ ಪೂರೈಕೆ ಕಡಿತಗೊಳ್ಳಲು ಕಾರಣವಾಗುತ್ತಿದೆ. ಬಾವಿಕ್ಕೆರೆಯಿಂದ ಈ ಭಾಗಗಳಿಗೆ ಕುಡಿಯವ ನೀರು



ಪೂರೈಕೆಯಾಗುತ್ತದೆ. ಕಳೆದ ಒಂದು ತಿಂಗಳಿನಿಂದ ಕುಡಿಯುವ ನೀರು ವಿತರಣೆ ಭಾಗಶಃ ಸ್ಥಗಿತಗೊಂಡಿದೆ. ಎರಡು ದಿನ ಅಥವಾ ಅದಕ್ಕಿಂತ ಹೆಚ್ಚು ದಿನ ಕಾದು ನಿಂತರಷ್ಟೇ ಪ್ರಸ್ತುತ ಫಲಾನುಭವಿಗಳಿಗೆ ನೀರು ಲಭಿಸುತ್ತದೆ.
ಆಲೂರಿನಲ್ಲಿ ಅಣೆಕಟ್ಟು ನಿರ್ಮಿಸಿದ್ದರಿಂದ ಪಯಸ್ವಿನಿ ಹೊಳೆಯಲ್ಲಿ ಪಂಪಿಂಗ್ ಸ್ಟೇಷನ್ ಸಮೀಪ ಎರಡು ಮೀಟರ್‌ನಷ್ಟು ಎತ್ತರದಲ್ಲಿ ಕಿಲೋಮೀಟರ್ ಗಟ್ಟಲೆ ನೀರು ಕಟ್ಟಿ ನಿಂತಿದೆ. ಹೆಚ್ಚು ನೀರು ಬಳಕೆ ಮಾಡುವ ಫಲಾನುಭವಿಗಳು ಹಾಗೂ ಜಲಪ್ರಾಧಿಕಾರದ ಆದಾಯ ಹೆಚ್ಚಳಕ್ಕೆ ಕಾರಣವಾಗುವ ಕಡೆ ಕುಡಿಯುವ ನೀರು ಪೂರೈಕೆ ಸ್ಥಗಿತಗೊಂಡಿರುವುದು ಜಲ ಪ್ರಾಧಿಕಾರದ ಅದಾಯಕ್ಕೆ ಪ್ರತಿಕೂಲವಾಗಿ ಬಾಧಿಸಿದೆ.
ಪಂಪಿಂಗ್ ಸ್ಟೇಷನ್‌ನಲ್ಲಿ ಎರಡು ಮೋಟಾರ್‌ಗಳು ಪೂರ್ಣ ಪ್ರಮಾಣದಲ್ಲಿ ಕಾರ್ಯಾಚರಿಸುತ್ತಿವೆ. ಯಾವುದಾದರೂ ಒಂದು ಹಾನಿಗೀಡಾದರೂ, ಉಪಯೋಗಿಸಲು ಇನ್ನೊಂದು ಮೋಟಾರು ಇದೆ. ಬಾವಿಕ್ಕೆರೆ ಪಂಪಿಂಗ್ ಸ್ಟೇಷನ್‌ನಿಂದ ನಿರಂತರ ವಿದ್ಯುತ್ ಪೂರೈಸುವ ಉದ್ದೇಶದೊಂದಿಗೆ ಕೋಟ್ಯಂತರ ರೂಪಾಯಿ ವಿನಿಯೋಗಿಸಿ ಭೂಗರ್ಭ ಕೇಬಲ್ ಅಳವಡಿಸಲಾಗಿದೆ. ಆದರೂ ಕುಡಿಯುವ ನೀರು ವಿತರಣೆ ಕಾರ್ಯ ಆರಂಭಗೊಂಡಿಲ್ಲ.
ಕೆಎಸ್‌ಇಬಿ ವಿದ್ಯಾನಗರ ಸಬ್ ಸ್ಟೇಷನ್‌ನಿಂದ ಬಾವಿಕ್ಕೆರೆ ಪಂಪಿಂಗ್ ಸ್ಟೇಷನ್‌ಗೆ ಹಾಗೂ ಬಾವಿಕ್ಕೆರೆ ಕುನ್ನಿಲ್‌ನಲ್ಲಿರುವ ಶುದ್ಧೀಕರಣ ಕೇಂದ್ರಕ್ಕೆ ಭೂಗರ್ಭ ಕೇಬಲ್ ಅಳವಡಿಸಲಾಗಿದೆ. ಸಮಸ್ಯೆ ಪರಿಹಾರಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮಕೈಗೊಳ್ಳಬೇಕೆಂದು ನಾಗರಿಕರು ಒತ್ತಾಯಿಸಿದ್ದಾರೆ.

ಪದೇ ಪದೇ ರಸ್ತೆ ಬದಿಯ ವಿದ್ಯುತ್ ಲೈನ್‌ಗಳಿಗೆ ಹಾನಿ

ವಿದ್ಯಾನಗರ ಜಿಲ್ಲಾಧಿಕಾರಿ ಕಚೇರಿಯ ಜಂಕ್ಷನ್‌ನಿಂದ ಚೆರ್ಕಳದ ವರೆಗೆ ಸರ್ವೀಸ್ ರಸ್ತೆಗೆ ಹೊಂದಿಕೊಂಡಿರುವ ಚರಂಡಿಯ ಸಮೀಪದಿಂದ ವಿದ್ಯುತ್ ಕೇಬಲ್ ಹಾದು ಹೋಗುತ್ತಿದ್ದು, ರಾಷ್ಟ್ರೀಯ ಹೆದ್ದಾರಿ ನಿರ್ಮಾಣಕ್ಕೆ ಸಂಬಂಧಿಸಿ ಹಲವೆಡೆ ಯಂತ್ರಗಳನ್ನು ಉಪಯೋಗಿಸಿ ಕುಡಿಯುವ ನೀರಿನ ಪೈಪ್‌ಗಳನ್ನು ಅಳವಡಿಸಲು ಹೊಂಡಗಳನ್ನು ತೋಡುವುದರಿಂದ ವಿದ್ಯುತ್ ಲೈನ್‌ಗೆ ಹಾನಿ ಉಂಟಾಗುತ್ತಿದೆ. ಇದರಿಂದ ವಿದ್ಯುತ್ ಮೊಟಕುಗೊಳ್ಳಲು ಕಾರಣ ವಾಗುತ್ತಿರುವುದಾಗಿ ಕೆಎಸ್‌ಇಬಿ ಅಧಿಕಾರಿಗಳು ತಿಳಿಸಿದ್ದಾರೆ.

ಸುತ್ತ ಮುತ್ತ

ಸಿದ್ದಾಪುರ ಸರಸ್ವತಿ ವಿದ್ಯಾಲಯ ಶೇ. 100 ಸಾಧನೆ ಹೆಮ್ಮೆ

ಬೈಂದೂರು: ಸಿದ್ದಾಪುರದಲ್ಲಿ ಕಳೆದ ಎರಡೂವರೆ ದಶಕಗಳ ಹಿಂದೆ ಸ್ಥಾಪಿತವಾದ ಸರಸ್ವತಿ ವಿದ್ಯಾಲಯ ಆಂಗ್ಲ ಮಾಧ್ಯಮ ಸಂಸ್ಥೆ ಕಳೆದ ಶೈಕ್ಷಣಿಕ ಸಾಲಿನಿಂದ ಸುಮುಖ ಎಜ್ಯುಕೇಶನಲ್ ಟ್ರಸ್ಟ್ ಮೂಲಕ ಮನೆಡಿಸಿಕೊಂಡು ಬಂದಿದ್ದು ಈ ಬಾರಿಯ ಎಸ್ಸೆಸ್ಸೆಲ್ಸಿ ಫಲಿತಾಂಶದಲ್ಲಿ ಸಂಸ್ಥೆಯ ಆಡಳಿತ ಮಂಡಳಿ, ಶಿಕ್ಷಕರ ಉತ್ತಮ ಬೋಧನೆ, ಪೋಷಕರ ಸಹಕಾರ, ವಿದ್ಯಾರ್ಥಿಗಳ ಛಲ ಹಾಗೂ ಕಠಿಣ ಪ್ರಯತ್ನದಿಂದ ಶೇ.100 ಫಲಿತಾಂಶ ದಾಖಲಿಸಿರುವುದು ಸಂತಸದ



ಜತೆಗೆ ಹೆಮ್ಮೆ ಅನಿಸುತ್ತದೆ ಎಂದು ಟ್ರಸ್ಟ್ ಅಧ್ಯಕ್ಷ ಬಿ. ಎಸ್. ಸುರೇಶ್ ಶೆಟ್ಟಿ ಇವರು ಶಾಲೆಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು. ಕಳೆದ ಸಾಲಿನಿಂದ ಜ್ಞಾನ ಸರಸ್ವತಿ ಪಿಯು ತರಗತಿಯನ್ನು ಆರಂಭಿಸಿದ್ದು, ನುರಿತ ಉಪನ್ಯಾಸಕರ ಬೋಧನೆಯ ಮೂಲಕ ಉತ್ತಮ ದಾಖಲಾತಿ ಹೊಂದಿದೆ. ರಾಜ್ಯದ ನಾನಾ ಜಿಲ್ಲೆಗಳಿಂದ ನೂರಾರು ವಿದ್ಯಾರ್ಥಿಗಳು ವಿದ್ಯಾರ್ಜನೆ ಮಾಡುತ್ತಿದ್ದಾರೆ. ಸರ್ವಾಂಗೀಣ ಶಿಕ್ಷಣಕ್ಕೆ ಆದ್ಯತೆ ನೀಡುವುದು ನಮ್ಮ ಸಂಸ್ಥೆಯ ಆಶಯವಾಗಿದೆ. ಈ ನಿಟ್ಟಿನಲ್ಲಿ ಮುಂದಿನ ಸಾಲಿನಲ್ಲಿ ಗ್ರಾಮೀಣ ಭಾಗದ ಬಡ, ಮಧ್ಯಮ ವರ್ಗದ ಮಕ್ಕಳಿಗೆ ಶಿಕ್ಷಣ ಪಡೆಯಲು ಅತ್ಯಾಧುನಿಕ ಶಿಕ್ಷಣ ಸೌಲಭ್ಯ ನೀಡುವ ಜತೆಗೆ ಹಲವಾರು ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ. ಕೇವಲ ವಿದ್ಯಾರ್ಥಿಗಳಿಗೆ ಮಾತ್ರವಲ್ಲ, ಶಿಕ್ಷಕರಿಗೂ ನಿರಂತರ ತರಬೇತಿ, ಕೌಶಲ್ಯ ಅಭಿವೃದ್ಧಿಯ ಬಗ್ಗೆ ಹಲವು ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ ಎಂದರು.

ಈ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ 9 ಮತ್ತು 10ನೇ ರ್‍ಯಾಂಕ್ ಪಡೆದ ಶಿವಾನಿ ಶೆಟ್ಟಿ ಮತ್ತು ಆಯಿಷಾ ತನಾಜ್ ಇವರನ್ನು ಗೌರವಿಸಲಾಯಿತು. ಪ್ರಾಂಶುಪಾಲ ಅಮರೇಶ್ ಹೆಗ್ಡೆ ಸರಸ್ವತಿ ವಿದ್ಯಾಲಯ ಶಿಕ್ಷಕಿ ಶ್ವೇತಾ ಗಣೇಶ್, ನಿರ್ದೇಶಕ ಯು. ಪಾಂಡುರಂಗ ಪಡಿಯಾರ್ ಉಪಸ್ಥಿತರಿದ್ದರು.

ನಾಳೆ ವಿದ್ಯುತ್ ವ್ಯತ್ಯಯ

ಕಾರ್ಕಳ: ಕರ್ಮಾರ್ ಕಟ್ಟೆ, ಬಜಗೋಳಿಯಲ್ಲಿ ಚೌಕಿಯಲ್ಲಿ ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ, ಏ.28ರಂದು ಬೆಳಿಗ್ಗೆ 9ರಿಂದ ಸಂಜೆ 5 ಗಂಟೆಯವರೆಗೆ ವಿವಿಧ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಮೊದಲನೇ ಪುಟದಿಂದ

ದೋಣಿ

ಮಧ್ಯಪ್ರಾಚ್ಯ ಯುದ್ಧ ಹಿನ್ನೆಲೆಯಲ್ಲಿ ಉಂಟಾದ ಇಂಧನ ಕೊರತೆಯ ಕಾರಣದಿಂದಾಗಿ ಕೇಂದ್ರ ಸರಕಾರವು ಸೀಮೆಎಣ್ಣೆ ಬೆಲೆಯನ್ನು ಹೆಚ್ಚಿಸಿದೆ. ರಾಜ್ಯದಲ್ಲಿ 9.9 ಎಚ್‌ಪಿ ಸಾಮರ್ಥ್ಯದ ಮೋಟಾರ್‌ಗೆ ಸಬ್ಸಿಡಿಯಲ್ಲಿ ಪ್ರತಿ ತಿಂಗಳು 140 ಲೀಟರ್ ಸೀಮೆಎಣ್ಣೆಯನ್ನು ಮಂಜೂರು ಮಾಡುತ್ತಿದೆ. ಇದರ ವಿತರಣೆ ತಾಳ ತಪ್ಪುತ್ತಿದೆ. ಹೆಚ್ಚಾಗಿ 5060 ಲೀಟರ್ ಸೀಮೆ ಎಣ್ಣೆ ಮಾತ್ರ ಲಭಿಸುತ್ತದೆ. ಇದರ ಹೊರತು ಪ್ರತೀ ತಿಂಗಳು 140 ಲೀಟರ್ ಸೀಮೆಎಣ್ಣೆಗೆ ಮತ್ಸ್ಯಫೆಡ್ 50 ರೂಪಾಯಿ ಸಬ್ಸಿಡಿ ನೀಡುತ್ತದೆ. ಇದು ಒಂದೆರಡು ದಿನಗಳಿಗೆ ಮಾತ್ರವೇ ಪ್ರಯೋಜನಕ್ಕೆ ಬರುತ್ತದೆ. ಉಳಿದ ದಿನಗಳಲ್ಲಿ ಪೂರ್ತಿ ಹಣ ನೀಡಿ ಸೀಮೆಎಣ್ಣೆಯನ್ನು ಉಪಯೋಗಿಸಬೇಕಾಗುತ್ತದೆ. ದೋಣಿಗಳಿಗೆ ಹೆಚ್ಚು ಮೀನು ಲಭಿಸಿದರೆ ಮಾತ್ರವೇ ಇದರ ವೆಚ್ಚ ಪರಿಹರಿಸಲು ಮೀನು ಕಾರ್ಮಿಕರಿಗೆ ಸಾಧ್ಯವಾಗುತ್ತದೆ.

ಬಸ್ ಪಲ್ಟಿ

ಕ್ಷೇತ್ರ ದರ್ಶನ ಮುಗಿಸಿ ತಮ್ಮ ಊರಿಗೆ ಮರಳುತ್ತಿದ್ದಾಗ ಈ ದುರ್ಘಟನೆ ಸಂಭವಿಸಿದೆ. ಅಪಘಾತ ಸಂಭವಿಸುತ್ತಿದ್ದಂತೆ ಸ್ಥಳೀಯರು ಮತ್ತು ವಾಹನ ಸವಾರರು ರಕ್ಷಣೆಗೆ ಧಾವಿಸಿದ್ದಾರೆ. ವಿಷಯ ತಿಳಿಯುತ್ತಿದ್ದಂತೆ ಸುಮಾರು 5 ರಿಂದ 6 ಆಂಬುಲೆನ್ಸ್‌ಗಳು ಸ್ಥಳಕ್ಕೆ ಆಗಮಿಸಿ, ಗಾಯಾಳುಗಳನ್ನು ಕೂಡಲೇ ಆಸ್ಪತ್ರೆಗೆ ರವಾನಿಸಿವೆ. ಅದೃಷ್ಟವಶಾತ್ ಈವರೆಗೆ ಯಾವುದೇ ಪ್ರಾಣಾಪಾಯ ಸಂಭವಿಸಿದ ಬಗ್ಗೆ ವರದಿಯಾಗಿಲ್ಲ. ಘಟನಾ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದ್ದು, ಘಾಟಿಯಲ್ಲಿ ಕೆಲಕಾಲ ಸಂಚಾರ ವ್ಯತ್ಯಯ ಉಂಟಾಗಿತ್ತು.

ಪಡುಬಿದ್ರಿ ದೇವಸ್ಥಾನದ ಬ್ರಹ್ಮಕಲಶೋತ್ಸವ | 3 ಕಿ.ಮೀ. ಉದ್ದಕ್ಕೂ ಸಾಗಿತು ಆಕರ್ಷಕ ಮೆರವಣಿಗೆ

ಐತಿಹಾಸಿಕವಾದ ಹಸಿರು ಹೊರೆಕಾಣಿಕೆ ಸಮರ್ಪಣೆ

ಪಡುಬಿದ್ರಿ: ಇತಿಹಾಸ ಪ್ರಸಿದ್ಧ ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದ ವೈಭವದ ಬ್ರಹ್ಮಕಲಶೋತ್ಸವದ ಪೂರ್ವಭಾವಿಯಾಗಿ ದೇವಾಲಯಗಳಿಗೆ ಬರುವ ಲಕ್ಷಾಂತರ ಭಕ್ತರು ನೀಡುವ ದೇವರ ಪಾದಕ್ಕೆ ಸೇರುವ ದೇವರು ಅತೀ ತೃಪ್ತರಾಗುವ ಅನ್ನದಾನ ಪ್ರಸಾದಕ್ಕೆ ಭಕ್ತರಿಗಾಗಿ ಭಕ್ತರಿಂದ ಕೊಡಮಾಡುವ ಬೃಹತ್ ಹಸಿರು ಹೊರೆಕಾಣಿಕೆ ಮೆರವಣಿಗೆಗೆ ಧಾರ್ಮಿಕ ಇತಿಹಾಸ ನಿರ್ಮಿಸಿದ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಪ್ರಕಾಶ್ ಶೆಟ್ಟಿ ಅಧ್ಯಕ್ಷತೆಯಲ್ಲಿ, ಹೊರೆ ಕಾಣಿಕೆ ಸಮಿತಿ ಪ್ರಧಾನ ಸಂಚಾಲಕರಾದ ಡಾ. ದೇವಿಪ್ರಸಾದ್ ಶೆಟ್ಟಿ ಬೆಳಪು ನೇತೃತ್ವದಲ್ಲಿ, ಧಾರ್ಮಿಕ-ಸಾಮಾಜಿಕ-ಶೈಕ್ಷಣಿಕ ಹಾಗೂ ಸಹಕಾರ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆಗೈದಿರುವ ಸಹಕಾರ ರತ್ನ ಡಾ. ಎಂ.ಎನ್. ರಾಜೇಂದ್ರಕುಮಾರ್ ಅವರು ಭಾನುವಾರ ಸಂಜೆ ಚಾಲನೆಯನ್ನು ನೀಡಿ ಶುಭವನ್ನು ಹಾರೈಸಿದರು.

ಆಕರ್ಷಕ ಮೆರವಣಿಗೆ

ಅವಿಭಜಿತ ಜಿಲ್ಲೆಯಾದ್ಯಂತ, ಹೊರ ಜಿಲ್ಲೆ, ಹೊರ ರಾಜ್ಯಗಳಿಂದ 5 ಸಾವಿರಕ್ಕೂ ಅಧಿಕ ಅಕ್ಕಿ ಗೋಣಿಗಳು ಸಹಿತ ಹಸಿರು ಹೊರೆಕಾಣಿಕೆಗಳು, ನೂರಾರು ಸಂಖ್ಯೆಯಲ್ಲಿ ವಾಹನಗಳು, ಸಾವಿರಾರು ಸಂಖ್ಯೆಯ ಭಕ್ತಾಧಿಗಳ ಗಡಣದೊಂದಿಗೆ ಸುಮಾರು 3 ಕಿ.ಮೀ ಗೂ ಉದ್ದಕ್ಕೂ ಸಾಗಿ ಬಂದ ಮೆರವಣಿಗೆಯಲ್ಲಿ ಡೋಲು, ಆನೆ, ಕಾಪು ಮಾರಿಯಮ್ಮ ಟ್ಯಾಬ್ಲೋ, ಕೊಂಬು, ಕಹಳೆ, ವಯೋಲಿನ್ ವಾದನ, ತೈಯಂ, ಬಿರುದಾವಳಿ, ಕಲಶಧಾರಿ ಮಹಿಳೆಯರು, ಗಣಪತಿ ಟ್ಯಾಬ್ಲೋ, ಆಂಜನೇಯ ಟ್ಯಾಬ್ಲೋ, ತಾಲೀಮು ತಂಡ, ಕುಣಿತ ಭಜನೆಯ ತಂಡಗಳು, ನಾದಸ್ವರ, ವಾಸುಕಿ ಟ್ಯಾಬ್ಲೋ, ಕೀಲು ಕುದುರೆ, ದೇವರ ಗೊಂಬೆಗಳು, ಘಟೋತ್ಕಚ ಚಿತ್ತಾಕರ್ಷಕವಾಗಿದ್ದು ಮೆರವಣಿಗೆಯ ಆಕರ್ಷಣೆಯಾಗಿತ್ತು.



- ಹಸಿರು ಹೊರೆಕಾಣಿಕೆ ಮೆರವಣಿಗೆಗೆ ಸಹಕಾರ ರತ್ನ ಡಾ| ಎಂ.ಎನ್. ರಾಜೇಂದ್ರ ಕುಮಾರ್ ಅವರಿಂದ ಚಾಲನೆ
- ಪಡುಬಿದ್ರಿ ದೇವಸ್ಥಾನದಲ್ಲಿ ಎಲ್ಲಾ ಭಗವದ್ಭಕ್ತರಿಗೆ ಉಪಹಾರದ ವ್ಯವಸ್ಥೆ
- ಗುಂಡ್ಲಾಡಿ ಕಟ್ಟೆ ಬಲಿ ಖಾಸಗಿ ವಾಹನಗಲಿಗೆ ವಾಹನದ ಪಾರ್ಕಿಂಗ್ ವ್ಯವಸ್ಥೆ
- ಹೊರೆಕಾಣಿಕೆ ಸಮರ್ಪಿಸಿದವರಿಗೆ ದೇವರ ಪ್ರಸಾದದೊಂದಿಗೆ ದೇವರ ಅನುಗ್ರಹ ಪತ್ರ
- ಎಲ್ಲರಿಗೂ ಮಜ್ಜಿಗೆ, ನೀರು ವ್ಯವಸ್ಥೆ
- ದಾರಿಯುದ್ದಕ್ಕೂ ಸ್ವಚ್ಛತೆಗೆ ಆದ್ಯತೆ

ದೇಗುಲ, ಸಂಘ-ಸಂಸ್ಥೆಗಳ ಹೊರೆಕಾಣಿಕೆ

ವಿವಿಧ ದೇವಾಲಯಗಳು, ವಿವಿಧ ಸಂಘ ಸಂಸ್ಥೆಗಳು, ನವೋದಯ ಗ್ರಾಮ ವಿಕಾಸ ಚಾರಿಟೇಬಲ್ ಟ್ರಸ್ಟ್ ಮತ್ತು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಇವರಿಂದ ಉಲ್ಲಾಯನ ಸನ್ನಿಧಾನಕ್ಕೆ ಹೊರೆಕಾಣಿಕೆ ಹರಿದು ಬಂದಿತ್ತು.

ಭವ್ಯ ಹೊರೆಕಾಣಿಕೆ ಚಾಲನೆ ಕಾರ್ಯಕ್ರಮದಲ್ಲಿ ಶಾಸಕರಾದ ಗುರ್ಮೆ ಸುರೇಶ್ ಶೆಟ್ಟಿ ಮಾಜಿ ಶಾಸಕರಾದ ಲಾಲಾಜಿ ಆರ್.ಮೆಂಡನ್, ಆನುವಂಶಿಕ ಆಡಳಿತ ಮೊಕ್ತೇಸರರಾದ ಕಿನ್ನಿಗ್ಗರಾಜ್ ರತ್ನಾಕರ ರಾಜ್ ಅರಸರು ಪಡುಬಿದ್ರಿ ಬೀಡು, ಪೇಟೆಮನೆ ಭವಾನಿ ಶಂಕರ ಹೆಗ್ಡೆ ಶ್ರೀಪತಿ ಕೊರ್ನೆಯ, ಧಾರ್ಮಿಕ ಮುಖಂಡ ವಿಶ್ವ ಹಿಂದೂಪರಿಷತ್ ಪ್ರಮುಖರಾದ ಎಂ.ಬಿ.ಪುರಾಣಿಕ್, ಜಾಗತಿಕ ಬಂಟರ ಸಂಘದ ಅಧ್ಯಕ್ಷರಾದ ಐಕಳ ಹರೀಶ್ ಶೆಟ್ಟಿ ಮೊಗವೀರ ಮಹಾಸಭಾದ ಅಧ್ಯಕ್ಷರಾದ ಜಯ ಸಿ. ಕೋಟ್ಯಾನ್, ಜಿ.ಎಸ್.ಬಿ ಸಮಾಜದ ಮುಂದಾಳು ಮಂಗಳೂರು ವೆಂಕಟರಮಣ ದೇವಸ್ಥಾನದ ಮುಕ್ತೇಸರರಾದ ಸಾಹುಕಾರ ಕಿರಣ್ ಪೈ, ಅವಿಭಜಿತ ಜಿಲ್ಲಾ ವಿಶ್ವಕರ್ಮ ಒಕ್ಕೂಟದ ಅಧ್ಯಕ್ಷರಾದ ಮಧು ಆಚಾರ್ಯ, ಅವಿಭಜಿತ ಪದ್ಮಶಾಲಿ ಸಮಾಜದ ಅಧ್ಯಕ್ಷರಾದ ರವಿ ಶೆಟ್ಟಿಗಾರ್ ಕಾರ್ಕಳ, ಉಡುಪಿ ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷರಾದ ಜಯಕರ ಶೆಟ್ಟಿ ಇಂದ್ರಾಳಿ, ಮುಗ್ಗೇರ್ಕಳ ಸಮಾಜದ ಅಧ್ಯಕ್ಷರಾದ ವಿಠಲ ಗುರಿಕಾರ, ಆಶಾ ಪ್ರಕಾಶ್ ಶೆಟ್ಟಿ, ಅದಾನಿ ಸಮೂಹದ ಅಧ್ಯಕ್ಷ ಕಿಶೋರ್ ಆಳ್ವ, ದ.ಕ. ಜಿಲ್ಲೆಯ ಸಂಚಾಲಕರಾದ ಚಂದ್ರಹಾಸ ಶೆಟ್ಟಿ ಬಂಟ್ವಾಳ, ದಯಾನಂದ ಹೆಜ್ಮಾಡಿ, ಪ್ರಕಾಶ್ ಶೆಟ್ಟಿ ಪಡುಹಿತ್ಲು, ವೈ ಎನ್ ರಾಮಚಂದ್ರ ರಾವ್, ಕೊರ್ನಾಯ ಪದ್ಮನಾಭ ರಾವ್, ಎರ್ಮಾಳು ರೋಹಿತ್ ಹೆಗ್ಡೆ, ವೈ ಸುಧೀರ್ ಕುಮಾರ್, ಲೋಕೇಶ್ ಶೆಟ್ಟಿ ಬಂಟ್ವಾಳ, ಸಾಂತೂರು ಭಾಸ್ಕರ್‌ಶೆಟ್ಟಿ, ಗಣೇಶ್ ಗುಜರನ್, ಭಾಸ್ಕರ್ ಕೆ, ಬಾಲಾಜಿ ಯೋಗೀಶ್ ಶೆಟ್ಟಿ, ಗೀತಾಂಜಲಿ ಸುವರ್ಣ, ಮಮತಾ ಶೆಟ್ಟಿ, ಕಾಪು ದಿವಾಕರ ಶೆಟ್ಟಿ, ಸುಗ್ಗಿ ಸುಧಾಕರ ಶೆಟ್ಟಿ, ನವೀನ್ ಚಂದ್ರ ಜೆ ಶೆಟ್ಟಿ, ಕೃಷ್ಣ ಪ್ಯಾಲೇಸ್ ಕೃಷ್ಣ ಶೆಟ್ಟಿ, ಸಾಯಿನಾಥ ಶೆಟ್ಟಿ, ಚಂದ್ರಹಾಸ್ ಶೆಟ್ಟಿ ರಂಗೋಲಿ, ಸಂತೋಷ್ ಶೆಟ್ಟಿ ಕುರ್ಕಿಲ್ ಬೆಟ್ಟು, ಪುಚ್ಚೊಟ್ಟು ಬೀಡು ಚಂದ್ರಹಾಸ ಶೆಟ್ಟಿ, ಜಿತೇಂದ್ರ ಶೆಟ್ಟಿ ಉದ್ಯಾವರ, ಗೋಪಾಲಕೃಷ್ಣ ರಾವ್, ಶರಣ್ ಕುಮಾರ್ ಮಟ್ಟು, ಪ್ರಕಾಶ್ ಶೆಟ್ಟಿ ಪಾದೆಬೆಟ್ಟು, ಸಂತೋಷ್ ಶೆಟ್ಟಿ ಪಲ್ಲವಿ, ಶ್ರೀಕರ ಶೆಟ್ಟಿ ಕಲ್ಯ, ಅರುಣ್ ಶೆಟ್ಟಿ ಪಾದೂರು, ಕೊಂಡೆಟ್ಟು ಸುಕುಮಾರ್‌ಶೆಟ್ಟಿ, ಉಮೇಶ್ ಪೂಜಾರಿ, ನವೀನ್ ಎನ್ ಶೆಟ್ಟಿ, ಪ್ರೇಮ್‌ನಾಥ್ ಶೆಟ್ಟಿ ಕೊಳಕೆ ಇರ್ವತ್ತೂರು ಭಾಸ್ಕರ್‌ಕೋಟ್ಯಾನ್, ಉದಯ ಕೋಟ್ಯಾನ್, ಗಣೇಶ್ ಶೆಟ್ಟಿ ಸಾಂತೂರು, ರಮಾಕಾಂತ ರಾವ್, ನಡಿಕೆರೆ ರತ್ನಾಕರ ಶೆಟ್ಟಿ, ರವೀಂದ್ರನಾಥ ಜಿ. ಹೆಗ್ಡೆ, ಮಿಥುನ್ ಹೆಗ್ಡೆ, ಬ್ರಹ್ಮಕಲಶೋತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ಮುರಳಿನಾಥ ಶೆಟ್ಟಿ, ಕಾರ್ಯನಿರ್ವಹಣಾಧಿಕಾರಿ ಕೆ. ರಾಜಗೋಪಾಲ ಉಪಾಧ್ಯಾಯ ಸಹಸ್ರಾರು ಸಂಖ್ಯೆಯಲ್ಲಿ ಭಕ್ತ ಸಮೂಹ ಉಪಸ್ಥಿತರಿದ್ದರು.

ಕೊಡವೂರು ಶಂಕರನಾರಾಯಣ ದೇವಸ್ಥಾನದಲ್ಲಿ ಆಮಂತ್ರಣ ಪತ್ರಿಕೆ ಬಿಡುಗಡೆ

ಮೇ 14ರಿಂದ 19ರವರೆಗೆ ಮಹಾರುದ್ರಯಾಗ

ಉಡುಪಿ: ಕೊಡವೂರು ಶಂಕರನಾರಾಯಣ ದೇವಸ್ಥಾನದಲ್ಲಿ ಲೋಕ ಕಲ್ಯಾಣಾರ್ಥ, ನಾಡಿನ ಜನರ ಸುಭೀಕ್ಷೆಗಾಗಿ ಪ್ರಸಾದ್‌ರಾಜ್ ಕಾಂಚನ್ ನೇತೃತ್ವದಲ್ಲಿ ಮೇ 14ರಿಂದ 19ರವರೆಗೆ ನಡೆಯಲಿರುವ ಮಹಾ ರುದ್ರಯಾಗದ ಆಮಂತ್ರಣ ಪತ್ರಿಕೆ ಬಿಡುಗಡೆ ಸಮಾರಂಭವು ಭಾನುವಾರ ಕೊಡವೂರು ಶಂಕರನಾರಯಾಣ ದೇಗುಲದ ವಸಂತ ಮಂಟಪದ ಜರಗಿತು.



ಆಮಂತ್ರಣ ಪತ್ರಿಕೆಯನ್ನು ಉದ್ಯಮಿ ಅಧ್ಯಕ್ಷಸಾಧುಸಾಲ್ಯಾನ್ ಬಿಡುಗಡೆಗೊಳಿಸಿ ಶುಭ ಹಾರೈಸಿದರು. ಮಹಾರುದ್ರಯಾಗ ಸಮಿತಿಯ ಕಾರ್ಯಾಧ್ಯಕ್ಷ ಪ್ರಸಾದ್ ರಾಜ್ ಕಾಂಚನ್ ಮಾತನಾಡಿ, ಮಹಾ ರುದ್ರಯಾಗವು ನಡೆಯುವುದು ಅತ್ಯಂತ ವಿರಳ, ಈ ರುದ್ರಯಾಗದ ಜತೆಗೆ ಬಡಜನರಿಗೆ ಆರೋಗ್ಯ ಸೇವೆ ಮತ್ತು ಉದ್ಯೋಗವನ್ನು ಕಲ್ಪಿಸುವ ಮಹತ್ಕಾರ್ಯವನ್ನು ಮಾಡಲಾಗುತ್ತದೆ. ಕ್ರೀಡಾಕೂಟ, ವಸ್ತು ಪ್ರದರ್ಶನ, ಪ್ರಸಿದ್ಧ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ಸುಮಾರು 40 ಸಾವಿರ ಜನರಿಗೆ ಆಮಂತ್ರಣ ಪತ್ರಿಕೆಯನ್ನು ವಿತರಿಸಲಾಗುತ್ತದೆ. ಮೇ 14ರಿಂದ 5 ದಿನಗಳ ಕಾಲ ಅನ್ನಸಂತರ್ಪಣೆ ಇದೆ, ವಿಶೇಷವಾಗಿ 5 ಸಾವಿರ ಮಹಿಳೆಯರಿಗೆ ಮಹಾ ರುದ್ರಯಾಗ ಸಂಕಲ್ಪದೊಂದಿಗೆ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಬನ್ನಂಜೆ ಮಹಾಲಿಂಗೇಶ್ವರ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಮಾದವ ಪೂಜಾರಿ ಬನ್ನಂಜೆ, ಉಪ್ಪೂರು ಸಿದ್ದಿವಿನಾಯಕ ದೇವಸ್ಥಾನದ ವ್ಯವಸ್ಥಾಪನಾಸಮಿತಿಯ ಅಧ್ಯಕ್ಷಪ್ರಶಾಂತ್ ಸುವರ್ಣ, ಬೆಳ್ಕಳೆ ಮಹಾಲಿಂಗೇಶ್ವರ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಪ್ರಖ್ಯಾತ್ ಶೆಟ್ಟಿ ಬೆಳ್ಕಳೆ, ನಗರಸಭಾ ಮಾಜಿ ಸದಸ್ಯ ವಿಜಯ ಕೊಡವೂರು, ಡೆಂಟಾಕೇರ್‌ನ ಡಾ. ವಿಜಯೇಂದ್ರ ವಸಂತ್, ಭಜನಾ ಸಂಚಾಲಕ ಧನಂಜಯ ಕಾಂಚನ್, ದೇವಳದ ವ್ಯವಸ್ಥಾಪನಾ ಸಮಿತಿಯ ಸದಸ್ಯರಾದ ವಾದಿರಾಜ್ ಸಾಲ್ಯಾನ್, ರಾಜ ಸೇರಿಗಾರ, ಶೀಲ ಕೃಷ್ಣ ದೇವಾಡಿಗ, ಭಾಸ್ಕರ ಪಾಲನ್ ಬಾಚನಬೈಲು, ಕೆ. ಬಾಬ ಮೊದಲಾದವರು ಪಾಲ್ಗೊಂಡಿದ್ದರು.

ವ್ಯವಸ್ಥಾನಪನಾ ಸಮಿತಿಯ ಅಧ್ಯಕ್ಷ ಪ್ರಕಾಶ್ ಜಿ. ಕೊಡವೂರು ಸ್ವಾಗತಿಸಿದರು. ಪೂರ್ಣಿಮಾ ಜನಾರ್ದನ್ ನಿರೂಪಿಸಿದರು. ಸೇವಾ ಸಮಿತಿಯ ಕಾರ್ಯದರ್ಶಿ ಜನಾರ್ದನ್ ಕೊಡವೂರು ವಂದಿಸಿದರು.

ಶ್ರೀ ಚೆನ್ನಬಸವೇಶ್ವರ ಯುವಕ ಮಂಡಲದ ವಾರ್ಷಿಕೋತ್ಸವ 'ಸಂಭ್ರಮ -ಸಂಗಮ'

ಶೈಕ್ಷಣಿಕ ಸಾಧಕರು, ಅಶಕ್ತರಿಗೆ ನೆರವು ಹಸ್ತಾಂತರ

ಕುಂದಾಪುರ: ಚಲನಶೀಲತೆ ಮನುಷ್ಯನಿಗೆ ಮೊದಲಿನಿಂದಲೂ ಇದ್ದ ಮೂಲಭೂತ ಚಟುವಟಿಕೆ. ಚಲನಶೀಲತೆಗೆ ಸಾಹಿತ್ಯದ ಹಿನ್ನಲೆ ಇದ್ದಾಗ, ಅರ್ಥಬದ್ಧವಾಗಿ ಶಾರೀರಿಕ ಚಲನೆಗಳು ಉಂಟಾದಾಗ ಒಂದು ದೈವಿಕವಾದ ವಾತಾವರಣ ಮೂಡಿ ಬರುತ್ತದೆ. ಮಹಾನ್ ದಾರ್ಶನಿಕ, ತತ್ವಜ್ಞಾನಿ ಸಮಾಜ ಸುಧಾರಕ, ಶಿಕ್ಷಣದಲ್ಲಿ ಕ್ರಾಂತಿಕಾರಿ ಬದಲಾವಣೆ ಮಾಡಿದ ಸಂತ ನಾರಾಯಣಗುರುಗಳು ಸಾರಿದ ಸಂದೇಶಗಳು ಸರ್ವರಿಗೂ ಅನುಕರಣೀಯ ಎಂದು ಕುಂದಾಪುರದ ವಕೀಲ ರವಿಕಿರಣ್ ಮುರ್ಡೇಶ್ವರ ಹೇಳಿದರು.



ಶ್ರೀ ಚೆನ್ನಬಸವೇಶ್ವರ ಯುವಕ ಮಂಡಲ ನಾಯಕವಾಡಿ- ಗುಜ್ಜಾಡಿ ಇದರ ವಠಾರದಲ್ಲಿ ಶನಿವಾರ ಜರಗಿದ ಯುವಕ ಮಂಡಲದ 51ನೇ ವಾರ್ಷಿಕೋತ್ಸವ 'ಸಂಭ್ರಮ -ಸಂಗಮ'ದಲ್ಲಿ ಪ್ರಶಸ್ತಿ ಫಲಕ ಅನಾವರಣ ಮಾಡಿ ಅವರು ಮಾತನಾಡಿದರು.

ಯುವಕ ಮಂಡಲದ ಅಧ್ಯಕ್ಷ ಶ್ರೀನಿವಾಸ ಕೆ. ಅಧ್ಯಕ್ಷತೆ ವಹಿಸಿದ್ದರು. ಮೆರಿಟ್ ಹಾಸ್ಪಿಟೆಲಿಟಿ ಸಂಸ್ಥೆಯ ಡಾ.ಅಶೋಕ ಶೆಟ್ಟಿ ಬೆಳ್ಳಾಡಿ ಕಾರ್ಯಕ್ರಮ ಉದ್ಘಾಟಿಸಿದರು. ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಸದಸ್ಯ ರಾಜೇಶ ಕಾರಂತ್ ಶುಭಾಶಂಸನಗೈದರು. ಈ ಸಂದರ್ಭ ಸಮಾಜ ಸೇವಕ ಬೆಂಕಿಮಣಿ ಸಂತು, ಹಿರಿಯ ನಾಟಿ ವೈದ್ಯ ಮ್ಯಾಕ್ಸಿಮ್ ಒಲಿವೇರಾ ಮತ್ತು ಕ್ಲೀನ್ ಕಿನಾರಾ ತಂಡದ ಪರವಾಗಿ ರಾಘವೇಂದ್ರ ಪಡುವರಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಶೈಕ್ಷಣಿಕ ಸಾಧಕರಿಗೆ ಮತ್ತು ಅಶಕ್ತರಿಗೆ ನೆರವು ಹಸ್ತಾಂತರಿಸಲಾಯಿತು.

ಗಂಗೊಳ್ಳಿ ಪೊಲೀಸ್ ಠಾಣೆಯ ಪಿಎಸ್ಸೈ ಪವನ್ ನಾಯ್ಕ್, ಗುಜ್ಜಾಡಿ ಗ್ರಾಪಂ ಮಾಜಿ ಅಧ್ಯಕ್ಷ ತಮ್ಮಯ್ಯ ದೇವಾಡಿಗ, ಗಂಗೊಳ್ಳಿ ಶ್ರೀ ನಾರಾಯಣ ಗುರು ಜನಸೇವಾ ಬಳಗ ಅಧ್ಯಕ್ಷ ಜಿ.ಗೋಪಾಲ ಪೂಜಾರಿ, ಗುಜ್ಜಾಡಿ ಗ್ರಾಪಂ ಮಾಜಿ ಉಪಾಧ್ಯಕ್ಷ ರಾಜು ಎನ್ .ಪೂಜಾರಿ, ಶ್ರೀ ರಾಮ್ ಫೈನಾನ್ಸ್ ಶಾಖಾ ವ್ಯವಸ್ಥಾಪಕ ಕರುಣಾಕರ ಕೆ., ಅಂಗನವಾಡಿ ಶಿಕ್ಷಕಿ ನಿರೀಕ್ಷಾ, ಉದ್ಯಮಿ ಸೀತಾರಾಮ ಗಾಣಿಗ, ನಾಯಕವಾಡಿ-ಗುಜ್ಜಾಡಿಯ ಶ್ರೀ ಸಂಗಮೇಶ್ವರ ದೇವಸ್ಥಾನದ ಅಧ್ಯಕ್ಷ ರಘುರಾಮ ಟಿ., ಗೌರವಾಧ್ಯಕ್ಷರಾದ ರಾಜು ಎನ್. ಮತ್ತು ಶ್ರೀಧರ ಎನ್. ಉಪಸ್ಥಿತರಿದ್ದರು.

ಸಂಘಟನಾ ಕಾರ್ಯದರ್ಶಿ ನಾಗರಾಜ್ ಎನ್.ಡಿ. ಸ್ವಾಗತಿಸಿದರು. ನಿತೇಶ್ ಎನ್.ಡಿ. ಪ್ರಸ್ತಾವನೆಗೈದರು. ಕ್ರೀಡಾ ಕಾರ್ಯದರ್ಶಿ ಗಣೇಶ ಕುಮಾರ್ ಸನ್ಮಾನಿತರನ್ನು ಪರಿಚಯಿಸಿದರು. ಉಪನ್ಯಾಸಕ ನರೇಂದ್ರ ಎಸ್.ಗಂಗೊಳ್ಳಿ ನಿರ್ವಹಿಸಿದರು.

ರಾಷ್ಟ್ರೀಯ ಹೆದ್ದಾರಿಯಲ್ಲಿ ನೆಟ್ಟ ಗಿಡಗಳಿಗೆ ನೀರುಣಿಸುವ ಕಾಯಕ

ಕೋಟ: ಕೋಟದ ಪಂಚವರ್ಣ ಯುವಕ ಮಂಡಲ ಪ್ರವರ್ತಿತ ಸಂಸ್ಥೆ ಪಂಚವರ್ಣ ಮಹಿಳಾ ಮಂಡಲದ ನೇತೃತ್ವದ ಹಸಿರು ಜೀವ ಕಾರ್ಯಕ್ರಮದಲ್ಲಿ ಸಾಲಿಗ್ರಾಮ ರಾಷ್ಟ್ರೀಯ ಹೆದ್ದಾರಿಯಲ್ಲಿ ನೆಟ್ಟ ಕಾರ್ಯ ಭಾನುವಾರ ನಡೆಯಿತು.

ಗಿರಿಜಾ ರೋಡ್‌ಲೈನ್ಸ್ ಗಾಡಿ ಕೂಸ ಬೋಜ ಪೂಜಾರಿ ಸಹಕಾರದೊಂದಿಗೆ ಹೆದ್ದಾರಿಯಲ್ಲಿ ನೆಟ್ಟ ಗಿಡಗಳಿಗೆ ಕಟ್ಟೆ ಕಟ್ಟಿ ನೀರುಣಿಸಲಾಯಿತು. ಈ ಸಂದರ್ಭದಲ್ಲಿ ಕುಂದಾಪುರ ಅಂಚೆ ದಕ್ಷಿಣ ಉಪ ವಲಯಂಚೆ ನಿರೀಕ್ಷಕ ಪೋಲ ನಾಗಾಜನೇಯಲು, ಸಹಾಯಕ ಅಧಿಕಾರಿ ಮಹೇಂದ್ರ ಕುಮಾರ್, ಪಂಚವರ್ಣದ ನಿಕಟಪೂರ್ವ ಅಧ್ಯಕ್ಷ ಅಜಿತ್ ಆಚಾರ್,



ಉಪಾಧ್ಯಕ್ಷ ದಿನೇಶ್ ಆಚಾರ್, ಸದಸ್ಯರಾದ ಸಂದೇಶ್ ಆಚಾರ್,ಲೋಹಿತ್ ಆಚಾರ್, ರವೀಂದ್ರ ಕೋಟ,ಮಂಜುನಾಥ ಉಪಸ್ಥಿತರಿದ್ದರು.

ಕರಾವಳಿ ಕರ್ನಾಟಕದಲ್ಲಿ 4 ದಿನ ಮಿಶ್ರ ಹವಾಮಾನ ಮುಂದುವರಿಕೆ

ಉಡುಪಿ: ಕರಾವಳಿ ಕರ್ನಾಟಕ ಭಾಗದಲ್ಲಿ ಮುಂದಿನ ನಾಲ್ಕು ದಿನಗಳ ಕಾಲ ಮಿಶ್ರ ಹವಾಮಾನ ಮುಂದುವರಿಯುವ ಸಾಧ್ಯತೆ ಇದೆ ಎಂದು ಮುನ್ಸೂಚನೆ ನೀಡಿದೆ.

ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಬಿಸಿಲಿನ ತೀವ್ರತೆ ಮತ್ತು ತೇವಾಂಶ ಹೆಚ್ಚಾಗಿಯೇ ಮುಂದುವರಿಯಲಿದ್ದು ಏಪ್ರಿಲ್ 27ರಿಂದ 29ರವರೆಗೆ ಗುಡುಗು-ಮಿಂಚಿನೊಂದಿಗೆ ಮಧ್ಯಮ ಮಳೆಯಾಗುವ ಸಾಧ್ಯತೆ ಹಿನ್ನೆಲೆಯಲ್ಲಿ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

ಮಳೆಯ ಸಾಧ್ಯತೆ ಇದ್ದರೂ ಮಧ್ಯಾಹ್ನ ವೇಳೆಯಲ್ಲಿ ತಾಪಮಾನ ಏರಿಕೆಯಾಗುವ ನಿರೀಕ್ಷೆಯಿದ್ದು ಕೆಲವು ಭಾಗಗಳಲ್ಲಿ ಶಾಖದ ಅಲೆಗಳ ಲಕ್ಷಣಗಳು ಕಾಣಿಸಬಹುದು ಎಂದು ಹವಾಮಾನ ಇಲಾಖೆ ಎಚ್ಚರಿಸಿದೆ. ಗುಡುಗು-ಮಿಂಚಿನ ಸಂದರ್ಭಗಳಲ್ಲಿ ಮೀನುಗಾರರು ಮತ್ತು ಕರಾವಳಿ ನಿವಾಸಿಗಳು ವಿಶೇಷ ಜಾಗರೂಕತೆ ವಹಿಸಬೇಕು ಎಂದು ಸೂಚಿಸಲಾಗಿದೆ.

ಏ. 24ರ ರಾತ್ರಿ ಹಲವೆಡೆ ಮಧ್ಯಮ ಮಳೆಯಾಗಿದ್ದು, ನಂತರದ ದಿನಗಳಲ್ಲಿ ಮೋಡ ಕವಿದ ವಾತಾವರಣದ ನಡುವೆ ಮಧ್ಯಂತರ ಬಿಸಿಲು ಕಂಡುಬಂದಿದೆ. ಶುಕ್ರವಾರ ತಡರಾತ್ರಿ ಬೈಂದೂರು ಭಾಗಗಳಲ್ಲಿ ಮಳೆಯಾದ ವರದಿಯಾಗಿದೆ.

ಇನ್ನೂ ಮಂಗಳೂರಿನಲ್ಲಿ ಗರಿಷ್ಠ ತಾಪಮಾನ 34.7ಲಿಅ ದಾಖಲಾಗಿದ್ದು ಇದು ಋತುಮಾನ ಸರಾಸರಿಗಿಂತ 0.3ಲಿಅ ಹೆಚ್ಚಾಗಿದೆ. ಕನಿಷ್ಠ ತಾಪಮಾನ 25.3ಲಿಅ ಆಗಿದ್ದು ಸಾಮಾನ್ಯ ಮಟ್ಟಕ್ಕಿಂತ 0.2ಲಿಅ ಹೆಚ್ಚಾಗಿದೆ.

ಎಸ್ಸೆಸೆಲ್ಸಿ ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ



ಕೋಟ: ವಡ್ಡರ್ಸೆ ಶ್ರೀ ಮಹಾಲಿಂಗೇಶ್ವರ ಕಲಾರಂಗದ ಬಾಲ ಕಲಾವಿದರು, ಸರ್ಕಾರಿ ಶಾಲೆ ವಿದ್ಯಾರ್ಥಿಗಳಾದ ಸುಪ್ರೀತ್ ಪೂಜಾರಿ 610 ಅಂಕ ಹಾಗೂ ಸುಶಾಂತ್ ಪೂಜಾರಿ 606 ಅಂಕ ಪಡೆದಿದ್ದು, ಇವರನ್ನು ಅವರ ಸ್ವಗೃಹದಲ್ಲಿ ಕಲಾರಂಗದ ಅಧ್ಯಕ್ಷ ಗುರು ಪ್ರಸಾದ್ ಐತಾಳ್ ಕಾವಡಿ ಇವರು ಸನ್ಮಾನಿಸಿದರು. ಕಾರ್ಯದರ್ಶಿ ಪದ್ಮನಾಭ ಆಚಾರ್ ಬನ್ನಾಡಿ ಪ್ರಾಸ್ತಾವಿಕ ನುಡಿಗೈದರು. ಈ ಸಂದರ್ಭದಲ್ಲಿ ಕಲಾರಂಗದ ಸ್ಥಾಪಕಾಧ್ಯಕ್ಷ ವಿಘ್ನೇಶ್ ಶೆಟ್ಟಿ, ಸದಸ್ಯರಾದ ಸತೀಶ್ ಶೆಟ್ಟಿ ಮುರಳೀಧರ ಸೋಮಯಾಜಿ ,ಸತೀಶ್ ಪೂಜಾರಿ ಉಪಸ್ಥಿತರಿದ್ದರು.

ರಾಜಾಪುರ ಸಾರಸ್ವತ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ವಾಣಿಜ್ಯ ಸಂಕೀರ್ಣ 'ಸಹಕಾರ ಸಿಂಧೂರ'ದ ಲೋಕಾರ್ಪಣೆ, ಸೊಸೈಟಿಯ ತ್ರಿಂಶತಿ ಸಂಭ್ರಮ

ರಾಜಾಪುರ ಸೊಸೈಟಿ ಸಹಕಾರ ಕ್ಷೇತ್ರದಲ್ಲಿ ಹೊಸ ಮೈಲಿಗಲ್ಲಾಗಿ ಸಮಾಜಕ್ಕೆ ಮಹತ್ತರ ಕೊಡುಗೆ: ಪೇಜಾವರ ಶ್ರೀ

ಕಾರ್ಕಳ: ಸಮಾಜದಿಂದ ಸೊಸೈಟಿಯನ್ನು ಬೆಳೆಸಬೇಕು. ಸೊಸೈಟಿಯ ಸೇವೆಯಿಂದ ಸಮಾಜ ಬೆಳೆಯಬೇಕು ಎಂದು ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದರು ನುಡಿದರು.

ಅವರು ರಾಜಾಪುರ ಸಾರಸ್ವತ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯು ತನ್ನ ಯಶಸ್ವಿ 3 ದಶಕಗಳ ಪಯಣವನ್ನು ಪೂರೈಸುತ್ತಿರುವ ಹಿನ್ನೆಲೆಯಲ್ಲಿ ಕಾರ್ಕಳದ ಜೋಡುರಸ್ತೆಯಲ್ಲಿ ನೂತನವಾಗಿ ನಿರ್ಮಿಸಲಾದ ವಾಣಿಜ್ಯ ಸಂಕೀರ್ಣ 'ಸಹಕಾರ ಸಿಂಧೂರ'ದ ಲೋಕಾರ್ಪಣೆ ಮತ್ತು ಸೊಸೈಟಿಯ ತ್ರಿಂಶತಿ ಸಂಭ್ರಮವು ಭಾನುವಾರ ಉದ್ಘಾಟಿಸಿ ಆಶೀರ್ವಚನ ನೀಡಿ, ರಾಜಾಪುರ ಸೊಸೈಟಿ ಸಹಕಾರಿ ಕ್ಷೇತ್ರದಲ್ಲಿ ಹೊಸ ಮೈಲಿಗಲ್ಲಾಗಿದ್ದು ಸಮಾಜದ ಅಭಿವೃದ್ಧಿಗೆ ಮಹತ್ತರ ಕೊಡುಗೆ ನೀಡಿದೆ. ನಾವು ಕೃಷ್ಣನನ್ನು ಜಗತ್ತಿಗೆ ಗುರುವಾಗಿಸಿಕೊಂಡವರು ಕೃಷ್ಣ ದೇವರ ಸಹಕಾರ ತತ್ವವನ್ನು ಜೀವನದಲ್ಲಿ ಅಳವಡಿಸಿಕೊಂಡು ಶ್ರೇಯಸ್ಸನ್ನು ಪಡೆಯಬೇಕು ಎಂದ ಅವರು ಈ ಸಂಸ್ಥೆ ಇನ್ನಷ್ಟು ಬೆಳೆಯಲಿ, ಕೃಷ್ಣನ ಪ್ರೇರಣೆ ದೊರೆಯಲಿ ಎಂದು ಆಶಿಸಿದರು.



ನೂತನ ವಾಣಿಜ್ಯ ಸಂಕೀರ್ಣವನ್ನು ಗೋವಾ ಕೈವಲ್ಯ ಮಠದ ಶ್ರೀಮದ್ ಶಿವಾನಂದ ಸರಸ್ವತಿ ಸ್ವಾಮೀಜಿ ಅವರು ಉದ್ಘಾಟಿಸಿ ಆಶೀರ್ವಚನ ನೀಡಿ, ಹೊಸ ಕಟ್ಟಡ ಲೋಕಾರ್ಪಣೆ ಸಮಸ್ತ ರಾಜಾಪುರ ಸಮಾಜಕ್ಕೆ ಅತ್ಯಂತ ಆನಂದದ ಕ್ಷಣವಾಗಿದೆ ಎಂದರು. ಈ ಭವ್ಯ ಕಟ್ಟಡ ನಿರ್ಮಾಣಕ್ಕೆ ಎಲ್ಲರೂ ಒಂದಾಗಿ ಕೈಜೋಡಿಸಿರುವುದು ಶ್ಲಾಘನೀಯವಾಗಿದ್ದು ಸಹಕಾರ ಸೊಸೈಟಿಯ ಮೂಲಕ ಈ ಕಾರ್ಯ ಸಾಧ್ಯವಾಗಿದೆ ಎಂದರು. ಇದು ಸಮಾಜದ ಬೆಳವಣಿಗೆಗೆ ಬುನಾದಿಯಾಗಿದ್ದು ಸಹಯೋಗವೇ ಸಮಾಜದ ಶಕ್ತಿ ಹಾಗೂ ಸೇವೆಯ ಮೂಲವಾಗಿದೆ. ಆತ್ಮನಿರ್ಭರತೆಯನ್ನು ಸಾಧಿಸಲು ಸಹಕಾರಿ ಕ್ಷೇತ್ರವು ಅತ್ಯಂತ ಪ್ರಮುಖವಾಗಿದೆ ಎಂದರು.

ಎಸ್‌ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಡಾ. ಎಂ. ಎನ್. ರಾಜೇಂದ್ರ ಕುಮಾರ್ ಅವರು ನೂತನ ಸಂಕೀರ್ಣದ ವಿವಿಧ ವಿಭಾಗಗಳನ್ನು ಲೋಕಾರ್ಪಣೆಗೊಳಿಸಿ ಮಾತನಾಡಿ, ಕಳೆದ 3 ದಶಕದಿಂದ ಯಾವುದೇ ಕಪ್ಪು ಚುಕ್ಕೆ ಇಲ್ಲದೇ ಸೊಸೈಟಿ ಕಾರ್ಯನಿರ್ವಹಿಸುತ್ತಿದೆ ಎಂದರು. ಏಳು ಶಾಖೆಗಳ ಮೂಲಕ ಕೋಟ್ಯಾಂತರ ವ್ಯವಹಾರ ನಡೆಸುತ್ತಿರುವ ಸಂಸ್ಥೆ ಎಲ್ಲರಿಗೂ ಸಮಾನ ಅವಕಾಶಗಳನ್ನು ಒದಗಿಸುತ್ತಿದೆ ಎಂದರು.ಮುಂದಿನ ದಿನಗಳಲ್ಲಿ ಐವತ್ತು ವರ್ಷಗಳನ್ನು ವಿಜೃಂಭಣೆಯಿಂದ ಆಚರಿಸಲಿ ಎಂದು ಶುಭ ಹಾರೈಸಿದರು. ಮಹಿಳೆಯರಿಗೆ ನೀಡಿದ ಸಾಲಗಳಲ್ಲಿ 99.9% ಮರುಪಾವತಿ ಕಂಡುಬರುತ್ತದೆ ಎಂದು ತಿಳಿಸಿ, ಸಂಸ್ಥೆಗೆ ಅನುದಾನ ನೀಡಲು ಸಹಕರಿಸುವುದಾಗಿ ಭರವಸೆ ನೀಡಿದರು.

ಸಂಸದ ಕೋಟ ಶ್ರೀನಿವಾಸ ಪೂಜಾರಿ ಅವರು ಮಾತನಾಡಿ, ಸೊಸೈಟಿ 30 ವರ್ಷಗಳಲ್ಲಿ ಉತ್ತಮ ಹೆಸರು ಗಳಿಸಿದೆ ಎಂದರು. ಸಹಕಾರಿ ಸಂಸ್ಥೆಗಳು ಆರ್ಥಿಕ ಕ್ಷೇತ್ರದಲ್ಲಿ ಶಕ್ತಿಯುತವಾಗುತ್ತಿದ್ದು 7254 ಕೋಟಿ ಠೇವಣಿ ಸಂಗ್ರಹಿಸಿರುವುದು ಸಾಧನೆ ಎಂದು ಹೇಳಿದರು.

ಕಾರ್ಕಳ ಶಾಸಕ ವಿ ಸುನಿಲ್ ಕುಮಾರ್ ಅವರು ಸ್ಮರಣ ಸಂಚಿಕೆ ಬಿಡುಗಡೆಗೊಳಿಸಿ ಮಾತನಾಡಿ, ಸೊಸೈಟಿ ನಿರಂತರವಾಗಿ ಹೊಸ ಸಾಧನೆಗಳನ್ನು ಸಾಧಿಸುತ್ತಿದ್ದು ಜೋಡುರಸ್ತೆ ಭಾಗದ ಅಭಿವೃದ್ಧಿಗೂ ಪೂರಕವಾಗಿದೆ ಎಂದರು. ಕೊರೊನಾ ಕಾಲದಲ್ಲೂ ಮಾಡಿದ ಸೇವಾ ಕಾರ್ಯ ಶ್ಲಾಘನೀಯವಾಗಿದ್ದು 'ಸಹಕಾರ ಸಿಂಧೂರ' ಸಂಕೀರ್ಣ ಹೊಸ ಹೆಜ್ಜೆಯಾಗಿದೆ ಎಂದರು. ಅಧ್ಯಕ್ಷ ರವೀಂದ್ರ ಪ್ರಭು ಹಾಗೂ ನಿರ್ದೇಶಕ ಮಂಡಳಿಯ ದೂರದೃಷ್ಟಿಯ ಫಲವಾಗಿ ಈ ಯೋಜನೆ ಯಶಸ್ವಿಯಾಗಿದೆ ಎಂದರು.

ರಾಜಾಪುರ ಸೊಸೈಟಿಯ ಅಧ್ಯಕ್ಷರಾದ ಸಹಕಾರ ರತ್ನ ಕಡಾರಿ ರವೀಂದ್ರ ಪ್ರಭು ಅವರು ಅಧ್ಯಕ್ಷತೆ ವಹಿಸಿ ಪ್ರಸ್ತಾವಿಕವಾಗಿ ಮಾತನಾಡಿ, 1996ರಲ್ಲಿ ಕತ್ತಲ ರವೀಂದ್ರ ನಾಯಕ್ ಅವರೊಂದಿಗೆ ಭದ್ರ ಬುನಾದಿ ಹಾಕಿ ಆರಂಭಿಸಿದ ಸಂಸ್ಥೆ ಇಂದು 30 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿದೆ ಎಂದು ತಿಳಿಸಿದರು. ಪೇಜಾವರ ವಿಶ್ವೇಶ್ವರತೀರ್ಥ ಸ್ವಾಮೀಜಿ ನೀಡಿದ ಆಶೀರ್ವಾದದಿಂದ ಸಹಕಾರಿ ಕ್ಷೇತ್ರದಲ್ಲಿ ಬೆಳೆಯಲು ಸಾಧ್ಯವಾಯಿತು ಎಂದು ಸ್ಮರಿಸಿದರು. ಜನರ ವಿಶ್ವಾಸ, ಸಿಬ್ಬಂದಿ ಸಹಕಾರ ಹಾಗೂ ನಿರ್ದೇಶಕ ಮಂಡಳಿಯ ಪ್ರಾಮಾಣಿಕ ಪ್ರಯತ್ನದಿಂದ ಸಂಸ್ಥೆ ಜನಮನ್ನಣೆ ಗಳಿಸಿದೆ ಎಂದರು. ಕೇಂದ್ರ ಕಚೇರಿ ಕಟ್ಟಡ, 2016ರ ಸಭಾಭವನ ಹಾಗೂ 2026ರ 'ಸಹಕಾರ ಸಿಂಧೂರ' ಸಂಕೀರ್ಣ ನಿರ್ಮಾಣ ಸಾಧನೆಗಳನ್ನು ವಿವರಿಸಿದರು. ಕಟ್ಟಡದ ಸುಮಾರು ಶೇ. 97% ಭಾಗ ಈಗಾಗಲೇ ಬಾಡಿಗೆಗೆ ನೀಡಲಾಗಿದ್ದು, ಭಾರತ್ ಸಿನೆಮಾ ಕೂಡ ಆರಂಭವಾಗಲಿದೆ ಎಂದರು.

ಈ ಸಂದರ್ಭದಲ್ಲಿ ಉಡುಪಿ ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷ ಹಾಗೂ ಸಹಕಾರ ಮಹಾಮಂಡಳ ನಿರ್ದೇಶಕ ಸಹಕಾರ ರತ್ನ ಜಯಕರ ಶೆಟ್ಟಿ ಇಂದ್ರಾಳಿ, ಸರ್ಕಾರಿ ಅಧಿಕಾರಿಗಳಾದ ಸದಾಶಿವ ಪ್ರಭು ಬಿ. ಮತ್ತು ಗೋಕುಲ್‌ದಾಸ್ ನಾಯಕ್, ಮುನಿಯಾಲು ಉದಯ್ ಕುಮಾರ್ ಶೆಟ್ಟಿ, ಉದ್ಯಮಿ ಸಂತೋಷ್ ವಾಗ್ಳೆ, ಅಡಪಾಡಿ ಕ್ಷೇತ್ರದ ಧರ್ಮದರ್ಶಿ ಪುಂಡಲೀಕ ನಾಯಕ್, ಶ್ರೀ ಆದಿಶಕ್ತಿ ಮಹಾಲಕ್ಷ್ಮೀ ದೇವಸ್ಥಾನದ ಆಡಳಿತ ಮೊಕ್ತಸರ ಚೇತನ್ ನಾಯಕ್ , ಸಿಇಒ ಸುರೇಂದ್ರ ನಾಯಕ್ ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಸಹಕಾರ ರತ್ನ ಡಾ. ಎಂ. ಎನ್. ರಾಜೇಂದ್ರ ಕುಮಾರ್ ಸೇರಿದಂತೆ ರವೀಂದ್ರ ಆಚಾರ್ಯ, ನಾಗರಾಜ ಆಚಾರ್ಯ, ಸತೀಶ್ ಪ್ರಭು, ಅನೀಶ್ ತೆಂಡುಲ್ಕರ್, ದಾಮೋದರ ಆಚಾರ್ಯ, ವಿಕ್ರಂ ಅವರನ್ನು ಸನ್ಮಾನಿಸಲಾಯಿತು. ಕೀರ್ತಿ ಶೆಣೈ ಪ್ರಾರ್ಥಿಸಿದರು. ಸೊಸೈಟಿಯ ಉಪಾಧ್ಯಕ್ಷ ನೀರೆ ರವೀಂದ್ರ ನಾಯಕ್ ಸ್ವಾಗತಿಸಿದರು. ಸಂತೋಷ್ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು. ಸಿಇಒ ಸುರೇಂದ್ರ ನಾಯಕ್ ವಂದಿಸಿದರು. ಪುತ್ತೂರು ಜಗದೀಶ ಆಚಾರ್ಯ ಮತ್ತು ತಂಡದಿಂದ ಸಂಗೀತ ರಸಮಂಜರಿ ಹಾಗೂ ತೆಂಕು-ಬಡಗುತಿಟ್ಟಿನ ಶ್ರೇಷ್ಠ ಕಲಾವಿದರಿಂದ 'ಕರ್ಣಾರ್ಜುನ ಸುಧನ್ವಾರ್ಜುನ' ಎಂಬ ಯಕ್ಷಗಾನ ಪ್ರದರ್ಶನ ಜರಗಿತು.